# ಚಿಂತನ ಬಯಲು

ತ್ರೈಮಾಸಿಕ ISSN 2278-2192



ಸಂಪುಟ : 13, ಸಂಚಿಕೆ : 3 ಜನವರಿ–ಮಾರ್ಚ್ 2025

Volume : 13, Issue : 3 January - March 2025

# ಚಿಂತನ ಬಯಲು

ಸಂಪಾದಕಿ
**ರೇಶ್ಮಾ ಜಿ. ಭಟ್**

ಸಂಪಾದಕೀಯ ಸಲಹೆ
**ಡಾ. ಅಜಕ್ಕಳ ಗಿರೀಶ ಭಟ್**
**ಡಾ. ಶ್ರೀಧರ್ ಹೆಚ್.ಜಿ.**
**ಡಾ. ವರದರಾಜ ಚಂದ್ರಗಿರಿ**
**ಡಾ. ಜಿ.ಬಿ. ಹರೀಶ**
**ಶ್ರೀ ಎಂ.ಎ. ಸುಬ್ರಹ್ಮಣ್ಯ**

**ಚಿಂತನ ಬಯಲು**
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574219

**CHINTHANA BAYALU**
Kannada Quarterly; A Peer Reviewed Journal ISSN: 2278-2192
Included in UGC - CARE List
Volume 13, Issue 3, January - March 2025

Edited, Published, Printed & Owned by
**Reshma G. Bhat**
Door No. 15-109, Modankapu Post
Bantwal Taluk, Dakshina Kannada - 574219
Karnataka
Mobile : 8217703698
Email : chinthanabayalu@gmail.com
website: www.chinthanabayalu.in

© : Reserved

Size : Dy 1/8

Paper Used : 70 GSM

Pages : 144

Price : Rs. 50

Cover Photo : **Girish Bhat**

Cover Design : **Kallur Nagesh**

Designed & Printed at :
**Aakrithi Prints**
Maximus Complex
Light House Hill Road
Mangaluru - 575 001
Tel. : 0824 2972002 / 7019225774

---

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

# ಪುಟನೋಟ


1. ಬಾಗಲೋಡಿ ದೇವರಾಯರ 'ಹುಚ್ಚ ಮುನಸೀಫರ ಚರಿತ್ರೆ' ಕತೆ
   ❖ **ಡಾ. ಅಮರೇಂದ್ರ ಶೆಟ್ಟಿ ಆರ್ / 8**

2. ಗೀತಾ ನಾಗಭೂಷಣರ 'ದಂಗೆ' ಕಾದಂಬರಿಯಲ್ಲಿ
   ಹೆಣ್ಣಿನ ಹಿಂಸಾತ್ಮಕ ಪ್ರತಿರೋಧ
   ❖ **ಮೈತ್ರಿ ಬೆಂಗಳೂರು / 14**

3. ಪಶ್ಚಿಮ ಮತ್ತು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ರೂಪುಗೊಂಡ
   ಭಾಷಾಂತರ ಮಾದರಿಗಳು
   ❖ **ಡಾ. ವಿಜಯೇಂದ್ರ ಕುಮಾರ್ ಜಿ.ಎಲ್. / 19**

4. ಗದಗ ಜಿಲ್ಲೆಯ ಲಕ್ಷ್ಮೇಶ್ವರದ
   ಶಾಸನವೊಂದರ ಕಾಲ : ಪುನಃಪರಿಶೀಲನೆ
   ❖ **ಎಸ್. ಕಾರ್ತಿಕ್ / 25**

5. ಬಸವಣ್ಣನವರ ವಚನಗಳ ಸಾಂಸ್ಕೃತಿಕ ಮುಖಾಮುಖಿ
   ❖ **ಡಾ. ಮಹೇಶ ಎಂ.ಕೆ. / 28**

6. ಕನಕದಾಸರ ಕೀರ್ತನೆಗಳಲ್ಲಿ ವೈಚಾರಿಕ ಪ್ರಜ್ಞೆ
   ❖ **ಡಾ. ಅಶ್ವಿನಿ ಆರ್.ಎಸ್. / 33**

7. ಚಿತ್ರದುರ್ಗ ನಾಯಕರ  ಕಂದಾಯ ವ್ಯವಸ್ಥೆ : ಚಾರಿತ್ರಿಕ ವಿಶ್ಲೇಷಣೆ
   ❖ **ಡಾ. ಜಯಮ್ಮ ಬಿ / 37**

8. ಭೌತಿಕ ವಸ್ತುಗಳು ಮತ್ತು ಚರಿತ್ರೆಯ ಹುಡುಕಾಟ
   ❖ **ಚೇತನ್ ಮುಂಡಾಜೆ / 45**

9. ರಂಗಕಲಾವಿದೆಯರ ಕುರಿತ ಸಂಶೋಧನಾ ಅಧ್ಯಯನ ಸಾಧ್ಯತೆಗಳು
   ❖ **ಡಾ. ರವಿ ಎನ್.ಸಿ. / 50**

10. ಭಾರತದ  ಸಂಸ್ಕೃತಿಯ ಲಕ್ಷಣಗಳು – ಒಂದು ಅಧ್ಯಯನ
    ❖ **ಡಾ. ಸಂಜೀವಕುಮಾರ ತಾಂದಳೆ / 54**

11. ಶಾಸನ ಹಾಗೂ ಸಾಹಿತ್ಯದಲ್ಲಿ ಸೊನ್ನಗಾರ
    ❖ **ಡಾ. ಸಿದ್ದಲಿಂಗಮ್ಮ ಬಿ.ಜಿ. / 60**

12. ವೀರ ಮೌಲ್ಯಕ್ಕೆ ಬರೆದ ಭಾಷ್ಯ : ಪಂಪನ 'ವಿಕ್ರಮಾರ್ಜುನ ವಿಜಯ'
    ❖ **ಡಾ. ಶ್ರೀಧರ ಎನ್. / 66**

13. ಶಿವರಾಮ ಕಾರಂತರ ಬೆಟ್ಟದ ಜೀವ : ಸಮಕಾಲೀನ ಓದು
    ❖ **ಶಿವರಾಜು ಎನ್. / 71**

14. ಆದಿ – ಅನಾದಿ ತತ್ವ
    ❖ **ಡಾ. ರವಿಶಂಕರ್ ಎ.ಕೆ**
    ❖ **ಡಾ. ಸರ್ವೇಶ್ ಬಿ.ಎಸ್**
    ❖ **ಡಾ. ಎಂ. ಬೈರಪ್ಪ / 76**

15. ಕನ್ನಡದ ಸಣ್ಣ ಕಥಾ ಸಾಹಿತ್ಯ – ಅವಲೋಕನ
❖ **ಡಾ. ಎಚ್.ಎಮ್. ಚನ್ನಪ್ಪಗೋಳ / 83**

16. ಅಡಿಗರ ಕಾವ್ಯದಲ್ಲಿ ಹೊಸತನ್ನು ಕಟ್ಟುವ ಬಗೆ
❖ **ಡಾ ಜಯಪ್ಪ ಎನ್ / 87**

17. ಮೈಮನಗಳ ಸುಳಿಯೊಳಗೆ ಸಿಲುಕಿದ 'ಶಿಖಂಡಿ'ಯ
ಜೀವಭಾವದ ಬಿಡುಗಡೆಯ ಕಥನ
❖ **ಡಾ. ಮೈತ್ರಿ ಭಟ್ / 91**

18. ದಾನ ಮತ್ತು ಲೋಕೋಪಕಾರಗಳ ಧಾರ್ಮಿಕ ಬೇರುಗಳು
❖ **ಡಾ. ನಿರೀಕ್ಷಣ್ ಸಿಂಗ್ ಗೌಗಿ ಎಸ್.ಕೆ. / 96**

19. ಚಿತ್ರದುರ್ಗ ಜಿಲ್ಲೆಯ
ಅಲೆಮಾರಿ ಬುಡಕಟ್ಟು ಸಮುದಾಯಗಳ ಪರಂಪರೆ
❖ **ಡಾ. ಪಾಪಯ್ಯ ಬಿ. / 101**

20. ಹರಿಹರ–ರಾಘವಾಂಕರು ಸ್ಮರಿಸಿರುವ ಪೂರ್ವಕವಿಗಳು
❖ **ಡಾ. ಪಂಡಿತ ಕೆ. ರಾಠೋಡ / 107**

21. ಕುವೆಂಪು ಮೊಳಗಿಸಿದ ಪಾಂಚಜನ್ಯ
❖ **ಡಾ ಶೋಭಾ ನಾಯಕ / 113**

22. ಕುಕನೂರು ತಾಲೂಕು : ಒಂದು ಸಾಂಸ್ಕೃತಿಕ ಅಧ್ಯಯನ
❖ **ಯಮನೂರಪ್ಪ / 117**

23. ಉತ್ತರ ಕರ್ನಾಟಕದ ಮದುವೆ ಸಂಪ್ರದಾಯದ
ಹಾಡುಗಳ ಇಣುಕು ನೋಟ
❖ **ಡಾ. ಎಸ್.ಬಿ. ರಾಠೋಡ / 122**

24. ನಮ್ಮ ಶಿಕ್ಷಣ : ಒಂದು ಟಿಪ್ಪಣಿ
❖ **ಗಿರೀಶ ಭಟ್ ಅಜಕ್ಕಳ / 127**

25. ಲೋಕಮಾನ್ಯ ತಿಲಕರು ನಡೆಸಿದ ಜ್ಞಾನಮೀಮಾಂಸೆ
❖ **ಡಾ. ರಾಮದಾಸ ಪ್ರಭು / 129**

26. 'ಎಷ್ಟು ಭೂಮಿ ಬೇಕು?' : ಭೂಮಿಯ ಆಸೆ ಮತ್ತು ಸಾವು
❖ **ಡಾ. ಶಾಂತಮ್ಮ ಟಿ.ಆರ್. / 133**

27. ವಿಜಯಪುರ ಜಿಲ್ಲೆಯ ಶಾಸನೋಕ್ತ ಜಲಾಗಾರಗಳು
❖ **ಡಾ. ಗಿರೀಶ್ ಹನುಮರೆಡ್ಡಿ / 136**

28. ದೇವರಬೆಳಕೆರೆ ಪರಿಸರದ ದೇವಾಲಯಗಳು
❖ **ಲೋಕೇಶ ನಾಯ್ಕ ಕೆ.**
**ಪ್ರೊ. ಮಾರುತಿ ಎಲ್.ಪಿ. / 144**

# ಸಂಪಾದಕೀಯ

ಬೆತ್ತಲೆ ರಾಜನ ಕುರಿತಾದ ಒಂದು ಜನಪದ ಕಥೆಯನ್ನು ಡೆನ್ಮಾರ್ಕಿನ ಕಥೆಗಾರ ಹ್ಯಾನ್ಸ್ ಕ್ರಿಶ್ಚಿಯನ್ ಆಂಡರ್ಸನ್ ಬೆಳಕಿಗೆ ತಂದನು. ಆಂಡರ್ಸನ್ ಇದನ್ನು ಮೊದಲು ಪ್ರಕಟಿಸಿದ್ದು 1937ರಲ್ಲಿ. ನಂತರ ಈ ಕಥೆಯು ಜಗತ್ತಿನ ಸುಮಾರು ನೂರಕ್ಕಿಂತಲೂ ಹೆಚ್ಚು ಭಾಷೆಗಳಿಗೆ ಅನುವಾದಗೊಂಡಿತು. ಈ ಕಥೆ ಎಷ್ಟು ಜನಪ್ರಿಯವಾಯಿತೆಂದರೆ 'The Emperor has no clothes' ಎಂಬುದು ಒಂದು ನುಡಿಗಟ್ಟಾಗಿ ಪ್ರಚಾರಕ್ಕೆ ಬಂತು. ಈ ಕಥೆಯ ಮೂಲವನ್ನು ಅನೇಕ ಭಾಷೆಗಳಿಗೆ ಜೋಡಿಸಿ ಹೇಳುವುದುಂಟು. ಕೊನೆಗೆ ಅದು ಬಂದು ನಿಲ್ಲುವುದು ಭಾರತೀಯ ಕವಿ ಜಿನರತ್ನನ 'ಲೀಲಾವತೀಸಾರ'ದ ಬಳಿ. ಇದರ ಕಾಲ ಸಾ.ಶ. 1283. ಇನ್ನೂ ಹಿಂದಕ್ಕೆ ಹೋಗಿ ಸಾ.ಶ. 1052ರ ಅನುಪಲಬ್ಧ ಕೃತಿ ಜಿನೇಶ್ವರನ 'ನಿರ್ವಾಣ ಲೀಲಾವತಿ'ಯಲ್ಲಿ ಈ ಕಥೆಯ ಮೂಲವಿದೆ ಎಂದೂ ಹೇಳುತ್ತಾರೆ. ಈ ಭಾರತೀಯ ಕಥೆಯಲ್ಲಿ ಸ್ವಾರಸ್ಯವಿದೆ. ಸಕ್ರಮ ಸಂತಾನವಾಗಿ ಹುಟ್ಟಿದವರು ಮಾತ್ರ ರಾಜನ ಹೊಸ ಪೋಷಾಕನ್ನು ದರ್ಶಿಸಬಹುದಿತ್ತು; ಸ್ಪರ್ಶಿಸಬಹುದಿತ್ತು. ಕೊನೆಗೆ ರಾಜನ ಮೆರವಣಿಗೆಯಾಗುವಾಗ ಜನರು 'ಬೆತ್ತಲೆ ಸವಣನೇ?' ಎಂದು ಉದ್ಗರಿಸುವುದು ಕಥೆಯ ಮುಖ್ಯ ಭಾಗ. ಈ ಭಾರತೀಯ ಮೂಲದ ಕಥೆ ಇನ್ನೂ ಮುನ್ನೆಲೆಗೆ ಬಂದಿಲ್ಲ. 'ಅರೇಬಿಯನ್ ನೈಟ್ಸ್', 'ಈಸೋಪನ ಕಥೆಗಳು' ಇವುಗಳ ಮೂಲವೂ ಭಾರತದ್ದೇ ಎಂಬ ವಾದವಿರುವುದನ್ನೂ ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬಹುದು. ಎಲ್ಲವೂ ನಮ್ಮಲ್ಲೇ ಇತ್ತು ಎಂದು ಹೇಳಿಕೊಳ್ಳುವುದು ಈಗ ರೂಢಿಯಾಗಿದೆ ಎಂಬ ಆಧುನಿಕರ ಟೀಕೆಯನ್ನು ಹೊರತುಪಡಿಸಿ ನೋಡಿದರೂ ಪ್ರಾಚೀನ ಭಾರತವು ಕಥೆಗಳ ಕಣಜವೇ ಆಗಿತ್ತು ಎಂಬುದಕ್ಕೆ ಅನೇಕ ನಿದರ್ಶನಗಳಿವೆ. ಶಿಶುಗೀತೆಯ ರೂಪಕ್ಕೆ ತಂದ ಈ ಕಥೆಯನ್ನು ಈ ಸಂಚಿಕೆಯ ಲೇಖನದ ಕೊನೆಯ ಉಳಿಕೆ ಜಾಗದಲ್ಲಿ ಕೊಡಲಾಗಿದೆ. ಓದುಗರು ಒಂದರ ನಂತರ ಒಂದರಂತೆ ಕ್ರಮವಾಗಿ ಓದಿಕೊಳ್ಳಬೇಕಾಗಿ ಪ್ರಾರ್ಥನೆ.

ಈ ಸಂಚಿಕೆಯಲ್ಲೂ ಎಂದಿನಂತೆ ವೈವಿಧ್ಯಮಯ ಲೇಖನಗಳಿವೆ. ಓದುಗರ ಪ್ರತಿಕ್ರಿಯೆಗೆ ಸ್ವಾಗತ.

**–ಸಂ.**

# ಬಾಗಲೋಡಿ ದೇವರಾಯರ 'ಹುಚ್ಚ ಮುನಸೀಫರ ಚರಿತ್ರೆ' ಕತೆ

**ಡಾ. ಅಮರೇಂದ್ರ ಶೆಟ್ಟಿ ಆರ್.**
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು

ನವೋದಯ ಕಾಲದ ವಿಶಿಷ್ಟ ಕತೆಗಳ ಸಾಲಿಗೆ ಬಾಗಲೋಡಿ ದೇವರಾಯರ 'ಹುಚ್ಚ ಮುನಸೀಫರ ಚರಿತ್ರೆ' ನಿಸ್ಸಂದೇಹವಾಗಿ ಸೇರುತ್ತದೆ. ತನ್ನ ಬೇರಿನ ನಂಟಿನಿಂದ ದೂರವಾದ ವ್ಯಕ್ತಿ ಅದನ್ನು ಮತ್ತೆ ದಕ್ಕಿಸಿಕೊಳ್ಳಲು ಹಂಬಲಿಸಿ ಹೆಣಗಾಡುವುದು, ಮಸುಕುಮಸುಕಾದ ಗತವನ್ನು ಕೋರೈಸುವ ವರ್ತಮಾನದಲ್ಲಿ ನಿರ್ವಹಿಸಲು ಸಾಧ್ಯವಾಗದೇ ವ್ಯಥೆ ಪಡುವುದು – ಈ ಕತೆಯ ವಸ್ತು. ಒಬ್ಬ ವ್ಯಕ್ತಿಯಲ್ಲಿರುವ ಎರಡು ಭಿನ್ನ ವ್ಯಕ್ತಿತ್ವಗಳನ್ನು ಹಾಗೂ ಬಹಿರಂಗದ ಬದುಕಿನಲ್ಲಿ ಪ್ರಕಟವಾಗುವ ಅವನ ಸುಪ್ತಪ್ರಜ್ಞೆಯ ನೆರಳನ್ನು ಬಹಳ ಕುಶಲತೆಯಿಂದ ಇಲ್ಲಿ ಚಿತ್ರಿಸಲಾಗಿದೆ. ಮನೋವಿಜ್ಞಾನದ ಹಲವು ವ್ಯಾಖ್ಯೆಗಳನ್ನು ಅನ್ವಯಿಸಲು ಸಾಧ್ಯವಿರುವ ಕತೆಯಿದು. ಬಾಗಲೋಡಿ ದೇವರಾಯರು ಭಾರತ ಸರ್ಕಾರದ ವಿದೇಶಾಂಗ ಇಲಾಖೆಯ ಉದ್ಯೋಗದಲ್ಲಿದ್ದವರು. ಬಹಳ ವರ್ಷಗಳವರೆಗೆ ತನ್ನ ತಾಯ್ನೆಲದಿಂದ ದೂರ ಉಳಿಯಬೇಕಾದ ಅನಿವಾರ್ಯ ಅವರಿಗಿತ್ತು. ಆ ಸಂದರ್ಭದಲ್ಲಿ ಅವರನ್ನು ಕಾಡಿರಬಹುದಾದ ರೆಫ್ಯುಜಿ ಸಿಂಡ್ರೋಮ್ (ಪರಸ್ಥಳ ಪ್ರಜ್ಞೆ) ಹುಚ್ಚ ಮುನಸೀಫರ ಕತೆಯಲ್ಲಿ ಕಾಣಿಸಿಕೊಂಡಂತಿದೆ. ಸಾಹಿತ್ಯ ಕೃತಿಯೊಂದರಲ್ಲಿ ಅದರ ಲೇಖಕನ ಜೀವನವನ್ನು ಹುಡುಕುವುದು ಸೂಕ್ತವೇ ಎನ್ನುವ ಚರ್ಚೆ ಸಾಕಷ್ಟು ನಡೆದಿದೆ. ಹಾಗಿದ್ದಾಗ್ಯೂ ಸಾಹಿತ್ಯ ಎನ್ನುವುದು ಲೋಕ ವಾಸ್ತವ ಮತ್ತು ಕಲ್ಪನೆಗಳ ಹದವಾದ ಮಿಶ್ರಣವೇ ಆಗಿರುವುದರಿಂದ ಬಾಗಲೋಡಿ ದೇವರಾಯರ ಕತೆಯನ್ನು ಆ ನಿಟ್ಟಿನಲ್ಲಿ ಪರಿಭಾವಿಸಲು ತೊಂದರೆಯೇನಿಲ್ಲ.

ಈ ಕತೆ ಮೂರು ಭಾಗಗಳಲ್ಲಿ ನಿರೂಪಿತವಾಗಿದೆ. ಮೊದಲ ಭಾಗದಲ್ಲಿ ಕಥಾನಾಯಕನ ಬದುಕಿನ ಉತ್ತರಾರ್ಧವಿದೆ. ಅದು ಸುಂದರಪ್ಪ ಅರ್ಥಾತ್ ಹುಚ್ಚ ಮುನಸೀಫ ಎನ್ನುವ ವ್ಯಕ್ತಿತ್ವ. ಎರಡನೇ ಭಾಗದಲ್ಲಿ ಅವನ ಪೂರ್ವಾರ್ಧದ ಬದುಕಿನ ಚಿತ್ರಣವಿದೆ. ಅದು ಬಸವ ಎನ್ನುವ ಗೋವಳಿಗ ಹುಡುಗ ಸುಂದರಪ್ಪನಾಗಲು ರೂಪಾಂತರಕ್ಕೆ ಒಡ್ಡಲ್ಪಡುವ ವ್ಯಕ್ತಿತ್ವ. ಮೂರನೇ ಭಾಗದಲ್ಲಿ ಅವನಲ್ಲಿ ಅಂತರ್ಗತಗೊಂಡಿರುವ ಎರಡು ವ್ಯಕ್ತಿತ್ವಗಳ ಢಿಕ್ಕಿಯಿಂದ ಅವನ ವೈಯಕ್ತಿಕ ಬದುಕಿನಲ್ಲಾಗುವ ಅಲ್ಲೋಲಕಲ್ಲೋಲ ಹಾಗೂ ದುರಂತದ ಚಿತ್ರಣವಿದೆ.

ಪುತ್ತೂರು ಕೋರ್ಟಿನಲ್ಲಿ ಮುನಸೀಫರಾಗಿರುವ ಸುಂದರಪ್ಪ ತನ್ನ ವಿಚಿತ್ರ ನಡವಳಿಕೆಗಳಿಂದ ಹುಚ್ಚ ಮುನಸೀಫ ಎಂದೇ ಪ್ರಸಿದ್ಧರಾಗಿದ್ದಾರೆ. ನ್ಯಾಯಶಾಸ್ತ್ರದಲ್ಲಿ ಆತನ ಜ್ಞಾನ, ಲಾಯರುಗಳು ಹಾಗೂ ಸಾಕ್ಷಿಗಳನ್ನು ತಬ್ಬಿಬ್ಬುಗೊಳಿಸುವ ಆತನ ವಾದ ಮಂಡನೆಯ ಮತ್ತು ವಿಚಾರಣೆಯ ವೈಖರಿ, ಸತ್ಯಸಂಧತೆ ಮತ್ತು ವೃತ್ತಿಧರ್ಮದ ಬಗ್ಗೆ ಆತನಿಗಿರುವ ಬದ್ಧತೆಗಳ ಕಾರಣದಿಂದ ಎಲ್ಲರಿಗೂ ಆತನ ಬಗ್ಗೆ ಭಯಮಿಶ್ರಿತ ಗೌರವವಿದೆ. ಹಾಗೆಯೇ ಯಾವಾಗ ಸೌಮ್ಯಾವತಾರಿಯಾಗಿರುತ್ತಾನೆ, ಯಾವಾಗ

ಉಗ್ರನರಸಿಂಹಾವತಾರಿಯಾಗುತ್ತಾನೆ ಎನ್ನುವ ಸಂದೇಹ ಮೂಡಿಸುವ ಅಸ್ಥಿರ ವ್ಯಕ್ತಿತ್ವ ಹಾಗೂ ಬಹುಮುಖ್ಯವಾಗಿ ಆತ ನೀಡಿದ ವಿಲಕ್ಷಣ ತೀರ್ಪುಗಳ ಕಾರಣದಿಂದ ಹುಚ್ಚ ಮುನಸೀಫ ಎನ್ನುವ ಬಿರುದು ಆತನಿಗೆ ಅಂಟಿಕೊಂಡಿದೆ.

ಜಡ್ಜಿಯಾಗಿ ಆತ ನೀಡಿದ ಎರಡು ತೀರ್ಪುಗಳು ವಿವಾದಕ್ಕೆ ಕಾರಣವಾಗುತ್ತವೆ. ಮೊದಲನೆಯದು ಒಂದು ಆಸ್ತಿ ವ್ಯಾಜ್ಯ. ಅಣ್ಣತಮ್ಮಂದಿರ ನಡುವೆ ಏರ್ಪಟ್ಟ ಆಸ್ತಿ ವ್ಯಾಜ್ಯದಲ್ಲಿ ಬಹುತೇಕ ತರ್ಕಬದ್ಧ ತೀರ್ಪನ್ನೇ ನೀಡಿದ ಮುನಸೀಫರು ಪಾಲಾಗದೆ ಉಳಿದ ಎಂಟ್ಹತ್ತು ಆಕಳುಗಳ ವಿಚಾರದಲ್ಲಿ ತೀರ್ಪು ನೀಡುವಾಗ ಮಾತ್ರ ತರ್ಕದ ಹಂಗನ್ನು ಮೀರಿ, ಹಸುಗಳನ್ನೇ ಕೋರ್ಟಿಗೆ ಕರೆಸಿ ಅವುಗಳ ಮೈದಡವಿ ಮುದ್ದಾಡಿ, ಅವುಗಳೊಂದಿಗೆ ಏನೋ ಮಾತನಾಡುತ್ತಿರುವಂತೆ ವರ್ತಿಸಿ ಕೊನೆಗೆ ಕೇಸಿಗೆ ಸಂಬಂಧವೇ ಇಲ್ಲದ ಆ ಕುಟುಂಬದ ಹೆಣ್ಣುಮಗಳ ಪಾಲಿಗೆ ಅವುಗಳನ್ನು ಪಾಲು ಮಾಡಿದಂತೆ ತೀರ್ಪು ನೀಡಿಬಿಡುತ್ತಾರೆ. ದನಕರುಗಳನ್ನು ಕೋರ್ಟಿಗೆ ಕರೆಸುವ ವಿಚಿತ್ರ ನಡೆಯನ್ನು ತಳ್ಳಿಹಾಕಿದ ಮೇಲಿನ ಕೋರ್ಟು ಮುನಸೀಫರು ನೀಡಿದ ತೀರ್ಪನ್ನು ರದ್ದು ಮಾಡುತ್ತದೆ.

ಎರಡನೆಯ ಕೇಸಿನಲ್ಲಿಯೂ ಇದು ಬೇರೊಂದು ರೀತಿಯಲ್ಲಿ ಪುನರಾವರ್ತನೆಯಾಗುತ್ತದೆ. ದನದ ಕೊಟ್ಟಿಗೆಯಲ್ಲಿ ಆದ ವ್ಯಕ್ತಿಯೊಬ್ಬರ ಕೊಲೆಯ ವಿಚಾರಣೆ ಇದು. ಕೊಲೆ ಮಾಡಿರುವುದು ಯಾರೆನ್ನುವುದು ಊರಿಗೇ ತಿಳಿದಿರುತ್ತದೆ. ತಮ್ಮ ಮಾವನನ್ನೇ ಕೊಂದಿರುವ ಅಳಿಯಂದಿರು ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಮದ್ರಾಸಿನ ಪ್ರಸಿದ್ಧ ಬ್ರಿಟಿಷ್ ಬ್ಯಾರಿಸ್ಟರನ್ನೇ ತಮ್ಮ ಪರವಾಗಿ ವಾದಕ್ಕೆ ನಿಗದಿ ಮಾಡಿಕೊಂಡಿರುತ್ತಾರೆ. ಎಲ್ಲ ಸಾಕ್ಷಿ ಪುರಾವೆಗಳನ್ನು ಆರೋಪಿಗಳಿಗೆ ಅನುಕೂಲಕರವಾಗಿರುವಂತೆ ಸಿದ್ಧಪಡಿಸಲಾಗಿರುತ್ತದೆ. ಬಿಡುಗಡೆಯಾಗುವ ಅವರನ್ನು ವಿಜೃಂಭಣೆಯಿಂದ ಮೆರವಣಿಗೆ ಮಾಡಲು, ಸಿಹಿ ಹಂಚಲು ಎಲ್ಲ ಸಿದ್ಧತೆಗಳಾಗಿರುತ್ತವೆ. ಆದರೆ ಆರೋಪಿಗಳ ದುರಾದೃಷ್ಟವಿರಬೇಕು, ಆ ದಿನದ ಜಡ್ಜಿಗೆ ಅನಾರೋಗ್ಯವಾಗಿ ಅವರ ಬದಲು ಸುಂದರಪ್ಪನವರೇ ಜಡ್ಜಿಯ ಸ್ಥಾನದಲ್ಲಿ ಬರುತ್ತಾರೆ. ಒಂದು ದಿನ ವಾದವಿವಾದಗಳೆಲ್ಲ ಮುಗಿಯುತ್ತದೆ. ಎಲ್ಲವೂ ಆರೋಪಿಗಳಿಗೆ ಅನುಕೂಲಕರವಾಗಿ ಇರುತ್ತದೆ. ಇನ್ನೇನು ಕೋರ್ಟು ಆರೋಪಿಗಳನ್ನು ನಿರಪರಾಧಿಗಳೆಂದು ಘೋಷಿಸಿ ಬಿಡುಗಡೆ ಮಾಡುವುದಷ್ಟೇ ಬಾಕಿಯಿರುತ್ತದೆ. ಆಗ ಅನಿರೀಕ್ಷಿತವಾಗಿ ಮುನಸೀಫರು 'ಕೊಲೆಯಾದುದು, ಹೆಣದ ಪತ್ತೆಯಾದುದು ಹಸುವಿನ ಹಟ್ಟಿಯಲ್ಲಿಯೇ ತಾನೆ? ಆ ಹಸುಗಳನ್ನು ತಂದು ಹಾಜರ್ ಮಾಡು' ಎಂದು ಕೋರ್ಟಿನ ಜಮೇದಾರನಿಗೆ ಆರ್ಡರ್ ಮಾಡುತ್ತಾರೆ. ಹಸುಗಳನ್ನು ತರಿಸಲಾಗುತ್ತದೆ. ಎಂದಿನಂತೆ ಎಲ್ಲ ಮನುಷ್ಯನಿರ್ಮಿತ ನ್ಯಾಯ ಸೂತ್ರಗಳನ್ನು ಬದಿಗಿಟ್ಟ ಮುನಸೀಫರು ಹಸುಗಳ ಬಳಿ ಹೋಗಿ, ಅವುಗಳೊಂದಿಗೆ ಮಾತನಾಡಿದಂತೆ ಮಾಡುತ್ತಾರೆ. ಆನಂತರ, ಮನುಷ್ಯ ಹೇಳುವ ಸಾಕ್ಷಿಗಳೆಲ್ಲ ಮೋಸದ್ದು, ದೇವರು ಪ್ರಾಣಿಗಳ ಬಾಯಿಂದ ಸತ್ಯ ಹೇಳಿಸುತ್ತಾನೆ ಮುಂತಾದ ನೈತಿಕ ಪಾಠಗಳನ್ನು ಕೋರ್ಟಿನಲ್ಲಿದ್ದ ಪ್ರತಿವಾದಿ ಲಾಯರುಗಳಿಗೆ ಆವೇಶದಿಂದ ಹೇಳಿ ತಬ್ಬಿಬ್ಬುಗೊಳಿಸಿ, ಅವರಿಂದಲೇ ಅಪಾದಿತರದು ತಪ್ಪು ಎನ್ನಿಸಿ, ಅಪರಾಧಿಗಳಿಗೆ ತಲಾ ಹನ್ನೆರಡು ವರ್ಷ ಜೈಲು ಶಿಕ್ಷೆ ವಿಧಿಸುತ್ತಾರೆ. ಈ ತೀರ್ಪು ಕೋಲಾಹಲವನ್ನು ಉಂಟುಮಾಡುತ್ತದೆ. ಎಂದಿನಂತೆ ಈ ತೀರ್ಪು ಮೇಲಿನ ಕೋರ್ಟಿನಲ್ಲಿ ಬಿದ್ದುಹೋಗಿ, ಅಪಾದಿತರು ನಿರಪರಾಧಿಗಳೆನ್ನುವ ಬಿರುದು

ಪಡೆದು ಬಿಡುಗಡೆಯಾಗುತ್ತಾರೆ. ತತ್ಪರಿಣಾಮವಾಗಿ ನ್ಯಾಯ ಉಳಿಸಲು ಹೋರಾಡಿದ ಮುನಸೀಫರು ತಮ್ಮ ಉದ್ಯೋಗವನ್ನೇ ಕಳೆದುಕೊಳ್ಳಬೇಕಾಗುತ್ತದೆ.

ಅದರ ನಡುವೆ ಮುನಸೀಫ ಸುಂದರಪ್ಪನವರು ತಮ್ಮ ವಿಚಿತ್ರ ನಡವಳಿಕೆಗಳಿಂದ ಊರಿನಾದ್ಯಂತ ಮನೆಮಾತಾಗಿದ್ದಾರೆ. ಸ್ವತಃ ನಿರೂಪಕರ ತಂದೆಯೇ ತಮ್ಮ ಬಾಲ್ಯದಲ್ಲಿ ಒಮ್ಮೆ ಈ ಮುನಸೀಫರ ಅಂತಹ ನಡವಳಿಕೆಯೊಂದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದ್ದಾರೆ. ಊರ ಹೊರಗಿನ ಹುಲ್ಲುಗಾವಲಿನಲ್ಲಿ ದನಗಳ ಹಿಂಡಿನ ನಡುವೆ ಮುನಸೀಫರು ಮೈಮರೆತು ಹಾಡುತ್ತಿದ್ದುದನ್ನೂ, ದನಗಳು ಕೊಳಲನೂದುವ ಕೃಷ್ಣನ ಎದುರು ತಲೆದೂಗುತ್ತ ನಿಂತ ರೀತಿಯಲ್ಲಿ ಇವರ ಹಾಡುಗಾರಿಕೆಯನ್ನು ಕಿವಿನಿಮಿರಿಸಿ ಧ್ಯಾನಸ್ಥವಾಗಿ ಆಲಿಸುತ್ತಿದ್ದುದನ್ನೂ ನಿರೂಪಕರ ತಂದೆ ಕಂಡಿದ್ದಾರೆ. ಅಷ್ಟರ ಮಟ್ಟಿಗೆ ದನಗಳೊಂದಿಗೆ ಮುನಸೀಫರಿಗೆ ಆಳವಾದ ಅವ್ಯಕ್ತ ನಂಟು, ಪ್ರೀತಿಯಿದೆ ಎನ್ನುವುದು ಸ್ಪಷ್ಟವಾಗುತ್ತದೆ.

ಇಲ್ಲಿಂದ ಕತೆ ಹಿಮ್ಮುಖವಾಗಿ ಚಲಿಸುತ್ತದೆ. ಅದು ಮುನಸೀಫರ ಗತದ ಬದುಕಿನ ಕತೆಯ ಕಡೆಗೆ. ಭೀಕರ ಬರಗಾಲಕ್ಕೆ ಸಿಲುಕಿದ ಬಯಲುಸೀಮೆಯ ಜನ ಜೀವನೋಪಾಯಕ್ಕಾಗಿ ಮತ್ತು ದನಕರುಗಳನ್ನು ಕಾಪಾಡಿಕೊಳ್ಳಲು ಘಟ್ಟದ ಕೆಳಗಿನ ಸುಬ್ರಹ್ಮಣ್ಯ ಮತ್ತು ಪುತ್ತೂರು ಸೀಮೆಯ ಕಡೆಗೆ ವಲಸೆ ಬರುತ್ತಾರೆ. ಜನರಂತೆಯೇ ಅವರ ಜಾನುವಾರುಗಳೂ ಆಹಾರವಿಲ್ಲದೆ ಒಣಗಿ ಮೂಳೆ ಚಕ್ಕಳವಾಗಿರುತ್ತವೆ. ಸಾಲದೆಂಬಂತೆ ಬಯಲುಸೀಮೆಯ ಬತ್ತಿದ ಕೆರೆಕುಂಟೆಗಳಲ್ಲಿ ಸವುಳು ನೀರು ಕುಡಿದ ಅವುಗಳಿಗೆ ಕಾಯಿಲೆಯೂ ಅಂಟಿರುತ್ತದೆ. ಮೊದಲಾದರೆ ಕುಕ್ಕೆ ಸುಬ್ರಹ್ಮಣ್ಯದ ಜಾತ್ರೆಗೆ ಬರುತ್ತಿದ್ದ ಬಯಲುಸೀಮೆಯ ದನಗಳನ್ನು ಇಷ್ಟಪಟ್ಟು ಖರೀದಿಸುತ್ತಿದ್ದ ಘಟ್ಟದ ಕೆಳಗಿನವರು ಈ ಸಲ ದಂಡುದಂಡಾಗಿ ಬಂದ, ಕಾಯಿಲೆ ಹಿಡಿದ ದನಗಳನ್ನು ಕೊಳ್ಳಲು ಮನಸ್ಸು ಮಾಡಲಿಲ್ಲ. ಕನಿಷ್ಟ ತಮ್ಮ ಊರುಗಳ ಸನಿಹಕ್ಕೂ ಬಿಟ್ಟುಕೊಳ್ಳಲು ಸಿದ್ದವಿರಲಿಲ್ಲ. ಅಂತಹ ಕಾಲದಲ್ಲಿ ಬಯಲುಸೀಮೆಯಿಂದ ಘಟ್ಟದ ಕೆಳಗಿನ ಮಾಡ ಎನ್ನುವ ಊರಿಗೆ ಬಂದ ರೈತನೊಬ್ಬ ಒಂದು ಮನೆಯ ಮುಂದೆ ನಿಂತು ತನ್ನ ದನಗಳನ್ನು ಕೊಂಡುಕೊಳ್ಳಲು ಕೇಳುತ್ತಾನೆ. ಅವರು ಬೇಡವೆಂದಾಗ, ಈ ಬರಗಾಲದಲ್ಲಿ ಹೆಂಡತಿಯನ್ನೂ ಇಬ್ಬರು ಮಕ್ಕಳನ್ನೂ ಕಳೆದುಕೊಂಡಿದ್ದೇನೆ, ಉಳಿದಿರುವ ಒಬ್ಬನೇ ಒಬ್ಬ ಮಗನೂ ಹಸಿವಿನಿಂದ ಸಾಯದಂತೆ ಕಾಪಾಡಿಕೊಳ್ಳಬೇಕಾಗಿದೆ ಎಂದು ಕೇಳಿಕೊಳ್ಳುತ್ತಾನೆ. ಆಗ ಮಕ್ಕಳಿಲ್ಲದ ಆ ಮನೆಯೊಡತಿಯ ಕಣ್ಣು ಮುದ್ದಾದ ಆ ಹುಡುಗನ ಮೇಲೆ ಬಿದ್ದು, ಅವನನ್ನು ತಮಗೆ ಹಣಕ್ಕೆ ಕೊಟ್ಟುಬಿಡುವಂತೆ ಕೇಳುತ್ತಾಳೆ. ಸ್ವಂತ ಮಗನಂತೆ ನೋಡಿಕೊಳ್ಳುವುದಾಗಿ ಆತನಿಗೆ ಮಾತು ಕೊಡುತ್ತಾಳೆ. ಮಗನನ್ನು ಉಳಿಸಿಕೊಳ್ಳಲು ಬೇರೆ ದಾರಿಯಿಲ್ಲದೆ ಆಕೆಯ ಒತ್ತಾಯಕ್ಕೆ ಮಣಿದ ರೈತ ಮನಸ್ಸು ಕಲ್ಲು ಮಾಡಿಕೊಂಡು ತನ್ನ ಹತ್ತು ವರ್ಷ ಪ್ರಾಯದ ಮಗ ಬಸವನನ್ನು ಅವನು ಒಪ್ಪದಿದ್ದರೂ ಕೇಳದೆ ಆ ಮನೆಯೊಡತಿಯ ವಶಕ್ಕೆ ಕೊಟ್ಟು ಹೊರಟುಬಿಡುತ್ತಾನೆ.

ಬಸವ ಎನ್ನುವ ಆ ಗೋವಳಿಗ ಹುಡುಗ ಗತದಿಂದ ಹೊರಬರಲು ಸಾಧ್ಯವಾಗದೆ, ಹೊಸ ವಾತಾವರಣಕ್ಕೆ ಒಗ್ಗಿಕೊಳ್ಳಲಾಗದೆ ಸಂಕಟಪಡುತ್ತಾನೆ. ಶಾಲೆಗೆ ಕಳಿಸಿದರೆ, ಯಾವುದೋ ದನಗಳ ಮಂದೆಯಲ್ಲಿ ಅಡ್ಡಾಡುತ್ತಿರುತ್ತಾನೆ. ಇನ್ನೊಂದೆಡೆ ಅವನನ್ನು ಏನಾದರೂ ಮಾಡಿ ತಮ್ಮವನನ್ನಾಗಿ ಮಾರ್ಪಡಿಸಿಕೊಳ್ಳಲು ಆ ಹೊಸ ತಂದೆ ತಾಯಿ

ಇನ್ನಿಲ್ಲದ ಪ್ರಯತ್ನ ಮಾಡುತ್ತಾರೆ. ಕೆಲವೊಮ್ಮೆ ಅವನನ್ನು ಹೊಡೆದೂ ಬಡಿದೂ ಪಳಗಿಸಲು ಪ್ರಯತ್ನಿಸುತ್ತಾರೆ. ಅವನ ಪೂರ್ವಾಶ್ರಮದ ಬದುಕಿನ ನೆನಪುಗಳನ್ನು ಅಳಿಸಲೆಂಬಂತೆ ಅವನ ಹೆಸರನ್ನು 'ಸುಂದರಪ್ಪ' ಎಂದು ಬದಲಾಯಿಸುತ್ತಾರೆ. ಪಾಪ ಅವರೇನೂ ಕೆಟ್ಟವರಲ್ಲ. ತಮ್ಮ ಜಾತಿಯವನೇ ಅಲ್ಲದ, ತಮ್ಮ ರಕ್ತ ಹಂಚಿಕೊಂಡಿಲ್ಲದ ಹುಡುಗನನ್ನು ತಮ್ಮದೇ ಕರುಳ ಕುಡಿಯೆಂಬಂತೆ ಅವರು ಸಾಕುತ್ತಾರೆ. ನಿಷ್ಕಲ್ಮಶ ಪ್ರೀತಿಯನ್ನೇ ತೋರುತ್ತಾರೆ. ಅವನಿಗಾಗಿ ಬಹಳಷ್ಟು ಕಷ್ಟ ಸಹಿಸುತ್ತಾರೆ. ಒಳ್ಳೆಯ ಶಿಕ್ಷಣ ಕೊಡಿಸುತ್ತಾರೆ. ಅವನಿಗೆ ಪುತ್ತೂರಿನ ಕೋರ್ಟಿನಲ್ಲಿ ಮುನಸೀಫ ಉದ್ಯೋಗ ದೊರೆತಾಗ, ತಮ್ಮ ಜಾತಿಯಲ್ಲಿಯೇ ಹೆಣ್ಣು ತಂದು ಮದುವೆಯನ್ನೂ ಮಾಡುತ್ತಾರೆ. ಅವನು ಹೆಂಡತಿಯೊಡನೆ ಪುತ್ತೂರಿನಲ್ಲಿ ಮನೆ ಮಾಡಿ ಸಂಸಾರ ಹೂಡಿದಾಗ ತಮ್ಮ ಕರ್ತವ್ಯ ಸಂಪೂರ್ಣವಾಯಿತು ಎಂದು ಸಂತೋಷಪಡುತ್ತಾರೆ.

ಪುತ್ತೂರಿನಲ್ಲಿ ವಾಸ್ತವ್ಯ ಆರಂಭಿಸಿದ ನಂತರ ಸುಂದರಪ್ಪನ ಪೂರ್ವಾಶ್ರಮದ ಗೋವಳಿಗ ವ್ಯಕ್ತಿತ್ವದ ಅಭಿವ್ಯಕ್ತಿಗೆ ಮುಕ್ತ ಅವಕಾಶ ಲಭಿಸಿದಂತಾಗುತ್ತದೆ. ಎಂಟ್ಹತ್ತು ದನಗಳನ್ನು ತಂದು ಸಾಕಲಾರಂಭಿಸುತ್ತಾನೆ. ಕಳಚಿಹೋಗಿದ್ದ ಹಳೆಯ ನೆನಪುಗಳನ್ನು, ಬಾಲ್ಯವನ್ನು ಮತ್ತೆ ಮೊಗೆದು ಸುಖಿಸುವ ಸಂಭ್ರಮ ಆತನಲ್ಲಿ ಮೈದುಂಬಿಕೊಳ್ಳುತ್ತದೆ. ದನಗಳನ್ನು ನೋಡಿಕೊಳ್ಳಲು ಬೆಳ್ಳಿ ಎಂಬ ಹೆಣ್ಣುಮಗಳನ್ನೂ ನೇಮಕ ಮಾಡಿಕೊಳ್ಳುತ್ತಾನೆ. ಸದಾಕಾಲ ದನಗಳ ಜೊತೆಗಿರುತ್ತ ಸಂಸಾರವನ್ನು ಕಡೆಗಣಿಸುತ್ತಿದ್ದ ಗಂಡನ ಮೇಲೆ ಸಹಜವಾಗಿಯೇ ಹೆಂಡತಿಗೆ ಸಿಟ್ಟು ಬರುತ್ತದೆ. ತನ್ನ ಬಗೆಗಿನ ನಿರಾಸಕ್ತಿಗೆ ಚಾಕರಿಯ ಹುಡುಗಿಯೇ ಕಾರಣವಿರಬೇಕು ಎಂದು ಅನುಮಾನಿಸಿ, ಅವರಿಬ್ಬರಿಗೂ ಸಂಬಂಧ ಕಲ್ಪಿಸಿ ರಾದ್ಧಾಂತ ಮಾಡುತ್ತಾಳೆ. ಆ ಹುಡುಗಿಯನ್ನು ಕೆಲಸದಿಂದ ಬಿಡಿಸಿ ಓಡಿಸುತ್ತಾಳೆ. ತನ್ನ ಮೇಲೆ ಎರಗಿದ ಈ ಘೋರ ಆರೋಪದಿಂದ ಸುಂದರಪ್ಪ ತಲ್ಲಣಿಸಿಹೋಗುತ್ತಾನೆ. ಆನಂತರವೇ ಆತ ಕೋರ್ಟಿನಲ್ಲಿ ಮೊದಲಿಗಿಂತ ಹೆಚ್ಚು ವಿಲಕ್ಷಣವಾಗಿ ವರ್ತಿಸಿ, ಚಿತ್ರವಿಚಿತ್ರ ತೀರ್ಪುಗಳನ್ನು ನೀಡಿ ಹುಚ್ಚ ಮುನಸೀಫ ಎನ್ನುವ ಕೆಟ್ಟ ಬಿರುದು ಪಡೆದುಕೊಂಡಿದ್ದು ಹಾಗೂ ಕೆಲಸವನ್ನೂ ಕಳೆದುಕೊಂಡಿದ್ದು.

ಇಲ್ಲಿಂದ ಸುಂದರಪ್ಪನ ವ್ಯಕ್ತಿತ್ವದ ಸೀಳು ಓದುಗರಿಗೆ ಸ್ಪಷ್ಟವಾಗಿ ದೃಗ್ಗೋಚರವಾಗ ತೊಡಗುತ್ತದೆ. ಮೊದಲಿನಿಂದಲೂ ಈ ಜಗತ್ತಿನ ಹಂಗು ತೊರೆದವನಂತೆಯೇ, ಅವಧೂತನಂತೆಯೇ ಇದ್ದ ಸುಂದರಪ್ಪ ಈಗ ಲೌಕಿಕ ವ್ಯವಹಾರಗಳಲ್ಲಿ ಪೂರ್ತಿ ಸಲ್ಲದವನಾಗಿ ಬಿಟ್ಟಾಗ, ಬಸವನ ವ್ಯಕ್ತಿತ್ವವನ್ನು ತಾಳುವುದರಲ್ಲಿ ನೆಮ್ಮದಿ ಕಂಡುಕೊಳ್ಳುತ್ತಾನೆ. ಇಹಲೋಕದ ಪರಿವೆಯಿಲ್ಲದವನಂತೆ ಬಾಲ್ಯದ ತನ್ನೂರು, ತನ್ನ ಮನೆ, ತಂದೆತಾಯಿ, ಅಣ್ಣತಮ್ಮಂದಿರು, ತನ್ನ ಪ್ರೀತಿಯ ಗೋವುಗಳಾದ ಬೆಳ್ಳಿ, ಚಿಕ್ಕಿ, ಕಾಳ – ಇವುಗಳ ನೆನಪಿನಲ್ಲಿ, ಕನವರಿಕೆಯಲ್ಲಿ ಮುಳುಗೇಳತೊಡಗುತ್ತಾನೆ. ಅದರ ಮಧ್ಯೆಯೂ ತಾನು ಕಾಯಿಲೆಯಿಂದ ಗುಣಮುಖವಾಗುವುದಿಲ್ಲ ಎಂದರಿತು ತನ್ನ ಹೆಂಡತಿಯ ಹೆಸರಿನಲ್ಲಿ ಆಸ್ತಿಯನ್ನು ಉಯಿಲು ಮಾಡಲು ವಕೀಲರಿಗೆ ಹೇಳಿ ವ್ಯವಸ್ಥೆ ಮಾಡುತ್ತಾನೆ.

ಹಾಸಿಗೆ ಹಿಡಿದ ಸುಂದರಪ್ಪ ಆಗಲೂ ಬೆಳ್ಳಿಯನ್ನು ಕನವರಿಸುತ್ತಿರುತ್ತಾನೆ. ಆತ ಕನವರಿಸುತ್ತಿರುವುದು ತನ್ನ ಆಕಳು ಬೆಳ್ಳಿಯನ್ನು. ಆದರೆ ಆತನ ಹೆಂಡತಿ ಭಾವಿಸಿದ್ದು ಆತ ಕನವರಿಸುತ್ತಿರುವುದು ಕೆಲಸದಾಕೆ ಬೆಳ್ಳಿಯನ್ನು ಎಂದು. ಸಾಯುವ ಸ್ಥಿತಿಯಲ್ಲೂ ಅವಳನ್ನು ಕನವರಿಸುತ್ತಿದ್ದಾನೆ ಎಂದು ಭಾವಿಸಿ ಗಂಡನ ಕುರಿತ ಕಿಂಚಿತ್ತು ಕನಿಕರವನ್ನೂ

ತೊರೆಯುತ್ತಾಳೆ. ನಂತರ ಇಹಲೋಕದ ಜ್ಞಾನವೇ ಇಲ್ಲದವನಂತೆ ಮಲಗಿದ್ದವನ ಕೈಯಲ್ಲಿ ವಕೀಲನು ಉಯಿಲಿಗೆ ಸಹಿ ಮಾಡಿಸುತ್ತಾನೆ. ಮಾರನೇ ದಿನ ಉಯಿಲನ್ನು ಎಲ್ಲರ ಮುಂದೆ ಓದಲು ತೆರೆದರೆ ಅದರಲ್ಲಿ ಸುಂದರಪ್ಪ ಎನ್ನುವ ಬದಲಾಗಿ ಬಸವ ಎನ್ನುವ ಸಹಿ ಇರುತ್ತದೆ. ಉಯಿಲು ಅನೂರ್ಜಿತವಾಗುತ್ತದೆ. ಅದರಿಂದ ಮತ್ತಷ್ಟು ಕ್ರುದ್ಧಳಾದ ಸುಂದರಪ್ಪನ ಹೆಂಡತಿ ತಮ್ಮ ಮದುವೆಯ ಫೋಟೋವನ್ನು ತಂದು ಬೀದಿಗೆ ಬಿಸುಡುತ್ತಾಳೆ.

ಇದು ಬಸವನ ದುರಂತವೇ, ಸುಂದರಪ್ಪನ ದುರಂತವೇ, ಮುನಸೀಫನ ದುರಂತವೇ ಎಂದು ಸುಲಭವಾಗಿ ಬಗೆಹರಿಯಲಾರದಷ್ಟು ಸಂಕೀರ್ಣವಾಗಿ ಇಲ್ಲಿನ ಕಥನದ ಹೆಣಿಗೆಯಿದೆ. ತನ್ನ ಹತ್ತನೇ ವರ್ಷದ ಪ್ರಾಯದಲ್ಲಿ ತನ್ನವರೆಲ್ಲರಿಂದ ದೂರವಾಗುವವರೆಗೂ ಬಸವನದೊಂದು ತಿಳಿಯಾದ ಸ್ವಂತ ವ್ಯಕ್ತಿತ್ವವಿತ್ತು. ಬರಗಾಲದಲ್ಲಿ ಪ್ರಾಣವುಳಿಸಿಕೊಳ್ಳಲು ಕುಟುಂಬದೊಂದಿಗೆ ಹುಟ್ಟಿ ಬೆಳೆದ ಊರನ್ನು ತೊರೆದು ವಲಸೆ ಬಂದ ಕಾಲದಲ್ಲಿ ಒಬ್ಬರ ಹಿಂದೊಬ್ಬರಂತೆ ತಾಯಿಯನ್ನು, ಇಬ್ಬರು ಅಣ್ಣಂದಿರನ್ನೂ ಕಳೆದುಕೊಂಡು ದಿಗ್ಭ್ರಾಂತ ಸ್ಥಿತಿಯಲ್ಲಿದ್ದ ಎಳೆಯ ಹುಡುಗ ಆ ಅಘಾತದಿಂದ ಹೊರಬರುವ ಮೊದಲೇ ತಂದೆ ಅವನನ್ನು ಇನ್ನಾರದೋ ಕೈಗಿಟ್ಟು ಹೊರಟುಬಿಡುತ್ತಾನೆ. ಏನಾಗುತ್ತಿದೆ ಎಂದು ಅರ್ಥವಾಗದ ತಬ್ಬಿಬ್ಬಿನಲ್ಲಿರುವಾಗಲೇ ಒಂದು ಅಪರಿಚಿತ ಕುಟುಂಬಕ್ಕೆ ಮಗನೆನಿಸಿಕೊಳ್ಳಬೇಕಾದ, ಸುಂದರಪ್ಪನಾಗಬೇಕಾದ ಒತ್ತಡಕ್ಕೂ ಅವನು ಸಿಲುಕುತ್ತಾನೆ.

ಇನ್ನೊಂದೆಡೆ, ಬೇರು ಕಡಿದುಕೊಂಡ ಸ್ಥಿತಿಯಲ್ಲಿ, ತೀವ್ರ ದಿಕ್ಕೆಟ್ಟ ಸ್ಥಿತಿಯಲ್ಲಿ ಇದ್ದ ಅವನಿಗೆ ಗೋವುಗಳ ಒಡನಾಟ ಒಂದು ಬಲವಾದ ಮಾನಸಿಕ ಆಸರೆಯಾಗಿ, ಬದುಕು ಕಂಗೆಟ್ಟಾಗ ಪುನಶ್ಚೇತನದ ದಾರಿಯಾಗಿ ಕಂಡಿದೆ. ಮನುಷ್ಯನ ಸ್ವಾರ್ಥ, ಮೋಸ, ಕ್ರೌರ್ಯಗಳ ಎದುರು ಹಾಗೂ ಮನುಷ್ಯ ನಿರ್ಮಿತ ನ್ಯಾಯ ಕಲ್ಪನೆಯ ಎದುರು ಅವನು ಪ್ರಾಣಿಗಳ ಅರ್ಥಾತ್ ದನಗಳ ಮುಗ್ಧತೆಯನ್ನು ಪರ್ಯಾಯವಾಗಿ ಮಂಡಿಸುತ್ತಾನೆ. ಮನುಷ್ಯನ ಕುಟಿಲ ಜಗತ್ತಿನಿಂದ ಗೋವುಗಳ ನಿಷ್ಕಲ್ಮಶ ಜಗತ್ತಿನ ಕಡೆಗೆ ಅವನ ಮನಸ್ಸು ಸದಾ ಹಂಬಲಿಸುತ್ತದೆ. ಅವನು ಸದಾ ಕಾಲ ಗೋವಳಿಗ ಬಸವನಾಗಿಯೇ ಇರಲು ತವಕಿಸುತ್ತಾನೆ. ಸುಂದರಪ್ಪನೋ ಮುನಸೀಫನೋ ಆಗಿರಲು ಅವನ ಸುಪ್ತ ಮನಸ್ಸು ನಿರಾಕರಿಸುತ್ತದೆ. ಹಾಗಾಗಿಯೇ ಬಸವತನ ಸುಂದರಪ್ಪನೊಳಗೆ ಆಗಾಗ ಆವಾಹನೆಯಾಗುತ್ತದೆ. ಆದರೆ ದುರಂತವೆಂದರೆ, ಪ್ರತಿಸಲವೂ ಆಧುನಿಕ ಜಗತ್ತಿನ ದುಷ್ಟತನದೆದುರು ಸುಂದರಪ್ಪನೊಳಗಿನ ಆ ಬಸವತನ ಸೋಲುತ್ತದೆ. ಎಲ್ಲರ ಪ್ರಕಾರ ಅದು ಜಡ್ಜ್ ಸುಂದರಪ್ಪನ ಸೋಲು. ಪ್ರತಿಸಲವೂ ಬಸವತನ ಸೋತಾಗ ಅವನೊಳಗೆ ನಡೆಯುವ ಕೋಲಾಹಲ, ಸಂಘರ್ಷ ಯಾರಿಗೂ ಕಾಣುವುದಿಲ್ಲ. ಸುಂದರಪ್ಪ ಎನ್ನುವ ವ್ಯಕ್ತಿತ್ವ ಬಸವನ ಮೈಗೆ ಒಗ್ಗದ ದಿರಿಸು. ಅದನ್ನು ಕಳಚಲು ಅವನು ಮಾಡುವ ಹೆಣಗಾಟಗಳು ಬೇರೆಯವರಿಗೆ ಹುಚ್ಚಿನಂತೆ ಕಾಣತೊಡಗುತ್ತವೆ. ತನ್ನ ಅಂತರಂಗದ ಬೇಗುದಿ, ಸಮಾಜದ ನಿರೀಕ್ಷೆಗಳ ತಿಕ್ಕಾಟದಲ್ಲಿ ನುಜ್ಜುಗುಜ್ಜಾದರೂ ಅಂತಿಮವಾಗಿ ಬಸವ ಎಂದು ಸಹಿ ಮಾಡಿಯೇ ಅವನು ಸಾಯುತ್ತಾನೆ. ಆ ಮೂಲಕ ಹೇರಿದ್ದ ಹುಸಿ ವ್ಯಕ್ತಿತ್ವವನ್ನು ನಿರಾಕರಿಸುತ್ತಾನೆ.

ಇಪ್ಪತ್ತನೇ ಶತಮಾನದ ಮೊದಲಾರ್ಧದಲ್ಲಿ ಜಗತ್ತಿನೆಲ್ಲೆಡೆ ವೇಗವಾಗಿ ಘಟಿಸುತ್ತಿದ್ದ

ಕೈಗಾರಿಕೀರಣ, ನಗರೀಕರಣ, ವಸಾಹತೀಕರಣ, ಅರ್ಥಹೀನ ಯುದ್ಧಗಳು– ಇತ್ಯಾದಿಗಳಿಂದ ಉಂಟಾದ ಅನಾಥಪ್ರಜ್ಞೆ, ಸಾಂಸ್ಕೃತಿಕ ಅಸ್ಮಿತೆಗಳ ನಾಶ, 'ಸ್ವ' ದ ಕುರಿತ ಜಿಜ್ಞಾಸೆ, ತೀವ್ರ ತಲ್ಲಣಗಳಿಂದ ವ್ಯಕ್ತಿತ್ವಗಳಲ್ಲಿ ಸೃಷ್ಟಿಯಾದ ಬಿರುಕು– ಇವೆಲ್ಲ ಆ ಕಾಲದ ಪಾಶ್ಚಾತ್ಯ ಸಾಹಿತ್ಯ ಕೃತಿಗಳಲ್ಲಿ ಢಾಳಾಗಿ ಮೂಡಿರುವುದನ್ನು ಕಾಣಬಹುದು. ಬಾಗಲೋಡಿ ದೇವರಾಯರ ಈ ಕತೆಯಲ್ಲಿಯೂ ವ್ಯಕ್ತಿಯೊಬ್ಬನಲ್ಲಿ ಹುಟ್ಟುವ ಅನಾಥಪ್ರಜ್ಞೆ ಅಂತಿಮವಾಗಿ ಅವನ ವ್ಯಕ್ತಿತ್ವದ ಬಿರುಕಿಗೆ ಕಾರಣವಾಗುವ ಹಾಗೂ ಅದು ಅವನನ್ನು ದುರಂತದೆಡೆಗೆ ಕೊಂಡೊಯ್ಯುವುದರ ಚಿತ್ರಣವಿದೆ. ವಿಶೇಷವೆಂದರೆ, ಬಾಗಲೋಡಿಯವರು ಇಂತಹ ತಾತ್ವಿಕತೆಗಳ ಪ್ರವೇಶವೇ ಇಲ್ಲದ ಕನ್ನಡ ನವೋದಯದ ಕಾಲಘಟ್ಟದಲ್ಲಿ ದಟ್ಟ ಅನಾಥಪ್ರಜ್ಞೆಯ ವಸ್ತುವನ್ನು ಕತೆಯನ್ನಾಗಿಸಿ ಗೆದ್ದಿದ್ದು.

**ಪರಾಮರ್ಶನ ಕೃತಿಗಳು**


1) ಕಲ್ಪಿತ ವಾಸ್ತವ: ಕನ್ನಡ ಸಣ್ಣಕತೆ – ಗಿರಡ್ಡಿ ಗೋವಿಂದರಾಜ, ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ವರ್ಷ: 2009.
2) ಸಣ್ಣಕತೆಯ ಹೊಸ ಒಲವುಗಳು – ಗಿರಡ್ಡಿ ಗೋವಿಂದರಾಜ, ಪ್ರ: ಸಾಹಿತ್ಯ ಭಂಡಾರ, ಹುಬ್ಬಳ್ಳಿ. ವರ್ಷ: 1986
3) ಕನ್ನಡ ಕಥನ ಸಾಹಿತ್ಯ: ಸಣ್ಣಕತೆ – ಜಿ.ಎಸ್. ಅಮೂರ, ಪ್ರ: ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು. ವರ್ಷ: 2012.
4) ನೀರಿಗೆ ಮೂಡಿದ ಆಕಾರ – ಎಚ್.ಎಸ್. ರಾಘವೇಂದ್ರ ರಾವ್, ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ. ವರ್ಷ: 2020
5) ಮರೆಯಬಾರದ ಹಳೆಯ ಕತೆಗಳು – ಗಿರಡ್ಡಿ ಗೋವಿಂದರಾಜ, ಪ್ರ: ಪ್ರಿಸಂ ಬುಕ್ಸ್ ಪ್ರೈ.ಲಿ. ಬೆಂಗಳೂರು. ವರ್ಷ: 1999.


❖❖❖

**ಚೆಂದದ ದಿರಿಸನು ಹೊಲಿವೆವು ನಾವು**
**ಆಳುವ ಅರಸನಿಗೆ**
**ಎನ್ನುತ ದರ್ಜಿಯು ಬಂದನು ಅಂದು**
**ರಾಜನ ಅರಮನೆಗೆ**

# ಗೀತಾ ನಾಗಭೂಷಣರ 'ದಂಗೆ' ಕಾದಂಬರಿಯಲ್ಲಿ ಹೆಣ್ಣಿನ ಹಿಂಸಾತ್ಮಕ ಪ್ರತಿರೋಧ

**ಮೈತ್ರಿ ಬೆಂಗಳೂರು**
ಸಹಾಯಕ ಪ್ರಾಧ್ಯಾಪಕರು, ಭಾಷಾ ವಿಭಾಗ
ಕ್ರೈಸ್ಟ್ ವಿಶ್ವವಿದ್ಯಾನಿಲಯ, ಬೆಂಗಳೂರು

**ಪ್ರಬಂಧ ಸಾರ**

ಯಾವುದೇ ವ್ಯಕ್ತಿಯು ಶೋಷಣೆಯ ವಿರುದ್ಧ ಪ್ರತಿಭಟಿಸುವುದು ಸಹಜವೂ ಅನಿವಾರ್ಯವೂ ಆಗಿರುತ್ತದೆ. ಈ ಪ್ರತಿಭಟನೆಯು ಹಿಂಸಾತ್ಮಕ ಸ್ವರೂಪ ಪಡೆದಲ್ಲಿ ಮತ್ತು ಅದನ್ನು ನಿರ್ವಹಿಸುವ ಕರ್ತೃ ಹೆಣ್ಣಾಗಿದ್ದಲ್ಲಿ ಅದಕ್ಕೆ ಕಾರಣವಾದ ಸಾಮಾಜಿಕ ಸ್ವರೂಪ ಎಂತಹುದು ಮತ್ತು ವಿವಿಧ ಅಧಿಕಾರದ ಶಕ್ತಿಗಳು ಯಾವುವು ಎಂಬುದನ್ನು ಈ ಪ್ರಬಂಧವು ಸಂಶೋಧಿಸಬಯಸುತ್ತದೆ. ಇಲ್ಲಿ ಕನ್ನಡದ ಹಿರಿಯ ಲೇಖಕಿ ಶ್ರೀಮತಿ ಗೀತಾ ನಾಗಭೂಷಣ ಅವರ 'ದಂಗೆ' ಕಾದಂಬರಿಯಲ್ಲಿ ಮುಖ್ಯ ಸ್ತ್ರೀ ಪಾತ್ರವಾದ ದುರಗಿಯು ತನ್ನ ಶೋಷಿತ ವ್ಯವಸ್ಥೆಯ ವಿರುದ್ಧ ಹಿಂಸಾತ್ಮಕವಾಗಿ ಪ್ರತಿಭಟಿಸುವ ಒಂದು ಮಾದರಿಯನ್ನು ಕಾಣಬಹುದು. ಇಂಟರ್‌ಸೆಕ್ಷನಲ್ ಸಿದ್ಧಾಂತವನ್ನು ಅಧ್ಯಯನದ ಸಾಧನವನ್ನಾಗಿ ಮಾಡಿಕೊಂಡು ಇಲ್ಲಿನ ಸ್ತ್ರೀಪಾತ್ರಗಳ ಬದುಕಿನ ಗತಿಯು ಹರಡಿಕೊಂಡಿರುವ ಸುಡು ವಾಸ್ತವದ ಜಾತಿ, ವರ್ಗ ಮತ್ತು ಲಿಂಗದ ಆಯಾಮಗಳನ್ನು ಅನ್ವೇಷಿಸುವ ಪ್ರಯತ್ನ ಮಾಡಲಾಗಿದೆ. ಹಾಗೆಯೇ ಹಿಂಸೆಯಲ್ಲಿ ತೊಡಗುವ ಈ ಪಾತ್ರದ ಹಿಂಸೆಯ ಸ್ವರೂಪವನ್ನು ಸ್ಲಾವೋಯ್‌ಜಿಜೆಕ್‌ನ ಹಿಂಸೆಯ ಸಿದ್ಧಾಂತದ ಚೌಕಟ್ಟಿನಲ್ಲಿಟ್ಟು ಅಭ್ಯಾಸ ಮಾಡುವ ಉದ್ದೇಶವನ್ನು ಹೊಂದಿದೆ. ಈ ಅಧ್ಯಯನದ ಮುಖ್ಯ ಉದ್ದೇಶವು ಪ್ರತಿಭಟನೆಯ ಅಸ್ತ್ರವನ್ನಾಗಿ ಹಿಂಸೆಯನ್ನು ಬಳಸಲು ಹೆಂಗಸರು ಹಿಂಜರಿಯುವುದಿಲ್ಲ ಮತ್ತು ಅವರನ್ನು ಅಂತಹ ಚಟುವಟಿಕೆಗೆ ದೂಡುವ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಗಳು ಹೇಗೆ ಸಮಾಜದ ಜಾತಿ, ಲಿಂಗ ಮತ್ತು ವರ್ಗಗಳ ಬಿಗಿ ಮುಷ್ಟಿಯಲ್ಲಿ ಅವರನ್ನು ಹಿಡಿದಿಟ್ಟಿರುತ್ತದೆ ಎಂಬುದನ್ನು ವಿಶ್ಲೇಷಿಸುವುದಾಗಿದೆ.

**ಪ್ರವೇಶ**

ಅಕ್ಷರಜ್ಞಾನವಿಲ್ಲದೆ ತಮ್ಮ ದುಡಿಮೆಯನ್ನೇ ನಂಬಿ ಬದುಕಬೇಕಾದ ಜನರ ನೋವು ನಲಿವುಗಳನ್ನು, ಅವರ ಮೂಢನಂಬಿಕೆ ಮತ್ತು ಅಸಹಾಯಕತೆಯನ್ನೇ ಅಸ್ತ್ರವಾಗಿರಿಸಿಕೊಂಡು ಅವರನ್ನು ಶೋಷಣೆಗೆ ಒಳಪಡಿಸುವ ವರ್ಗದ ದರ್ಪವನ್ನು ತಮ್ಮ ವಿಶಿಷ್ಟ ಶೈಲಿಯಲ್ಲಿ ಗೀತಾ ಅವರು ಅಭಿವ್ಯಕ್ತಿಸಿರುವುದು ಅವರಿಗೆ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಒಂದು ಅಪರೂಪದ ಸ್ಥಾನವನ್ನು ದೊರಕಿಸಿಕೊಟ್ಟಿದೆ (ಗಾಯತ್ರಿ, 2017). 'ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು' ಕೃತಿಯ ಮುನ್ನುಡಿಯಲ್ಲಿ ಡಾ। ಎಚ್.ಎಸ್. ರಾಘವೇಂದ್ರರಾವ್ ಅವರು ಹೇಳುವಂತೆ "ಅವರ ಬಳಿ ಇದ್ದ 'ಕಚ್ಚಾ ಮಾಲು' ಮೀಸಲು ಮುರಿಯದ ಅನುಭವ ಪ್ರಪಂಚವಾಗಿತ್ತು. ಅದು ಎಷ್ಟು

ಮಾತ್ರವೂ ಬಳಕೆಯಾಗದ, ಬಳಸಿ ಸವೆಯದ ಐಂದ್ರಿಕ ವಿವರಗಳು ಮತ್ತು ಭಾಷಿಕ ಅನನ್ಯತೆಗಳನ್ನು ಪಡೆದುಕೊಂಡಿತು." ಈ ಅನನ್ಯತೆಯ ಕಾರಣದಿಂದಲೂ ಗೀತಾ ಅವರ ಬರವಣಿಗೆ ವಿಶಿಷ್ಟವೆನಿಸಿದೆ.

**ಅಧ್ಯಯನದ ಹಿಂದಿನ ತಾತ್ವಿಕತೆ**

ಸ್ಲೊವಿನಿಯನ್ ತತ್ವಶಾಸ್ತ್ರಕಾರನಾದ ಸ್ಲಾವೋಯ್‌ಜ಼ಿಜ಼ೆಕ್‌ನ ಹಿಂಸೆಯ ಸಿದ್ಧಾಂತದ ಅನ್ವಯ ಇಲ್ಲಿನ ಪ್ರತಿಭಟನಾತ್ಮಕ ಹಿಂಸೆಯನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಜ಼ಿಜ಼ೆಕ್ ವಸ್ತುನಿಷ್ಠವಾದ ಹಿಂಸೆ ಮತ್ತು ವ್ಯಕ್ತಿನಿಷ್ಠವಾದ ಹಿಂಸೆ ಎನ್ನುವ ಪರಿಕಲ್ಪನೆಯ ಮೇಲೆ ತನ್ನ ಚಿಂತನೆಯನ್ನು ಕಟ್ಟುತ್ತಾನೆ. ವ್ಯಕ್ತಿನಿಷ್ಠವಾದ ಹಿಂಸೆಯು ಹೆಚ್ಚು ದೃಷ್ಟಿಗೋಚರವಾಗುವಂತಿದ್ದು ಹಿಂಸೆಯನ್ನು ಸೃಜಿಸುವ ಕರ್ತೃ ನಮಗೆ ನೇರವಾಗಿ ಕಾಣುವಂತಿರುತ್ತಾನೆ. ಆದರೆ ವಸ್ತುನಿಷ್ಠ ಹಿಂಸೆಯು ವ್ಯವಸ್ಥೆಯ ರೂಪದಲ್ಲಿ ಇಲ್ಲವೆ ಸಂಕೇತದ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಆದರೂ ಕೆಲವೊಮ್ಮೆ ಈ ಎರಡೂ ರೀತಿಯ ಹಿಂಸೆಗಳು ಪ್ರತ್ಯೇಕಿಸಲಾಗದೆ ಒಂದರೊಡನೊಂದು ಹೆಣೆದುಕೊಂಡು ಅವೇ ಮಾನವಸಮಾಜದ ರಚನೆಯ ತಳಪಾಯವಾಗಿ ಆಳವಾಗಿ ಬೇರೂರಿ ವ್ಯಾಪಿಸಿಕೊಂಡಿರುತ್ತದೆ. ಈ ಕಾದಂಬರಿಯಲ್ಲಿ ಇದನ್ನು ಸ್ಪಷ್ಟವಾಗಿ ನೋಡಬಹುದು. 'ದಂಗೆ'ಯ ದುರಗಿ ಪಾತವು ನೇರವಾಗಿ ಹಿಂಸೆಗೆ ತೊಡಗುವುದಾದರೂ ಅವಳ ಆ ಕೃತ್ಯಕ್ಕೆ ಸಮಾಜದ ಒತ್ತಡ, ಪ್ರೇರಣೆಗಳು ನೇರವಾಗಿ ಪರಿಣಾಮ ಬೀರಿರುತ್ತವೆ.

ಈ ಹಿಂಸೆಗೆ ಕಾರಣ ಮತ್ತು ಪ್ರೇರಣೆಗಳನ್ನು ಅನ್ವೇಷಿಸುವಾಗ ಸಮಾಜದಲ್ಲಿ ಈ ಶೋಷಿತರ ಮತ್ತು ಶೋಷಕರ ಸಾಮಾಜಿಕ ಸ್ಥಾನಮಾನಗಳು ಏನಾಗಿರುತ್ತವೆ ಎಂಬುದರ ವಿಶ್ಲೇಷಣೆಯತ್ತ ಅಗತ್ಯವಾಗಿ ಗಮನ ಹರಿಸಬೇಕಾಗುತ್ತದೆ. ಸಮಾಜದ ಈ ತರತಮಗಳನ್ನು ಸೃಷ್ಟಿಸುವ ವರ್ಗೀಕರಣದ ಚೌಕಟ್ಟನ್ನು ಗಮನಿಸಿಯೇ ನಾವು ಮುಂದುವರಿಯಬೇಕಾಗುತ್ತದೆ ಎಂಬುದನ್ನು ಮೊದಲ ಬಾರಿಗೆ 1989ರಲ್ಲಿ ಅಮೆರಿಕೆಯ ಕಿಂಬರ್ಲೆಕ್ರೆನ್ ಷಾ ಪ್ರತಿಪಾದಿಸಿದಳು. ವರ್ಣ, ವರ್ಗ ಮತ್ತು ಲಿಂಗತ್ವದ ಅಸ್ಮಿತೆಯ ಮೇಲೆ ನಡೆಸುವ ಆಕ್ರಮಣ ಮತ್ತು ದಮನದ ಪರಿಣಾಮಗಳನ್ನು ವಿಶ್ಲೇಷಿಸುತ್ತಾಳೆ. ಕ್ರೆನ್‌ಷಾ ಇಂಟರ್‌ಸೆಕ್ಷನಾಲಿಟಿ ಸಿದ್ಧಾಂತವನ್ನು ಪ್ರತಿಪಾದಿಸಲು ಅಮೆರಿಕೆಯ ಕಪ್ಪು ಮಹಿಳೆಯರ ನಿದರ್ಶನವನ್ನು ಬಳಸಿಕೊಂಡಳು. ಈ ಸಿದ್ಧಾಂತವು ಲಿಂಗತ್ವ ಮತ್ತು ವರ್ಣ ವರ್ಗೀಕರಣದ ಸಮನ್ವಯಗೊಳಿಸುವಿಕೆಯನ್ನು ವಿರೋಧಿಸುತ್ತದೆ. ಜಾತಿ, ಲಿಂಗತ್ವ ಮತ್ತು ವರ್ಗಗಳ ಶ್ರೇಣೀಕರಣವಿರುವ ಭಾರತದಂತಹ ಸಾಮಾಜಿಕ ಚೌಕಟ್ಟಿನಲ್ಲಿ ಹೆಣ್ಣಿನ ಮೇಲಾಗುವ ಶೋಷಣೆ ಹಲವು ಮಗ್ಗಲುಗಳದು. ಈ ಮೂರೂ ಎಳೆಗಳು ನೇಯ್ದುಕೊಂಡು ಭಾರತದ ಸಮಾಜದಲ್ಲಿ ಅಸಮಾನತೆಯ ನೆಲೆಯ ಅತ್ಯಂತ ಸಂಕೀರ್ಣ ಸ್ಥಿತಿಯು ನಿರ್ಮಾಣವಾಗುತ್ತದೆ.

ಸಮಾಜದಲ್ಲಿ ಹಿಂಸೆಗೆ ಕಾರಣ, ಸ್ಫೂರ್ತಿ ಮತ್ತು ಹಿಂಸೆಯಲ್ಲಿ ತೊಡಗಿಕೊಳ್ಳುವಿಕೆಯ ಕ್ರಿಯೆಗಳಲ್ಲಿ ಜಾತಿ ಮತ್ತು ಲಿಂಗತ್ವಗಳು ಪ್ರಮುಖ ಪಾತ್ರವಹಿಸುತ್ತವೆಯೆಂಬುದನ್ನು ಉಮಾಚಕ್ರವರ್ತಿಯವರು ತಮ್ಮ ಕೃತಿಯಲ್ಲಿ ಈಗಾಗಲೇ ಸ್ಪಷ್ಟಪಡಿಸಿದ್ದಾರೆ (ಉಮಾ ಚಕ್ರವರ್ತಿ, 2021)

'ದಂಗೆ' ಕಾದಂಬರಿಯ ಕೇಂದ್ರ ಪಾತ್ರವಾದ ದುರಗಿ ದಲಿತ ಹೆಣ್ಣು ಮಗಳು.

ಅನಾಥೆಯಾದ ಅವಳು ಅಕ್ಕ, ಭಾವನ ಆಶ್ರಯದಲ್ಲಿರುತ್ತಾಳೆ. ಅವಳ ಮದುವೆಗೆ ಮುಂಚೆ ಕೇಡಿಗ ಭಾವ ಅವಳ ಮೇಲೆ ಅತ್ಯಾಚಾರ ಮಾಡಿರುತ್ತಾನೆ. ಅವಳು ಮಾಳಪ್ಪನನ್ನು ಮದುವೆಯಾದ ನಂತರ ಈ ನೋವನ್ನು ಮರೆತರೂ, ಗಂಡ ಕೂಡ ಮೈಗಳ್ಳನಾಗಿ, ಅವಳ ದುಡಿಮೆಯನ್ನು ಅಪಹರಿಸುವವನು ಎಂದು ಅರಿವಾದಾಗ ಆಘಾತಕ್ಕೊಳಗಾಗುತ್ತಾಳೆ. ಕೊನೆಗೆ ಏನೂ ಹೇಳದೆ ಅವಳನ್ನು ಬಿಟ್ಟು ಹೋದ ಬೇಜವಾಬ್ದಾರಿ ಗಂಡನನ್ನು ತೊರೆದು ನಾಲ್ಕು ವರ್ಷದ ಮಗಳು ಸಾತಿಯೊಂದಿಗೆ ನೆರೆಯ ಹಳ್ಳಿಗೆ ಹೋಗುತ್ತಾಳೆ. ಅಲ್ಲಿನ ಕುಲಕರ್ಣಿ ಗೋವಿಂದಪ್ಪನ ಪ್ರೇಮದ ಪಾಶಕ್ಕೆ ಸಿಕ್ಕು ಅವನೊಂದಿಗೆ ಸಂಸಾರ ಸಾಗಿಸುತ್ತಾಳೆ. ಮಗಳು ಬೆಳೆದು ದೊಡ್ಡವಳಾದ ಮೇಲೆ ಬ್ರಾಹ್ಮಣ ಕುಲಕರ್ಣಿಯ ಮಗ ಸೀನಪ್ಪನನ್ನು ಮದುವೆಯಾಗುವ ನಿರ್ಧಾರ ತೆಗೆದುಕೊಂಡಾಗ ಅವಳನ್ನು ಕೊಲ್ಲುವ ಸಂಚು ನಡೆಯುತ್ತದೆ. ಇದರಿಂದ ಎಚ್ಚತ್ತುಕೊಂಡ ದುರಗಿ ಸಂಚು ಹೂಡಿದ ತನ್ನ ಗೆಣೆಕಾರ ಗೋವಿಂದಪ್ಪನನ್ನು ತನ್ನ ಕೈಯಾರೆ ನೂಕಿ ಕೊಲ್ಲುತ್ತಾಳೆ. ಇದು ಸ್ಥೂಲವಾದ ಕತೆಯ ಹಂದರ.

ದುರುಗಿಯ ಸೌಂದರ್ಯಕ್ಕೆ ಮನಸೋತು ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಲು ಕುಲಕರ್ಣಿ ಗೋವಿಂದಪ್ಪ ಹರಸಾಹಸ ಪಡುತ್ತಾನೆ. ನಂತರ ಅವಳನ್ನು ಚೆನ್ನಾಗಿ ನಡೆಸಿಕೊಳ್ಳುತ್ತಾನಾದರೂ ಅವಳನ್ನು ತನ್ನ ಕುಟುಂಬದ ಭಾಗ ಮಾಡಿಕೊಳ್ಳುವುದಿಲ್ಲ. ಮದುವೆಯಾಗಿ ಹೆಂಡತಿ ಮತ್ತು ಮಕ್ಕಳ ಸಂಸಾರ ಹೊಂದಿದ್ದ ಕುಲಕರ್ಣಿ ಗೋವಿಂದಪ್ಪ ದುರಗಿಯ ಮೇಲೆ ಮನಸ್ಸು ಬಿದ್ದದ್ದೇ ಅವಳನ್ನು ಒಲಿಸಿ ಅವಳಿಗಾಗಿ ತೋಟದಲ್ಲಿ ಮನೆ ಮಾಡಿಕೊಟ್ಟದ್ದು, ಒಡವೆ, ಬಟ್ಟೆ ಕೊಡಿಸಿಕೊಟ್ಟದ್ದು ಮತ್ತು ಅವಳ ಮಗಳಿಗೆ ಶಿಕ್ಷಣ ಕೊಡಿಸಿದ್ದು ಎಲ್ಲವೂ ಅವನ ವೈಯಕ್ತಿಕ ಖುಷಿಯ ವಿಚಾರವಾಗುತ್ತದೆ. ಆದರೆ ದುರಗಿಯ ಮುಂಚಿನ ಗಂಡನಿಗೆ ಹುಟ್ಟಿದ ಮಗಳು ಸಾತಿಯು ತನ್ನ ಮಗ ಸೀನಪ್ಪನನ್ನು ಮದುವೆಯಾಗುವುದಾಗಿ ಘೋಷಿಸಿದಾಗ ಮಾತ್ರ ಗೋವಿಂದಪ್ಪನಿಗೆ ಅದು ಅಪಥ್ಯವೆನಿಸುತ್ತದೆ, ಮತ್ತು ಸಮಾಜ ಭಂಜನೆಯ ಕೆಲಸವೆನಿಸುತ್ತದೆ. ಅದನ್ನು ಕೇವಲ ಕೌಟುಂಬಿಕ ಸಮಸ್ಯೆಯಾಗಿ ಮಾತ್ರ ನೋಡದೆ, ಸಮಾಜದಲ್ಲಿ ಅವನ ಸ್ಥಾನಮಾನ ಮತ್ತು ಪ್ರತಿಷ್ಠೆಗೆ ಧಕ್ಕೆ ತರುವ ವಿಚಾರವೆಂದು ಪರಿಗಣಿಸುತ್ತಾನೆ. ಅವಳನ್ನು ಸಂಚಿನಿಂದ ಕೊಲೆ ಮಾಡಿಸಲು ಹೇಸುವುದಿಲ್ಲ. ಹಾಗೆಯೇ ಅವನ ಮಡದಿಯು ದುರಗಿಯೊಂದಿಗೆ ಗಂಡನ ಸಂಬಂಧವಿರುವುದರ ಅರಿವಿದ್ದರೂ ಸುಮ್ಮನಿರುತ್ತಾಳೆ. ಆದರೆ ಸೀನಪ್ಪ ಸಾತಿಯನ್ನು ಮದುವೆಯಾಗುತ್ತಾನೆಂದಾಗ ಅದನ್ನು ಪ್ರತಿಭಟಿಸಿ, ಅತ್ತು ಕರೆದು ರಂಪ ಮಾಡುತ್ತಾಳೆ.

ಸಿಟ್ಟಿನಿಂದ ಹಲ್ಲು ಕಡಿಯುತ್ತಾ ಗೋವಿಂದಪ್ಪ ದುರಗಿಗೆ ಹೇಳುವ ಮಾತುಗಳಲ್ಲಿ ಜಾತಿ ಸಂಘರ್ಷದ ಜೊತೆಗೆ ವರ್ಗನೆಲೆಯಲ್ಲಿನ ಸಂಘರ್ಷದ ಎಳೆಗಳೂ ಇವೆ. ಗೋವಿಂದಪ್ಪನ ಮಾತುಗಳನ್ನು ಕೇಳಿದ ದುರಗಿಗೆ ರಾತ್ರಿಯೆಲ್ಲಾ ಕೆಟ್ಟಕೆಟ್ಟ ಕನಸುಗಳೇ ಬೀಳುತ್ತವೆ. ಒಂದು ಅರ್ಥಪೂರ್ಣವಾದ ಕನಸನ್ನು ಲೇಖಕಿ ಚಿತ್ರಿಸಿ ಕಾದಂಬರಿಯ ಮುಂದಿನ ಬೆಳವಣಿಗೆಗೆ ಹಾದಿ ಮಾಡಿಕೊಟ್ಟಿದ್ದಾರೆ: "ಕುಕ್ಕಣ್ಣಿ ಗೋಯಿಂದಪ್ಪ ಕೈಯಲ್ಲಿ ಉದ್ದನೆಯ, ಹೊಳೆ ಹೊಳೆಯುವ ಮಸೆದ ತಲವಾರ ಹಿಡ್ಕೊಂಡು ನಿಂತ್ಕೊರೆಲೇ ದುರಗೀ... ಅಂತ ಒದರುತ್ತ ಬೆನ್ನು ಹತ್ತಿದ. ತನಗೆ ಓಡುವುದಕ್ಕೆ ಕಾಲೇ ಏಳುತ್ತಿರಲಿಲ್ಲ. ಸತುವು ಮಾಡಿಕಾಲು ಕಿತ್ತಿಡುತ್ತ ಓಡಿದ್ರೂ... ಗೋಯಿಂದಪ್ಪನ ಕುಕ್ಕಣ್ಣಿಯ ತಲವಾರಿನ

ಚೂಪು ತುದಿ ಬೆನ್ನಿಗೆ ಚುಚ್ಚಿದಂತಾಗಿ 'ಸತ್ನೆವ್ವೋ... ಕುಕ್ಕಣ್ಣೀ...' ಅಂತ ನೆಲಕ್ಕೆ ಬಿದ್ದುಬಿಟ್ಟಳು. ತಲವಾರಿನ ಹೊಡೆತ ಬಿದ್ದದ್ದು ತನಗ. ಆದರೆ ಮಗಳು ಸಾತಿ ನೆತ್ತರದ ಮಡುವಿನಲ್ಲಿ ಬಿದ್ದಿದ್ದಳು! ಅದನ್ನು ಕಂಡು ದುರಗಿ ಹೌಹಾರಿ, ನೆಲಬಾನಿಗೆ ಉರಿ ಹತ್ತಿಸುವಂತೆ ಅಬ್ಬರಿಸಿ "ಕುಕ್ಕಣ್ಣೀ... ನಿನ್ಗುಣ ತೋರಿಸಿಬಿಟ್ಟೇಲ್ಲೋ ರಾಕಸೇಸಾ... ನನ ಮಗಳ ಜೀಂವಾತಗೊಂಡಲ್ಲೋ ನನ್ ಹಾಟ್ಯಾ..." ಅಂತ ಒಂದೇ ಹಾರಿಕೆಗೆ ಹಾರಿ ಗೋಯಿಂದಪ್ಪನ ಕೈಯಿಂದ ನೆತ್ತರದಲ್ಲಿ ನೆನೆದಿದ್ದ ತಲವಾರನ್ನು ಕಸಿದುಕೊಂಡು ಕುಕ್ಕಣ್ಣಿಯ ಹೊಟ್ಟೆಗೆ, ತನ್ನೆಲ್ಲ ಶಕ್ತಿಯನ್ನು ಒಂದುಗೂಡಿಸಿ ರಭಸದಿಂದ ಚೀರುತ್ತ ಚುಚ್ಚಿದಳು" (ದಂಗೆ, ಪುಟ141).

ಬಡವಳೂ, ದಿಕ್ಕಿಲ್ಲದವಳೂ ಮತ್ತು ಕೆಳಜಾತಿಯ ದುರಗಿಗೆ ತನ್ನ ಮಗಳ ಬದುಕು ತನ್ನದಂತಾಗದೆ ಅವಳು ಓದಿ ವಿದ್ಯಾವಂತಳಾಗಬೇಕೆಂಬ ಕನಸು ಕಾಣುತ್ತಾಳೆ. ಆದ್ದರಿಂದಲೇ ಸಾತಿಯ ಓರಗೆಯವರು ಶಾಲೆಗೆ ಹೋಗದೆಉಳ್ಳವರ ಹೊಲ, ತೋಟಗಳಲ್ಲಿ ಕೆಲಸ ಮಾಡುತ್ತಾ ಹಿಂದುಳಿದಿರುವಾಗ ಅವಳು ಮಾತ್ರ ಶಾಲೆಗೆ ಹೋಗಿ ಶಿಸ್ತಿನಿಂದ ಪಾಠ ಕಲಿಯುತ್ತಾಳೆ. ಇಂತಹ ಸಾತಿ ಕುಲಕರ್ಣಿಯ ಮಗನನ್ನು ಪ್ರೀತಿಸಿ ಮದುವೆಯ ನಿರ್ಧಾರ ತೆಗೆದುಕೊಳ್ಳಲು ಹೊರಟಾಗ ಇಡೀ ದಲಿತ ಸಮುದಾಯ ಮೆಚ್ಚುಗೆಯಿಂದ ದುರಗಿಗೆ ಬೆಂಬಲ ನೀಡುತ್ತದೆ. ಕುಲಕರ್ಣಿ ಗೋವಿಂದಪ್ಪ ಗೂಂಡಾಗಳ ನೆರವಿನಿಂದ ಸಾತಿಯ ಕೊಲೆಮಾಡುವ ಸಂಚಿನ ವಿಷಯ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ದುರಗಿಗೆ ಗೊತ್ತಾದಾಗ ಆಘಾತಕ್ಕೊಳಗಾಗುತ್ತಾಳೆ. ಅವಳಿಗೆ ಪ್ರಿಯಕರ ಒಂದು ಕ್ಷಣಕ್ಕೆ ಯಮಕಿಂಕರನಂತೆ ಭಾಸವಾಗುತ್ತಾನೆ. ಗೋವಿಂದಪ್ಪ ನಡೆಸಲು ಹೊರಡುವ ಈ ಮರ್ಯಾದೆಗೇಡು ಹತ್ಯೆಯ ಸಂಚಿನ ಬಗ್ಗೆ ಜಾಗೃತಳಾಗುವ ದುರಗಿ ತನ್ನ ಕರುಳ ಕುಡಿಯನ್ನು ರಕ್ಷಿಸುವುದಕ್ಕಾಗಿ ಅವನನ್ನು ಓಡುತ್ತಿರುವ ರೈಲಿನಿಂದ ಬಲವಾಗಿ ನೂಕಿ ಕೊಲ್ಲುತ್ತಾಳೆ.

ಹೆಸರೇ ಸೂಚಿಸುವಂತೆ ಈ ಕಾದಂಬರಿಯಲ್ಲಿ ಮೂವರು ಮಹಿಳೆಯರು ವಿವಿಧ ಸನ್ನಿವೇಶಗಳಲ್ಲಿ ದಂಗೆಯೇಳುತ್ತಾರೆ. ತನ್ನ ಗಂಡನ ಲೈಂಗಿಕ ಆಕ್ರಮಣಗಳಿಂದಾಗಿ ಆತ್ಮಹತ್ಯೆ ಮಾಡಿಕೊಂಡ ಸೊಸೆಗಾದ ಅನ್ಯಾಯವನ್ನು ಪ್ರತಿಭಟಿಸಿ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲಿಸುವ ಲಕ್ಕವ್ವ, ದಲಿತ ವಿದ್ಯಾವಂತ ಹೆಣ್ಣು ಮಗಳು ಸಾತಿ (ಸಾವಿತ್ರಿ) ಎಲ್ಲ ವಿರೋಧಗಳನ್ನು ಹಿಮ್ಮೆಟ್ಟಿ ಬ್ರಾಹ್ಮಣರ ಹುಡುಗ ಸೀನನನ್ನು ಮದುವೆಯಾಗುವ ನಿರ್ಧಾರ ತೆಗೆದುಕೊಳ್ಳುವುದು, ದುರಗಿ ತನ್ನ ಮಗಳ ಜೀವವನ್ನು ಉಳಿಸಿಕೊಳ್ಳಲು ಗರತಿಯಂತೆ ಪ್ರೀತಿಸಿದ ಪ್ರಿಯತಮ ಕುಲಕರ್ಣಿಯನ್ನು ಓಡುತ್ತಿರುವ ರೈಲಿನಿಂದ ದಬ್ಬಿ ಜೀವ ತೆಗೆಯುವುದು– ಈ ಮೂರೂ ಸನ್ನಿವೇಶಗಳಲ್ಲಿ ಗಂಡನ ಕೊಲೆಗೆ ಮುಂದಾಗುವ ದುರಗಿಯ ಹಿಂಸಾತ್ಮಕ ಕೃತ್ಯದ ಪ್ರತಿಭಟನೆ ಹೆಚ್ಚು ಸಂಕೀರ್ಣವಾದುದು ಮತ್ತು ಪರಿಣಾಮಕಾರಿಯಾದುದು.

ದಲಿತ ಹೆಣ್ಣುಮಕ್ಕಳಿಗಾಗಿ ಆಸೆ ಪಡುವ ಮೇಲ್ಜಾತಿಯ ಗಂಡುಗಳು ಅವರೊಂದಿಗೆ 'ಅನೈತಿಕ' ಸಂಬಂಧ ಬೆಳೆಸದೆ ಅವರನ್ನು ವಿವಾಹವಾಗಬೇಕು ಎಂಬ ಪ್ರತಿಭಟನೆಯ ದನಿ ಸಾತಿ ಮತ್ತು ದುರಗಿಯ ಕೃತ್ಯಗಳಲ್ಲಿ ಅಭಿವ್ಯಕ್ತವಾಗಿದೆ. ದಲಿತ ಸಮುದಾಯದ ದುರಗಿಯ ಹಿತೈಷಿಗಳು ಮತ್ತು ಹಿರಿಯರು ಇದೇ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ದುರಗಿಯ ಹಿಂಸಾತ್ಮಕ ಪ್ರತಿಭಟನೆಯ ಕೃತ್ಯ ತತ್‌ಕ್ಷಣದ ಸ್ಪಂದನೆಯಾದರೂ, ಅದಕ್ಕೆ

ಬೇಕಾದ ದೃಢ ನಿರ್ಧಾರದ ಶಕ್ತಿ ಅವಳಲ್ಲಿತ್ತು ಎನ್ನುವುದಕ್ಕೆ ಇಡೀ ಕಾದಂಬರಿಯಲ್ಲಿ ಹಲವಾರು ಸಂದರ್ಭಗಳನ್ನು ಸೃಷ್ಟಿಸಲಾಗಿದೆ. ದುರಗಿಯ ಕೃತ್ಯ ವ್ಯಕ್ತಿನಿಷ್ಠೆಯ ಹಿಂಸೆಯಾಗಿ ಕಂಡು ಬಂದರೂ ಅದು ತಾರತಮ್ಯದ ಸಾಂಸ್ಥಿಕ ಹಿಂಸೆಯನ್ನೊಳಗೊಂಡ ವ್ಯವಸ್ಥೆಯ ವಿರೋಧದ ಚಿಹ್ನೆಯಾಗಿದೆ.

**ಕೊನೆಯ ಮಾತು**

ಈ ಕಾದಂಬರಿಯು ಗೀತಾ ನಾಗಭೂಷಣ ಅವರ ಬರಹದ ಹಿಂದಿನ ವೈಚಾರಿಕತೆಯ ದರ್ಶನ ಮಾಡಿಸುತ್ತದೆ. ಹೆಣ್ಣಿನ ಹಿಂಸೆಯ ಪ್ರತಿಭಟನಾತ್ಮಕ ನೆಲೆಯ ಹಿಂದೆ ಅಂಬೇಡ್ಕರ್ ಒತ್ತಿ ಹೇಳುವ ದಲಿತರ ಸ್ವಾಭಿಮಾನದ ಅಂಶಕ್ಕೆ ಒತ್ತುಕೊಡುವಷ್ಟೇ ಲೈಂಗಿಕ ರಾಜಕೀಯವನ್ನು ಗುರುತಿಸಬಲ್ಲಷ್ಟು ವೈಚಾರಿಕ ಪ್ರಖರತೆ ಕೂಡ ಇಲ್ಲಿದೆ. ಅವರ ಬರಹದ ಸಾರ್ಥಕತೆಯನ್ನು ಹೀಗೆ ಗುರುತಿಸಬಹುದಾಗಿದೆ: "ದಲಿತ ಸಾಹಿತ್ಯದಲ್ಲಿ 'ನಿರಾಕರಣೆ' ಮತ್ತು 'ಪ್ರತಿಭಟನೆ' ಎಂಬುದು ದಲಿತರ ನೋವಿನಲ್ಲಿ ಹುಟ್ಟುತ್ತದೆ. ಈ ನೋವಿನ ಮೂಲ ಅವರ ಮೇಲೆ ಹೊರಿಸಲಾದ ಅಮಾನವೀಯ ವ್ಯವಸ್ಥೆಯಲ್ಲಿದೆ. ದಲಿತ ಮತ್ತು ಕಪ್ಪು ಜನರ ಸಾಹಿತ್ಯ ವಿಮರ್ಶೆಯು ಸಾಮಾಜಿಕ ವಿಮೋಚನೆಗಾಗಿ ನಡೆಯುವ ಚಳುವಳಿಯ ರೂಪವೆಂದು ಭಾವಿಸಲಾಗುತ್ತದೆ. ಆದ್ದರಿಂದ ಈ ಸಾಹಿತ್ಯದ ಚರ್ಚೆಯನ್ನು ಕ್ರಾಂತಿಯ, ಸಾಮಾಜಿಕ ಬದಲಾವಣೆ, ಪ್ರಜ್ಞೆಯ ವಿಸ್ತರಣೆ, ಹೋರಾಟ ಮತ್ತು ಬದ್ಧತೆಯ ವಾಹಕವನ್ನಾಗಿ ನೋಡಬೇಕಿದೆ." (ಶರಣಕುಮಾರ್ ಲಿಂಬಾಳೆ, 2010)

**ಆಕರಸೂಚಿ**


1. ಗೀತಾ ನಾಗಭೂಷಣ: ದಂಗೆ, ನವಕರ್ನಾಟಕ ಪಬ್ಲಿಕೇಷನ್ಸ್, 1997
2. ಎನ್. ಗಾಯತ್ರಿ: ಗೀತಾ ನಾಗಭೂಷಣ(ದ್ವಿತೀಯ ಮುದ್ರಣ), ನವಕರ್ನಾಟಕ ಪಬ್ಲಿಕೇಷನ್ಸ್, 2017
3. ಎಚ್.ಎಸ್. ರಾಘವೇಂದ್ರರಾವ್(ಮುನ್ನುಡಿ), ಗೀತಾ ನಾಗಭೂಷಣ: ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು, ಸಿ.ವಿ.ಜಿ. ಪಬ್ಲಿಕೇಷನ್ಸ್, 2006
4. Slavoj Zizek: Violence: Six Sideways Reflections, Picador, 2008
5. KimberléCrenshaw: Demarginalizing the Intersection of Race and Sex: A Black Feminist Critique of Antidiscrimination Doctrine, Feminist Theory and Antiracist Politics; University of Chicago Legal Forum,Iss. 1, Article 8, 1989
6. ಉಮಾಚಕ್ರವರ್ತಿ: ಜಾತಿ–ಲಿಂಗತ್ವದ ಒಳನೇಯ್ಗೆ, ಎನ್. ಗಾಯತ್ರಿ ಮತ್ತು ಆರ್. ಪೂರ್ಣಿಮಾ (ಸಂ.), ಹಿತೈಷಿಣಿ ಮಹಿಳಾ ಅಧ್ಯಯನ ಕೇಂದ್ರ, 2021
7. Sharankumar Limbale: Towards an Aesthetic of Dalit Literature, Alok Mukherji (tr.), Orient Longman, 2010


❖❖❖

# ಪಶ್ಚಿಮ ಮತ್ತು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ರೂಪುಗೊಂಡ ಭಾಷಾಂತರ ಮಾದರಿಗಳು

**ಡಾ. ವಿಜಯೇಂದ್ರ ಕುಮಾರ್ ಜಿ.ಎಲ್.**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಡ್ಲಘಟ್ಟ–562105

**ಪೀಠಿಕೆ**

ಭಾಷಾಂತರ ಎಂದರೇನು ಎಂದು ಹೇಳುವ ನಿರ್ವಚನ ಮೀಮಾಂಸೆ; ಭಾಷಾಂತರ ಹೇಗೆ ಜರುಗಿದೆ – ಜರುಗಬೇಕಿದೆ ಎಂಬುದನ್ನು ಸೂಚಿಸುವ ಪ್ರಕ್ರಿಯಾ ಮೀಮಾಂಸೆ; ಭಾಷಾಂತರವನ್ನು ಪ್ರಯೋಜನದ ನೆಲೆಗಳಿಂದ ನೋಡುವ ಪ್ರಯೋಜನ ಮೀಮಾಂಸೆ; ಭಾಷಾಂತರದ ಆಯ್ಕೆ–ಉದ್ದೇಶ–ಭಾಷಾಂತರ ಪ್ರಕ್ರಿಯೆಯಲ್ಲಿ ಭಾಷಾಂತರಕಾರ ನಿರ್ವಹಿಸಬೇಕಾದ ಪಾತ್ರ ಹಾಗೂ ಭಾಷಾಂತರದ ಪರಿಣಾಮಗಳು ಏನಾಗಿರಬೇಕು ಎಂಬುದನ್ನು ಪರಿಣಾಮ ಮೀಮಾಂಸೆ, ಹೀಗೆ ಭಿನ್ನ ನೆಲೆಗಳಿಂದ ಭಾಷಾಂತರ ಪ್ರಕ್ರಿಯೆಯನ್ನು ಮತ್ತು ಭಾಷಾಂತರ ಸಾಹಿತ್ಯವನ್ನು ನಿರ್ವಚಿಸುವ ಕೆಲಸ ಕನ್ನಡದಲ್ಲಿ ನಡೆದಿದೆ. ನಿರ್ವಚನೆಗಳೇ ಭಾಷಾಂತರದ ಆದರ್ಶ ಮಾದರಿಗಳನ್ನು ಮುಂದಿಡುವ ಕೆಲಸವನ್ನೂ ಮಾಡಿವೆ.

ಈ ಹಿನ್ನೆಲೆಯಲ್ಲಿ, ಪ್ರಸ್ತುತ ಲೇಖನದಲ್ಲಿ, ಪಶ್ಚಿಮ ಮತ್ತು ಕನ್ನಡ ಪರಂಪರೆಗಳಲ್ಲಿಸಾಹಿತ್ಯಕ ಪಠ್ಯಗಳ ಮೂಲಕ ರೂಪುಗೊಂಡ ಭಾಷಾಂತರ ಮಾದರಿಗಳನ್ನು ಗುರುತಿಸಿಚರ್ಚಿಸಲಾಗಿದೆ.

## 1 ಶಬ್ದಾನುವಾದ (ಮೆಟಾಫ್ರೇಸ್)

ಇದು ಯಥಾವತ್ ಭಾಷಾಂತರ, ತದ್ವತ್ ಭಾಷಾಂತರ, ಪದಶಃ ಭಾಷಾಂತರ ಎನ್ನುವ ಪರಿಕಲ್ಪನೆಗಳಿಗೆ ಸಮಾನಾಂತರವಾಗಿಯೂ ಭಾವಾನುವಾದ ಎನ್ನುವ ಪರಿಕಲ್ಪನೆಗೆ ಎದುರು ಪರಿಕಲ್ಪನೆಯಾಗಿಯೂ ಬಳಕೆಯಾಗುತ್ತಿದೆ. ಭಾಷಾಂತರವೆಂದರೆ ಪದಕ್ಕೆ ಪದ, ವಾಕ್ಯಕ್ಕೆ ವಾಕ್ಯ ಎನ್ನುವ ಶಬ್ದಾನುವಾದವು ಪದಾನುಕ್ರಮಣಿಕೆ, ಛಂದಸ್ಸು, ಶೈಲಿ, ವಸ್ತುವಿಷಯ – ಹೀಗೆ ಎಲ್ಲ ವಿಧದಲ್ಲಿಯೂ ಸಂಪೂರ್ಣ ಮೂಲನಿಷ್ಠೆಯನ್ನು ನಿರೀಕ್ಷಿಸುತ್ತದೆ. ಭಾಷಾಂತರದಲ್ಲಿ ಸೃಜನಶೀಲತೆಯನ್ನು ನಿರಾಕರಿಸುತ್ತದೆ. ಮೂಲವು ಒಡೆಯನಿದ್ದಂತೆ, ಭಾಷಾಂತರವು ಸೇವಕನಿದ್ದಂತೆ ಎಂಬ ನಿಲುವಿನೊಂದಿಗೆ ಶಬ್ದಾನುವಾದವು ಭಾಷಾಂತರಕಾರರಲ್ಲಿ ವಿನಮ್ರತೆಯ ಭಾವವನ್ನು ಬಯಸುತ್ತದೆ.

ಮೂಲನಿಷ್ಠೆಯ ಪ್ರಶ್ನೆ ಮುನ್ನೆಲೆಗೆ ಬಂದದ್ದೇ ಬೈಬಲ್ಲಿನ ಭಾಷಾಂತರದ ಸಂದರ್ಭದಲ್ಲಿ. ಇದಕ್ಕೆ ನಾವು ಬೈಬಲ್ಲಿನಲ್ಲೇ ಕಾರಣವನ್ನು ಕಂಡುಕೊಳ್ಳುವುದಾದರೆ, ನಿದರ್ಶನವಾಗಿ ಈ ಸಾಲುಗಳನ್ನು ಗಮನಿಸಬಹುದು: "ಈ ಪುಸ್ತಕದ ಪ್ರವಾದನಾವಾಕ್ಯಗಳನ್ನು ಕೇಳುವ ಪ್ರತಿಯೊಬ್ಬನಿಗೆ ನಾನು ಹೇಳುವ ಸಾಕ್ಷಿ ಏನೆಂದರೆ– ಇವುಗಳಿಗೆ ಯಾವನಾದರೂ ಹೆಚ್ಚು ಮಾತುಗಳನ್ನು ತಂದುಹಾಕಿದರೆ ದೇವರು ಅವನ ಮೇಲೆ ಈ ಪುಸ್ತಕದಲ್ಲಿ ಬರೆದಿರುವ ಉಪದ್ರವಗಳನ್ನು ತಂದುಹಾಕುವನು."

“ಯಾವನಾದರೂ ಈ ಪ್ರವಾದನಾ ಪುಸ್ತಕದಲ್ಲಿರುವ ಮಾತುಗಳಲ್ಲಿ ಒಂದನ್ನಾದರೂ ತೆಗೆದುಬಿಟ್ಟರೆ ಈ ಪುಸ್ತಕದಲ್ಲಿ ಬರೆದಿರುವ ಪರಿಶುದ್ಧ ಪಟ್ಟಣದಲ್ಲಿಯೂ ಜೀವವೃಕ್ಷದಲ್ಲಿಯೂ ಅವನಿಗಿರುವ ಪಾಲನ್ನು ದೇವರು ತೆಗೆದುಬಿಡುವನು.”

‘ಹೊಸ ಒಡಂಬಡಿಕೆ’ಯ ಕೊನೆಯ ಪುಟದಲ್ಲಿನ ಈ ಸಾಲುಗಳು ಮೂಲವನ್ನು ಹೆಜ್ಜೆಹೆಜ್ಜೆಗೂ ಅನುಸರಿಸಬೇಕೆಂದು ಸೂಚಿಸುತ್ತಿರುವುದಲ್ಲದೆ, ಸೇರಿಸುವ ಅಥವಾ ತೆಗೆಯುವ ಎಲ್ಲ ಬಗೆಯ ಬದಲಾವಣೆಗಳಿಗೂ ನಿರ್ಬಂಧವನ್ನು ಹೇರುತ್ತಿವೆ. ಕೇವಲ ಭಾಷಾಂತರಕ್ಕಷ್ಟೇ ಈ ಮಾತುಗಳು ಸೀಮಿತವಾಗದೆ, ಬೈಬಲ್ಲನ್ನು ಓದುವ/ ಓದಿ ಹೇಳುವ ಕ್ರಿಯೆಗೂ ಸಹ ಅನ್ವಯಿಸುವಂತಿವೆ. ಮೂಲವನ್ನು ಉಲ್ಲಂಘಿಸಿದರೆ ಎದುರಿಸಬೇಕಾದ ‘ಉಪದ್ರವ’ಗಳ ಬಗ್ಗೆಯೂ ಇಲ್ಲಿ ಎಚ್ಚರಿಕೆಯಿದೆ.

ಬೈಬಲ್ ನಿರೀಕ್ಷಿಸುವ ಈ ಅತಿಯಾದ ಮೂಲನಿಷ್ಠೆಯ ಕಾರಣದಿಂದಲೇ ಗ್ರೀಕ್ ಭಾಷೆಯಿಂದ ಬೈಬಲ್ಲನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿದ ಜಾರ್ಜ್ ಚಾಪ್‌ಮನ್ (1559–1634) ಗ್ರೀಕ್ ಭಾಷೆಯ ಬೈಬಲ್ಲಿನಲ್ಲಿ ಎಷ್ಟು ಸಾಲುಗಳಿದ್ದವೋ ಅಷ್ಟೇ ಸಾಲುಗಳು ತನ್ನ ಇಂಗ್ಲಿಷ್ ಭಾಷಾಂತರದಲ್ಲಿ ಬರುವಂತೆ ನೋಡಿಕೊಂಡ. ಅಷ್ಟೇ ಅಲ್ಲದೆ ಗ್ರೀಕ್ ಛಂದಸ್ಸಾದ ಹೆಕ್ಸಾಮೀಟರನ್ನೂ ಸಹ ಇಂಗ್ಲಿಷಿಗೆ ತಂದನೆಂಬುದು ಗಮನಾರ್ಹ. ಎಲಿಜಬೆತನ್ ಕಾಲದ ಕವಿಯೂ ನಾಟಕಕಾರನೂ ಭಾಷಾಂತರಕಾರನೂ ಆಗಿದ್ದ ಚಾಪ್‌ಮನ್‌ನನ್ನು ಶೇಕ್ಸ್‌ಪಿಯರನ ಪ್ರತಿಸ್ಪರ್ಧಿ ಎಂಬಂತೆಯೇ ಬಿಂಬಿಸಲಾಗುತ್ತಿತ್ತು. ಆದರೆ ಈತನನ್ನು ಇವತ್ತು ನೆನಪಿಸಿಕೊಳ್ಳುವುದು ಆತನ ಸ್ವತಂತ್ರ ರಚನೆಗಳಿಂದ ಅಲ್ಲ, ಬದಲಿಗೆ ಆತ ಮಾಡಿದ ಹೋಮರನ ಇಲಿಯಡ್ ಮತ್ತು ಒಡಿಸ್ಸಿ ಭಾಷಾಂತರಗಳಿಂದ.

ಮೂಲವು ಪವಿತ್ರವಾದುದು, ಯಾವುದೇ ಕಾರಣಕ್ಕೂ ಅದರ ಪಾವಿತ್ರ್ಯತೆಯನ್ನು ಭಾಷಾಂತರದಲ್ಲಿ ಕೆಡಿಸುವಂತಿಲ್ಲ. ಭಾಷಾಂತರಕಾರ ಹೊಸದಾಗಿ ಏನನ್ನೂ ಸೇರಿಸುವಂತಿಲ್ಲ, ಮೂಲಪಠ್ಯದಿಂದ ಏನನ್ನೂ ತೆಗೆಯುವಂತಿಲ್ಲ ಎಂದು ಮುಂತಾಗಿ ನಿಷಿದ್ಧಗಳನ್ನು ಹೇರುವ ಶಬ್ದಾನುವಾದವು ಭಾಷಾಂತರಗಳನ್ನು ಕುರಿತ ಅತ್ಯಂತ ಹಳೆಯ ಸಿದ್ಧಾಂತ. ಪಶ್ಚಿಮದಲ್ಲಿ, ಬೈಬಲ್ಲುಗಳ ಭಾಷಾಂತರದ ಸಂದರ್ಭದಲ್ಲಿ ರೂಪುಗೊಂಡ ಈ ಮೂಲನಿಷ್ಠತಾ ತತ್ವವನ್ನು ಆನಂತರದಲ್ಲಿ ಸಾಹಿತ್ಯದ ಭಾಷಾಂತರದ ಮೇಲೆಯೂ ಹೇರಲಾಯಿತು.

ಈ ಮಾದರಿಯು ಇವತ್ತಿಗೂ ಧಾರ್ಮಿಕ ಪಠ್ಯ, ವಿಜ್ಞಾನ, ವೈದ್ಯಕೀಯ ಮತ್ತು ಕಾನೂನಿಗೆ ಸಂಬಂಧಿಸಿದ ಗ್ರಂಥಗಳ ಭಾಷಾಂತರದಲ್ಲಿ ಮನ್ನಣೆಯನ್ನು ಪಡೆದುಕೊಂಡಿದೆ. ಸಾಹಿತ್ಯ ಕ್ಷೇತ್ರದಲ್ಲಿಯೂ ವಿಮರ್ಶಾ ಲೇಖನ, ವೈಚಾರಿಕ ಲೇಖನ, ಜೀವನ ಚರಿತ್ರೆ, ಆತ್ಮಚರಿತ್ರೆ, ಸಂಶೋಧನಾ ಪ್ರಬಂಧಗಳ ಭಾಷಾಂತರದಲ್ಲಿ ಶಬ್ದಾನುವಾದದ ಬಗ್ಗೆ ಒಲವಿದೆ.

**2 ಭಾವಾನುವಾದ (ಪ್ಯಾರಾಫ್ರೇಸ್)**

ಇದು ಪಶ್ಚಿಮದ ಥಾಟ್ ಫಾರ್ ಥಾಟ್, ಟ್ರಾನ್ಸ್‌ಪರೆನ್ಸಿ, ಡೈನಾಮಿಕ್ ಈಕ್ವಲೆನ್ಸ್ ಪರಿಕಲ್ಪನೆಗಳಿಗೆ ಹತ್ತಿರವಾದ ಭಾಷಾಂತರದ ಮಾದರಿ. ಇತ್ತ ಶಬ್ದಾನುವಾದ/ ಪದಶಃ ಅನುವಾದವೂ ಅಲ್ಲದ, ಅತ್ತ ರೂಪಾಂತರ/ ಅಳವಡಿಕೆಯೂ ಅಲ್ಲದ, ಇವೆರಡರ ನಡುವಿನ ಮಧ್ಯಮಮಾರ್ಗ ಭಾವಾನುವಾದ. ಮೂಲಪಠ್ಯವನ್ನು ಹೆಜ್ಜೆಹೆಜ್ಜೆಗೂ

ಅನುಸರಿಸದಿದ್ದರೂ ಮೂಲದಲ್ಲಿನ ಭಾವಕ್ಕೆ ನಿಷ್ಠವಾಗಿರುತ್ತದೆ. ಮೂಲಪಠ್ಯದ ವಿವರಗಳನ್ನೆಲ್ಲ ಯಥಾವತ್ತಾಗಿಯೇ ಭಾಷಾಂತರಿಸದಿದ್ದರೂ ಭಾವಾನುವಾದವು ಮೂಲಕ್ಕೆ ವಿದ್ರೋಹದ ಚಟುವಟಿಕೆಯಾಗಿ ನಿಲ್ಲುವುದಿಲ್ಲ.

ಭಾಷಿಕ ನೆಲೆಯಲ್ಲಿ, ಪದಾನುಕ್ರಮಣಿಕೆಯ ನೆಲೆಯಲ್ಲಿ, ಛಂದಸ್ಸಿನ ನೆಲೆಯಲ್ಲಿ, ನಿರೂಪಣಾ ಶೈಲಿಯ ನೆಲೆಯಲ್ಲಿ ಭಾಷಾಂತರಕಾರನು ಆಯ್ಕೆಯ ಸ್ವಾತಂತ್ರ್ಯವನ್ನು ತೋರಲು ಭಾವಾನುವಾದದಲ್ಲಿ ಅವಕಾಶವಿದೆ.ಇಲ್ಲಿ ವಿಶ್ವಾಸಾರ್ಹತೆ ಮತ್ತು ಸ್ವಚ್ಛಂದತೆಯ ಸಮತೋಲನ ವನ್ನು ಕಾಣಬಹುದು.

ಸಾಹಿತ್ಯದ ಭಾಷಾಂತರದಲ್ಲಿ ಭಾವಾನುವಾದವು ಹೆಚ್ಚು ಮನ್ನಣೆಯನ್ನು ಪಡೆದುಕೊಂಡಿದೆ. ಬೇಂದ್ರೆಯವರ "ಕನ್ನಡ ಮೇಘದೂತ" ಭಾವಾನುವಾದಕ್ಕೆ ಒಂದು ಉತ್ತಮ ನಿದರ್ಶನ. ತಮ್ಮ ಈ ಮಾದರಿಯ ಭಾಷಾಂತರವನ್ನು ಬೇಂದ್ರೆಯವರು 'ಭಾವಗ್ರಹಣ' ಎಂದು ಕರೆದುಕೊಂಡಿದ್ದಾರೆ.

**3. ಸೃಜನಶೀಲ ಭಾಷಾಂತರ (ಕ್ರಿಯೇಟಿವ್ ಟ್ರಾನ್ಸ್‌ಲೇಷನ್)**

ಇದು ಸೃಜನಶೀಲ ಪ್ರತಿಭೆಯುಳ್ಳ ಲೇಖಕರಿಂದ ಸಂಭವಿಸುವ ಭಾಷಾಂತರ. ಮೂಲದ ನಕಲು ಆಗಿರದ ಸ್ವಚ್ಛಂದ ಭಾಷಾಂತರಗಳನ್ನೆಲ್ಲಾ ಸೃಜನಶೀಲ ಭಾಷಾಂತರ ಎನ್ನುವರು. ಇದು ಲಕ್ಷ್ಯಭಾಷೆಯ ಓದುಗರಿಂದ ಲಕ್ಷ್ಯಭಾಷೆಯಲ್ಲಿಯೇ ರೂಪುಗೊಂಡ ಸ್ವತಂತ್ರ ಕೃತಿಯೆಂಬಂತೆ ಓದಿಸಿಕೊಳ್ಳುತ್ತದೆ. ವಸಾಹತುಶಾಹೀ ಆಧುನಿಕ ಸಂದರ್ಭದಲ್ಲಿ ಕನ್ನಡದಲ್ಲಾದ ರೂಪಾಂತರ, ಮರುಬರವಣಿಗೆ, ಪುನರ್ಲೇಖನ, ಅನುಸೃಷ್ಟಿ, ಭಾವಾನುವಾದಗಳು ಸೃಜನಶೀಲ ಭಾಷಾಂತರದ ವಿವಿಧ ಮಾದರಿಗಳು.

'ಹೊಸ ರಚನೆ', 'ಪುನರ್‌ರಚನೆ' ಎಂದರ್ಥ ಕೊಡುವ ಸೃಜನಶೀಲ ಭಾಷಾಂತರ ಎನ್ನುವ ಪರಿಕಲ್ಪನೆಯನ್ನು ಕೆಲವೊಮ್ಮೆ 'ಉತ್ತಮ ಭಾಷಾಂತರ'ದ ಸೂಚಕವಾಗಿಯೂ, 'ಸೃಜನಶೀಲ ಸಾಹಿತ್ಯದ ಭಾಷಾಂತರ' ಎಂಬರ್ಥದಲ್ಲಿಯೂ ಬಳಸಲಾಗಿದೆ.

**4. ಅಳವಡಿಕೆ (ಅಡಾಪ್ಟೇಷನ್)**

ಮೂಲಪಠ್ಯವನ್ನು ತನಗೆ ಹೇಗೆ ಬೇಕೋ ಹಾಗೆ, ಎಷ್ಟು ಬೇಕೋ ಅಷ್ಟು, ಉದ್ದಿಷ್ಟ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಬಳಸಿಕೊಳ್ಳುವ ಪ್ರಕ್ರಿಯೆಯನ್ನು 'ಅಳವಡಿಕೆ' ಎನ್ನುವರು. ಅಳವಡಿಕೆಯಲ್ಲಿ ಒಂದು ನಿರ್ದಿಷ್ಟ ಸಾಂಸ್ಕೃತಿಕ ಪರಿಸರದಲ್ಲಿ ರಚನೆಯಾದ ಪಠ್ಯವನ್ನು ಮತ್ತೊಂದು ಸಾಂಸ್ಕೃತಿಕ ಪರಿಸರಕ್ಕೆ ಹೊಂದಿಸುವ ಕೆಲಸ ನಡೆದಿರುತ್ತದೆ. ಆ ಮೂಲಕ ಅಳವಡಿಕೆಯು ಉದ್ದಿಷ್ಟ ಭಾಷೆಯ ಓದುಗನಿಗೆ ತನ್ನದೇ ಸಂಸ್ಕೃತಿಯ ಪಠ್ಯವನ್ನು ಓದುತ್ತಿದ್ದೇನೆ ಎಂಬ ಪರಿಚಿತೀಕರಣದ ಭಾವವನ್ನು ಉಂಟುಮಾಡುತ್ತದೆ. ಈ ಅರ್ಥದಲ್ಲಿ ವಸಾಹತು ಸಂದರ್ಭದಲ್ಲಿ ರೂಪಾಂತರಗೊಂಡು ಕನ್ನಡಕ್ಕೆ ಬಂದ ಬಹುಪಾಲು ಕವಿತೆ – ನಾಟಕಗಳನ್ನು ನಾವು ಅಳವಡಿಕೆಗಳೆಂದೇ ಹೇಳಬಹುದು.

ಕಥೆ ಕಾದಂಬರಿಗಳು ನಾಟಕವಾಗುವ 'ಪ್ರಕಾರ ರೂಪಾಂತರ'ವನ್ನೂ, ನಾಟಕವು ಸಿನಿಮಾ ಆಗುವ 'ಅಂತರ್‌ಮಾಧ್ಯಮ ಭಾಷಾಂತರ'ವನ್ನೂ ಸಹ ಅಳವಡಿಕೆ ಎನ್ನಲಾಗುತ್ತದೆ.

**5. ಪಶ್ಚಿಮೀಕರಣ (ವೆಸ್ಟರ್‌ನೈಸೇಷನ್)**

ವಸಾಹತುಶಾಹೀ ಸಂದರ್ಭದಲ್ಲಿ ಇಂಗ್ಲಿಷಿಗೆ ಮತ್ತು ಇತರೆ ಯೂರೋಪಿಯನ್ ಭಾಷೆಗಳಿಗಾದ ಸ್ಥಳೀಯ ಪಠ್ಯಗಳ ಅನುವಾದವನ್ನು 'ಪಶ್ಚಿಮೀಕರಣ' ಎನ್ನುವರು. ಪಶ್ಚಿಮೀಕರಣ ಹೆಚ್ಚು ನಡೆದದ್ದು ಪಶ್ಚಿಮದ ವಿದ್ವಾಂಸರಿಂದ, ಬ್ರಿಟಿಷ್ ಅಧಿಕಾರಿಗಳಿಂದ ಮತ್ತು ಕ್ರೈಸ್ತಮತ ಪ್ರಚಾರಕರಿಂದ.

ಸ್ಥಳೀಯ ಭಾಷೆ ಸಾಹಿತ್ಯ ಸಂಸ್ಕೃತಿಗಳನ್ನು ಅರ್ಥ ಮಾಡಿಕೊಳ್ಳಬೇಕು ಮತ್ತು ಅವನ್ನು ತಮ್ಮದನ್ನಾಗಿಸಿಕೊಳ್ಳಬೇಕು ಎಂಬ 'ಜ್ಞಾನದ ದಾಹ' ಮತ್ತು 'ಅಧಿಕಾರದ ದಾಹ'ದ ಭಾಗವಾಗಿ ನಡೆದ ಭಾಷಾಂತರ; ಪ್ರಭುತ್ವದ ಗೂಢಚಾರಿಕೆಯ ಭಾಗವಾಗಿ ನಡೆದ ಭಾಷಾಂತರ; ವಸಾಹತುಶಾಹಿಯನ್ನು ಒಪ್ಪಿತಗೊಳಿಸುವುದಕ್ಕಾಗಿ ನಡೆದ ಭಾಷಾಂತರ; ಪಶ್ಚಿಮದ ಶ್ರೇಷ್ಠತೆಯ ವ್ಯಸನದೊಂದಿಗೆ ನಡೆದ ಭಾಷಾಂತರ; ಪಶ್ಚಿಮದ ಸೌಂದರ್ಯ ಪ್ರಜ್ಞೆಗೆ ಸ್ಥಳೀಯ ಪಠ್ಯಗಳನ್ನು ಹೊಂದಿಸಿ ಮಾಡಿದ ಭಾಷಾಂತರವೆಲ್ಲ 'ಪಶ್ಚಿಮೀಕರಣ'ವೇ.

ವಸಾಹತು ಕಾಲಘಟ್ಟದಲ್ಲಾದ ನಿಘಂಟು, ವ್ಯಾಕರಣ, ಸಾಹಿತ್ಯ ಚರಿತ್ರೆ, ಭಾಷಾ ಶಾಸ್ತ್ರಗಳ ರಚನೆಯನ್ನೂ ಸಹ ಪಶ್ಚಿಮೀಕರಣದ ಭಾಗವಾಗಿಯೇ ನೋಡಬೇಕಾಗುತ್ತದೆ. ಕಿಟಲ್ ನಿಘಂಟು, ಆತ ಸಂಪಾದಿಸಿದ ಶಬ್ದಮಣಿದರ್ಪಣ, ವಿಲಿಯಂ ಕೇರಿ ರಚಿಸಿದ ಕನ್ನಡ ವ್ಯಾಕರಣ, ಡೇನಿಯಲ್ ಸ್ಯಾಂಡರ್‌ಸನ್‌ನ ಜೈಮಿನಿ ಭಾರತದ ಭಾಷಾಂತರ, ಫ್ಲೀಟರು ಮಾಡಿದ ಲಾವಣಿಗಳ ಸಂಗ್ರಹ ಮತ್ತು ಇಂಗ್ಲಿಷ್ ಭಾಷಾಂತರ, ಲೆಫ್ಟಿನೆಂಟ್ ಜನರಲ್ ಅಬರ್‌ಕ್ರಾಂಬಿ ಮಾಡಿದ ರಾಜೇಂದ್ರನಾಮೆಯ ಇಂಗ್ಲಿಷ್ ಭಾಷಾಂತರ, ಮೋಗ್ಲಿಂಗ್ ಮಾಡಿದ ತುಳು ಪಾಡ್ದನಗಳು ಮತ್ತು ಲಕ್ಷ್ಮೀಶನ ಜೈಮಿನಿ ಭಾರತದ ಜರ್ಮನ್ ಭಾಷಾಂತರ – ಇವು ಕನ್ನಡದ ಸಂದರ್ಭದಲ್ಲಿ ನಡೆದ ಪಶ್ಚಿಮೀಕರಣಕ್ಕೆ ನಿದರ್ಶನಗಳು.

**6. ನೇರ ಭಾಷಾಂತರ (ಡೈರೆಕ್ಟ್ ಟ್ರಾನ್ಸ್‌ಲೇಷನ್)**

ನೇರ ಭಾಷಾಂತರವನ್ನು ಎರಡು ಅರ್ಥಗಳಲ್ಲಿ ವಿವರಿಸಿಕೊಳ್ಳಲಾಗಿದೆ. ಒಂದು, ಶಬ್ದಾನುವಾದ ಅಥವಾ ಯಥಾವತ್ತಾದ ಭಾಷಾಂತರ ಎಂಬರ್ಥದಲ್ಲಿ. ಇನ್ನೊಂದು ಮಧ್ಯವರ್ತಿ ಭಾಷೆಯ ಸಹಾಯವಿಲ್ಲದೆ ನೇರವಾಗಿ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಆಗಿರುವ ಭಾಷಾಂತರ ಎಂಬರ್ಥದಲ್ಲಿ.

ನೇರ ಭಾಷಾಂತರದಲ್ಲಿ ಮೂಲ ಭಾಷೆ ಮತ್ತು ಲಕ್ಷ್ಯ ಭಾಷೆಗಳಷ್ಟೇ ಇರುತ್ತವೆ. ಇಲ್ಲಿ ಮಧ್ಯವರ್ತಿ ಭಾಷೆಯೆಂಬ ಮೂರನೆಯ ಭಾಷೆಯಿರುವುದಿಲ್ಲ. ಇಂಗ್ಲಿಷಿನಿಂದ ಕನ್ನಡಕ್ಕೆ ಬಂದಿರುವ ಡಿವಿಜಿಯವರ 'ಕನ್ನಡ ಮ್ಯಾಕ್‌ಬೆತ್' ನೇರ ಭಾಷಾಂತರವಾದರೆ, ಫ್ರೆಂಚ್‌ನಿಂದ ಇಂಗ್ಲಿಷಿಗೆ ಮತ್ತು ಇಂಗ್ಲಿಷಿನ ಮೂಲಕ ಕನ್ನಡಕ್ಕೆ ಬಂದಿರುವ ಲಂಕೇಶರ 'ಪಾಪದ ಹೂವುಗಳು' ನೇರ ಭಾಷಾಂತರವಲ್ಲ. ಫ್ರೆಂಚ್ ಮತ್ತು ಕನ್ನಡದ ನಡುವೆ ಇಂಗ್ಲಿಷ್ ಮಧ್ಯವರ್ತಿ ಭಾಷೆಯಾಗಿ ಕೆಲಸ ಮಾಡಿದೆಯಾದ್ದರಿಂದ ಅದು ಸುತ್ತುಬಳಸಿನ ಭಾಷಾಂತರ.

**7. ಸುತ್ತುಬಳಸಿನ ಭಾಷಾಂತರ (ಇನ್‌ಡೈರೆಕ್ಟ್ ಟ್ರಾನ್ಸ್‌ಲೇಷನ್)**

ಒಂದು ಭಾಷೆಯ ಸಾಹಿತ್ಯ ಕೃತಿಯೊಂದು ಇನ್ನೊಂದು ಭಾಷೆಗೆ ನೇರವಾಗಿ ಬಾರದೆ, ಮತ್ತೊಂದು ಭಾಷೆಯ ಮೂಲಕ ಬಂದರೆ ಅದು ಸುತ್ತುಬಳಸಿನ ಭಾಷಾಂತರ.

ಇಲ್ಲಿ ಮೂಲಭಾಷೆ ಮತ್ತು ಉದ್ದಿಷ್ಟ ಭಾಷೆಗಳ ನಡುವೆ ಮಧ್ಯವರ್ತಿ ಭಾಷೆಯೊಂದು ಸೇತುವೆಯಂತೆ ಕೆಲಸ ಮಾಡುತ್ತದೆ.

ಕನ್ನಡಕ್ಕೆ ಬಂದಿರುವ ಬಹುಪಾಲು ಗ್ರೀಕ್ ಸಾಹಿತ್ಯ, ಫ್ರೆಂಚ್ ಮೂಲದಿಂದ ಕನ್ನಡಕ್ಕೆ ಬಂದಿರುವ ಬೋದಿಲೇರನ ಕಾವ್ಯ, ವಿಕ್ಟರ್ ಹ್ಯೂಗೋ, ಆಲ್ಬರ್ಟ್ ಕಮೂ, ಸಾರ್ತ್ರ್ ಅವರ ಕಥೆ ಕಾದಂಬರಿಗಳು, ಸಿಮೊನ್ ದ ಬೊವಾ ಅವರ ಬರಹಗಳು; ಸ್ಪ್ಯಾನಿಶ್‌ನಿಂದ ಕನ್ನಡಕ್ಕೆ ಬಂದಿರುವ ನೆರುಡಾ, ಮಾರ್ಕ್ವೆಜ್, ಗಾರ್ಸಿಯಾ ಲೋರ್ಕಾ ಸಾಹಿತ್ಯ; ಜರ್ಮನ್ ಮೂಲದಿಂದ ಕನ್ನಡಕ್ಕೆ ಬಂದಿರುವ ಗಯಟೆ, ಬ್ರೆಕ್ಟ್, ಹರ್ಮನ್ ಹಸೆ, ನೀಶೆ ಇವರ ಬರಹಗಳು, ಹಾಗೆಯೇ ಇತರೆ ಭಾರತೀಯ ಭಾಷೆಗಳಿಂದ ಕನ್ನಡಕ್ಕೆ ಬಂದಿರುವ ಬಹುಪಾಲು ಸಾಹಿತ್ಯವು ಆಯಾ ಭಾಷೆಗಳಿಂದ ನೇರವಾಗಿ ಬಂದಿಲ್ಲ. ಬಂದಿರುವುದು ಇಂಗ್ಲಿಷ್ ಎಂಬ ಮಧ್ಯವರ್ತಿ ಭಾಷೆಯ ಮೂಲಕ.

ವೆಂಕಟಾಚಾರ್ಯರು ಬಂಕಿಮಚಂದ್ರರ ಕಾದಂಬರಿಗಳನ್ನು ಬಂಗಾಳಿಯಿಂದ ಕನ್ನಡಕ್ಕೆ ತಂದಿರುವುದು ನೇರ ಭಾಷಾಂತರಕ್ಕೆ ಉದಾಹರಣೆಯಾದರೆ, ಹಲವರಿಂದ ಇಂಗ್ಲಿಷ್ ಭಾಷೆಯ ಮೂಲಕ ಬಂಗಾಳಿಯಿಂದ ಕನ್ನಡಕ್ಕೆ ಬಂದಿರುವ ರವೀಂದ್ರರ "ಗೀತಾಂಜಲಿ" ಸುತ್ತುಬಳಸಿನ ಭಾಷಾಂತರಕ್ಕೆ ಉದಾಹರಣೆ.

ಟಾಲ್‌ಸ್ಟಾಯ್ ಅವರ ಯುದ್ಧ ಮತ್ತು ಶಾಂತಿ, ಅನ್ನಾಕರೆನಿನಾ, ಪುನುರುತ್ಥಾನ ಕಾದಂಬರಿಗಳು ರಷ್ಯನ್ ಭಾಷೆಯಿಂದ ಇಂಗ್ಲಿಷ್ ಹಾಗೂ ಇತರೆ ಯೂರೋಪಿಯನ್ ಭಾಷೆಗಳಿಗೆ ಭಾಷಾಂತರವಾದದ್ದು ನೇರವಾಗಿಯಲ್ಲ, ಫ್ರೆಂಚ್ ಭಾಷೆಯ ಮೂಲಕ. ಇಲ್ಲಿ ಫ್ರೆಂಚ್ ಭಾಷೆ ಮಧ್ಯವರ್ತಿ ಭಾಷೆ. ಇವೇ ಕಾದಂಬರಿಗಳು ಕನ್ನಡಕ್ಕೆ ಬಂದದ್ದು ಇಂಗ್ಲಿಷ್ ಭಾಷೆಯ ಮೂಲಕ. ಇಲ್ಲಿ ರಷ್ಯನ್ ಮತ್ತು ಕನ್ನಡ ಭಾಷೆಗಳ ನಡುವೆ ಫ್ರೆಂಚ್ ಮತ್ತು ಇಂಗ್ಲಿಷ್ ಭಾಷೆಗಳು ಮಧ್ಯವರ್ತಿ ಭಾಷೆಗಳು. ಪರ್ಶಿಯನ್ ಕವಿ ಉಮರ್ ಖಯ್ಯಾಮನ ರುಬಾಯತ್‌ಗಳು ಕನ್ನಡಕ್ಕೆ ಬಂದದ್ದು ಫಿಟ್ಜೆರಾಲ್ಡ್‌ನ ಇಂಗ್ಲಿಷ್ ಭಾಷಾಂತರದ ಮೂಲಕ. ಮಹಾಶ್ವೇತಾ ದೇವಿಯರ ಕೃತಿಗಳನ್ನು ಜೆ.ಕುಮಾರಪ್ಪನವರು ಬಂಗಾಳಿಯಿಂದ ನೇರವಾಗಿ ಕನ್ನಡಕ್ಕೆ ಭಾಷಾಂತರಿಸಿದ್ದರೆ, ಎಚ್.ಎಸ್. ಶ್ರೀಮತಿಯವರು ಇಂಗ್ಲಿಷ್ ಭಾಷಾಂತರಗಳ ಸಹಾಯದಿಂದ ಕನ್ನಡಕ್ಕೆ ತಂದಿದ್ದಾರೆ. ಹೀಗೇ ಹೆಸರಿಸುತ್ತಾ ಹೋದರೆ, ಸುತ್ತುಬಳಸಿನ ಭಾಷಾಂತರಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಜಾಗತಿಕ ಮತ್ತು ಭಾರತೀಯ ಸಂದರ್ಭದ ಒಟ್ಟು ಭಾಷಾಂತರಗಳನ್ನು ಗಮನಿಸಿದರೆ, ಸುತ್ತುಬಳಸಿನ ಭಾಷಾಂತರಗಳಲ್ಲಿ ಮಧ್ಯವರ್ತಿ ಭಾಷೆಯಾಗಿ ಹೆಚ್ಚು ಪಾತ್ರವಹಿಸಿರುವುದು ಇಂಗ್ಲಿಷ್ ಭಾಷೆ ಎಂದು ಹೇಳಬಹುದು. ಹಾಗಾಗಿ ಇಂಗ್ಲಿಷ್ ಭಾಷೆಯನ್ನು ಪ್ರಮುಖ 'ಕೊಂಡಿ ಭಾಷೆ' ಎಂದೇ ಕರೆಯಲಾಗುತ್ತದೆ.

ಮಧ್ಯವರ್ತಿ ಭಾಷೆ ಅಥವಾ ಕೊಂಡಿ ಭಾಷೆಯ ಮೇಲೆ ಭಾಷಾಂತರಕಾರರು ಅವಲಂಬಿತರಾಗಿರುತ್ತಾರಾದರೂ, ಲಕ್ಷ್ಯಭಾಷೆಯ ಓದುಗವಲಯಕ್ಕೆ ಮಧ್ಯವರ್ತಿ ಭಾಷೆ ಯಾವುದು ಮತ್ತು ಅಲ್ಲಿನ ಭಾಷಾಂತರಕಾರ ಯಾರು ಎಂಬುದು ಮುಖ್ಯವಾಗಿರುವುದಿಲ್ಲ.

ಕನ್ನಡದಲ್ಲಿ 'ಯುದ್ಧ ಮತ್ತು ಶಾಂತಿ' ಓದುತ್ತಿರುವವರು ಈ ಕಾದಂಬರಿ ಯಾವ ಯಾವ ಭಾಷೆಗಳನ್ನು ದಾಟಿಕೊಂಡು ಕನ್ನಡಕ್ಕೆ ಬಂದಿದೆ? ರಷ್ಯನ್ ಮೂಲದ ಈ ಕಾದಂಬರಿಯ ಫ್ರೆಂಚ್ ಭಾಷಾಂತರಕಾರ ಯಾರು? ಇಂಗ್ಲಿಷ್ ಭಾಷಾಂತರಕಾರ ಯಾರು ಎನ್ನುವುದನ್ನು ತಿಳಿದುಕೊಳ್ಳುವ ಗೋಜಿಗೆ ಹೋಗುವುದಿಲ್ಲ. ತಾವು ದೇಜಗೌ

ಭಾಷಾಂತರಿಸಿರುವ ರಷ್ಯನ್ ಲೇಖಕ ಟಾಲ್‌ಸ್ಟಾಯ್ ಅವರ ಕಾದಂಬರಿಯನ್ನು ಓದುತ್ತಿದ್ದೇವೆ ಎಂತಲೇ ಭಾವಿಸುತ್ತಾರೆ ಮತ್ತು ಓದುತ್ತಾರೆ. ಭಾಷಾಂತರ ಮೀಮಾಂಸೆಯಲ್ಲಿ ಈ ಬಗೆಯ ಭಾಷಾಂತರಗಳೆಲ್ಲ ಸುತ್ತುಬಳಸಿನ ಭಾಷಾಂತರಗಳು.

ಆದರೆ ಈ ಬಗೆಯ ಸುತ್ತುಬಳಸಿನ ಭಾಷಾಂತರಗಳಿಂದ ಅನಾಹುತಗಳೇ ಹೆಚ್ಚು ಎನ್ನುವುದು ಭಾಷಾಂತರತಜ್ಞ ಕ್ಲಿಫೋರ್ಡ್ ಇ.ಲ್ಯಾಂಡರ್ಸ್‌ನ ಅಭಿಪ್ರಾಯ. ಆತನ ಪ್ರಕಾರ, "ಮೊದಲ ಉದ್ದಿಷ್ಟ ಪಠ್ಯದಲ್ಲಿ ಮೂಲಪಠ್ಯದ ತಪ್ಪು ವ್ಯಾಖ್ಯಾನವಾಗಿದ್ದಲ್ಲಿ, ಭಾಷಾಂತರದಲ್ಲಿ ದೋಷಗಳೇನಾದರೂ ಸಂಭವಿಸಿದ್ದಲ್ಲಿ, ಆ ತಪ್ಪು ವ್ಯಾಖ್ಯಾನ ಮತ್ತು ದೋಷಗಳನ್ನು ನಂತರದ ಉದ್ದಿಷ್ಟ ಪಠ್ಯಗಳು ಮುಂದೆ ಕೊಂಡೊಯ್ಯುತ್ತವೆ. ಮೂಲಪಠ್ಯದೊಂದಿಗೆ ಹೋಲಿಸಿ ದೋಷಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಇಲ್ಲಿ ಅವಕಾಶಗಳಿರುವುದಿಲ್ಲ. ಅಷ್ಟೇ ಅಲ್ಲದೆ, ಒಂದು ಜೆರಾಕ್ಸ್ ಪ್ರತಿಯಿಂದ ಮತ್ತೊಂದು ಜೆರಾಕ್ಸ್, ಆ ಜೆರಾಕ್ಸ್ ಪ್ರತಿಯಿಂದ ಮಗುದೊಂದು ಜೆರಾಕ್ಸ್ ಮಾಡುತ್ತಾ ಹೋದಲ್ಲಿ, ಹೇಗೆ ಪ್ರತಿಯಿಂದ ಪ್ರತಿಗೆ ತೀವ್ರತೆ ಕಡಿಮೆಯಾಗುತ್ತಾ ವಿವರಗಳು ಮಸುಕಾಗುತ್ತಾ ಹೋಗುತ್ತವೆಯೋ, ಹಾಗೆ ಸುತ್ತುಬಳಸಿನ ಭಾಷಾಂತರದಲ್ಲಿ ಮಧ್ಯವರ್ತಿ ಭಾಷೆಗಳ ಸಂಖ್ಯೆ ಹೆಚ್ಚಾದಂತೆಲ್ಲ ಮೂಲಪಠ್ಯದ ವಿವರಗಳು ಮಸುಕಾಗುತ್ತಾ ಮೂಲವೇ ಕಳೆದು ಹೋಗುತ್ತದೆ." ಒಟ್ಟಿನಲ್ಲಿ ಸುತ್ತುಬಳಸಿನ ಭಾಷಾಂತರಗಳಿಗಿಂತ ನೇರ ಭಾಷಾಂತರ ಮಾಡಿಕೊಳ್ಳುವುದು ಸೂಕ್ತ ಎನ್ನುತ್ತಾನೆ ಕ್ಲಿಫೋರ್ಡ್ ಇ. ಲ್ಯಾಂಡರ್ಸ್. ಇದೇ ಅಭಿಪ್ರಾಯವನ್ನು ಶಾ. ಬಾಲುರಾವ್ ಅವರು ರಷ್ಯನ್ ಕವಯಿತ್ರಿ ಆನಾ ಅಹ್ಮತೋವಾಳ ಕಾವ್ಯದ ಭಾಷಾಂತರದ ಸಂದರ್ಭದಲ್ಲಿ ವ್ಯಕ್ತಪಡಿಸಿರುವುದನ್ನು ನಾವು ಗಮನಿಸಬಹುದು.

**ಪರಾಮರ್ಶನ ಗ್ರಂಥಗಳು:**

1. ಅಂಬಿಕಾತನಯದತ್ತ, ಕನ್ನಡ ಮೇಘದೂತ, ಸಮಾಜ ಪುಸ್ತಕಾಲಯ, ಧಾರವಾಡ, 1963
2. ಉಷಾ ಎಂ., ಭಾಷಾಂತರ ಪ್ರವೇಶಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2014
3. ಕರೀಗೌಡ ಬೀಚನಹಳ್ಳಿ (ಸಂ), ಭಾಷಾಂತರದ ಸಾಂಸ್ಕೃತಿಕ ನೆಲೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009
4. ಕೀರ್ತಿನಾಥ ಕುರ್ತಕೋಟಿ, ಬಯಲು–ಆಲಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997
5. ಬಾಲುರಾವ್ ಶಾ. (ಅನು), ಆನಾ ಅಹಮತೋವಾ: ರಿಕ್ವಿಯಂ ಮತ್ತಿತರ ನೂರು ಕವಿತೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, 1991
6. ರಾಮಚಂದ್ರನ್ ಸಿ.ಎನ್., ಭಾಷಾಂತರ: ಸೈದ್ಧಾಂತಿಕ ಹಾಗೂ ಆನ್ವಯಿಕ ನೆಲೆಗಳು, ಮನೋಹರ ಗ್ರಂಥಮಾಲಾ, ಧಾರವಾಡ, 2015
7. ಶ್ರೀಕಂಠಯ್ಯ ಬಿ.ಎಂ., ಇಂಗ್ಲಿಷ್ ಗೀತಗಳು, ವಿಶ್ವಸಾಹಿತ್ಯ ಪ್ರಕಾಶಕರು, ಮೈಸೂರು, 1966
8. ಹೊಸ ಒಡಂಬಡಿಕೆ, ದ ಬೈಬಲ್ ಸೊಸೈಟಿ ಆಫ್ ಇಂಡಿಯಾ, ಬೆಂಗಳೂರು, 2010
9. Clifford E. landers, Literary Translation: A Practical Guide, Viva Books, New Delhi, 2010

❖❖❖

# ಗದಗ ಜಿಲ್ಲೆಯ ಲಕ್ಷ್ಮೇಶ್ವರದ ಶಾಸನವೊಂದರ ಕಾಲ : ಪುನಃಪರಿಶೀಲನೆ

**ಎಸ್. ಕಾರ್ತಿಕ್**

#413, ಕರ್ನಾಟಕ 'ಡಿ' ಗ್ರೂಪ್ ಎಂಪ್ಲಾಯಿಸ್ ಲೇಔಟ್, 1ನೆಯ ಬ್ಲಾಕ್, 6ನೆಯ ಮುಖ್ಯರಸ್ತೆ, ಲಿಂಗಧೀರನಹಳ್ಳಿ, ಅಂದ್ರಹಳ್ಳಿ ಮುಖ್ಯರಸ್ತೆ, ಬೆಂಗಳೂರು–560091

ಕರ್ನಾಟಕ ರಾಜ್ಯದ ಗದಗ ಜಿಲ್ಲೆ, ಶಿರಹಟ್ಟಿ ತಾಲ್ಲೂಕಿಗೆ ಸೇರಿರುವ ಲಕ್ಷ್ಮೇಶ್ವರವು ಬಹುಪ್ರಸಿದ್ಧವಾದ ಐತಿಹಾಸಿಕ ಸ್ಥಳವಾಗಿದೆ. ಇದು ಮೊದಲು ಪುಲಿಗೆಱೆ ಎಂಬ ಹೆಸರನ್ನು ಹೊಂದಿತ್ತು (ಪುರಿಗೆರೆ ಎಂಬ ಹೆಸರೂ ಕೂಡ ಶಾಸನಗಳಲ್ಲಿ ಕಂಡುಬರುತ್ತದೆ. ರ > ಲ ವ್ಯತ್ಯಯದಿಂದ ಉಂಟಾಗಿರುವ ರೂಪ ಇದಾಗಿದೆ). ಈ ಸ್ಥಳದ ಇತಿಹಾಸವನ್ನು ತಿಳಿಯಲು ಶಾಸನಗಳೇ ಪ್ರಮುಖ ಆಕರಗಳಾಗಿವೆ. ಇಲ್ಲಿನ ಶಾಸನಗಳು ಅನೇಕ ಶಾಸನಸಂಪುಟಗಳು, ಸಂಶೋಧನ ಪತ್ರಿಕೆಗಳಲ್ಲಿ ಚದುರಿದಂತೆ ಪ್ರಕಟವಾಗಿದ್ದವು. ಇವುಗಳನ್ನು ಈಚೆಗೆ 'ಲಕ್ಷ್ಮೇಶ್ವರದ ಶಾಸನಗಳು' ಎಂಬ ಹೆಸರಿನ ಕೃತಿಯಲ್ಲಿ ಒಗ್ಗೂಡಿಸಿ ಕೊಡಲಾಗಿದೆ. 'ಲಕ್ಷ್ಮೇಶ್ವರ : ಸಾಂಸ್ಕೃತಿಕ ಅಧ್ಯಯನ' ಎಂಬ ಹೆಸರಿನ ಮತ್ತೊಂದು ಕೃತಿಯಲ್ಲಿಯೂ ಲಕ್ಷ್ಮೇಶ್ವರದ ಶಾಸನಗಳನ್ನು ಒಗ್ಗೂಡಿಸಿ ಪ್ರಕಟಿಸಲಾಗಿದೆ. ಇವುಗಳಲ್ಲಿ ಪ್ರಕಟವಾಗಿರುವ ಶಾಸನಗಳ ಪಾಠ ಮತ್ತು ಶಾಸನಗಳ ಕಾಲಗಳ ವಿವರ ಪುನಃಪರಿಶೀಲನೆಗೆ ಒಳಪಡಬೇಕಾದ ಅಗತ್ಯವಿದೆ. ಪ್ರಕೃತ ಲೇಖನದಲ್ಲಿ ಈಚೆಗೆ ಜೀರ್ಣೋದ್ಧಾರ ಗೊಂಡ ಸೋಮೇಶ್ವರ ದೇವಾಲಯದಲ್ಲಿನ ಶಾಸನಗಳ ಸಾಲಿನಲ್ಲಿಯೇ ಇರುವ (ಈ ಶಾಸನವು ಮೊದಲು ತಾಲ್ಲೂಕು ಕಛೇರಿಯ ಗೋಡೆಯೊಳಗೆ ಸೇರಿಕೊಂಡು ಇದ್ದಿತು) ಶಾಸನವೊಂದರ ಕಾಲದ ಬಗೆಗೆ ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ.

ಪ್ರಕೃತ ಲೇಖನದಲ್ಲಿ ಕಾಲದ ಪುನಃಪರಿಶೀಲನೆಗೆ ಒಳಪಟ್ಟಿರುವ ಶಾಸನವು ಮೊದಲು 1935–36ರ 'Annual Report on Indian Epigraphy' ಸಂಪುಟದಲ್ಲಿ ವರದಿಯಾಗಿದೆ (ಬಿ.ಕೆ.25). ಅನಂತರ 'ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಷನ್ಸ್, ಸಂಪುಟ–20'ರಲ್ಲಿ ಪ್ರಕಟವಾಗಿದೆ (ಶಾಸನ ಸಂಖ್ಯೆ–191). 'ಧಾರವಾಡ ಜಿಲ್ಲೆಯ ಶಾಸನ ಸೂಚಿ'ಯಲ್ಲಿಯೂ ಇದರ ದಾಖಲಾತಿಯಿದೆ. ಇದರ ಅನಂತರ 'ಲಕ್ಷ್ಮೇಶ್ವರದ ಶಾಸನಗಳು' ಕೃತಿಯಲ್ಲಿ ಪ್ರಕಟವಾಗಿದೆ (ಸಂಖ್ಯೆ–6). 'ಲಕ್ಷ್ಮೇಶ್ವರ : ಸಾಂಸ್ಕೃತಿಕ ಅಧ್ಯಯನ' ಎಂಬ ಕೃತಿಯಲ್ಲಿಯೂ ಈ ಶಾಸನದ ಪಾಠ ಪ್ರಕಟವಾಗಿದೆ (ಸಂಖ್ಯೆ–63). ಕೆಳಗೆ ಐದು ಆಕರಗಳಲ್ಲಿಯೂ ನೀಡಲಾಗಿರುವ ಈ ಶಾಸನದ ಕಾಲವನ್ನು ಕುರಿತ ವಿವರಗಳನ್ನು ದಾಖಲಿಸಿ ಅನಂತರ ಸಂಬಂಧಪಟ್ಟ ವಿಶ್ಲೇಷಣೆಯನ್ನು ವಿವರವಾಗಿ ನೀಡಲಾಗಿದೆ.

1. Probably A.D. 1215, June 28, Sunday (not Monday) [Annual Report On Indian Epigraphy 1935-36, B.K. 25, Appendix-F, pp 176]
2. This Damaged and worn out Record is Dated in the cyclic year

Yuva, Ashada, Amavasya, Monday, Pushya-Nakshatra. In the Reign of Singhana, Yuva fell in A.D. 1215 and in that year the tithi corresponded to june 28 which was a Sunday and not Monday. Pushya-Nakshatra Coincided with the latter day [South Indian Inscriptions-20 {Bombay Karnataka Inscriptions-4}- (Ed) G.S. Gai, Archaeological Survey of India, New Delhi-1988, Reprint, No-191, pp 240]

3. ಧಾರವಾಡ ಜಿಲ್ಲೆಯ ಶಾಸನ ಸೂಚಿಯಲ್ಲಿ ಕ್ರಿ.ಶ.1115 ಎಂದಷ್ಟೇ ಕಾಲವನ್ನು ಸೂಚಿಸಲಾಗಿದೆ [ಧಾರವಾಡ ಜಿಲ್ಲೆಯ ಶಾಸನಗಳ ಸೂಚಿ–(ಸಂ) ಎಂ.ಎಂ. ಕಲಬುರ್ಗಿ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–1975, ಪುಟ 37]
4. ತ್ರುಟಿತ. ಶಾಸನೋಕ್ತ ಕಾಲವು ಯುವ ಸಂವತ್ಸರದ ಆಷಾಢ ಅಮಾವಾಸ್ಯೆ, ಸೋಮವಾರ, ಪುಷ್ಯ ನಕ್ಷತ್ರ, ವ್ಯತೀಪಾತ ಎಂದಿದ್ದು, ಶಕವರ್ಷವನ್ನಾಗಲೀ, ರಾಜನ ಆಳ್ವಿಕೆಯ ವರ್ಷವನ್ನಾಗಲೀ ನೀಡಿಲ್ಲ. ದೇವಗಿರಿ ಯಾದವ ರಾಜ ಸಿಂಹಣನ ಹೆಸರನ್ನು ಹೇಳಿರುವುದರಿಂದ ಸಿಂಹಣನ ಕಾಲಕ್ಕೆ ಲೆಕ್ಕ ಹಾಕಿದಲ್ಲಿ ಕ್ರಿ.ಶ. 28–6–1215ರ ಪುಷ್ಯ ನಕ್ಷತ್ರವಿದ್ದ ಭಾನುವಾರಕ್ಕೆ ಸಮನಾಗುತ್ತದೆ (ಸೋಮವಾರವಲ್ಲ) [ಲಕ್ಷ್ಮೇಶ್ವರದ ಶಾಸನಗಳು–(ಸಂ) ದೇವರಕೊಂಡಾರೆಡ್ಡಿ, ಕೆ.ಆರ್. ಗಣೇಶ, ಇನ್‌ಫೋಸಿಸ್ ಪ್ರತಿಷ್ಠಾನ, ಬೆಂಗಳೂರು–2015, ಸಂಖ್ಯೆ–6, ಪುಟ 33]
5. ಶಾಸನದ 23 ನೆಯ ಸಾಲಿನಲ್ಲಿ ಬರುವ "ಯುವ ಸಂವತ್ಸರದ ಆಷಾಢದಮಾವಾಸ್ಯೆ ಸೋಮವಾರ [ಪುಷ್ಯ]ನ[ಕ್ಷತ್ರ] ಬ್ಯತೀಪಾತದೊಳ್" ಎಂಬ ಮಿತಿಯು ಸಿಂಘಣನ ಅವಧಿಯಲ್ಲಿ ಬರುವ 28 ಜೂನ್ 1215ಕ್ಕೆ ಸರಿಹೊಂದುತ್ತದೆ [ಲಕ್ಷ್ಮೇಶ್ವರ : ಸಾಂಸ್ಕೃತಿಕ ಅಧ್ಯಯನ–(ಸಂ) ಹನುಮಾಕ್ಷಿ ಗೋಗಿ, ಮಹಿಳಾ ಸಾಹಿತ್ಯಿಕಾ, ನವನಗರ, ಹುಬ್ಬಳ್ಳಿ–2015, ಸಂಖ್ಯೆ–63, ಪುಟ 135]

ಮೇಲೆ ಉದಾಹರಿಸಿರುವಂತೆ ಶಾಸನ ಸಂಪುಟಗಳು ಮತ್ತು ಇತರ ಕೃತಿಗಳಲ್ಲಿ, ಶಾಸನದಲ್ಲಿ ಶಕವರ್ಷದ ಉಲ್ಲೇಖವಿರದೆ, ದೇವಗಿರಿಯ ಸೇಉಣ ಅಥವಾ ಯಾದವರ ಸಿಂಹಣನ ಉಲ್ಲೇಖವಿರುವುದನ್ನು ಗಮನಿಸಿ, ಈತನ ಆಳ್ವಿಕೆಯ ಕಾಲವನ್ನು ಆಧಾರವಾಗಿರಿಸಿಕೊಂಡು ಶಾಸನದ ಕಾಲವನ್ನು ನಿಷ್ಕರ್ಷಿಸಲು ಪ್ರಯತ್ನಿಸಲಾಗಿದೆ. ಇದು ಸಮರ್ಥನೀಯವೇ ಆಗಿದೆ. ಆದರೂ ಮೇಲಿನ ಐದು ಆಕರಗಳಲ್ಲಿಯೂ ಈ ಶಾಸನದ ಕಾಲ ಸಮರ್ಪಕವಾಗಿ ದಾಖಲಾಗಿಲ್ಲ. ಸಿಂಹಣನ ಆಳ್ವಿಕೆಯ ಕಾಲ ಅನೇಕ ಗೊಂದಲಗಳಿಂದ ಕೂಡಿದ್ದರೂ ಕ್ರಿ.ಶ. 1200–1247ರ ಸುಮಾರು ಎಂದು ಗ್ರಹಿಸಲು ಯಾವುದೇ ತೊಂದರೆಯಿಲ್ಲ (ನೋಡಿ: ಕರ್ನಾಟಕದ ಸೇವುಣರ ಇತಿಹಾಸ–ಎ.ವಿ. ನರಸಿಂಹಮೂರ್ತಿ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು–2010, ದ್ವಿತೀಯ ಪರಿಷ್ಕೃತ ಮುದ್ರಣ, ಪುಟ 37, 68–79). ಅಂದರೆ 13 ನೆಯ ಶತಮಾನದ ಪೂರ್ವಾರ್ಧ ಎಂಬುದು ಖಚಿತ. ಆದುದರಿಂದ ಈ ಶಾಸನದ ಕಾಲವನ್ನು ನಿಷ್ಕರ್ಷಿಸಲು

ಯಾವುದೇ ತೊಡಕುಗಳೂ ಇಲ್ಲ. ಶಾಸನದಲ್ಲಿ 'ಯುವ ಸಂವತ್ಸರದ, ಆಷಾಢ ಬಹುಳ ಅಮಾವಾಸ್ಯೆ, ಸೋಮವಾರ, ಪುಷ್ಯ ನಕ್ಷತ್ರ, ವ್ಯತೀಪಾತ ಯೋಗ' ಎಂದು ಸ್ಪಷ್ಟವಾಗಿ ದಾಖಲಾಗಿದೆ. 13ನೆಯ ಶತಮಾನದಲ್ಲಿ ಯುವ ಸಂವತ್ಸರ ಮತ್ತು ಆಷಾಢ ಬಹುಳ ಅಮಾವಾಸ್ಯೆಯು ಚಾಂದ್ರಮಾನ ಪಂಚಾಂಗದಂತೆ ಕೆಳಗೆ ನೀಡಿರುವ ದಿನಾಂಕಗಳಂದು ಬರುತ್ತದೆ.

(ಅ) ಕ್ರಿ.ಶ. 28–6–1215, ಭಾನುವಾರ, ಅಧಿಕ ಆಷಾಢ ಬಹುಳ ಅಮಾವಾಸ್ಯೆ, ಪುನರ್ವಸು ನಕ್ಷತ್ರ, ವ್ಯಾಘಾತ ಯೋಗ

(ಆ) ಕ್ರಿ.ಶ. 27–7–1215, ಸೋಮವಾರ, ನಿಜ ಆಷಾಢ ಬಹುಳ ಅಮಾವಾಸ್ಯೆ, ಪುಷ್ಯ ನಕ್ಷತ್ರ, ವ್ಯತೀಪಾತ ಯೋಗ

(ಇ) ಕ್ರಿ.ಶ. 24–7–1275, ಬುಧವಾರ, ಆಷಾಢ ಬಹುಳ ಅಮಾವಾಸ್ಯೆ, ಆಶ್ರೇಷಾ ನಕ್ಷತ್ರ, ವ್ಯತೀಪಾತ ಯೋಗ

ಮೇಲೆ ನೀಡಿರುವ ದಿನಾಂಕಗಳಲ್ಲಿ ಸಿಂಹಣನ ಕಾಲಕ್ಕೆ ಸರಿಹೊಂದುವುದು ಕ್ರಿ.ಶ. 1215ರ ಯುವ ಸಂವತ್ಸರ ಮಾತ್ರ. ಈ ವರ್ಷದಲ್ಲಿ ಆಷಾಢ ಮಾಸವು ಅಧಿಕ ಮಾಸವಾಗಿತ್ತು. ಅಧಿಕ ಆಷಾಢ ಅಮಾವಾಸ್ಯೆಗೆ ಶಾಸನದ ಕಾಲ ಹೊಂದುವುದಿಲ್ಲ. ಅಧಿಕಮಾಸದ ಅನಂತರ ಸಹಜವಾಗಿ ಬರುವ ನಿಜ ಆಷಾಢ ಬಹುಳ ಅಮಾವಾಸ್ಯೆಗೆ ಶಾಸನದ ಕಾಲ ಯಾವುದೇ ಗೊಂದಲಗಳೂ ಇಲ್ಲದೇ ಸರಿಹೊಂದುತ್ತದೆ. ಆ ದಿನ ಶಾಸನದಲ್ಲಿ ಹೇಳಿರುವಂತೆ ಸೋಮವಾರ, ಪುಷ್ಯ ನಕ್ಷತ್ರ, ವ್ಯತೀಪಾತ ಮೂರೂ ಇವೆ. ಅಧಿಕಮಾಸ ಮತ್ತು ನಿಜಮಾಸಗಳನ್ನು ಗಮನಿಸದೆ ಕಾಲನಿಷ್ಕರ್ಷೆ ಮಾಡಿರುವ ಕಾರಣದಿಂದ ಮೇಲಿನ ಆಕರಗಳಲ್ಲಿ ದೋಷಗಳುಂಟಾಗಲು ಆಸ್ಪದವಾಗಿದೆ. ಆದುದರಿಂದ 'ಈ ಶಾಸನದ ಕಾಲವನ್ನು ಚಾಂದ್ರಮಾನ ಪಂಚಾಂಗದಂತೆ ಕ್ರಿ.ಶ. 27–7–1215, ಸೋಮವಾರ' ಎಂದು ಖಚಿತವಾಗಿ ಹೇಳಬಹುದು. ಇದೇ ರೀತಿಯಾಗಿ ಅನೇಕ ಶಾಸನಗಳ ಪಾಠ ಮತ್ತು ಕಾಲಗಳು ಪುನಃಪರಿಶೀಲನೆಗೆ ಒಳಪಡುವ ಅಗತ್ಯ ಬಹಳವಾಗಿದೆಯೆಂದೂ ಒಂದು ಶಾಸನವು ಎಷ್ಟು ಬಾರಿ ಪ್ರಕಟವಾಗಿದೆಯೋ ಅಷ್ಟೂ ವಿವರಗಳನ್ನು ದಾಖಲಿಸಬೇಕಾದುದು ಕಡ್ಡಾಯವೆಂದೂ ಒತ್ತಿ ಹೇಳಬೇಕಾಗಿದೆ.

❖❖❖

**ಬಟ್ಟೆಯೆಂದರದು ನವಿಲು ನವಿರಿನದು**
**ಸ್ಫಟಿಕದ ಜಲದಂತೆ**
**ತೊಟ್ಟೆವೆಂದರೆ ರೇಶ್ಮೆ ನುಣುಪದು**
**ಹಂಸದ ಗರಿಯಂತೆ**

# ಬಸವಣ್ಣನವರ ವಚನಗಳ ಸಾಂಸ್ಕೃತಿಕ ಮುಖಾಮುಖಿ

**ಡಾ. ಮಹೇಶ ಎಂ.ಕೆ.**
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉದಯಪುರ–573225

**ಪ್ರಸ್ತಾವನೆ**

ಸಾಂಸ್ಕೃತಿಕ ಮುಖಾಮುಖಿ ಎನ್ನುವುದು ಒಂದು ನೆಲೆಯಲ್ಲಿ ಕಾಲಾತೀತವಾದ ಕೃತಿಯೊಂದನ್ನು ಕಾಲಬದ್ಧವಾಗಿಸುವ ಪ್ರಯತ್ನವಾದರೆ, ಇನ್ನೊಂದು ನೆಲೆಯಲ್ಲಿ ಅದರಲ್ಲಿರುವ ಕಾಲಾತೀತವಾದ ಗುಣಮೌಲ್ಯಗಳ ಹುಡುಕಾಟವು ಆಗಿರುತ್ತದೆ. ಸಾಂಸ್ಕೃತಿಕ ಮುಖಾಮುಖಿಗೆ ಇನ್ನೊಂದು ಅಂತರ್ಗತವಾದ ಅರ್ಥವು ಇದೆ. ಕೃತಿ ಅಥವಾ ಸಾಹಿತ್ಯ ಪರಂಪರೆಯೊಂದರ ಸ್ಥಾಪಿತ ತೀರ್ಮಾನಗಳ ಪರಿಶೀಲನೆಗೂ ಇಂತಹ ಮುಖಾಮುಖಿ ಅನಿವಾರ್ಯವು ಹೌದು. ಇಂತಹವರ ನಾಯಕತ್ವ ಚಳವಳಿ ಕುರಿತಂತೆ ಇನ್ನು ಮುಂದೆ ಶಬ್ದವಿಲ್ಲ ಎನ್ನುವ ತೀರ್ಮಾನಗಳು ಕನ್ನಡ ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ಅಡಗಿಹೋಗಿವೆ. ವಿಶೇಷಣಗಳಲ್ಲಿ ವಚನ ಸಾಹಿತ್ಯವನ್ನು ವೈಭವೀಕರಿಸಲಾಗಿದೆ. ಆದರೆ ಅದರ ಎಲ್ಲಾ ಆಯಾಮಗಳ ಜೊತೆ ವರ್ತಮಾನದಲ್ಲಿ ಮುಖಾಮುಖಿಯಾಗಬೇಕಿದೆ.

ಅಸಂಖ್ಯಾತ ತಳಸಮುದಾಯಗಳ, ಬರವಣಿಗೆಯ ಹಂಗಿಲ್ಲದ ಅನುಭವದ ಜ್ಞಾನಪರಂಪರೆಗೆ ಮುಖ್ಯ ಧಾರೆಯಲ್ಲಿ ಅವಕಾಶ ಸಿಕ್ಕಿಲ್ಲ. "ಚರಿತ್ರೆಯ ಪ್ರಮಾದಗಳು ವರ್ತಮಾನದ ತಲ್ಲಣಕ್ಕೆ ಕಾರಣವಾಗುವುದನ್ನು, ಭವಿಷ್ಯತ್ತಿನ ಬಗ್ಗೆ ಭಯವುಂಟು ಮಾಡುವುದನ್ನು ತಡೆಯುವ ಬಹುದೊಡ್ಡ ಶಕ್ತಿ ಸಂಸ್ಕೃತಿಯ ಶೋಧದೊಳಗಡೆಯಿಂದ ಹುಟ್ಟಬೇಕು. ಕಾಲಸತ್ಯವನ್ನು ಶೋಧಿಸುವ ಕೆಲಸವನ್ನು, ನೆಲಮೂಲ ಸತ್ಯವನ್ನು, ಅನೇಕ ಸತ್ಯಗಳಿಗೆ ಉತ್ತರಿಸಲಾಗದ ಭೂತದ ಸಂಸ್ಕೃತಿಯ ಹಾಗೂ ಕಾಣೆಯಾದ ಬಹುಸಂಸ್ಕೃತಿಗಳನ್ನು ಹುಡುಕುವ ಪ್ರಯತ್ನವೇ ಸಾಂಸ್ಕೃತಿಕ ಮುಖಾಮುಖಿಯಾಗಿದೆ" (ಅಳಿಸಲಾಗದ ಲಿಪಿಯನ್ನು ಬರೆಯಬಾರದು ಲೇಖನ– ಡಾ. ಎಸ್. ಮಲ್ಲಿಕಾ ಎಸ್ ಘಂಟಿ)

ಹನ್ನೆರಡನೆಯ ಶತಮಾನ ಕರ್ನಾಟಕದಲ್ಲಿ ಸಂಕ್ರಮಣ ಕಾಲ. ಸ್ಥಾವರವಾಗಿದ್ದ ಸಮಾಜ ಪರಿವರ್ತನೆಗೊಂಡು ಜಂಗಮವಾಗಿ ರೂಪಗೊಂಡ ಕಾಲ. ವಿಶಾಲವಾದ ಅರ್ಥದಲ್ಲಿ ಇದನ್ನು ಭಕ್ತಿ ಚಳವಳಿಯ ಕಾಲ ಎಂದು ಹೇಳುವವರಿದ್ದಾರೆ. ಇದು ಕೇವಲ ಮೊಕ್ಷಕ್ಕಾಗಿ ಬದುಕನ್ನು ಅರ್ಪಿಸಿದ ಕಾಲವಲ್ಲ. ವ್ಯಷ್ಟಿ ಸಮಷ್ಟಿಯ ಬದುಕಿನ ಸ್ವರೂಪ ಇಲ್ಲಿ ಹೊಸ ಅರ್ಥವನ್ನು ಪಡೆಯಿತು.

ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಚರಿತ್ರೆಯನ್ನು ರೂಪಿಸಿದ ಮಹತ್ವದ ಕವಿಗಳೆಂದರೆ ಪಂಪ, ಬಸವಣ್ಣ ಮತ್ತು ಕುಮಾರವ್ಯಾಸ. ಈ ಲೇಖಕರ ಸಾಹಿತ್ಯ ಕೊಡುಗೆ ಅಪಾರವಾದುದು ಹಾಗೂ ಅನನ್ಯವಾದುದು. ಬಹಳ ಮುಖ್ಯವಾಗಿ ಅವು ಕನ್ನಡ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿವೆ. ಬಸವಣ್ಣನ ವಚನಗಳನ್ನು ಬಿಟ್ಟು, ಅವರ

ಬಗ್ಗೆಯೇ ಚರ್ಚೆ ಮಾಡಲು ಬೇಕಾದಷ್ಟು ವಿಚಾರಗಳಿವೆ. ಲಭ್ಯವಿರುವ ವಚನಗಳ ಆಧಾರದ ಮೇಲೆ ಅಧ್ಯಯನ ಮಾಡುವುದಕ್ಕೆ ಅನೇಕ ತೊಡಕುಗಳಿವೆ ಕಾರಣ ಆತ ಬರೆದ ವಚನಗಳು ಆತನ ಕಾಲಕ್ಕೆ ಪ್ರಕಟಗೊಳ್ಳದೆ ಮೂರ್‍ನಾಲ್ಕು ಶತಮಾನಗಳ ನಂತರ ಪ್ರಕಟಗೊಂಡಿದ್ದು.

"15ನೇ ಶತಮಾನದಲ್ಲಿ ವಿಜಯನಗರ ಪ್ರೌಢದೇವರಾಯನ ಕಾಲದಲ್ಲಿ 'ನೂರೊಂದು ವಿರಕ್ತರು' ವಚನಕಾರರ ವಚನಗಳನ್ನು ಸಂಕಲನ ರೂಪದಲ್ಲಿ ತಂದರು ಎಂಬುದು ಚರಿತ್ರೆಯಿಂದ ತಿಳಿಯುತ್ತದೆ.ಇಲ್ಲಿ ಬೆಳಕಿಗೆ ಬಂದ ವಚನ ಸಂಕಲನಗಳ ಹಿಂದೆ, ಶರಣರ ಸಾಂಸ್ಕೃತಿಕ ಚಿಂತನೆಗಳು ಒಂದು ಸಾಂಸ್ಥಿಕ ಚೌಕಟ್ಟಿಗೆ ಒಳಪಡಿಸುವ ಒತ್ತಡಗಳಿದ್ದವು. ವಚನ ಧರ್ಮವು ವೀರಶೈವ ಧರ್ಮವಾಗಿ ಪರಿವರ್ತನೆಯಾಯಿತು. ಷಟ್‌ಸ್ಥಲದ ಕಲ್ಪನೆಯಲ್ಲಿ ವಚನಗಳು ಬೇರೆ ಸ್ವರೂಪ ಪಡೆದವು. ವಚನಗಳು ಈ ಕಾಲದಲ್ಲಿ ಧರ್ಮದ ಸಾಂಸ್ಥಿಕ ತತ್ವಕ್ಕೆ ಇಟ್ಟಿಗೆಗಳಂತೆ ಬಳಕೆಯಾದವು. ಸಾಂಸ್ಥಿಕ ತತ್ವಕ್ಕೆ ಅಳವಡುವ ವಚನಗಳನ್ನು ವಚನಕಾರರ ಹೆಸರಿನಲ್ಲಿಯೇ ಬರೆದು ಸೇರಿಸಿದರು ಹೀಗೆ ಸೇರಿರಬಹುದಾದ ವಚನಗಳು ಮೂಲ ವಚನಗಳು ಮತ್ತು ವಚನಕಾರರ ಅಧ್ಯಯ್ಯನ ಮಾಡಲು ತೊಡಕ್ಕುಂಟು ಮಾಡುತ್ತಿವೆ". (ಪ್ರಾಸ್ತಾವಿಕ ಮಾತುಗಳು: ಅಮರೇಶ ನುಗಡೋಣಿ, ಬಸವಣ್ಣನ ವಚನಗಳು: ಸಾಂಸ್ಕೃತಿಕ ಮುಖಾಮುಖಿ)

ವಚನಗಳ ಸೇರ್ಪಡೆ ಒಂದು ರೀತಿಯ ಸಮಸ್ಯೆಯಾದರೆ, ಶರಣರು ಬಸವಣ್ಣನನ್ನು ಕಥಾನಕಗಳಲ್ಲಿ ಪವಾಡಪುರುಷನಾಗಿ, ಅವತಾರ ಪುರುಷನಾಗಿ ಚಿತ್ರಿಸುವುದರ ಮೂಲಕ ಸಮಾಜದಲ್ಲಿ ಅನೇಕ ಬಸವಣ್ಣರು ಕಾಣಿಸಿಕೊಂಡರು.ವಚನಗಳ ಮೂಲಕ ಮುಖಾಮುಖಿಯಾಗಬೇಕಿದ್ದ ಬಸವಣ್ಣ ಹಿನ್ನಲೆಗೆ ಸರಿದು ಕಥಾನಕಗಳ ಬಸವಣ್ಣ ಮುನ್ನಲೆಗೆ ಬಂದರು. ಆಧುನಿಕ ಕಾಲಘಟ್ಟದ ಚಿಂತಕರು ವಚನಕಾರ ಬಸವಣ್ಣ ಮತ್ತು ಕಥಾನಕಗಳ ಬಸವಣ್ಣನನ್ನು ಯಾವ ಕಾಲ ಸಂದರ್ಭಗಳಿಗೆ ಅನುಗುಣವಾಗಿ ನೋಡಬೇಕು ಅಥವಾ ಒಟ್ಟಿಗೆ ಬೆರಸಿ ನೋಡಬೇಕೆ ಎನ್ನುವ ಗೊಂದಲ ಅಧ್ಯಯನಕ್ಕೆ ತೊಡಕಾಗಿರುವುದು ನಿಜ ಸಂಗತಿಯಾಗಿದೆ. ಜನಸಾಮಾನ್ಯರಲ್ಲಿ ವಚನಗಳ ಬಸವಣ್ಣ, ಕಥಾನಕಗಳ ಬಸವಣ್ಣ ಎನ್ನುವ ವ್ಯತ್ಯಾಸವಿಲ್ಲದೆ ನಾಮರೂಪದ ಬಸವಣ್ಣನಾಗಿದ್ದಾನೆ.

ಬಸವಣ್ಣನ ನಾಯಕತ್ವದಲ್ಲಿ ಶರಣ ಚಳವಳಿ ಆರಂಭವಾಯಿತು. ಶರಣರು ಕಟ್ಟಬಯಸಿದ ಸಮಾಜದಲ್ಲಿ ಅನೇಕ ಸಮುದಾಯಗಳು ಸೇರಿಕೊಂಡವು ಸಮಾಜ ದೊಡ್ಡದಾಯಿತು. ಹೊರಗಿನ ಶತ್ರುಗಳು ಕಡಿಮೆಯಾದರೂ ಒಳಗಡೆಯೇ ಭಿನ್ನಾಭಿಪ್ರಾಯಗಳು ಹೆಚ್ಚಾದವು ಮತ್ತು ಶತ್ರುಗಳು ಸೃಷ್ಟಿಗೊಂಡರು. ಬಸವಣ್ಣ ಚಳವಳಿಯ ಆರಂಭದಲ್ಲಿ ಹೊರಗಿನವರೊಂದಿಗೆ ಹೋರಾಡಿದಷ್ಟೆ ಒಳಶತ್ರುಗಳ ಬಗ್ಗೆಯೂ ಹೋರಾಡಬೇಕಾಗಿ ಬಂತು. ತನ್ನ ಬೆಂಬಲಿಗರಿಗೆ ಉಪದೇಶ ಮಾಡುವ ಹಂತಕ್ಕೆ ಬಂದದು ವಿರ್ಪಯಾಸವೇ ಸರಿ. ಈ ಎಲ್ಲಾ ವಿಚಾರಗಳಿಗೆ ಬಸವಣ್ಣ ಕುಗ್ಗಿದಂತೆ ಕಾಣುವುದಿಲ್ಲ; ಬದಲಾಗಿ ಉತ್ಸಾಹದಿಂದಲೇ ಚಳವಳಿಯನ್ನು ಮುನ್ನಡೆಸುತ್ತಾನೆ. ಸಾಹಿತ್ಯದ ರಚನೆ ಒಂದು ವರ್ಗದವರಿಗೆ ಮೀಸಲಾಗಿದ್ದ ಕಾಲದಲ್ಲಿ ಸಮಾಜದ ಎಲ್ಲಾ ಸ್ತರಗಳ ಜನರು ವಚನ ಬರೆದಿದ್ದು ಅಚ್ಚರಿಯನ್ನುಂಟು ಮಾಡಿತು. "ಹನ್ನೆರಡನೆಯ ಶತಮಾನದ ವಚನಕಾರರ ಚಳವಳಿಯ ಬಗ್ಗೆ ಪ್ರಸ್ತಾಪ ಮಾಡುವ ವಿವರಿಸಲು ಪ್ರಯತ್ನಪಡುವ ಎಲ್ಲ ಬರವಣಿಗೆಗಳು ಬಸವಣ್ಣನನ್ನು ನಾಯಕನನ್ನಾಗಿ ಮಾಡಿಕೊಂಡ

ಕಾವ್ಯ ಪುರಾಣಗಳು ವಚನ ಚಳವಳಿಯ ವಕ್ತಾರನೆಂದು ವಿವರಿಸುವುದು ಕೇವಲ ಆ ವ್ಯಕ್ತಿಯ ಮೇಲಕ್ಕೇರಿಸಬೇಕೆಂಬ ಆಶಯಗಳನ್ನು ಮಾತ್ರ ಒಳಗೊಂಡಿದೆ ಎಂದು ಭಾವಿಸಬೇಕಿಲ್ಲ ಅನೇಕ ಕಡೆಗಳಲ್ಲಿ ಇವು ಬಸವಣ್ಣನ ವ್ಯಕ್ತಿತ್ವವನ್ನು ವೈಭವೀಕರಿಸುವುದು ಎನ್ನುವ ಮಾತನ್ನು ನಿರಾಕರಿಸಲಾಗುವುದಿಲ್ಲ. ಆದರೂ ಸಮಾಜದ ಹೊಸರೂಪಗಳಿಗೆ ಅತ್ಯಂತ ಪ್ರಮುಖ ಅಲೋಚನಾ ಕ್ರಮದ ಸ್ವರೂಪ ಹಾಗೂ ಕ್ರಿಯಾತ್ಮಕ ನೆಲೆಯ ಧಾತುಗಳನ್ನು ಇವನು ಒದಗಿಸಿದ ಎನ್ನುವ ಮಾತುಗಳನ್ನು ಒಪ್ಪಬೇಕಾಗುತ್ತದೆ" (ಬಸವರಾಜ ಕಲ್ಗುಡಿ: ಅನುಭಾವ ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಪು.206)

ಹನ್ನೆರಡನೆಯ ಶತಮಾನದಲ್ಲಿ ದಲಿತರ ಕುರಿತು ವಿಚಾರ ಮಾಡಿದ್ದು ಮಹತ್ವದ ವಿಚಾರ, ದಲಿತರನ್ನು ಗೌರವಿಸುವುದೆಂದರೆ ಪಟ್ಟಾಭದ್ರರನ್ನು ಎದುರುಹಾಕಿಕೊಂಡಂತೆ. ಈ ಕಾರಣಕ್ಕೆ ಬಸವಣ್ಣ ತಾನು ಬ್ರಾಹ್ಮಣನೆಂದು ಗುರುತಿಸಿಕೊಳ್ಳಲು ಹಿಂಜರಿದಿರಬೇಕು "ಆನು ಹಾರುವನೆಂದಡೆ ಕೂಡಲ ಸಂಗಮ ನಗುವನಯ್ಯಾ" ಎಂಬ ಮಾತನ್ನು ಗಮನಿಸಬಹುದು.

**"ಏನಯ್ಯಾ ವಿಪ್ರರು ನುಡಿದಂತೆ ನಡೆಯರು ಇದೆಂತಯ್ಯಾ**

**ತಮಗೊಂದು ಬಟ್ಟೆ,ಶಾಸ್ತ್ರಕ್ಕೊಂದು ಬಟ್ಟೆ"** – ಹೀಗೆ ಜಾತಿ ವ್ಯವಸ್ಥೆಯ ನಿವಾರಣೆಗೆ ಬಸವಣ್ಣ ವ್ಯಕ್ತಮಾಡುವ ಪ್ರತಿಕ್ರಿಯೆ ಮಹತ್ವರವಾದುದು. ಜಾತಿ ವ್ಯವಸ್ಥೆಗೆ ವರ್ಣವ್ಯವಸ್ಥೆ ಆಧಾರವಾದುದು.ಈ ವರ್ಣಗಳು ಹೇಗೆ ಹುಟ್ಟಿದವು ಎಂಬುದನ್ನು ವಿವರಿಸಲಾಗಿದೆ.

**"ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ**

**ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ**

**ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ..."** – ಜಾತಿಗೂ ಮತ್ತು ವೃತ್ತಿಗೂ ಸಂಬಂಧವಿರಬಾರದೆಂದು ವಿವರಿಸಿದ್ದರೂ ಮುಂದೆ ಆ ವೃತ್ತಿಗಳೇ ಜಾತಿಗಳಾಗಿ ಪರಿವರ್ತಿತವಾದ ಸಂಗತಿಯನ್ನು ಕಾಣಬಹುದು. ಕರ್ಣದಲ್ಲಿ ಜನಿಸಿದವರುಂಟೇ ಜಗದೋಳ್ ಎಂದಿರುವುದು ಎಲ್ಲರಿಗೂ ಹುಟ್ಟುವ ಜಾಗ ಒಂದೆ, ಅದರಲ್ಲಿ ಮೇಲು ಕೀಳು ಎಂದೆಣಿಸಬಾರದು ಎಂಬುದು ಬಸವಣ್ಣನವರ ಅಭಿಮತವಾಗಿದೆ. ಬಸವಣ್ಣನವರ ವಚನ ವೃತ್ತಿಗೂ ಜಾತಿಗೂ ಸಂಬಂಧ ಕಲ್ಪಿಸುತ್ತದೆ,

**"ಕೊಲ್ಲುವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ**

**ಕುಲವೇನೋ ಆವದಿರ ಕುಲವೇನೋ**

**ಸಕಲ ಜೀವಾತ್ಮರಿಗೆ ಲೇಸನೆ ಬಯಸುವ**

**ನಮ್ಮ ಕೂಡಲ ಸಂಗನ ಶರಣರೇ ಕುಲಜರು"**–

ಹುಟ್ಟಿನ ಆಧಾರದ ಮೇಲೆ ನಿರ್ಧಾರವಾಗುತ್ತಿದ್ದ ಜಾತಿ ವ್ಯವಸ್ಥೆಗೆ ಹೊಸ ವ್ಯಾಖ್ಯಾನ ನೀಡಿದವರು ಬಸವಣ್ಣ. ಭಿನ್ನ ವಿಚಾರಧಾರೆಗಳಿಂದ ಜೀವಂತವಾಗಿದ್ದ ವೀರಶೈವ ಧರ್ಮ ಇಂದು ಜಾತೀಯತೆಯನ್ನು ತಾತ್ವೀಕವಾಗಿ ವಿರೋಧಿಸಿದರೂ ಅನುಷ್ಠಾನದಲ್ಲಿ ಅದು ಒಂದು ಮತಧರ್ಮವಾಗಿ ಬೆಳೆದುಬಿಟ್ಟಿದೆ.

ವಚನಕಾರರು ಪ್ರತಿಪಾಧಿಸಿದ ಸಾಮಾಜಿಕ ಮೌಲ್ಯಗಳನ್ನು ಅಲ್ಲಗಳೆಯಲಾರದು. ಪರ್ಯಾಯ ಸಮಾಜ ಸೃಷ್ಟಿಸಬೇಕಾದರೆ ಕೇವಲ ಮೌಲ್ಯಗಳ ಮಾತನಾಡಿದರೆ ಸಾಲದು ಅವುಗಳ ಆಚರಣೆಗೆ ತರಲು ಪ್ರಭುತ್ವದ ನೆರವು ಬೇಕಾಗುತ್ತದೆ. ಇದು ವಾಸ್ತವತೆಯಿಂದ ಕೂಡಿದೆ. ಬಸವಣ್ಣನವರು ತಮ್ಮ ಕಾಲದ ಸಾಮಾಜಿಕ ಸಾಂಸ್ಕೃತಿಕ

ವ್ಯವಸ್ಥೆಯನ್ನು ಬದಲಾಯಿಸಬೇಕು ಎಂದು ಬಯಸಿದ್ದರು. ವಿಕೇಂದ್ರಿಕೃತ ಗ್ರಾಮ ಸ್ವರಾಜ್ಯದ ಸಿದ್ಧಾಂತವನ್ನು ಅಪೇಕ್ಷಿಸಿದರು.

"ಬಸವಣ್ಣನಲ್ಲಿ ರಾಜಸತ್ತೆಗೆ ಪರ್ಯಾಯವಾದ ಪ್ರಭುತ್ವ ಪರಿಕಲ್ಪನೆ ಇರುವುದು ನಮಗೆ ಕಂಡುಬರುವುದಿಲ್ಲ. ...ಬಸವಣ್ಣ ರಾಜಸತ್ತೆಗೆ ಪರ್ಯಾಯವನ್ನು ಹುಡುಕಲಿಲ್ಲ ಹಾಗೇಯೇ ರಾಜಸತ್ತೆಯ ವ್ಯವಸ್ಥೆಯಲ್ಲಿಯೇ ತಾನು ಬಯಸಿದ ಕ್ರಾಂತಿ ಸಾಧ್ಯ ಎಂಬುದನ್ನು ತೋರಿಸಲು ಅವರಿಂದಾಗಲಿಲ್ಲ" (ಬಸವಣ್ಣನವರ ಜೀವನದ ಪ್ರಮುಖ ಘಟ್ಟಗಳು–ಎಂ.ಎಂ. ಕಲ್ಬುರ್ಗಿ)

ಬಸವಣ್ಣನವರು ಪ್ರತಿಪಾಧಿಸಿದ ಸಮಾನತೆಯ ಶರಣ ಸಮಾಜವನ್ನು ಭದ್ರವಾಗಿ ನೆಲೆಯೂರುವಂತೆ ಮಾಡಲು ಪೂರಕವಾದ ಪ್ರಭುತ್ವ ವ್ಯವಸ್ಥೆಯನ್ನು ಸೂಚಿಸದೆ ಇರುವುದು ಅವರ ಚಿಂತನೆಗೆ ಒಂದು ಭೌತಿಕ ತಳಹದಿ ಇಲ್ಲದಂತೆ ಮಾಡುತ್ತದೆ. ಇದಕ್ಕೆ ವ್ಯತಿರಿಕ್ತವಾದ ವರ್ಣವ್ಯವಸ್ಥೆಗೆ ತಾನು ಪ್ರತಿಪಾಧಿಸಿದ ಸಾಮಾಜಿಕ ವರ್ಣಬೇಧ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ರಾಜಸತ್ತೆಯಂತಹ ಅಧಿಕಾರ ರಾಜಕೀಯ ವ್ಯವಸ್ಥೆಯನ್ನು ರೂಪಿಸಿದ್ದನ್ನು ನಾವು ಕಾಣುತ್ತೇವೆ. ಸ್ವತಃ ತಾನೇ ಮಂತ್ರಿಯಾಗಿದ್ದ ಬಸವಣ್ಣನಿಗೆ ತಾನು ನಿರ್ಮಿಸಿದ ಅಥವಾ ಬಯಸಿದ ಸಮಾಜ ನಿರ್ಮಾಣ ಮಾಡಲು ಅದಕ್ಕೆ ಪೂರಕವಾದ ಅಧಿಕಾರ ಅಥವಾ ರಾಜಕೀಯ ವ್ಯವಸ್ಥೆಯ ಅಗತ್ಯ ಏಕೆ ಕಾಣಿಸಲಿಲ್ಲ ಈ ಪ್ರಶ್ನೆಗೆ ಉತ್ತರಿಸುವುದು ಕಷ್ಟ.

ಸಮಾಜ ಮತ್ತು ಇತರ ಸವಾಲುಗಳು ಬಸವಣ್ಣನನ್ನು ಕಾಡಿದ ಹಾಗೆ ಹೆಣ್ಣಿನ ವಿಚಾರ ಮತ್ತು ಸಮಸ್ಯೆ ಕಾಡಲಿಲ್ಲ. ಆತನ ನಿರೀಕ್ಷೆಯಲ್ಲಿ ಸಮಾಜದ ಸ್ತ್ರೀ ಸಮಾನತೆಯೂ ಒಂದು ಮುಖ್ಯ ಅಂಶ ಎಂದು ಹೇಳಲಾಗಿತ್ತಿದೆಯಾದರೂ, ಸ್ತ್ರೀಸಮಾನತೆ ಅಥವಾ ಹೆಣ್ಣಿನ ಪರಿಕಲ್ಪನೆ ಅವರ ವ್ಯಕ್ತಿತ್ವದ ಒಂದು ಭಾಗವಾಗಿತ್ತು ಎನ್ನುವುದಕ್ಕೆ ಅವರ ವಚನಗಳಲ್ಲಿ ಆಧಾರಗಳಿಲ್ಲ. ಸಮಸಮಾಜದ ಚಳವಳಿಯಲ್ಲಿ ಮುಂದಾಳಾಗಿದ್ದ ಬಸವಣ್ಣನ ಎದುರಿಗೆ ಜಾತಿವ್ಯವಸ್ಥೆಯಂತಹ ಪೆಡಂಭೂತ ಎದುರಾಗಿದ್ದರಿಂದ ಹೆಣ್ಣಿನ ಸಮಸ್ಯೆ ಗೌಣವಾಗಿರಬೇಕು ಎನ್ನುವ ಅಂಶವೆ ಪರೋಕ್ಷವಾಗಿ ಹೆಣ್ಣನ್ನ ಕುರಿತ ದೃಷ್ಟಿಕೋನ ಕಾಣಿಸುತ್ತದೆ. ದಲಿತರ ಸಮಸ್ಯೆಗಳಂತೆ ಹೆಣ್ಣಿನ ಸಮಸ್ಯೆಗಳಿದ್ದರೂ ಬಸವಣ್ಣ ಮತ್ತು ವಚನಕಾರರು ಎದುರಿಸಲು ಸಿದ್ಧರಿರಲಿಲ್ಲ. ಸ್ಥೂಲವಾಗಿ ಹೆಣ್ಣಿನ ಬಗೆಗೆ ಬಸವಣ್ಣನ ನಿಲುವುಗಳನ್ನು ಎರಡು ಮಾದರಿಗಳಲ್ಲಿ ಗುರುತಿಸಬಹುದು. ಒಂದು ಮಾಯೆ ಎನ್ನುವುದು ಇನ್ನೊಂದು ಅನುಕೂಲ ಸತಿ ಎನ್ನುವುದು. ಆ ಕಾಲದ ಸಾಮಾಜಿಕ ಒತ್ತಡಗಳನ್ನು ನಿರ್ಬಂಧಗಳನ್ನು ಮೀರುವುದು ಬಸವಣ್ಣನಿಗೆ ಸಾಧ್ಯವಾಗಲಿಲ್ಲ ಎನ್ನುವುದು. ಸಾಂಸ್ಕೃತಿಕ ಮುಖಾಮುಖಿಯಲ್ಲಿ ನಾವು ಕಂಡುಕೊಳ್ಳುವ ಸತ್ಯಗಳಿವೆ. ಅವು ಅಪ್ರಿಯವಾದರೂ ಸ್ವೀಕರಿಸಲು ನಾವು ಸಿದ್ಧರಿರಬೇಕು.

**ಸಮಾರೋಪ**

ಬಸವಣ್ಣ ತನ್ನ ಅಂತರಂಗದ ಜೊತೆ ಮಾತನಾಡಿದಷ್ಟು ಜಗತ್ತಿನ ಯಾವ ಅನುಭಾವಿಯೂ ಮಾತನಾಡಿಲ್ಲವೆಂದು ತೋರುತ್ತದೆ. ಇದರ ತಾತ್ವಿಕ ಸ್ವರೂಪವನ್ನು ಕುರಿತು ಅಧ್ಯಯನಗಳು ನಡೆಯಬೇಕಿದೆ. ಕಾಲಗ್ರಹಿಕೆಯ ಎಚ್ಚರದೊಂದಿಗೆ ಬಸವಣ್ಣನ ವಚನಗಳ ಅನುಸಂಧಾನದ ಮೂಲಕ ನೆಲೆಗಳ ಮೇಲೆ ಬೆಳಕು ಚೆಲ್ಲಬಹುದಾಗಿದೆ.

ಆಧುನಿಕ ಕಾಲದ ಸಾಧ್ಯಾಸಾಧ್ಯತೆಗಳನ್ನ ಅಂದಿನ ಕಾಲದಲ್ಲಿ ಹುಡುಕುವ ಹಠಮಾರಿತನದ ಅಭಿಪ್ರಾಯಗಳು ಸಮಕಾಲೀನ ಸತ್ಯಗಳಿಗೆ ಅಪಚಾರ ಎಸಗುವಂತಿರಬಾರದು.

**ಪರಾಮರ್ಶನ ಸಾಹಿತ್ಯ**


1) ಬಸವಣ್ಣನ ವಚನಗಳ ಸಾಂಸ್ಕೃತಿಕ ಮುಖಾಮುಖಿ(ಸಂ) ಅಮರೇಶ ನುಗಡೋಣಿ, ಪ್ರಸರಾಂಗ ಹಂಪಿ ವಿ.ವಿ–2018
2) ಬಸವತತ್ವ ಸಾಮಾಜಿಕ ಬದಲಾವಣೆ: (ಸಂ)ಮಹೇಶ ತಿಪ್ಪಶೆಟ್ಟಿ, ಪ್ರಸರಾಂಗ ಹಂಪಿ ವಿ.ವಿ.–2014
3) ವಚನ ಸಾಹಿತ್ಯ ಸಂಗ್ರಹ: (ಸಂ) ಸಂ.ಶಿ ಭೂಸನೂರ ಮಠ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು–2006
4) ಬಸವಣ್ಣನವರ ವಚನ ಸಂಪುಟ:(ಸಂ) ಎಂ.ಎಂ. ಕಲ್ಬುರ್ಗಿ, ಕರ್ನಾಟಕ ಸರ್ಕಾರ, ಬೆಂಗಳೂರು–1993
5) ಬಸವಣ್ಣನವರ ವಚನಗಳು (ಸಂ) ಎಲ್. ಬಸವರಾಜು, ಗೀತಾ ಬುಕ್ ಹೌಸ್–1996
6) ಅನುಭಾವ ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ: ಬಸವರಾಜ ಕಲ್ಗುಡಿ, ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು–2006


❖❖❖

**ರಾಜಗೆ ಆಸೆಯ ಹುಟ್ಟಿಸಿತಂದು ನವಿರು**
**ಉಡುಗೆಯಾ ಮಾತು**
**ಧರಿಸಿದೆನೆಂದರೆ ರೂಪವೆ ಬದಲು**
**ಮದನನಿಗಿಂತಲೂ ಮಿಗಿಲು**

# ಕನಕದಾಸರ ಕೀರ್ತನೆಗಳಲ್ಲಿ ವೈಚಾರಿಕ ಪ್ರಜ್ಞೆ

**ಡಾ. ಅಶ್ವಿನಿ ಆರ್.ಎಸ್.**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು–570023

ಕನ್ನಡ ಸಾಂಸ್ಕೃತಿಕ ಪರಂಪರೆಯಲ್ಲಿ ಅಚ್ಚಳಿಯದ ಛಾಪು ಮೂಡಿಸಿದ ಕನಕದಾಸರು ದಾಸಪರಂಪರೆಯಲ್ಲಿ ವಿಶಿಷ್ಟರಾದವರು. ಇದಕ್ಕೆ ಅವರ ಹಿನ್ನೆಲೆಯೂ ಕೂಡ ಕಾರಣವಾಗಿದೆ. ಕೀರ್ತನಕಾರ, ಸಂತ, ಜ್ಞಾನಿ, ದಾರ್ಶನಿಕ, ಕವಿಯಾಗಿ ಅವರು ನೀಡಿದ ಕೊಡುಗೆ ಅಪಾರ. ಅವರ ಸಾಹಿತ್ಯದಲ್ಲಿ ಭಕ್ತಿಯ ಪರವಶತೆ ಇದೆ, ಸಮಾಜ ತಿದ್ದುವ ಉತ್ಕಟತೆ ಇದೆ, ಆಧ್ಯಾತ್ಮಿಕತೆಯ ಅನುಭವವಿದೆ, ಕಾವ್ಯಗುಣದ ರಸಾಭಿವ್ಯಕ್ತಿ ಇದೆ. ಬದುಕಿನ ಜೊತೆ ಭವವನ್ನು ಹಿಂಗಿಸಿಕೊಂಡವರು ಕನಕ. ತಮ್ಮ ಸರಳ ಸಾಹಿತ್ಯದಿಂದ ಜನಮಾನಸಕ್ಕೆ ಹತ್ತಿರವಾದ ಕನಕದಾಸರು ಕನ್ನಡಿಗರ ಮನೆ–ಮನಗಳಲ್ಲಿ ರಾರಾಜಿಸಿದ ದಾಸಸಾಹಿತ್ಯದ ಮಹಾಬೆಳಕು.

16ನೇ ಶತಮಾನದ ಪೂರ್ವಾರ್ಧದಲ್ಲಿ ಜನಿಸಿದ ಕನಕದಾಸರು ಮುಂದೆ ತಮ್ಮ ತಂದೆಯಂತೆಯೇ ಮಾಂಡಲಿಕರಾದರು. ಅರಸರ ಪರವಾದ ಯುದ್ಧವೊಂದರಲ್ಲಿ ಮಾರಣಾಂತಿಕ ಹೊಡೆತದಿಂದ ಆಶ್ಚರ್ಯಕರವಾಗಿ ಬದುಕುಳಿದುದರಿಂದ ತಮ್ಮ ಪದವಿಯನ್ನು ತ್ಯಜಿಸಿ ಆಧ್ಯಾತ್ಮಿಕಲೋಕವನ್ನು ಪ್ರವೇಶಿಸಿದರು. ಕಾಗಿನೆಲೆಯ ಆದಿಕೇಶವ ಅಂಕಿತದಲ್ಲಿ ಹಲವು ಕೀರ್ತನೆಗಳನ್ನು ರಚಿಸಿದರು. ಮೋಹನತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತ್ರೆ, ಹರಿಭಕ್ತಿಸಾರ ಮುಂತಾದ ಕಾವ್ಯಗಳೊಂದಿಗೆ ಮುಂಡಿಗೆಗಳು ಎಂಬ ಹೊಸ ಸಾಹಿತ್ಯ ಪ್ರಕಾರವನ್ನು ಪರಿಚಯಿಸಿದರು. ವ್ಯಾಸರಾಯರು, ವಾದಿರಾಜರು, ಪುರಂದರದಾಸರು ಇವರ ಸಮಕಾಲೀನರು. ಅದರಲ್ಲೂ ಪುರಂದರ–ಕನಕದಾಸರು ದಾಸ ಶ್ರೇಷ್ಠದ್ವಯರು ಇವರಿಬ್ಬರನ್ನು ದಾಸಸಾಹಿತ್ಯದ ಅಶ್ವಿನಿ ದೇವತೆಗಳು, ದಾಸ ಸಾಹಿತ್ಯದ ಎರಡು ನಕ್ಷತ್ರಗಳೆಂದು, ಇವರ ಕಾಲವನ್ನು ದಾಸಸಾಹಿತ್ಯದ ಸುವರ್ಣಯುಗವೆಂದು ಕರೆಯಲಾಗಿದೆ. ದಾಸಸಾಹಿತ್ಯವನ್ನು ಸರಳಗೊಳಿಸಿ ಆ ಮೂಲಕ ಕನ್ನಡ ಸಾಹಿತ್ಯಕ್ಕೆ ಹೊಸತನ್ನು ತಂದ 'ಹೊಸಗನ್ನಡ ಸಾಹಿತ್ಯದ ಕೋಗಿಲೆ' ಎಂದೂ, ದಾಸಸಾಹಿತ್ಯ ಬನದ ಹಾಡುಹಕ್ಕಿ ಎಂತಲೂ ಕನಕರನ್ನು ಕರೆಯುವುದುಂಟು. ಶ್ರೀವ್ಯಾಸರಾಯರ ಪಟ್ಟ ಶಿಷ್ಯರಾಗಿ ಉಡುಪಿಯ ಶ್ರೀಕೃಷ್ಣನ ಅಪ್ಪಟ ಭಕ್ತನಾಗಿ ಅಪಾರ ಭಕ್ತಿ ಹೊಂದಿ ಜಾತಿ ಮತ ಧರ್ಮಗಳ ಭೇದ ಭಾವ, ಮೌಢ್ಯ, ಕಂದಾಚಾರಗಳ ಅನಿಷ್ಟಪದ್ಧತಿಗಳನ್ನು ಕಿತ್ತೆಸೆದು ಸಮಸಮಾಜದ ನಿರ್ಮಾಣಕ್ಕೆ ಕಟಿಬದ್ಧರಾದವರು. ತಳಸಮುದಾಯದ ತಲ್ಲಣಗಳಿಗೆ ಧ್ವನಿಕೊಟ್ಟ ಕನಕದಾಸರ ಸಾಹಿತ್ಯವು ದಾಸಪರಂಪರೆಯಲ್ಲಿಯೇ ಅನನ್ಯವಾದುದು.

ಅಧ್ಯಾತ್ಮದ ಹಾದಿಯಲ್ಲಿ ಎಲ್ಲರೂ ಸಮಾನರು ಎನ್ನುವ ಭಾವವನ್ನು ಬಿತ್ತುತ್ತಾ, ಮೇಲು–ಕೀಳು, ಬಡವ–ಬಲ್ಲಿದನೆಂಬ ತಾರತಮ್ಯ ಹೋಗಲಾಡಿಸಬೇಕೆಂಬ ಆಶಯವು ಅವರ ಕೀರ್ತನೆಗಳಲ್ಲಿ ವ್ಯಕ್ತವಾಗಿದೆ. ಸಮಾಜಮುಖಿ ಚಿಂತನೆಗಳನ್ನು ಹೇಳುತ್ತಲೇ ಆಧ್ಯಾತ್ಮಿಕತತ್ವ ಪ್ರತಿಪಾದನೆಗೂ ಅವರ ಕೀರ್ತನೆಗಳು ಒತ್ತು ನೀಡಿವೆ.

**ಎಲ್ಲಾರೂ ಮಾಡುವುದು ಹೊಟ್ಟೆಗಾಗಿ**
**ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ**
**ವೇದಶಾಸ್ತ್ರ ಪಂಚಾಂಗ ಓದಿಕೊಂಡು ಪರರಿಗೆ**
**ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ**
**ಬೆಲ್ಲದಂತೆ ಮಾತನಾಡಿ ಎಲ್ಲರನ್ನು ಮರಳುಮಾಡಿ**
**ಸುಳ್ಳು ಬೊಗಳಿ ತಿಂಬುವುದು....**

'ಉದರ ನಿಮಿತ್ತಂ ಬಹುಕೃತ ವೇಷಂ' ಎಂಬಂತೆ ವಿವಿಧ ವೃತ್ತಿಗಳ ಹಿಂದಿನ ವಾಸ್ತವವನ್ನು ಸ್ಥಿತಪ್ರಜ್ಞೆಯಿಂದ ವರ್ಣಿಸುವುದನ್ನು ಕಾಣಬಹುದು. ಕೊನೆಗೆ ಆಧ್ಯಾತ್ಮದ ಊಟವನ್ನು ಉಣಬಡಿಸುವ ಮೂಲಕ ಕಾಗಿನೆಲೆಯ ಆದಿಕೇಶವನ ಧ್ಯಾನದ ಮಹತ್ವವನ್ನು ತಿಳಿಸಿ, ಬದುಕಿನ ಮುಕ್ತಿಗೆ ಹೆದ್ದಾರಿಯನ್ನು ತೋರಿಸಿಕೊಟ್ಟದ್ದು ಹೊಟ್ಟೆಬಟ್ಟೆಯಂತೇ ಆತ್ಮದ ಹಸಿವು ಎಂಬುದನ್ನು ಪ್ರಸ್ತುತಪಡಿಸುತ್ತಾರೆ. ಕೇವಲ ಹೊಟ್ಟೆ ತುಂಬಿಸುವ ಡಾಂಭಿಕ ನೆಲೆಯನ್ನು ನಿರಾಕರಿಸುತ್ತ, ಸಂಪತ್ತಿನ ಕ್ರೋಢೀಕರಣದ ಜೀವನ ಸಂಸ್ಕೃತಿಯನ್ನು ಬಿಟ್ಟು ಲೋಕದ ವಾಸ್ತವವನ್ನು ಮೀರಿ ಬೆಳೆಯಬೇಕೆಂಬ ನೀತಿಯೂ ಇಲ್ಲಿದೆ. ಕನಕದಾಸರ ಈ ಕೀರ್ತನೆ ಹಸಿವಿನ ಅನಿವಾರ್ಯತೆಗಿಂತ ಮಿಗಿಲಾದ ಜೀವನದ ತಾತ್ವಿಕತೆಯನ್ನು ಮಂಡಿಸುತ್ತದೆ.

ಎಲ್ಲ ದಾಸರಂತೆಯೇ ಐಹಿಕ ಸುಖಭೋಗ ಅಶಾಶ್ವತ ಎಂಬುದನ್ನು ಪ್ರಸ್ತುತ ಪಡಿಸುವ ಸಾಲುಗಳನ್ನು ಕನಕದಾಸರೂ ಹೇಳುತ್ತಾರೆ. ಮನುಷ್ಯ ನೆಮ್ಮದಿಯಿಂದ ಬದುಕಬೇಕಾದರೆ ನಂಬಿಕೆ ಅಗತ್ಯ ಎನ್ನುವುದು ಕನಕದಾಸರ ವೈಚಾರಿಕತೆಯೂ ಹೌದು. ಬದುಕಿಗೆ ಅಂಧವಿಶ್ವಾಸ ಅಗತ್ಯವಿಲ್ಲದಿದ್ದರೂ ಆತ್ಮವಿಶ್ವಾಸ ಅನಿವಾರ್ಯ. ಅಂತಹ ಆತ್ಮವಿಶ್ವಾಸ ಎಲ್ಲಿಂದ ಬರುತ್ತದೆ? ನಂಬಿಕೆಯಿಂದ ಎಂಬುದನ್ನು ಕನಕರು ತೋರಿಸುತ್ತಾರೆ.

**"ತಲ್ಲಣಿಸದಿರು ಕಂಡ್ಯ ತಾಳು ಮನವೆ**
**ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ"**

ಎಂದು ಹಾಡುತ್ತಾರೆ. ದಿನದಿನದ ಬದುಕಿನ ತಲ್ಲಣಗಳಿಂದ ಕುಗ್ಗಿಹೋಗುವ ಮನುಷ್ಯನಿಗೆ ಕಾಯುವ ದೈವ ಇರುವಾಗ ನಂಬಿಕೆಯೊಂದಿಗೆ ಕಾರ್ಯನಿರತರಾಗಬೇಕು ಎಂಬ ತತ್ತ್ವಸಾರವನ್ನೂ ಈ ಸಾಲುಗಳು ಪ್ರಸ್ತುತಪಡಿಸುತ್ತವೆ.

**"ತನು ನಿನ್ನದು ಜೀವನ ನಿನ್ನದು**
**ಅನುದಿನದಲಿ ಬಾಹೊ ಸುಖದುಃಖ ನಿನ್ನದಯ್ಯ**
**ಮಾಯಾ ಪಾಶದ ಬಲೆಯೊಳಗೆ ಸಿಲುಕಿರುವ**
**ಕಾಯ ಪಂಚೇಂದ್ರಿಯಂಗಳು ನಿನ್ನವು..."** ಎಂದು ಹೇಳುವಲ್ಲಿಯೂ ಮೇಲಿನದೇ ಭಾವವಿದೆ.

ಸಮಾಜದ ಕಟುವಿಮರ್ಶೆಗಳಷ್ಟೇ ಅಲ್ಲದೆ ಅನನ್ಯ ಕೃಷ್ಣಭಕ್ತಿ, ವೈರಾಗ್ಯ ಇವರ ಕೀರ್ತನೆಗಳ ತುಂಬೆಲ್ಲಾ ಆವರಿಸಿವೆ. ಜೀವನದ ಜಂಜಾಟಗಳನ್ನು ನೀಗಿಕೊಂಡು ಪದುಮನಾಭನ ಪಾದಗಳಲ್ಲಿ ಸರ್ವವನ್ನು ಸಮರ್ಪಿಸುವ ಭಾವ ಮನಮುಟ್ಟುವಂತಿದೆ.

ಹುಟ್ಟನ್ನಾಧರಿಸಿದ ಭೇದವನ್ನು ಕನಕರು ನಿರಾಕರಿಸುತ್ತಾರೆ. "ಆತ್ಮ ಯಾವ ಕುಲ ಜೀವ ಯಾವ ಕುಲ, ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ" ಎಂದು ಪ್ರಶ್ನಿಸುತ್ತಾರೆ. ಕೆಸರಿನಲ್ಲಿ ಹುಟ್ಟಿದ ಕಮಲದ ಹೂವನ್ನು ವಿಷ್ಣುವಿನ ಆರಾಧನೆಗೆ ಬಳಸುತ್ತೇವೆ.

ಗೋವಿನ ದೇಹದಲ್ಲಿ ಉತ್ಪನ್ನವಾಗುವ ಹಾಲನ್ನು ಕುಲೀನರೂ ಸೇವಿಸುತ್ತಾರೆ. ಕಸ್ತೂರಿ ಮೃಗದ ದೇಹದಿಂದ ಬರುವ ಸುಗಂಧವನ್ನು ಕುಲೀನರು ಹಚ್ಚಿಕೊಳ್ಳುತ್ತಾರೆ. ಪಾರ್ವತಿಯ ಪತಿಯ ಕುಲವನ್ನು ಕೆದಕುವ ಕಾರ್ಯಕ್ಕೆ ಯಾರೂ ಹೋಗುವುದಿಲ್ಲ. ಹೀಗಾಗಿ ಗುಣ ಪ್ರಧಾನವೇ ಹೊರತು ಹುಟ್ಟು ಪ್ರಧಾನವಲ್ಲ. ಭೇದ ಭಾವ ಪ್ರಕೃತಿಯ ಯಾವ ಆಂಶಗಳಲ್ಲಿಯೂ ಇಲ್ಲವಾದ ಮೇಲೆ ಮನುಷ್ಯ ಮನುಷ್ಯರ ನಡುವೆ ಏಕೆ ಈ ಕುಲವ್ಯವಸ್ಥೆ ಎಂಬ ಚಿಂತನೆಯನ್ನು ಸಾರುವ ಸಮತಾಪ್ರಜ್ಞೆ ಇಲ್ಲಿದೆ. ಜಾತೀಯತೆಯ ಬಗೆಗಿನ ವೈಚಾರಿಕ ನಿಲುವುಗಳನ್ನು ಹೊಂದಿರುವ ಮಹತ್ವಪೂರ್ಣ ಕೀರ್ತನೆಗಳು ಕನಕದಾಸರಲ್ಲಿ ಹೇರಳವಾಗಿವೆ. ಜಾತಿ–ಕುಲ ಮಾನವನಿರ್ಮಿತ. ಇವುಗಳನ್ನು ಮೀರುವುದೇ ಉದಾತ್ತತೆ. ಅದೇ ನಿಜವಾದ ಮಾನವಧರ್ಮ ಎಂಬ ಮನೋಭಾವ ನಿರೂಪಿತಗೊಂಡಿದೆ.

**ಸಾಧು ಸಜ್ಜನ ಸತ್ಯಗುಣಕಿದಿರುಂಟೆ**
**ಸತ್ಯವ್ರತವುಳ್ಳವಗೆ ಮೃತ್ಯುವಿನ ಭಯವುಂಟೆ**
**ಚಿತ್ತಶುದ್ಧಿಯುಳ್ಳವಗೆ ಮತ್ತೆ ಜನ್ಮವುಂಟೆ**
**ವಿತ್ತವನರಸುವಂಗೆ ಮುಕ್ತಿಯೆಂಬುದುಂಟೆ**
**ಉತ್ತಮರ ಸಂಗದಿಂದ ಅಧಿಕಧರ್ಮವುಂಟೆ?**

ಸತ್ಯವಂತರ ಸಖ್ಯ, ಗುರುಹಿರಿಯರಲ್ಲಿ ಗೌರವ, ಪರಹಿತಚಿಂತನೆ, ಹೆತ್ತವರಿಗೆ ಪ್ರತಿಮಾತನಾಡದಿರುವುದು, ಸಂಪತ್ತಿನ ಸದ್ವಿನಿಯೋಗ, ಸ್ನೇಹಜೀವನಕ್ಕೆ ಭಂಗವಾಗದಂತೆ ನಡೆಯುವುದು ಉತ್ತಮರ ಲಕ್ಷಣ, ಒಳ್ಳೆಯವರ ಗೆಳೆತನ ತೀರ್ಥಕ್ಕೆ ಸಮಾನ, ಸಂಪತ್ತು ಒಂದು ಕಡೆ ಕೇಂದ್ರೀಕೃತವಾಗದೆ ವಿತರಣೆಯಾಗಬೇಕೆನ್ನುವ ಆಶಯದ ಮಾತು, ಪ್ರಾಣಕ್ಕಿಂತ ಮಾನ ದೊಡ್ಡದು ಎಂಬ ನುಡಿ ಇಂತಹ ಒಂದೊಂದು ಮಾತೂ ಕೂಡ ಕನಕದಾಸರ ಅಧ್ಯಾತ್ಮ ತತ್ತ್ವವನ್ನು ಪ್ರತಿಪಾದಿಸುತ್ತವೆ.

**ಜಪವ ಮಾಡಿದರೇನು ತಪವ ಮಾಡಿದರೇನು**
**ವಿಪರೀತ ಕಪಟಗುಣಕಲುಷವಿದ್ದವರು**
**ನುಡಿನಡೆವ ಕಾಲದಲಿ ದಾನವ ಮಾಡದೆ ಇರಲು**
**ಅಡವಿಯೊಳು ಕೆರೆತುಂಬಿ ಬತ್ತಿದಂತೆ**

ಸದ್ಧರ್ಮದ ತತ್ವಗಳನ್ನು ಕಿಂಚಿತ್ತೂ ಅನುಷ್ಠಾನಕ್ಕೆ ತಾರದೆಯೇ ಕೇವಲ ಧರ್ಮಗುರುಗಳ ವೇಷಭೂಷಣಗಳನ್ನು ಧಾರಣ ಮಾಡಿ ಅವರ ದೈನಂದಿನ ಬಾಹ್ಯಾಚರಣೆಗಳನ್ನು ಅನುಕರಣೆ ಮಾಡುತ್ತ ನಾಟಕದ ಪಾತ್ರಧಾರಿಗಳಂತೆ ವರ್ತಿಸುವ ಜನರನ್ನು ಕನಕದಾಸರು ಸಾರಾಸಗಟಾಗಿ ಅಲ್ಲಗಳೆಯುತ್ತಾರೆ.

**ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ**
**ಬಯಲು ಆಲಯದೊಳಗೊ ಆಲಯ ಬಯಲೊಳಗೊ**
**ಬಯಲು ಆಲಯವೆರಡು ನಯನಗೊಳಗೊ**
**ಸವಿಯು ಸಕ್ಕರೆಯೊಳಗೊ**
**ಕುಸುಮದೊಳು ಗಂಧವೋ....**

ಮೊಗೆದಷ್ಟು ಅರ್ಥಸೊಗಸಿನಿಂದ ಕೂಡಿದ ಕೀರ್ತನೆ ಇದಾಗಿದೆ. ತತ್ವಮೀಮಾಂಸೆಯ ಪ್ರಕಾರ ಮಾಯೆ ಎಂದರೆ ಬದುಕಿನ ನಶ್ವರತೆ, ಕ್ಷಣಿಕತೆ,

ಮಿಂಚಿಮರೆಯಾಗುವ ಘಳಿಗೆ. ಮನುಷ್ಯನ ಜೀವವು ಆತ್ಮ, ಮನಸ್ಸು ಮತ್ತು ದೇಹದೊಳಗೆ ಬೆಸೆದುಕೊಂಡಿದೆ, ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸುತ್ತವೆ. ಆದರೆ ಇವು ಪರಸ್ಪರ ಹೊಂದಾಣಿಕೆಯಿಂದ ಕಾರ್ಯನಿರ್ವಹಿಸದಿದ್ದರೆ ಬದುಕೇ ಅಂಧಕಾರದಲ್ಲಿ ಮುಳುಗಬೇಕಾಗುತ್ತದೆ. ಹೀಗಾಗಿ ಆತ್ಮ, ಮನಸ್ಸು ಮತ್ತು ದೇಹದ ಸಮನ್ವಯತೆ ಅತ್ಯಗತ್ಯ ಎಂಬುದನ್ನು ಈ ಕೀರ್ತನೆ ವ್ಯಕ್ತಪಡಿಸಿದೆ. ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯ.. ಎಂಬ ಬಸವರ ವಚನ, ಜಗವ ಸುತ್ತಿಹುದೆಲ್ಲ ನಿನ್ನ ಮಾಯೆಯಯ್ಯ.. ಎನ್ನುವ ಪುರಂದರದಾಸರ ಸಾಲುಗಳು, ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ... ಮನದ ಮುಂದಣ ಆಸೆಯೇ ಮಾಯೆ ಕಾಣಾ... ಅಲ್ಲಮರ ವಚನ – ಇವೆಲ್ಲ ಮಾಯೆಯ ಕುರಿತು ಹೆಚ್ಚುಕಡಿಮೆ ಒಂದೇ ನಿಲುವನ್ನು ವ್ಯಕ್ತಪಡಿಸುತ್ತವೆ.

ಕನಕದಾಸರು ಜಾತಿ, ಮತ, ಕುಲ ಪಿಡುಗುಗಳ ಬಗ್ಗೆ ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ತಮ್ಮ ಕೀರ್ತನೆಗಳ ಮೂಲಕ ತಿಳಿಸಿ ಸಾಮಾಜಿಕ ಕ್ರಾಂತಿಯನ್ನೇ ಮಾಡಿದ ಸಂತವರೇಣ್ಯ. ಬದುಕನ್ನೇ ಹೋರಾಟವಾಗಿಸಿ ಸಮಾಜ ಸುಧಾರಣೆಗಾಗಿ ತಮ್ಮ ಸ್ವಾರ್ಥವನ್ನೂ ಬದಿಗಿಟ್ಟು ಮಾನವಕಲ್ಯಾಣವನ್ನು ಬಯಸಿದ ಸಂತಶ್ರೇಷ್ಠ. ಇಂದಿನ ಯುವಸಮುದಾಯ ಅವರ ಚಿಂತನೆ, ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕಿದೆ.

**ಪರಾಮರ್ಶನ ಸಾಹಿತ್ಯ**

1. ಕೀರ್ತನಕಾರರು, ಎಚ್.ಎಸ್. ವೆಂಕಟೇಶಮೂರ್ತಿ, ಸಪ್ನ ಬುಕ್ ಹೌಸ್, ಬೆಂಗಳೂರು.
2. ಹರಿಭಕ್ತ ಕನಕದಾಸರ ಪದಗಳು, ಜನಪದ ಪ್ರಕಾಶನ, ಬೆಂಗಳೂರು.
3. ದಾಸ ಸಾಹಿತ್ಯದರ್ಶನ, ಕೃಷ್ಣಸ್ವಾಮಿ ಅಯ್ಯಂಗಾರ್(ಎಚ್ಚೆಸ್ಕೆ), ಮಂಗಳಭಾರತಿ, ಮೈಸೂರು.
4. ಕನ್ನಡ ಸಾಹಿತ್ಯ ಪರಿಚಯ, ಹೀ.ಚಿ.ಶಾಂತವೀರಯ್ಯ, ಚೇತನ್ ಬುಕ್ಸ್, ಬೆಂಗಳೂರು.
5. ಕನಕದಾಸರಕೃತಿಗಳು :ಜಾನಪದೀಯ ಅಧ್ಯಯನ, ಡಾ. ಹಜರತ್ಸಾಬ್ ಹು. ನದಾಫ್, ಸಿರಾ ಪಬ್ಲಿಷಿಂಗ್ ಹೌಸ್, ಮೈಸೂರು.
6. ಕಿರಿಯರಿಗೆ ಕನ್ನಡ ಸಾಹಿತ್ಯಚರಿತ್ರೆ, ಆರ್. ಬಸವರಾಜ್, ಬಸವೇಶ್ವರ ಪ್ರಕಾಶನ, ತುಮಕೂರು.

❖❖❖

**ದರ್ಜಿಯ ಹೊಗಳಿಕೆ ಮಾತಿಗೆ ರಾಜನು**
**ಇತ್ತನು ತನ್ನಯ ಆಣತಿ**
**ಚೆಂದದಿ ಹೊಲಿದು ತನ್ನಿರಿ ಬೇಗ**
**ಹೆಚ್ಚಲು ಎನ್ನಯ ಕೀರುತಿ**

# ಚಿತ್ರದುರ್ಗ ನಾಯಕರ ಕಂದಾಯ ವ್ಯವಸ್ಥೆ : ಚಾರಿತ್ರಿಕ ವಿಶ್ಲೇಷಣೆ

**ಡಾ. ಜಯಮ್ಮ ಬಿ.**
ಸಹ ಪ್ರಾಧ್ಯಾಪಕರು ಹಾಗು ಮುಖ್ಯಸ್ಥರು
ಹೆಚ್.ಪಿ.ಪಿ.ಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ–577522, ಚಿತ್ರದುರ್ಗ

ನಮ್ಮ ಪ್ರಾಚೀನ ಇತಿಹಾಸವನ್ನು ಅಭ್ಯಸಿಸಿದಾಗ, ಪ್ರಾಚೀನ ಕಾಲದ ಅರ್ಥವ್ಯವಸ್ಥೆ ಒಂದು ಪ್ರಮುಖವಾದ ಸ್ಥಾನವನ್ನು ಪಡೆದುದನ್ನು ಕಾಣುತ್ತೇವೆ. ನಮ್ಮ ಪ್ರಾಚೀನರಿಗೂ ಒಂದು ಸುವ್ಯವಸ್ಥಿತವಾದ ರಾಜ್ಯ ರಾಷ್ಟ್ರದ ಕಲ್ಪನೆಯಿತ್ತು. ಈ ಅವಶ್ಯಕತೆಗಳ ವಿಚಾರವೇ ಮೌರ್ಯರ ಕಾಲದಲ್ಲಿ 'ಸಪ್ತಾಂಗಂ ರಾಜ್ಯಂ' ಎನ್ನುವ ಕೌಟಿಲ್ಯನ ತತ್ತ್ವವನ್ನು ಹುಟ್ಟುಹಾಕಿತು. ರಾಜ, ಮಂತ್ರಿಗಳು ರಾಜ್ಯದ ಒಂದು ಪ್ರಮುಖ ಅಂಗವಾಗಿರುವ ಹಾಗೆ ಕೋಶವೂ ಕೂಡ ಸಪ್ತಾಂಗಗಳಲ್ಲಿ ಒಂದು ಸ್ಥಾನ ಪಡೆದಿದೆ. ಈ ರಾಜಕೋಶವು ಯಾವಾಗಲೂ ಸಮೃದ್ಧ, ಸುವ್ಯವಸ್ಥಿತವಾಗಿ ಇರಲು ಅಧಿಕಾರಿಗಳ ಗುಂಪು ಹುಟ್ಟಿಕೊಂಡ ಹಾಗೆಯೇ ಈ ಕೋಶಕ್ಕೆ ನಿಯಮಿತವಾಗಿ ಆದಾಯ ಬರುವಂತೆ ಮಾಡಿಕೊಂಡ ವ್ಯವಸ್ಥೆಯೇ 'ತೆರಿಗೆ ಸಂಗ್ರಹಣೆ' ಅಥವಾ 'ಕರಸಂಗ್ರಹಣೆ'.

ನಮ್ಮ ದೇಶದಲ್ಲಿ ಈ 'ತೆರಿಗೆ ವ್ಯವಸ್ಥೆ' ವೇದ ಕಾಲದಿಂದಲೂ ಜಾರಿಯಲ್ಲಿದ್ದುದು ಕಂಡು ಬರುತ್ತದೆ. ಆದರೆ ಆ ಕಾಲದಲ್ಲಿ ಶುಲ್ಕ ಮುಂತಾದ ತೆರಿಗೆಗೆ ಸಂಬಂಧಿಸಿದ ಪದಗಳ ಬಳಕೆ ಕಂಡು ಬಂದರೂ ತೆರಿಗೆ ವೈವಿಧ್ಯತೆ ಇದ್ದ ಬಗ್ಗೆ ಉಲ್ಲೇಖಗಳು ದೊರೆಯುವುದಿಲ್ಲ. ಈ ಅರ್ಥವ್ಯವಸ್ಥೆ ಅಥವಾ ರಾಜ್ಯದ ಅರ್ಥವ್ಯವಸ್ಥೆಗೆ (ಸಾರ್ವಜನಿಕ ಆರ್ಥಿಕತೆ) ಒಂದು ನಿರ್ದಿಷ್ಟವಾದ ರೂಪ ದೊರೆತದ್ದು ಮೌರ್ಯರ ಕಾಲದಲ್ಲಿಯೇ. ಕೌಟಿಲ್ಯನ ಅರ್ಥಶಾಸ್ತ್ರದಂತಹ ಗ್ರಂಥಗಳು ಅರ್ಥ ವ್ಯವಸ್ಥೆಯ ಸ್ವರೂಪ ಮತ್ತು ಅದರ ಎರಡು ಅಂಗಗಳಾದ ತೆರಿಗೆ ಸಂಗ್ರಹಣೆ ಮತ್ತು ಸಾರ್ವಜನಿಕ ವೆಚ್ಚ ಬಗ್ಗೆ ವಿವರವಾದ ವಿವರಣೆ ನೀಡುತ್ತವೆ. ಹೀಗಾಗಿ ಮೌರ್ಯರ ಅರ್ಥವ್ಯವಸ್ಥೆ ಮುಂದೆ ಆಳಿದ ಎಲ್ಲ ಸಾಮ್ರಾಜ್ಯಗಳಿಗೂ ಒಂದು ಮಾದರಿಯಾಯಿತು. ಈ ರಾಜ ವಂಶಗಳು ಮೌರ್ಯರ ಅರ್ಥ ವ್ಯವಸ್ಥೆಯನ್ನೂ ತಮಗೆ ಅನುಕೂಲವಾಗುವಂತೆ ಅಲ್ಪ ಸ್ವಲ್ಪ ಮಾರ್ಪಾಡುಗಳೊಂದಿಗೆ ಬದಲಾಯಿಸಿಕೊಂಡರೂ ಹೆಚ್ಚಿನ ಅಂಶಗಳು ಹಾಗೆಯೇ ಮುಂದುವರೆದವು. ಮುಂದೆ ಕರ್ನಾಟಕದಲ್ಲಿ ಆಳಿದ ಕದಂಬರಿಂದ ಹಿಡಿದು ವಿಜಯನಗರದವರೆಗಿನ ರಾಜ ವಂಶಗಳು ಕೂಡ ತಮ್ಮ ಅರ್ಥವ್ಯವಸ್ಥೆಯಲ್ಲಿ ಈ ಅಂಶಗಳನ್ನು ಅಳವಡಿಸಿಕೊಂಡುದನ್ನು ಕಾಣಬಹುದು. ವಿಜಯನಗರ ಕಾಲದಲ್ಲಿ ಸಾಮಂತರಾಗಿದ್ದು ನಂತರ ಸ್ವಾತಂತ್ರ ಆಡಳಿತವನ್ನು ಕಂಡುಕೊಂಡ ಪಾಳೆಯಗಾರರು ಅಥವಾ ನಾಯಕರು ಇದೇ ಮಾದರಿಯನ್ನು ಮುಂದುವರಿಸಿದ್ದನ್ನು ಕಾಣಬಹುದಾಗಿದೆ.

ಚಿತ್ರದುರ್ಗ ನಾಯಕರ ಕಾಲದಲ್ಲಿ ತಮ್ಮ ಆಡಳಿತ ಕೇಂದ್ರವನ್ನು ರಾಜ್ಯವೆಂದು ಕರೆದುಕೊಂಡಿದ್ದು ರಾಜ್ಯವನ್ನು ಅನೇಕ ಸೀಮೆಗಳನ್ನಾಗಿ ವಿಭಜಿಸಿದ್ದರು. ಬಿಳಿಚೋಡು, ಸೀಮೆ, ಚಿತ್ರಹಳ್ಳಿ ಸೀಮಿ, ಜಗಳೂರು ಸೀಮೆ, ಕೊಡಗನೂರು ಸೀಮೆ, ಜಾಜೂರು

ಸೀಮೆ, ಹೊಳಲ್ಕೆರೆ ಸೀಮೆ, ಭರಮಸಾಗರ ಸೀಮೆ, ದುರ್ಗದ ಸೀಮೆ, ಹೊರಕೆರಿ ವಲಯದ ಸೀಮೆ ಹಿರಿಯೂರು ಸೀಮೆ, ಗುಂಟನೂರು ಸೀಮೆ, ಗುಡ್ಡದ ಸೀಮೆ/ ಗುಡ್ಡದ ನಾಡದ ನಾಡು ದುಂಮಿಯ ಸೀಮೆದೊಡ್ಡೇರಿ ಸೀಮೆನವಬಕುವಾದ ಸೀಮೆ ನುಲಿಯನೂರು ಸ್ಥಳ ಬಂನ್ನಿಕೋಡಸೀಮೆ ಬಗ್ಗನಡುವಿನ ಸ್ಥಳ ಬಂನ್ನಿಕೋಡಸೀಮೆ ಬಗ್ಗನಕುವಿನ ಸ್ಥಳ ಬಸ್ವಾಪಟ್ಟಣದ ಸೀಮೆ/ ಸ್ಥಳ ಬಾಗೂರು ವಳಿತ/ ಸೀಮೆ ಬುಕ್ಕಾಪಟ್ಟಣ ಸ್ಥಳ ಬೂದಿಹಾಳು ಸೀಮೆ ಬೇತೂರು ಸೀಮೆ ಹೀಗೆ ಸೀಮೆ, ವೇಂಠ, ಸ್ಥಳ, ಜಾವದಿ, ಮಾಗಣಿ, ನಾಡು ಎಂಬ ಉಲ್ಲೇಖಗಳು ಇರುವ ಅನೇಕ ಶಾಸನಗಳು ಚಿತ್ರದುರ್ಗ ಪ್ರದೇಶದಲ್ಲಿ ಕಂಡುಬರುವುದರಿಂದ ಇವುಗಳು ಆಡಳಿತ ಅನುಕೂಲಕ್ಕಾಗಿ ಚಿಕ್ಕ ಚಿಕ್ಕ ಅಧಿಕಾರಿಗಳನ್ನು ನೇಮಿಸಿಕೊಂಡು ಅಧಿಕಾರವನ್ನು ನಡೆಸುತ್ತಿದ್ದರು ಎಂಬ ಅಂಶ ತಿಳಿದು ಬರುತ್ತದೆ.

ಗ್ರಾಮೀಣ ಅರ್ಥವ್ಯವಸ್ಥೆಯನ್ನು ನಿರ್ವಹಿಸಲು 18ನೇ ಶತಮಾನದ ಪೂರ್ವಾರ್ಧದಲ್ಲಿ ಬಾರಾಬಲೂತಿ ಪದ್ಧತಿ ರೂಢಿಯಲ್ಲಿ ಇತ್ತು. ಈ ವಿಷಯ ಕುರಿತು ಚಿತ್ರದುರ್ಗ ಆಯಗಾರರ ನಿರ್ಣಯ ಗ್ರಂಥದಲ್ಲಿ ಮಾಹಿತಿ ಇದೆ. ಇದರಂತೆ ಆ ಹನ್ನೆರಡು ಮಂದಿ ಅಧಿಕಾರಿಗಳು ಯಾರು ಎಂಬುದು ಇಲ್ಲಿ ತಿಳಿಯಬಹುದು.
ಗೌಡ ಅಥವಾ ಗ್ರಾಮದ ಯಜಮಾನ, ಶ್ಯಾನಬೋಗ ಅಥವಾ ಕರಣಿಕ, ಪಂಚಾಂಗ ಬ್ರಾಹ್ಮಣ ಅಥವಾ ಜ್ಯೋತಿಷಿ, ಕಬ್ಬಿಣದವನು, ಅಕ್ಕಸಾಲಿಗ, ಅಗಸ, ನಾಯಿಂದ ಅಥವಾ ಕೆಲಸಿ (ಕ್ಷೌರಿಕ), ತೋಟಿ, ತಳವಾರ, ಕೆರೆನೀರಗುಂಟಿ(ಗಂಟಿ), ಬಡಗಿ, ಅಳತೆಗಾರ

ಇವರನ್ನು ಕೈವಾಡದವರು ಅಥವಾ ಅಡದೆಯವರು ಎಂಬುದಾಗಿಯೂ ಕರೆಯಲಾಗುತ್ತಿತ್ತು. ಆಯಗಾರ ಪದ್ಧತಿಯ ಉದ್ದೇಶ ಗ್ರಾಮಗಳ ಸ್ವಾವಲಂಬನೆ ಹಾಗೂ ಗ್ರಾಮದ ಎಲ್ಲ ವರ್ಗಗಳ ವೃತ್ತಿಯನ್ನು ಒದಗಿಸುವುದಾಗಿತ್ತು. ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಆಯಗಾರರ ಸಂಖ್ಯೆಯಲ್ಲಿ ವ್ಯತ್ಯಾಸಗಳು ಆಗುತ್ತಿದ್ದವು. ಅವರ ಸಂಖ್ಯೆ ಸಾಮಾನ್ಯವಾಗಿ ಹನ್ನೆರಡು ಇದ್ದುದಾಗಿ ಕಂಡುಬರುತ್ತದೆ. ಚಿತ್ರದುರ್ಗ ನಾಯಕ ಕಾಲದಲ್ಲಿಯೂ ಆಯಗಾರರ ಸಂಖ್ಯೆ ಹನ್ನೆರಡು ಇತ್ತೆಂದು ಸಮಕಾಲೀನ ಆಧಾರಗಳಿಂದ ತಿಳಿಯುತ್ತದೆ.

ಆಯಗಾರರಲ್ಲಿ ಗೌಡ, ಶ್ಯಾನುಭೋಗ, ನೀರಗಂಟಿ, ತೋಟಿ, ತಳವಾರ ಈ ಐವರು ಅಧಿಕಾರಿಗಳು ಸರಕಾರದಿಂದ ತಮ್ಮ ಸೇವೆಗೆ ಪ್ರತಿಫಲವಾಗಿ ಭೂಮಿಯನ್ನು, ರೈತನಿಂದ ನಿಗದಿತ ಪ್ರಮಾಣದ ಧಾನ್ಯಗಳನ್ನು ಪಡೆಯುತ್ತಿದ್ದರು. ಈ ವ್ಯವಸ್ಥೆಯಲ್ಲಿದ್ದ ಪ್ರತಿಯೊಬ್ಬ ಅಧಿಕಾರಿಯ ಸೇವೆಯನ್ನೂ ಪರಿಗಣಿಸಿ ಗ್ರಾಮದ ರೈತರು ತಮ್ಮ ಬೆಳೆಯ ಪ್ರಮಾಣಕ್ಕೆ ಅನುಗುಣವಾಗಿ ರಾಶಿ ಹಾಕಿದ ಧಾನ್ಯದಲ್ಲಿ ಕೆಲಭಾಗವನ್ನು ಆಯಗಾರರಿಗೆ ಸಂಭಾವನೆಯಾಗಿ ನೀಡಬೇಕಾಗಿತ್ತು. ಉದಾಹರಣೆಗೆ:

| | |
|---|---|
| ಪ್ರತಿ 10 ಖಂಡುಗಕ್ಕೆ | ಸೇರುಗಳಲ್ಲಿ |
| ದೇವರಿಗೆ | 10 ಸೇರು |
| ಬಿಕ್ಷಾರ್ಥಿ ಬ್ರಾಹ್ಮಣನಿಗೆ | 20 ಸೇರು |
| ಜ್ಯೋತಿಷಿಗೆ | 10 ಸೇರು |
| ಶ್ಯಾನುಬೋಗನಿಗೆ | 20 ಸೇರು |
| ತಳವಾರನಿಗೆ | 10 ಸೇರು |

| | |
|---|---|
| ನಾಯಿಂದನಿಗೆ | 2 ಸೇರು |
| ಕುಂಬಾರನಿಗೆ | 2 ಸೇರು |
| ಆಚಾರಿಗೆ | 2 ಸೇರು |
| ಕಬ್ಬಿಣದವನಿಗೆ | 2 ಸೇರು |
| ಅಗಸ | 4 ಸೇರು |
| ಅಳತೆಗಾರ | 8 ಸೇರು |
| ಗೌಡ | 15 ಸೇರು |

ಹೀಗೆ ಬಾರಾಬಲೂತಿ ಪದ್ಧತಿಯಲ್ಲಿ ಸೇರಿದ್ದ ಎಲ್ಲ ಅಧಿಕಾರಿಗಳಿಗೆ ಸ್ಥಾನಗಳು ಸಾಮಾನ್ಯವಾಗಿ ವಂಶಪಾರಂಪರ್ಯವಾಗಿದ್ದವು. ಈ ವ್ಯವಸ್ಥೆಯಲ್ಲಿ ಗ್ರಾಮದ ಜನರ ಹಾಗೂ ರೈತರ ಪರಸ್ಪರ ಸಹಕಾರಗಳಿಂದ ಪರಸ್ಪರರ ಆರ್ಥಿಕ ಜೀವನ ಸುಗಮವಾಗಿ ನಡೆಯುವಂತಾಗಿತ್ತು.

ನಾಯಕರ ಕಾಲದಲ್ಲಿ ಮೂರು ಬಗೆಯ ತೆರಿಗೆ ನಿಗದಿ ನಡೆಯುತ್ತಿದ್ದಿತು. 1. ರೇಖಾ ನಿಗದಿ 2. ಬೀಜಾವರಿ ಅಥವಾ ಬಿತ್ತನೆಯ ಆಧಾರದ ನಿಗದಿ ಮತ್ತು 3. ಕೆಳದಿ ಶಿವಪ್ಪ ನಾಯಕನ ಶಿಸ್ತು ಮಾದರಿ ನಿಗದಿ. ಕೆಳದಿ ರಾಜವಂಶದ ಅತ್ಯಂತ ಶ್ರೇಷ್ಠ ರಾಜನೆನಿಸಿದ ಇವನನ್ನು ಇಂದಿಗೂ ಭೂ ಕಂದಾಯ ನಿಗದಿಯನ್ನು ವ್ಯವಸ್ಥೆಗೊಳಿಸಿದವನು ಎಂದು ಹೆಸರಿಸಲಾಗುತ್ತದೆ. ಅವನ ಶಿಸ್ತು ನಿಗದಿ ಪದ್ಧತಿಯು 1660ರಿಂದ ಮೂವತ್ತೊಂಬತ್ತು ವರ್ಷ ಕಾಲ ಮುಂದುವರಿಯಿತು ಸಮಕಾಲೀನ ಅರಸರು ಆದ ನಾಯಕರು ಇಂತಹ ಪ್ರಯೋಗ ಮಾಡಿರುವುದು ಎಲ್ಲಿಯೂ ಕಂಡುಬಂದಿಲ್ಲ. ಆದರೆ ಇಳುವರಿಗೆ ತಕ್ಕಂತೆ $^1/_3$ ಭಾಗದಷ್ಟು ತೆರಿಗೆ ಇತ್ತು. ಹಾಗೆಯೇ ಒಂದು ನೇಗಿಲಿಗೆ 12/1 ದುರ್ಗಿ ವರಹ ವಿದಿಸುತ್ತಿದ್ದರು. ಭೂಮಿಯನ್ನು ಅಳತೆ ಮಾಡಿ ತೆರಿಗೆಯನ್ನು ವಿಧಿಸುವ ಅಧಿಕಾರಿಗೆ 'ಅಥವಾಣಿ ಪಾರುಪತ್ಯಗಾರ' ಎಂದು ಕರೆಯುತ್ತಿದ್ದರು. ಇಲ್ಲಿ ಕಂದಾಯವನ್ನು ನಗದು ಮತ್ತು ಬೆಳೆಗಳನ್ನು ಸಂಗ್ರಹಿಸುವ ಪದ್ಧತಿ ಇತ್ತು. ಹೋಬಳಿ ಮಟ್ಟದಲ್ಲಿ ನಾಡಿಗ ಎಂಬ ಕಂದಾಯ ಅಧಿಕಾರಿ ಇದ್ದು, ಸಂಗ್ರಹಿಸಿದ ಧಾನ್ಯ ರೂಪದ ಕಂದಾಯವನ್ನು ಚಾವಡಿಗೆ ತಂದು ಒಪ್ಪಿಸುವ ಪದ್ಧತಿಗಳು ಇದ್ದವು.

ರಾಯ-ರೇಖಾ ಪದ್ಧತಿಯೇ ಪ್ರಮುಖ ಭೂ ಅಳತೆ ಪದ್ಧತಿಯನ್ನು ವಿಜಯನಗರದ ಅರಸರು ಹಿಡಿದ ದಾರಿಯನ್ನೇ ಅನುಸರಿಸಿದರು ಎಂದು ಹೇಳಬಹುದು. ಕೊನೆಯವರೆಗೂ ಈ ಪದ್ಧತಿಯನ್ನು ಅವರು ಮುಂದುವರಿಸಿದರು. ಆದರೆ ವಿಜಯನಗರದ ಅರಸರು ವಿಧಿಸಿದ್ದ ದರವನ್ನು ಸಾರಾಸಗಟಾಗಿ ಅವರು ಇಟ್ಟುಕೊಳ್ಳಲಿಲ್ಲ. ಅನೇಕ ಅಂಶಗಳನ್ನು ಅದಕ್ಕೆ ಕೂಡಿಸಿ ರೇಖಾ ನಿಗದಿಯನ್ನು ಹೆಚ್ಚಿಸಿದರು. ಅನೇಕ ಶಾಸನಗಳು ಇದನ್ನು ಸಮರ್ಥಿಸುತ್ತವೆ. ಇದರ ಹಿಂದಿನ ತೆರಿಗೆ ದರವನ್ನು ಶಾಸನಗಳಲ್ಲಿ ಪುರು ರೇಖಾ ಎಂದು ಕರೆದಿದೆ. ರೇಖಾ ನಿಗದಿಯಂತೆ 675 ಗದ್ಯಾಣಗಳನ್ನು ಮೂಲ ಕಂದಾಯವಾಗಿ ಪಾವತಿ ಮಾಡಬೇಕಾಗಿದ್ದು ಒಂದು ಹಳ್ಳಿಯ ಬಗೆಗೆ ಒಂದು ಶಾಸನವು ಹೇಳಿದೆ. ಈ ಮೂಲ ರೇಖಾ – ನಿಗದಿಗೆ ಬೀರದ (ಶಾಸನಗಳಲ್ಲಿ ಸಾಮಾನ್ಯವಾಗಿ ಉಕ್ತವಾಗಿದೆ), ದುರ್ಗದ ಭತ್ತ ಮೊದಲಾದ ಹೆಚ್ಚುವರಿಗಳು ಸೇರುತ್ತಿದ್ದವು. ಇದರಿಂದ ಹೊರಬರುವ ವಿಷಯವೇನೆಂದರೆ, ಅಲ್ಲಿ ರಾಯ ರೇಖಾ ಪದ್ಧತಿಯ ತೆರಿಗೆ ನಿಗದಿಯು ಜಾರಿಯಲ್ಲಿದ್ದಿತೋ ಅಲ್ಲೆಲ್ಲ ಅದನ್ನು

ಹಾಗೆಯೇ ಒಪ್ಪಿಕೊಂಡರು. ವಿವರಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ. ಹೆಚ್ಚಿನ ಮೇಲು ಸುಂಕಗಳನ್ನು ಹಾಕಿದರು.

ಕೆಳದಿ ನಾಯಕರಂತೆ ಚಿತ್ರದುರ್ಗದ ನಾಯಕರು ಬೀಜಾವರಿ ಪದ್ಧತಿಯ ನಿಗದಿಯನ್ನು ಅನುಸರಿಸಿದರು. ಒಂದು ಜಮೀನಿಗೆ ಎಷ್ಟು ಬಿತ್ತನೆ ಬೇಕು ಎನ್ನುವುದರ ಆಧಾರದ ಮೇಲೆ ಕಂದಾಯ ನಿಗದಿಯನ್ನು ನಿರ್ಧರಿಸಲಾಗುತ್ತಿತ್ತು. ಜಮೀನನ್ನು ಅಳತೆ ಮಾಡುತ್ತಿರಲಿಲ್ಲ, ಆದರೆ ಅದರ ಸಾಮರ್ಥ್ಯವನ್ನು ಅಂದಾಜು ಮಾಡಲಾಗುತ್ತಿತ್ತು. ಅನೇಕ ಶಾಸನಗಳಲ್ಲಿ, ಜಮೀನಿನ ಬಿತ್ತನೆಯ ಸಾಮರ್ಥ್ಯವನ್ನು ವಸ್ತುರೂಪದ ತೆರಿಗೆಯನ್ನು ಉಲ್ಲೇಖಿಸಲಾಗಿದೆ. ಆ ಮೇಲೆ ಅದನ್ನು ನಗದುರೂಪಕ್ಕೆ ಪರಿವರ್ತಿಸಲಾಗುತ್ತಿತ್ತು. ಒಂದು ಖಂಡುಗ ಧಾನ್ಯದ ಮಾರುಕಟ್ಟೆಯ ಬೆಲೆಯನ್ನು ಸೂಚಿಸುತ್ತಿದ್ದರು. ಒಂದು ಶಾಸನದಲ್ಲಿ ಉಕ್ತವಾಗಿರುವಂತೆ, 2.5 ಖಂಡುಗ ಭತ್ತದ ಬಿತ್ತನೆ ಸಾಮರ್ಥ್ಯವಿದ್ದ ಒಂದು ಗದ್ದೆಗೆ 15 ಖಂಡುಗ ಭತ್ತವನ್ನು ಕಂದಾಯವಾಗಿ ಪಾವತಿ ಮಾಡಲಾಗುತ್ತಿತ್ತು. ಅದರ ಮೌಲ್ಯ 1.5ವರಹ ಆಗಿತ್ತು. ಇನ್ನೊಂದು ಶಾಸನವು ಹೀಗೆ ದಾಖಲಿಸುತ್ತದೆ. 5 ಖಂಡುಗದ ಭತ್ತದ ಗದ್ದೆಗಳು ಕಂದಾಯವಾಗಿ 9 ವರಹಗಳನ್ನು ಸಲ್ಲಿಸುತ್ತಿತ್ತು. ಅಂದಿನ ಮಾರುಕಟ್ಟೆ ಬೆಲೆ ಖಂಡುಗಕ್ಕೆ 2 ವರಹ ಮತ್ತು 3 ಹಣದಂತೆ 4 ವರಹ ಮತ್ತು 4 ಹಣಗಳನ್ನು ಕಂದಾಯವಾಗಿ ಪಾವತಿ ಮಾಡುತ್ತಿದ್ದಿತೆಂದು ಅದೇ ಶಾಸನವು ಹೇಳುತ್ತದೆ. ಇದರಿಂದ ನಾವು ನಿರ್ಣಯಿಸಬಹುದಾದುದೇನೆಂದರೆ, ಚಿತ್ರದುರ್ಗದ ನಾಯಕರು ಮಾರುಕಟ್ಟೆಯ ಬೆಲೆಯ ಏರಿಳಿತಗಳನ್ನು ಗಮನದಲ್ಲಿ ಇಟ್ಟುಕೊಂಡು ಅದಕ್ಕೆ ಹೊಂದಿಕೆಯಾಗುವಂತೆ ತಮ್ಮ ಕಂದಾಯ ನೀತಿಯನ್ನು ನಿರ್ವಹಿಸುತ್ತಿದ್ದರು. ಹೀಗೆ ಅವರು ಯಾವಾಗಲೂ ನ್ಯಾಯಸಮ್ಮತವಾದ ರೀತಿಯಲ್ಲಿ ಕಂದಾಯವನ್ನು ವಸೂಲಿ ಮಾಡುತ್ತಿದ್ದರು.

ಭೂಮಿಯ ಅಳತೆಗಾಗಿ ತನ್ನ ದೇಹದ ಎತ್ತರವನ್ನು (ಕೋಲಿಗೆ ಗುರುತಿಸುವುದರ ಮೂಲಕ) ಕೈಗಳನ್ನು, ಧ್ವನಿಯನ್ನು (ಕೂಗಳತೆ), ಪಾದ(ಅಡಿ) ಮತ್ತು ಹೆಜ್ಜೆಗಳನ್ನು ಬಳಸುತ್ತಿದ್ದರು. ನಾಯಕರ ಕಾಲದಲ್ಲಿ ಉಲ್ಲೇಖವಿರುವ ಒಂದು ಅಳತೆ ಮಾಪನವು ಮಾನವ ಬಲಗಾಲಿನ ಆರಂಭದಿಂದ ಎಡಗಾಲಿನ ಅರ್ಧ ಪಾದದವರೆಗಿನ ಭೂಮಿಯನ್ನು 18 ಬಾರಿ ಅಳೆದರೆ ಅದು 'ಮೆತ್ತರು' ಎಂದು ಕರೆಯುತ್ತಿದ್ದರು. ಜೊತೆಯಲ್ಲಿ ಕೃಷಿ ಭೂಮಿಯನ್ನು ಗುರುತಿಸಲು ಎತ್ತುಗಳು ಒಂದು ದಿನದಲ್ಲಿ ಬಿತ್ತಬಹುದಾದ ಭೂಮಿಯನ್ನು, ಒಂದು ಸೇರು/ ಕೊಳಗ ಬೀಜವನ್ನು ಬಿತ್ತಬಹುದಾದ ಭೂಮಿಯನ್ನು ಅಥವಾ 1 ಬುಟ್ಟಿ ಬೀಜವನ್ನು ಬಿತ್ತಲು ಬೇಕಾದ ಭೂಮಿಯನ್ನು ಒಂದು ಅಳತೆಯ ಘಟಕವಾಗಿ ಬಳಸಿರುವುದನ್ನು ಕಾಣಬಹುದು.

ಇವುಗಳ ಜೊತೆಯಲ್ಲಿ ತೂಕ ಅಳತೆಗಳಾಗಿ ಅವಶ್ಯಕವಿದ್ದ ತಕ್ಕಡಿಗಳನ್ನು (ದಂಡಿಗೆಗಳನ್ನು) ಲಭ್ಯವಿದ್ದ ಮರದ ಕೋಲಿನಿಂದ ತಯಾರಿಸಿಕೊಂಡು ತೂಗಲು ಅವಶ್ಯಕವಿದ್ದ ತೂಕದ ಬೊಟ್ಟುಗಳಿಗಾಗಿ ನಿತ್ಯ ಉಪಯೋಗಿಸುತ್ತಿದ್ದ ಧಾನ್ಯಗಳಾದ ಅಕ್ಕಿ, ಉದ್ದು, ಸಾಸುವೆ, ಹೆಸರು, ಶೇಂಗಾ, ಗೋಧಿ, ಹತ್ತಿ, ಕಾಳುಗಳನ್ನು ಬಳಸಿಕೊಂಡರು. ಅಲ್ಲದೆ ಎಲ್ಲ ಭಾಗಗಳಲ್ಲಿ ದೊರೆಯುತ್ತಿದ್ದ ಗುಲಗಂಜಿ, ಕಳಂಜ, ವಾಲ್ ಮುಂತಾದ ಬೀಜಗಳನ್ನು ಅವಶ್ಯಕತೆಗೆ ತಕ್ಕಂತೆ ತೂಕದ ಮೂಲ ಮಾನವಾಗಿ (ಘಟಕ) ಬಳಸಿಕೊಂಡರು. ಹೆಚ್ಚಿನ ತೂಕಗಳಿಗಾಗಿ ನದಿ/ ಹೊಳೆಯಲ್ಲಿನ ಕಲ್ಲುಗಳನ್ನು ಇನ್ನು ಹೆಚ್ಚಿನ ತೂಕಕ್ಕೆ ಬೆಟ್ಟಗಳಲ್ಲಿ ದೊರೆಯುತ್ತಿದ್ದ ದೊಡ್ಡ ಕಲ್ಲುಗಳನ್ನು

ಉಪಯೋಗಿಸಿರುವುದು ಕೆಲವೊಂದು ವಿರಳ ಸಮಯಗಳಲ್ಲಿ ಲೋಹದ ಬೊಟ್ಟು ಮತ್ತು ತಕ್ಕಡಿಗಳನ್ನು ತಯಾರಿಸಿಕೊಂಡು ಬಳಸಿರುವುದು ಕಂಡುಬರುತ್ತದೆ. ನಾಯಕರ ಕಾಲದಲ್ಲಿ ಭೂಮಿಯ ಫಲವತ್ತತೆಗೆ ಅನುಗುಣವಾಗಿ $^1/_3$, $^1/_5$, $^1/_6$, $^1/_8$ ಮತ್ತು $^1/_{12}$ ಮುಂತಾದ ವಿಧಗಳಲ್ಲಿ ತೆರಿಗೆಯನ್ನು ವಿಧಿಸುತ್ತಿದ್ದರು.

ಭೂ ತೆರಿಗೆ ಅಷ್ಟೇ ಅಲ್ಲದೇ ಕುಶಲಕರ್ಮಿಗಳ ಮೇಲಿನ ತೆರಿಗೆಯೂ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಆದಾಯವನ್ನು ತರುತ್ತಿತ್ತು. ಕುಶಲಕರ್ಮಿಗಳ ಮೇಲೆ ವಿಧಿಸುತ್ತಿದ್ದ ವಿವಿಧ ತೆರಿಗೆಗಳ ಕುರಿತು ಅನೇಕ ಶಾಸನಗಳಲ್ಲಿ ಉಲ್ಲೇಖಗಳು ಸಿಗುತ್ತವೆ. ಬಡಗಿ, ಕಮ್ಮಾರ, ಅಕ್ಕಸಾಲಿಗ, ಕಂಚುಕಾರ(ಗಾರ) ಮತ್ತು ಶಿಲ್ಪಿ ಎಂಬ ಐದು ವಿಧವಾದ ಕೆಲಸಗಾರರನ್ನು ಒಟ್ಟಿಗೆ ಸೇರಿಸಿ ಪಂಚಾಳರು, ಪಂಚಕಾರುಕರು, ವಿಶ್ವಕರ್ಮರು, ಓಜರು ಮುಂತಾಗಿ ಹೆಸರಿಸಲಾಗಿದೆ. ಇವರೆಲ್ಲರಿಗೂ ಸಮಾನವಾಗಿ ಸೇರಿಸಿ ವಿಧಿಸುತ್ತಿದ್ದ ವೃತ್ತಿ ತೆರಿಗೆಯನ್ನು ಪಂಚಾಳ ತೆರಿಗೆ, ಪಂಚಕಾರುಕದೆರೆ, ವೋಜದೆರೆ, ಪಂಚಕಾರುಕ ವೆಡಿಕೆ ಮುಂತಾದ ಹೆಸರಿನಿಂದ ಕರೆಯಲಾಗಿದೆ. ದೇವಸ್ಥಾನಗಳಲ್ಲಿ ಗುತ್ತಿಗೆ ಕೆಲಸಗಾರರಾಗಿ ಕೆಲಸ ಮಾಡುತ್ತಿದ್ದ ಪಂಚಕಾಯಕದವರಿಂದ ಗುತ್ತಿಗೆ ಹಣವನ್ನು ಮತ್ತು ಸಂಬಳವನ್ನು ಇಡಿಯಾಗಿ ದೇವರಿಗಾಗಿ ವಸೂಲಿ ಮಾಡಿಕೊಡಬೇಕು ಎನ್ನುವ ತೀರ್ಮಾನವು ಇತ್ತು. ಪಂಚಕಾರು ಮತ್ತು ಕಾರುಕದೆರೆ ಎಂಬ ತೆರಿಗೆಗಳನ್ನು ಬಡಗಿಗಳು ಮತ್ತು ಲೋಹಕಾರರುಗಳೇ ಮೊದಲಾದ ಕಿರು ಕಲಾಕಾರರ ಮೇಲೆ ಹಾಕಲಾಗುತ್ತಿತ್ತು.

ಇಷ್ಟೇ ಅಲ್ಲದೇ ದೇವಾಲಯಗಳಲ್ಲಿ ಕೆಲಸ ಮಾಡುತ್ತಿದ್ದ ದೇವಸೇವಕಿಯರು (ಸೂಳೆ ಸಮುದಾಯ) ಸೂಳೆದೆರೆ ಎನ್ನುವ ತೆರಿಗೆಯನ್ನು ಕೊಡಬೇಕಾಗಿತ್ತು. ಈ ತೆರಿಗೆಯನ್ನು ದೇವಾಲಯಗಳಿಗೆ ಬಿಟ್ಟುಕೊಡಲಾಗುತ್ತಿತ್ತು. ದೇವಸೇವಕಿಯರಿಗೆ ಮನೆ, ದ್ರವ್ಯಗಳು ದಾನವಾಗಿ ನೀಡಲಾಗುತ್ತಿತ್ತು. ಅವುಗಳ ಮೇಲೆ ತೆರಿಗೆಯನ್ನು ವಿಧಿಸುತ್ತಿದ್ದರು. ಕ್ರಿ.ಶ.15–16ನೇ ಶತಮಾನದಲ್ಲಿ ಈ ರೀತಿಯಾದ ವಿವಿಧ ತೆರಿಗೆಗಳ ಉಲ್ಲೇಖಗಳು ಶಾಸನಗಳು ಮತ್ತು ಸಾಹಿತ್ಯ ಕೃತಿಗಳಲ್ಲಿ ಅಪಾರ ಸಂಖ್ಯೆಯಲ್ಲಿ ಸಿಗುತ್ತವೆ. ಪ್ರಚಲಿತವಿದ್ದ ಕೆಲವೊಂದು ತೆರಿಗೆಗಳು ಈ ಕೆಳಗಿನಂತಿವೆ.

| | | |
|---|---|---|
| ಸಿದ್ದಾಯ | : | ಫಲವತ್ತಾದ ಭೂಮಿಯ ಮೇಲೆ ಹಾಕುತ್ತಿದ್ದ ತೆರಿಗೆ |
| ಮನೆದೆರೆ | : | ಮನೆಯ ಮೇಲೆ ಹಾಕುತ್ತಿದ್ದ ತೆರಿಗೆ |
| ವಡ್ಡರಾವುಳ | : | ವ್ಯಾಪಾರ ಸಾಮಗ್ರಿಗಳ ಮೇಲಿನ ಸುಂಕ |
| ಒಳಸುಂಕ | : | ಆಮದು ವಸ್ತುಗಳ ಮೇಲಿನ ಸುಂಕ |
| ಹೊರಸುಂಕ | : | ರಫ್ತು ಮೇಲಿನ ಸುಂಕ |
| ತಳರಸುಂಕ | : | ವ್ಯಾಪಾರಿಗಳು ತಳವಾರನಿಗೆ ಕೊಡಬೇಕಾದ ಸುಂಕ |
| ಬಂಡಿದೆರೆ | : | ಎತ್ತಿನ ಬಂಡಿ, ಕುದುರೆ ಮುಂತಾದ ಬಂಡಿಗಳ ಮೇಲಿನ ಸುಂಕ<br>ಪಂಚಾಳ ತೆರಿಗೆ, |
| ಪಂಚಕಾರುಕದೆರೆ | : | ಕುಶಲಕರ್ಮಿಗಳ ವೃತ್ತಿ ತೆರಿಗೆ |
| ಬಡಗಿ ದೆರೆ | : | ಬಡಗಿಗಳ ಮೇಲೆ ವಿಧಿಸುತ್ತಿದ್ದ ತೆರಿಗೆ |
| ಕಬ್ಬುಣದೆರೆ | : | ಕಮ್ಮಾರ ಸುಂಕ, ಕುಲುಮೆದೆರೆ, ಕಮ್ಮಾರರ ಮೇಲೆ ವಿಧಿಸುತ್ತಿದ್ದ ತೆರಿಗೆ |

| | | |
|---|---|---|
| | | ಅಕ್ಕಸಾಲಿಯಾಯ, |
| ಸುವರ್ಣಾಯ | : | ಅಕ್ಕಸಾಲಿಗರ ಮೇಲೆ ವಿಧಿಸುತ್ತಿದ್ದ ತೆರಿಗೆ<br>ಅಡೆಕಲುವಣ, |
| ಅಚ್ಚಿನ ಕಮ್ಮಟದೆರೆ | : | ಅಕ್ಕಸಾಲಿಗರು ಮತ್ತು ಕಮ್ಮಾರರು ವಸ್ತುಗಳ ಉತ್ಪಾದನೆಗೆ ಬಳಸುತ್ತಿದ್ದ<br>ಉಪಕರಣಗಳ ಮೇಲಿನ ತೆರಿಗೆ |
| ಗಾಣದೆರೆ | : | ಗಾಣದ ಮೇಲಿನ ತೆರಿಗೆ |
| ಮಗ್ಗದೆರೆ | : | ನೇಕಾರರ ಮೇಲಿನ ತೆರಿಗೆ |
| ಆಲೆದೆರೆ | : | ಬೆಲ್ಲದ ಮೇಲಿನ ತೆರಿಗೆ |
| ಲವಣಾಯ | : | ಉಪ್ಪು ತಯಾರಿಕೆಯ ಮೇಲಿನ ತೆರಿಗೆ |
| ಕರ್ಬುಣ ಸುಂಕ | : | ಕಬ್ಬಿಣದ ಮೇಲಿನ ಸುಂಕ |
| ಕಳ್ಳವಳ್ಳಿಗೆ | : | ಕಳ್ಳರ ಮೇಲೆ ಹಾಕುತ್ತಿದ್ದ ದಂಡ |
| ಸೂಳೆದೆರೆ | : | ವೇಶ್ಯೆಯರ ಮೇಲೆ ಹಾರುತ್ತಿದ್ದ ತೆರಿಗೆ |
| ಕುರುಂಬದೆರೆ | : | ಕುರುಬರ ಮೇಲೆ ಹಾಕುತ್ತಿದ್ದ ತೆರಿಗೆ |
| ಕತ್ತರಿ ವಣ | : | ಚಿಪ್ಪಿಗರ ಮೇಲೆ ಹಾಕುತ್ತಿದ್ದ ತೆರಿಗೆ |
| ಅಳಿವಸತಾಯ | : | ಸೈನಿಕರ ವಸತಿಗಳ ಮೇಲೆ ಹಾಕುತ್ತಿದ್ದ ತೆರಿಗೆ |
| ಊರುಟ್ಟಿಗೆ | : | ಸಾರ್ವಜನಿಕ ಕೆಲಸಗಳ ತೆರಿಗೆ |
| ಒಸಗೆ | : | ಹಬ್ಬಕ್ಕೆಂದು ವಿಧಿಸುತ್ತಿದ್ದ ತೆರಿಗೆ |
| ಅಟ್ಟದೆರೆ | : | ಅಟ್ಟ (ಮಹಡಿ)ವನ್ನು ಹೊಂದಿದ್ದಕ್ಕೆ ತೆರಿಗೆ |
| ಅರುವಣ | : | ಮಾನ್ಯ ಮಾಡಿದ ಭೂಮಿಗಳ ಮೇಲಿನ ತೆರಿಗೆ |
| ತುಪ್ಪದೆರೆ | : | ತುಪ್ಪದ ಮೇಲಿನ ತೆರಿಗೆ |
| ತಿಪ್ಪೆಸುಂಕ | : | ತಿಪ್ಪೆಗಳ ಮೇಲಿನ ಸುಂಕ |
| ಬಳಂಬೆಯ ತೆರೆ | : | ಒಣವೆಗಳ ಮೇಲಿನ ತೆರಿಗೆ |
| ಬಿಟ್ಟಿ ಬೆಸ | : | ದೈಹಿಕ ಶ್ರಮಕ್ಕೆ ವಿಧಿಸುತ್ತಿದ್ದ ತೆರಿಗೆ |
| ಬಿಲ್ಕೊಡೆ | : | ಪ್ರಾಣಿಗಳ ಮೇಲೆ ಸಾಮಾನು ಸಾಗಿಸುವುದರ ಮೇಲಿನ ತೆರಿಗೆ |
| ಮದುವೆದೆರೆ | : | ಮದುವೆಗಳ ಮೇಲಿನ ಸುಂಕ |
| ಹಾಲಾವು | : | ಹಾಲು ಕೊಡುತ್ತಿದ್ದ ಹಸುವಿನ ಮೇಲಿನ ಸುಂಕ |
| ಹೊಲೆದೆರೆ | : | ಹೊಲೆಯರ ಮೇಲೆ ವಿಧಿಸುತ್ತಿದ್ದ ತೆರಿಗೆ |
| ದೇವಿದೆರೆ | : | ರಾಣಿ ಹಳ್ಳಿಗೆ ಬಂದಾಗ ಕೊಡಬೇಕಾದ ತೆರಿಗೆ |
| ಕುಮಾರಗದ್ಯಾಣ | : | ಯುವರಾಜನು ಊರಿಗೆ ಬಂದಾಗ ಕೊಡಬೇಕಾದ ತೆರಿಗೆ |
| ಕಾಣಿಕೆ | : | ಹಿರಿಯ ಅಧಿಕಾರಿಗಳು ಊರಿಗೆ ಬಂದಾಗ ಕೊಡುವ ತೆರಿಗೆ |
| ಭತ್ತಾಯ | : | ಭತ್ತದ ಮೇಲಿನ ತೆರಿಗೆ |
| ಪನ್ನೆಯ | : | ವಿಳ್ಯೆದೆಲೆ ಬಳ್ಳಿಗಳ ಮೇಲಿನ ತೆರಿಗೆ |
| ಆನೆ ಸೇಸ | : | ರಾಜರ ಆನೆಗಳ ಮೇಲಿನ ತೆರಿಗೆ |

| | | |
|---|---|---|
| ಆಡುದೆರೆ | : | ಆಡುಗಳ ಮೇಲಿನ ತೆರಿಗೆ |
| ಕುರಿದೆರೆ | : | ಕುರಿಗಳ ಮೇಲಿನ ತೆರಿಗೆ |
| ಪೆರ್ಜುಂಕ | : | ಹೇರುಗಳ ಮೇಲೆ ಹಾಕುತ್ತಿದ್ದ ತೆರಿಗೆ |
| ಮನ್ನೆಯ | : | ಅಧೀನರಾಜನಿಗೆ ಪೋಷಕನಾದ ತೆರಿಗೆ |
| ಕೆರೆ | : | ನೀರಾವರಿ ಮೇಲಿನ ತೆರಿಗೆ ಅಂಗಡಿ ಆಯ, |
| ಅಂಗಡಿದೆರೆ | : | ಖಾಯಂ ಅಂಗಡಿಯ ಮೇಲಿನ ತೆರಿಗೆ ಸಂತೆ, ಸುಂಕ, |
| ಸಂತೆಯ ಆಯ | : | ಸಂತೆಗೆ ಬರುವ ವಸ್ತುಗಳ ಮೇಲಿನ ಸುಂಕ ಕೀಳ್ವಟ್ಟೆ ಸುಂಕ, |
| ಮೇಲ್ವಟ್ಟೆ ಸುಂಕ | : | ಸಾರಿಗೆ ತೆರಿಗೆ |
| ಸೆಟ್ಟಿದೆರೆ, ಸೆಟ್ಟಿವಣ | : | ವರ್ತಕರ ಮೇಲಿನ ತೆರಿಗೆ |
| ನೆಲಮೆಟ್ಟು | : | ಕುದುರೆ ಅಥವಾ ಬೇರೆ ಪ್ರಾಣಿ ಕಟ್ಟುವ ಸ್ಥಳದ ಮೇಲಿನ ಸುಂಕ. |

ಒಟ್ಟಾರೆಯಾಗಿ ಹೇಳುವುದಾದರೆ ವಿವಿಧ ರಾಜವಂಶಗಳು ತಮ್ಮದೇ ತೆರಿಗೆ ದರವನ್ನು ನಿಗದಿಪಡಿಸಿಕೊಂಡಿದ್ದರು. ಉದಾ: ಚಿತ್ರದುರ್ಗ ನಾಯಕರು ವಿಜಯನಗರದ ಅರಸ ರೇಖಾ ಪದ್ಧತಿಯನ್ನು ರೂಪಿಸಿಕೊಂಡರೆ, ಕೆಳದಿಯ ಅರಸರು ಶಿಸ್ತು ಪದ್ಧತಿಯನ್ನು ವಿಕಾಸಪಡಿಸಿದರು. ಸರಕಾರದ ಅಗತ್ಯಗಳು, ಕೃಷಿಯೇತರ ವರ್ಗಗಳು ಮತ್ತು ಮೂಲ ಬೆಳೆಗಾರರು ಇವರುಗಳ ಅಗತ್ಯಗಳನ್ನು ಪೂರೈಸಿದ ಮೇಲೂ ಚಿತ್ರದುರ್ಗ ನಾಯಕರ ಕಾಲದಲ್ಲಿ ಕೃಷಿ ಉತ್ಪನ್ನಗಳನ್ನು ಹೆಚ್ಚುವರಿಯಾಗಿಯೇ ಉತ್ಪಾದಿಸಲಾಗುತ್ತಿತ್ತು. ಅದನ್ನು ವ್ಯಾಪಾರದ ಮೂಲಕ ವಿನಿಯೋಗ ಮಾಡಲಾಗುತ್ತಿತ್ತು.

**ಆಕರಗಳು**

1. ಕೊಪ್ಪಾ ಎಸ್.ಕೆ., ತರ್ದವಾಡಿ ನಾಡು ಒಂದು ಅಧ್ಯಯನ, ಶಾಸನಗಳನ್ನಾಧರಿಸಿ (ಕ್ರಿ.ಶ.850–1300), ಪ್ರತಿಭಾ ಪ್ರಕಾಶನ, 1990,
2. ಗ್ರಾಮೀಣ ಅರ್ಥ ವ್ಯವಸ್ಥೆಯಲ್ಲಿ 12 ಜನ ಆಯಗಾರರು ಇದ್ದರು. ಇದನ್ನು 'ಬಲವತ್' ಇದು ಕೃಷಿಯ ತೆರಿಗೆಯನ್ನು ಸಂಗ್ರಹಿಸುವ ವೃತ್ತಿ ವ್ಯವಸ್ಥೆಯನ್ನು ಸೂಚಿಸುತ್ತದೆ ಎಂದು ಇರ್ಫಾನ್ ಹಬೀಬ್ ಅವರ ಅಗ್ರೇರಿಯನ್ ರಿಲೇಷನ್ಸ್ ಆ್ಯಂಡ್ ಎಕಾನಮಿ ಇನ್ ಎ ರೀಜನ್ ಆಫ್ ಮಧ್ಯಪ್ರದೇಶ, ಇಂಡಿಯನ್ ಹಿಸ್ಟ್ರೀ ಕಾಂಗ್ರೇಸ್ ಪ್ರೊಸ್ಸೀಡಿಂಗ್ಸ್, ಸಂಪುಟ, ನಂ–3, ಸೆಪ್ಟೆಂಬರ್ 1967
3. ದೇವರಾಜ ಓ., ಮಧ್ಯಕಾಲೀನ ಕರ್ನಾಕಟ ಚರಿತ್ರೆಯಲ್ಲಿ ದಲಿತರು, ಪಲ್ಲವ ಪ್ರಕಾಶನ, ಚನ್ನಪಟ್ಟಣ, 2013, ಪು.ಸಂ.179
4. ಫೇಡ್ರಿಕ್ ಚಾಲ್ಮರ್ಸ್, ಎರಿಪೋರ್ಟ್ ಆನ್ ದಿ ಚಿತ್ರದುರ್ಗ ಡಿವಿಜನ್ ಆಫ್ ಮೈಸೂರು,
5. ಬಸವರಾಜ್ ಯಳಮಲ್ಲಿ, (ಸಂ), ತೂಕ ಮತ್ತು ಅಳತೆ ಸಾಧನಗಳ ಇತಿಹಾಸ ಮತ್ತು ಪರಂಪರೆ, ತುಲಾಭವನ ಟ್ರಸ್ಟ್, ದಾವಣಗೆರೆ, 2010,
6. ಬುಕಾನನ್: ಎ ಜರ್ನಿ ಫ್ರಂ ಮದ್ರಾಸ್ ಥ್ರೋ ದಿ ಕಂಟ್ರೀಸ್ ಆಫ್ ಮೈಸೂರು, ಕೆನರ ಆಂಡ್ ಮಲ್ಬಾರ್
7. ಮಲ್ಲಿಕಾರ್ಜುನ ಸಿ. ಬಾಗೋಡಿ, ಸುರಪುರ ಪ್ರದೇಶದ ಕಂದಾಯ ಪತ್ರಗಳು, ಇತಿಹಾಸದ ಕಂದಾಯ ಪತ್ರಗಳು, ಇತಿಹಾಸ ದರ್ಶನ ಸಂ–25,

8. ಮಹೇಶ್ ಜಿ., ವಿಜಯನಗರ ಕಾಲದಲ್ಲಿ ವೃತ್ತಿ ಆಧಾರಿತ ಜಾತಿಗಳು ಒಂದು ಅಧ್ಯಯನ (ಕ್ರಿ.ಶ.1336–1565) ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2013, ಅಪ್ರಕಟಿತ ಪಿಎಚ್.ಡಿ, ಮಹಾಪ್ರಬಂಧ,
9. ಮೆಕೆಂಜಿ ಮ್ಯಾನ್ಯುಸ್ಕ್ರಿಪ್ಟ್ಸ್, ನಂ–354, ಟಿ.ಎಸ್.ಎ., 1843,
10. ಮೋಹನ್‌ಕೃಷ್ಣ ರೈ ಕೆ., ಪ್ರಭುತ್ವ ಮತ್ತು ಜನತೆ
11. ರಾಜಶೇಖರಪ್ಪ ಬಿ., ದುರ್ಗ ಶೋಧನ,
12. ಲಕ್ಷ್ಮಣ್ ತೆಲಗಾವಿ, ಚಂದ್ರವಳ್ಳಿ,
13. ವಿಠ್ಠಲ ಡಿ. ಪೋತದಾರ, ಪ್ರಾಚೀನ ಕರ್ನಾಟಕದಲ್ಲಿ ಪ್ರಚಲಿತವಿದ್ದ ಕೆಲವು ತೆರಿಗೆಗಳು ಒಂದು ಅಧ್ಯಯನ, ಇತಿಹಾಸ ದರ್ಶನ ಸಂಪುಟ–8, (1993),
14. ಸದಾಶಿವಪ್ಪ ಕುಂ.ಬಾ., ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ದರ್ಶನ, ಮಾಲತೇಶ ಪ್ರಕಾಶನ, ಕುಂಚೂರು, 1990,
15. ಸೂರ್ಯನಾಥ ಯು.ಕಾಮತ್, ಕರ್ನಾಟಕ ರಾಜ್ಯ ಗೆಜೆಟಿಯರ್, ಸಂ–1, ಬೆಂಗಳೂರು, 1984
16. ಹೊಳೆ ಹೊನ್ನೂರು ಕೈಫಿಯತ್ (ಕನ್ನಡ ಹಸ್ತಪ್ರತಿ) ಪು.ಸಂ.9–10 ಕೆಳದಿ ನೃಪತುಂಗ ವಿಜಯಂ,
17. ಎ.ಕ.ಶಾಸನ ಸಂಪುಟಗಳು
18. ಸೌ.ಇ.ಇ. ಶಾಸನ ಸಂಪುಟಗಳು
19. ಎಂ.ಎ.ಆರ್. ವರದಿಗಳು

❖❖❖

**ರಾಶಿ ಹೊನ್ನಿನ ಮುಂಗಡ ಕೊಟ್ಟನು**
**ಬಣ್ಣದ ಮಾತಿನ ಹೊಗಳಿಕೆಗೆ**
**ರಾಜನ ಬೊಕ್ಕಸ ಬರಿದಾಗಿತ್ತು ಕನಸಿನ**
**ಬಯಕೆಯ ಉಡುಗೊರೆಗೆ**

# ಭೌತಿಕ ವಸ್ತುಗಳು ಮತ್ತು ಚರಿತ್ರೆಯ ಹುಡುಕಾಟ

**ಚೇತನ್ ಮುಂಡಾಜೆ**
ಸಹಾಯಕ ಪ್ರಾಧ್ಯಾಪಕರು, ಕೇರಳ ಕೇಂದ್ರೀಯ ವಿಶ್ವವಿದ್ಯಾನಿಲಯ
ಪೆರಿಯ, ಕಾಸರಗೋಡು

ಮಾನವ ಬದುಕು ವಿಕಾಸಮುಖಿಯಾದ ಚಲನೆಯನ್ನು ಹೊಂದಿರುವುದು. ಈ ವಿಕಾಸಮುಖಿ ಚಲನೆಯು ದೇಶಕಾಲಕ್ಕೆ ಅನುಗುಣವಾಗಿ ನಡೆಯುತ್ತಾ ಬಂದಿದೆ. ಮಾನವನು ತನ್ನ ಅಗತ್ಯಗಳಿಗೆ ಅನುಗುಣವಾಗಿ ತನ್ನ ಅವಶ್ಯಕತೆಗಳನ್ನು ರೂಪಿಸಿಕೊಳ್ಳುತ್ತಾ ಬಂದಿದ್ದಾನೆ. ಸಾಮಾನ್ಯವಾಗಿ ಈ ಬದಲಾವಣೆಯನ್ನು ಆದಿ ಮಾನವನು ಶಿಲಾಯುಗದ ಕಾಲದಿಂದ ಹೇಗೆ ಭಿನ್ನ ಜೀವನಕ್ರಮಗಳನ್ನು ಅನುಸರಿಸಿಕೊಂಡು ಬಂದ ಎಂಬ ಬಗ್ಗೆ, ಚರಿತ್ರೆಯ ಪಠ್ಯಗಳು ಸ್ಥೂಲವೂ ಸೂಕ್ಷ್ಮವೂ ಆದ ನೆಲೆಯಲ್ಲಿ ಗುರುತಿಸಿಕೊಂಡು ಬಂದಿದೆ. ಈ ಮಾನವ ವಿಕಾಸದ ಚರಿತ್ರೆಯನ್ನು ಪ್ರಾಕ್ತನಶಾಸ್ತ್ರರು ದತ್ತ ಸಾಮಾಗ್ರಿಗಳ ನೆಲೆಯಲ್ಲಿ ಕಟ್ಟುತ್ತಾ ಬಂದಿದ್ದಾರೆ. ಮೆಸಪಟೋಮಿಯ, ಸಿಂಧು ಬಯಲಿನ ನಾಗರಿಕತೆ ಇವುಗಳು ಪ್ರಾಚೀನ ಮಾನವನ ಕುರುಹುಗಳನ್ನು ತಿಳಿಸಿವೆ. ಇಲ್ಲಿ ದೊರೆತಿರುವ ಆಕರಗಳನ್ನು ಬಳಸಿಕೊಂಡು ಜೀವನ ವಿಧಾನ, ಸಂಸ್ಕೃತಿಗಳ ಬಗ್ಗೆ ಪ್ರಾಕ್ತನಶಾಸ್ತ್ರವು ಅಧ್ಯಯನವನ್ನು ನಡೆಸಿದೆ.

ಆಧುನಿಕ ಇತಿಹಾಸ ಶಾಸ್ತ್ರವು ಪಾರಂಪರಿಕ ಮಾದರಿಯ ಆಕರಗಳನ್ನು ಮಾತ್ರ ಇತಿಹಾಸ ರಚನೆಗೆ ಬಳಸಿಕೊಂಡಿತು. ಶಾಸನಗಳು, ತಾಳೆಪತ್ರಗಳು, ತಾಮ್ರಪಟಗಳು, ಲಿಖಿತ ದಾಖಲೆಗಳು, ಕಡತಗಳು ಮಾತ್ರವೇ ಇತಿಹಾಸ ರಚನೆಗೆ ಆಕರಗಳಾಗಿ ಬಳಕೆಗೊಂಡವು. ಇದರಿಂದಾಗಿ ಅಕ್ಷರ ಬಲ್ಲ ಜನರ ಚರಿತ್ರೆಯು ರಚನೆಗೊಂಡಿತು. ರಾಜರುಗಳ ವಂಶಾವಳಿ, ಅವರು ಕೈಗೊಂಡ ಯುದ್ಧಗಳು, ದಿಗ್ವಿಜಯದ ವರ್ಣನೆ, ಆರ್ಥಿಕತೆ ಇವೇ ಮೊದಲಾದ ಸಂಗತಿಗಳು ಪ್ರಧಾನಧಾರೆಯ ಇತಿಹಾಸ ಕಥನದೊಳಗೆ ಸ್ಥಾನವನ್ನು ಪಡೆಯಿತು. ಇದರಿಂದಾಗಿ ಅಕ್ಷರ ವಂಚಿತ ಬಹುಸಂಖ್ಯಾತ ಜನರ ಚರಿತ್ರೆಯು ದಾಖಲುಗೊಳ್ಳದೆ ಕಟ್ಟುಕತೆ, ವದಂತಿ ಹೀಗೆ ಬದಲಿನಾಮದಿಂದ ಕರೆಸಿಕೊಂಡಿತು. ಭಾರತದಂತಹ ರಾಷ್ಟ್ರದೊಳಗೆ ಬಹುಸಂಖ್ಯೆಯ ಜನರು ಕಂಠಸ್ಥ ಪರಂಪರೆಯನ್ನು ಹೊಂದಿರುವವರು. ಇವರ ಚರಿತ್ರೆ ಏನಿದ್ದರೂ ಮೌಖಿಕ ಕಥನಗಳಲ್ಲಿಯೇ ಕಾಣಬೇಕು. ಹಾಗಾಗಿ ಪಾರಂಪರಿಕ ಮಾದರಿಯ ಆಕರಗಳನ್ನು ಅವಲಂಭಿಸಿಕೊಂಡು ರಚನೆಗೊಂಡಿರುವ ಇತಿಹಾಸವು ಪಾರ್ಶ್ವಿಕವಾದ ಸತ್ಯವನ್ನು ಮಾತ್ರ ಮುಂದಿಡುತ್ತದೆ. ಸಮಗ್ರ ನೆಲೆಯ ಚರಿತ್ರೆಯನ್ನು ಅಲ್ಲ. ಪ್ರಭುಕೇಂದ್ರಿತ ಚರಿತ್ರೆ ಏನಿದ್ದರೂ ಪ್ರಭುತ್ವದ ನಿಲುವಿನ ಹಿನ್ನೆಲೆಯಲ್ಲೇ ರೂಪುಗೊಳ್ಳುತ್ತದೆ.

ಭಾರತ ದೇಶದ ಕಥನವು ಬಹುಮುಖಿ ಪರಂಪರೆಯಿಂದ ಸಮೃದ್ಧವಾಗಿರುವ ಕಥನವಾಗಿದೆ. ಪ್ರಧಾನ ನೆಲೆಯ ಅಕ್ಷರ ಪರಂಪರೆಯ ಆಕರಗಳು ಇರುವಂತೆ ಅಗಾಧವಾದ ಕಂಠಸ್ಥ ಪರಂಪರೆಯ ಸಾಹಿತ್ಯವು ಈ ದೇಶವನ್ನು ಚೈತನ್ಯಶಾಲಿಯಾಗಿರಿಸಿದೆ. ಅಕ್ಷರದ ದಾಖಲೆಗಳು ಏಕಮುಖ ಸತ್ಯವನ್ನು ಪ್ರಮಾಣೀಕರಿಸಿದರೆ ಮೌಖಿಕ ಸಂಪ್ರದಾಯದ

ಕಥನವು ಬಹುಮುಖ ಸತ್ಯವನ್ನು ಮುಂದಿಡುತ್ತದೆ. ಜನಪದ ಸಾಹಿತ್ಯದ ಆಂತರ್ಯದಲ್ಲಿರುವ ಸಮೃದ್ಧತೆಯು ಮಂತ್ರದ ರೀತಿಯಲ್ಲಿ ಇಲ್ಲಿ ಕೆಲಸ ಮಾಡುತ್ತದೆ. ಅನೇಕ ಗುಡ್ಡಗಾಡು ಜನಾಂಗಗಳು, ಅಲೆಮಾರಿ ಜೀವನವನ್ನು ನೆಚ್ಚಿಕೊಂಡಿರುವ ಸಮುದಾಯಗಳು, ಪ್ರಾದೇಶಿಕವಾಗಿ ಹಾಗೂ ಸಾಮಾಜಿಕವಾಗಿ ಬಹುತ್ವವನ್ನು ಪ್ರತಿನಿಧಿಸುವ ತನ್ನದೇ ಲೋಕದೃಷ್ಟಿಯೊಂದನ್ನು ಮುಂದಿಡುತ್ತದೆ. ಈ ಎಲ್ಲಾ ಸಮುದಾಯಗಳನ್ನು ಪ್ರತಿನಿಧಿಸುವ ವರ್ಗಗಳಿಗೆ ಬರವಣಿಗೆಯ ಕಲೆ ತಿಳಿದಿಲ್ಲ. ಇವರು ತಾವು ನೋಡಿದ ಕಂಡ, ಅನುಭವಿಸಿದ ಘಟನೆಗಳನ್ನು ಸ್ಮರಣೆಯ ಮಾದರಿಯಲ್ಲಿ ರಕ್ಷಿಸಿಕೊಂಡು ಬಂದಿದ್ದಾರೆ. ಅಂತಿಮವಾಗಿ ಈ ಬಗೆಯ ಕಥನಗಳೇ ಜನಪದ ಪುರಾಣವಾಗಿ ಮಾರ್ಪಾಡು ಹೊಂದುವುದನ್ನು ಕಾಣಬಹುದಾಗಿದೆ.

ಕಂಠಸ್ಥ ಮಾದರಿಯ ಜನಪದ ಚರಿತ್ರೆಯು ಆಧುನಿಕ ಇತಿಹಾಸ ಕ್ರಮದ ಮಾದರಿಯಲ್ಲ; ಜನಪದ ಕಥನಗಳಲ್ಲಿ ಕಾಲವು ಸರಳರೇಖಾತ್ಮಕವಾಗಿ ಮುಂದುವರಿಯದೆ ಚಕ್ರಗತಿಯ ಚಲನೆಯನ್ನು ಅನುಸರಿಸುತ್ತದೆ. ಈ ಕಥನಗಳು ತಮ್ಮೊಳಗೆ ಕಥೆ, ಪುರಾಣ, ಐತಿಹ್ಯ, ಚರಿತ್ರೆ ಇವುಗಳು ಒಂದರೊಳಗೊಂದು ಬೆರೆತ ಸ್ಥಿತಿಯಲ್ಲಿ ಕಂಡುಬರುತ್ತದೆ. ವಾಸ್ತವ ಮತ್ತು ಕಲ್ಪನೆಯ ಅಂಶಗಳು ಬೆರೆತು ಅತಿರಂಜಿತವಾಗಿರಬಹುದು ಇಲ್ಲವೇ ಸತ್ಯ ನಿಚ್ಚಲವಾಗಿ ಗುರುತಿಸುವಲ್ಲಿ ಕಲ್ಪನೆಯ ಅಂಶಗಳು ತೊಡಕಾಗಿ ಪರಿಣಮಿಸಬಹುದು. ಕಂಠಸ್ಥ ಮಾದರಿಯ ಜನಪದ ಪಠ್ಯಗಳ ಅಧ್ಯಯನದಿಂದ ದೊರೆಯುವ ಫಲಿತಗಳನ್ನು ಅವು ಭೌತಿಕ ವಸ್ತುಗಳ ಜೊತೆಗೆ ಹೊಂದಿರುವ ಸಂಬಂಧದ ಹಿನ್ನೆಲೆಯಲ್ಲಿ ವಿವೇಚಿಸುವ ಅವಕಾಶಗಳು ಇವೆ.

ಡಾ.ಬಿ.ಎ ವಿವೇಕ ರೈಯವರು 'ಇತಿಹಾಸ ಮತ್ತು ಜಾನಪದ' ಎನ್ನುವ ಸಂಪ್ರಬಂಧದಲ್ಲಿ ಸಾಂಪ್ರದಾಯಿಕ ಇತಿಹಾಸ ಮತ್ತು ಕಂಠಸ್ಥ ಪರಂಪರೆಗಳು ಒಂದು ನಿರ್ದಿಷ್ಟ ಕಾಲದೊಳಗೆ ನಡೆದ ಘಟನೆಗಳನ್ನು ಚರ್ಚಿಸುವಾಗ ಆ ಘಟನೆಗಳ ನಡುವೆ ಇರುವ ಭಿನ್ನತೆಯನ್ನು ಗುರುತಿಸುತ್ತಾರೆ.[1] ಸಾಂಪ್ರದಾಯಿಕ ಮಾದರಿಯ ಇತಿಹಾಸವು ಅಧಿಕಾರ ಕೇಂದ್ರದ ನಿರ್ದೇಶನದಂತೆ ರಚಿತಗೊಂಡ ಆಕರಗಳನ್ನು ಅವಲಂಬಿಸಿಕೊಂಡಿರುತ್ತದೆ. ಅಕ್ಷರ ರೂಪದಲ್ಲಿ ದಾಖಲುಗೊಂಡಿರುವ ಮಾಹಿತಿಗಳು ಸಾಮಾನ್ಯ ಯೋಧನ ಸಾವನ್ನು, ಬಲಿದಾನವನ್ನು ಉದಾತ್ತೀಕರಿಸುವ ನೆಲೆಯಲ್ಲೇ ಪ್ರತಿಬಿಂಬಿಸಲ್ಪಟ್ಟಿದೆ. ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಅಪರೂಪದಲ್ಲಿ ಪ್ರಜೆಗಳ ಜೀವನಕ್ರಮದ ಮೇಲೆ ಬೆಳಕು ಚೆಲ್ಲುವ ಪ್ರಯತ್ನಗಳನ್ನು ನಡೆಸಿವೆ. ಅದು ಅನುಷಂಗಿಕವಾಗಿ ಮಾತ್ರ. ಅಧಿಕಾರಕೇಂದ್ರಗಳ ನಿರ್ದೇಶನದಂತೆ ರಚಿತವಾಗುವ ಶಾಸನಗಳು, ತಾಮ್ರಪಟಗಳು, ಕಡತಗಳೆಲ್ಲ ಪ್ರಭುತ್ವದ ಆಡಳಿತ ಕೌಶಲವನ್ನೊ, ಸಾಮರ್ಥ್ಯದ ಆಧಿಕ್ಯವನ್ನೊ ಅಥವಾ ಒಡೆತನದ ತೀರ್ಮಾನಗಳನ್ನೊ ದಾಖಲಿಸಿರುತ್ತವೆ. ಹೀಗೆ ದಾಖಲಿಸುವಾಗ ಆ ವಿವರಗಳು ಮಾಹಿತಿಯ ಮಟ್ಟದಲ್ಲಿ ಮಾತ್ರವೇ ಇರುತ್ತದೆ. ಆದರೆ ಮೌಖಿಕ ಸಾಹಿತ್ಯವು ಪಾರಂಪರಿಕ ಆಕರಗಳು ಒದಗಿಸುವ ಮಾಹಿತಿಗಿಂತ ಭಿನ್ನವಾಗಿ ಅನುಭವ ಸತ್ಯವೊಂದನ್ನು ಮಂಡಿಸುತ್ತದೆ.

ಆಧುನಿಕೋತ್ತರ ಸಂದರ್ಭದಲ್ಲಿ ಚರಿತ್ರೆಯ ರಚನೆಗೆ ಸಂಬಂಧಿಸಿದಂತೆ ಹೊಸ ವ್ಯಾಖ್ಯಾನ, ಚಿಂತನೆಗಳು ವಿದ್ವತ್ ವಲಯದಲ್ಲಿ ಕಂಡು ಬರುತ್ತಿದೆ. ಸಬಾಲ್ಟರ್ನ್ ಚರಿತ್ರೆಯ ಸಿದ್ಧಾಂತವು ಮುನ್ನಲೆಗೆ ಬಂದಿದೆ. ಸಾವಿರಾರು ವರ್ಷಗಳಿಂದ ಈ

ಭೂಮಿಯಲ್ಲಿ ಬಾಳಿ ಬದುಕಿರುವ ಪ್ರತಿಯೊಂದು ಸಮುದಾಯಕ್ಕೂ ತನ್ನದೇ ಆದ ಚರಿತ್ರೆಯಿದೆ. ಅವರ ನೋವು, ನಲಿವು, ಆಹಾರ ಕ್ರಮ, ಜೀವನ ವಿಧಾನ, ನಂಬಿಕೆ ಇತ್ಯಾದಿಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಈವರೆಗೆ ದಾಖಲಾಗದ ಅಕ್ಷರವಂಚಿತ ಜನರ ಚರಿತ್ರೆಯನ್ನು ಬರೆಯಬೇಕು, ಅವರ ಬದುಕಿನೊಳಗಿಂದ ದೊರೆಯುವ ಆಕರ ಸಾಮಾಗ್ರಿಗಳನ್ನು ಸಂಗ್ರಹಿಸಬೇಕು ಎನ್ನುವ ಒತ್ತಾಯವೂ, ಒತ್ತಾಸೆಯೂ ಸಂಶೋಧನಾ ವಲಯದಿಂದ ಬರುತ್ತಿದೆ.

ಸಬಾಲ್ಟರ್ನ್ ಚರಿತ್ರಾ ಸಿದ್ಧಾಂತಿಗಳು, ಪ್ರಧಾನ ಧಾರೆಯ ಚರಿತ್ರೆಯ ಬರವಣಿಗೆಯ ಒಳಗೆ ಅಧೀನ, ಅಂಚಿನ, ಪರಿಶಿಷ್ಟ, ಕಂಠಸ್ಥ ಜನರ ಆಕರಗಳು ಸೇರದೇ ಇರುವುದಕ್ಕೆ ಕಾರಣಗಳನ್ನು ನೀಡುತ್ತಾರೆ. ಸಾಂಪ್ರದಾಯಿಕ ಇತಿಹಾಸ ರಚನಾಕಾರರು ಅಕ್ಷರಗಳಲ್ಲಿ ದಾಖಲಾಗದ ಕಂಠಸ್ಥ ಪರಂಪರೆಗೆ ಸೇರಿದ ದಾಖಲೆಗಳು ಯೋಗ್ಯವಾದ ಆಕರ ಸಾಮಾಗ್ರಿಗಳಾಗಲು ಅರ್ಹವಲ್ಲ ಎಂದು ತಮ್ಮ ಮಡಿವಂತಿಕೆಯಿಂದ ಹೊರಗಿರಿಸಿದರು. ಇನ್ನೊಂದು ಕಾರಣ, ಸಾಂಪ್ರದಾಯಿಕ ಇತಿಹಾಸದ ಆಕರಗಳೆಲ್ಲವೂ ಸಾಮಾನ್ಯವಾಗಿ ಅಧಿಕಾರ ಕೇಂದ್ರಗಳಲ್ಲಿ ಸುಲಭದಲ್ಲಿ ಲಭ್ಯವಾಗುವ ಆಕರಗಳು. ಇವು ಇತಿಹಾಸಕಾರರಿಗೆ ಸುಲಭದಲ್ಲಿ ದೊರೆಯುತ್ತಿತ್ತು.

ವ್ಯಕ್ತಿ ಕೇಂದ್ರಿತವಾಗಿ ರಚನೆಗೊಳ್ಳುವ ಚರಿತ್ರೆಯ ನಿರೂಪಣೆಯಲ್ಲಿ ಸಮುದಾಯದ ಭಾಗವಹಿಸುವಿಕೆ ಗೈರಾಗಿರುತ್ತದೆ. ಕೆಲವು ಸಂದರ್ಭದಲ್ಲಿ ಸಮುದಾಯ ಕೇಂದ್ರಿತ ಪ್ರಜ್ಞೆ ಕನಿಷ್ಠ ಪ್ರಮಾಣದಲ್ಲಿ ಕಂಡು ಬಂದರೂ ಕೂಡ ಅವು ಪ್ರಧಾನ ಚರಿತ್ರೆಗೆ ಪೋಷಕ ಸಾಮಾಗ್ರಿಯಾಗಿ ಮಾತ್ರ ಬಳಕೆಗೊಳ್ಳುತ್ತದೆ. ಇಂಥಹ ಸಂದರ್ಭದಲ್ಲಿ ಸ್ವತಂತ್ರ ಐಡೆಂಟಿಟಿಯನ್ನು ಪ್ರತಿನಿಧಿಸುವ ಪಾತ್ರವಾಗಿ ಸಮುದಾಯದ ಪಾಲ್ಗೊಳ್ಳುವಿಕೆ ಕಂಡುಬರುವುದಿಲ್ಲ. ಸಮುದಾಯದ ಜಾಗೃತ ಪ್ರಜ್ಞೆ, ಬದುಕಿನ ಲಯ, ನೋವು–ನಲಿವು, ಹಾಡು – ಪಾಡು, ಉಣಿಸು– ತಿನಿಸು, ಪ್ರತಿಭಟನೆ, ಸ್ವಾಭಿಮಾನ ಮೊದಲಾದ ಸಾಮಾನ್ಯ ವಿಷಯಗಳನ್ನು ದಾಖಲಿಸುವ ಪ್ರಯತ್ನಗಳು ನಡೆಯಲಿಲ್ಲ. ಈ ಬಗೆಯ ಒಟ್ಟು ಜನಪದ ಬದುಕಿನ ಭಾವಸಮೃದ್ಧ ಅಂಶಗಳನ್ನು ಮುಂದಿಡುವ ಆಕರಗಳನ್ನು ಕಟ್ಟುಕತೆ, ಜನಪದದ ಸಾಮಾನ್ಯ ಆಶಯಗಳೆಂದು ಪರಿಗಣಿಸಿ ತಿರಸ್ಕರಿಸಲಾಗಿದೆ.

* * *

ಕಂಠಸ್ಥ ಪರಂಪರೆಯ ಜಾನಪದದಲ್ಲಿ ಮೂಲ ಪಠ್ಯವೆಂಬ ಕಲ್ಪನೆ ಇಲ್ಲ. 'ಗತಕಾಲದ ಘಟನೆಗಳನ್ನು ಕುರಿತು ಒಬ್ಬ ನಿರೂಪಕನು ಕೊಡುವ ಯಾವುದೇ ಹೇಳಿಕೆಯನ್ನು ಪಠ್ಯ ಎಂದು ಗುರುತಿಸಬಹುದು'[2] ಜನಪದದಲ್ಲಿ ಸಮಸ್ಯೆ ಏನೆಂದರೆ ಒಂದೇ ವಿಷಯದ ಬಗ್ಗೆ ಅನೇಕ ಪಠ್ಯವನ್ನು ಗುರುತಿಸಬಹುದು. ಪ್ರದೇಶ, ನಿರೂಪಕರನ್ನು ಅನುಸರಿಸಿಕೊಂಡು ಸೂಕ್ಷ್ಮ ವ್ಯತ್ಯಾಸಗಳೂ ಕಂಡುಬರುತ್ತವೆ. ಇಂತಹ ಸಂದರ್ಭದಲ್ಲಿ ವಿಶ್ವಸನೀಯವೆನಿಸುವ ಸಂಗತಿಗಳನ್ನು ಗುರುತಿಸುವುದು ಮುಖ್ಯ. ಭೌತಿಕ ವಸ್ತುಗಳು ಕಂಠಸ್ಥ ಪರಂಪರೆಯ ಪಠ್ಯಗಳ ಹಾಗೆ ಬಹು ಬೇಗನೆ ಬದಲಾಗುವ ವಸ್ತುಗಳಲ್ಲ. ಒಂದು ವಸ್ತುವಿನ ಜೊತೆಗೆ ಅದರ ಉಲ್ಲೇಖವಿರುವ ಮೌಖಿಕ ಕಥನಗಳು ಸಿಗಬಹುದು. ಒಂದು ಜನವರ್ಗದಲ್ಲಿ ಇರುವ ನಂಬಿಕೆಗಳು, ವಿಧಿನಿಷೇಧಗಳು ಸಾಮಾಜಿಕ ಐತಿಹಾಸಿಕ ಸಂಗತಿಗಳ ಕಡೆಗೂ ಇದು ಆಕರ್ಷಿಸಬಹುದಾಗಿದೆ.

ಜನಪದ ಪರಂಪರೆಯ ಆಕರಗಳನ್ನು ಬಳಸಿಕೊಳ್ಳುವಾಗ ಎದುರಾಗುವ

ಸಮಸ್ಯೆ ಅದರ ನೈಜತೆಗೆ ಸಂಬಂಧಿಸಿದ್ದಾಗಿದೆ. ಜನಪದದಲ್ಲಿ ವಾಸ್ತವ ಸಂಗತಿಗಳಿಗೆ ಕಲ್ಪನೆಯ ಬಣ್ಣ ಬಂದಿರಬಹುದು. "ಒಂದು ಘಟನೆಯನ್ನು ಕಣ್ಣಾರೆ ನೋಡಿದ ನಂಬಲರ್ಹ ವ್ಯಕ್ತಿಗಳ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಮೌಖಿಕ ವಿವರಣೆಗಳು ಸಮಾನವಾಗಿದ್ದಾಗ ಅದು ಲಿಖಿತ ಮೂಲಗಳಿಂದ ದೊರೆಯದ ವಸ್ತು ನಿಷ್ಠತೆ ಮತ್ತು ನೈಜತೆಯನ್ನು ಕೊಡಬಲ್ಲುದು"[3]

ಜನಪದ ಮೌಖಿಕ ಪಠ್ಯಗಳನ್ನು ಅಧ್ಯಯನ ನಡೆಸುವ ಸಂಶೋಧಕನು ಒಂದು ಕಥನದ ಒಳಗೆ ಸೇರಿರಬಹುದಾದ ಐತಿಹಾಸಿಕ ಸತ್ಯ ಮತ್ತು ಕಾಲ್ಪನಿಕ ಅಂಶಗಳನ್ನು ನಿಕಷಕ್ಕೊಡ್ಡಬೇಕು. ಸ್ಮರಣೆಯ ರೂಪದಲ್ಲಿ ದಾಖಲುಗೊಂಡಿರುವ ಜನಪದ ಪಠ್ಯಗಳು ಜನಪದ ಗಾಯಕನ ಸಾಮಾಜಿಕ, ಸಾಂಸ್ಕೃತಿಕ ಪರಿಸರಗಳು ಪ್ರಭಾವಬೀರುತ್ತವೆ. ಪಠ್ಯಗಳು ಉದ್ದೇಶಪೂರ್ವಕವಲ್ಲದೆಯೂ ಎಷ್ಟೋ ಅತಿರಂಜಿತ, ವೈಭವೀಕರಣದ ಸಂಗತಿಗಳನ್ನು ಒಳಗೊಂಡಿರುವ ಸಾಧ್ಯತೆಯು ಹೆಚ್ಚಾಗಿರುತ್ತದೆ. ಹಾಗಾಗಿ ಸಂಶೋಧಕನು ವಾಸ್ತವತೆಯನ್ನು ಕಂಡುಹಿಡಿಯುವ ವ್ರತನಿಷ್ಠನಾಗಿರಬೇಕು. ಕಾಲ್ಪನಿಕ ಸಂಗತಿಗಳ ಬಾಹ್ಯಲೇಪನದಿಂದ ವಾಸ್ತವಿಕ ಸತ್ಯವನ್ನು ರಕ್ಷಿಸಬೇಕು. ಈ ಬಗೆಯ ಅಧ್ಯಯನಕ್ಕಿರುವ ವಿಧಾನವೆಂದರೆ, ಬಹುಪಠ್ಯಗಳನ್ನು ಅಧ್ಯಯನ ನಡೆಸುವುದು ಮತ್ತು ಮೌಖಿಕ ಪಠ್ಯದ ಜೊತೆಯಲ್ಲಿ ಭೌತಿಕ ವಸ್ತುಪರಿಕರಗಳನ್ನು ಜೋಡಿಸಿಕೊಳ್ಳುವುದು.

ಮೌಖಿಕ ಪಠ್ಯಗಳು ಬದಲಾಗಬಹುದು. ದೇಶ ಕಾಲದ ಹಿನ್ನೆಲೆಯಲ್ಲಿ ಅನೇಕ ಅಂಶಗಳು ಮತ್ತೆ ಸೇರಿಕೊಳ್ಳುವ ಸಾಧ್ಯತೆಯೂ ಇದೆ. ಹಾಗಾಗಿ ಮೌಖಿಕ ಪಠ್ಯಗಳ ಐತಿಹಾಸಿಕ ಸತ್ಯ ಹಾಗೂ ಕಾಲ್ಪನಿಕ ಅಂಶಗಳನ್ನು ಗುರುತಿಸುವುದು ಮುಖ್ಯವಾಗುತ್ತದೆ. ಬದಲಾಗದೆ ಇರುವ ವಸ್ತುರೂಪದ ಪರಿಕರಗಳಿಂದ ಈ ಮೌಖಿಕ ಪಠ್ಯಗಳನ್ನು ಅದರ ಚಾರಿತ್ರಿಕ ಅಂಶಗಳನ್ನು ಪತ್ತೆಮಾಡಲು ಅನುಕೂಲವಾಗುವುದು. ಕಂಠಸ್ಥ ಪರಂಪರೆಯ ಜನಪದರು ತಮ್ಮ ಆಲೋಚನೆಗಳನ್ನು ನಂಬಿಕೆ, ಸಂಸ್ಕೃತಿಗಳನ್ನು ವಸ್ತುರೂಪದ ಆಕರದ ಜೊತೆಗೆ ಕಟ್ಟಿಕೊಂಡಿರುತ್ತಾರೆ. ಹಾಗಾಗಿ ಮೌಖಿಕ ಪಠ್ಯಗಳ ಜೊತೆಯಲ್ಲಿ ಕಣ್ಣಿಗೆ ಕಾಣುವ, ಅನುಭವಕ್ಕೆ ದಕ್ಕುವ ವಸ್ತುರೂಪದ ಆಕರಗಳನ್ನು ಬಳಸಿಕೊಂಡಾಗ ಸತ್ಯವು ಹೆಚ್ಚು ನಿಚ್ಚಳವಾಗಿ ಕಾಣಿಸುತ್ತದೆ.

"ಪರಿವರ್ತನಶೀಲವಾದ ಜೀವನಕ್ಕೆ ಸಂಬಂಧಿಸಿದ ಭೌತಿಕ ಹಾಗೂ ಭಾವ ಸಂಬಂಧಿ ವಿಷಯಗಳೆಲ್ಲ ಬದಲಾಗುತ್ತಾ ಹೋಗುತ್ತದೆ. ಬಳಕೆಯಲ್ಲಿಲ್ಲದಿದ್ದರೂ ಬದುಕಿಗೆ ಸಂಬಂಧಿಸಿದ ಹಳೆಯ ವಸ್ತುಗಳಿಗೆ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಭಾವನಾತ್ಮಕ ಮೌಲ್ಯ ಇದ್ದೇ ಇದೆ. ಯಾವ ವಸ್ತುಗಳೂ ನಿಷ್ಪ್ರಯೋಜಕವಲ್ಲ"[4] ವಸ್ತುರೂಪದ ಪರಿಕರಗಳು ಪ್ರಧಾನವಾಗಿ ಮೂರು ಆಯಾಮಗಳನ್ನು ಒಳಗೊಂಡಿರುತ್ತದೆ. ಒಂದು, ಚಾರಿತ್ರಿಕ ಆಯಾಮ, ಇನ್ನೊಂದು ಸಾಂಸ್ಕೃತಿಕ, ಮೂರನೆಯದ್ದು, ಭಾವನಾತ್ಮಕ ನೆಲೆ. ಜನಪದರ ಬದುಕಿನ ಕ್ರಿಯೆಯಲ್ಲಿ ಬಹುಪ್ರಧಾನ ಪಾತ್ರವಹಿಸಿರುವ ಈ ವಸ್ತುಪರಿಕರಗಳು ಒಂದು ಕಾಲದ ಜನರ ಬದುಕಿನ ಕ್ರಮದ ಜೀವಂತ ದಾಖಲೆಗಳು. ಜನಪದ ಕಥನಗಳು ಹೇಳುವ ಲೋಕದೃಷ್ಟಿಯ ಅಂಶಗಳು ಈ ಬಗೆಯ ವಸ್ತುರೂಪದ ಪರಿಕರಗಳ ಸುತ್ತ ಹೆಣೆದುಕೊಂಡಿರುತ್ತದೆ.

ಮೌಖಿಕ ಪರಂಪರೆ ಜೀವಂತವಾಗಿರುವುದೇ ವಸ್ತುರೂಪದ ಪರಿಕರಗಳಿಂದಾಗಿದೆ. ಮೌಖಿಕ ಕಥನಗಳಲ್ಲಿ ಬರುವ ವಸ್ತುರೂಪದ ಅಂಶಗಳನ್ನು ನಿಖರವಾಗಿ

ಕಂಡುಹಿಡಿಯುವುದರಿಂದ ಒಂದು ಪಠ್ಯದ ರಚನೆ, ಕಾಲ, ಮತ್ತು ಜೀವನ ವಿಧಾನವನ್ನು ಸರಳವಾಗಿ ಕಂಡುಹಿಡಿಯಬಹುದು. ಜನಪದ ಇತಿಹಾಸ ರಚನೆಯಲ್ಲಿ ಕಂಠಸ್ಥ ಪರಂಪರೆಯ ಆಕರಗಳಷ್ಟೇ ಪ್ರಧಾನವಾಗಿ ಅವರು ಬಳಸಿದ ವಸ್ತುಪರಿಕರಗಳನ್ನೂ ಪರಿಗಣಿಸಬೇಕು. ವಸ್ತುರೂಪದ ಪರಿಕರಗಳಲ್ಲಿ ವಸ್ತುವಿನ ರಚನೆಯ ನೆಲೆಯಲ್ಲಿ ಸೂಕ್ಷ್ಮವಾದ ಪಲ್ಲಟಗಳು ಆಗಿರಬಹುದೇ ಹೊರತು ಒಟ್ಟು ಸಂರಚನೆಯಲ್ಲಿ ಅಲ್ಲ. ಹಾಗಾಗಿ ವಸ್ತುರೂಪದ ಆಕರಗಳನ್ನು ಉಪೇಕ್ಷಿಸುವಂತಿಲ್ಲ. ಅವುಗಳ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ವ್ಯವಸ್ಥಿತವಾಗಿ ದಾಖಲಿಸುವ ಮೂಲಕ ಜನಪದ ಚರಿತ್ರೆಯ ರಚನೆಗೆ ಸಮೃದ್ಧವಾದ ಆಕರವನ್ನಾಗಿ ಪರಿಗಣಿಸಬಹುದಾಗಿದೆ.

**ಕೊನೆ ಟಿಪ್ಪಣಿಗಳು**

1. ಡಾ. ಬಿ.ಎ. ವಿವೇಕ ರೈ, ಅನ್ವಯಿಕ ಜಾನಪದ, 1995, ಪು.96
2. ಡಾ. ಬಿ.ಎ. ವಿವೇಕ ರೈ, ಅನ್ವಯಿಕ ಜಾನಪದ, 1995, ಪು.92
3. ಡಾ. ಬಿ.ಎ. ವಿವೇಕ ರೈ, ಅನ್ವಯಿಕ ಜಾನಪದ, 1995, ಪು.91
4. ಅಮೃತ ಸೋಮೇಶ್ವರ:ತುಳುವ ಜಾನಪದ:ಕೆಲವು ನೋಟಗಳು, 2007

❖❖❖

**ಅಂತೂ ಇಂತೂ ಕಳೆಯಿತು ವರುಷವು**
**ದರ್ಜಿಯು ಬಟ್ಟೆಯ ಒಪ್ಪಿಸಿದ**
**ಅರಸು ಉಡುಪನು ತೊಡುವ ಮೂರ್ತವನು**
**ಜೋಯಿಸರಲ್ಲಿ ಹೇಳಿಸಿದ**

# ರಂಗಕಲಾವಿದೆಯರ ಕುರಿತ ಸಂಶೋಧನಾ ಅಧ್ಯಯನ ಸಾಧ್ಯತೆಗಳು

**ಡಾ. ರವಿ ಎನ್.ಸಿ.**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ವಿಜ್ಞಾನ ಕಾಲೇಜು, ಸ್ವಾಯತ್ತ ಹಾಸನ

ರಂಗಭೂಮಿಯ ಕಲಾವಿದೆಯರಲ್ಲಿ ಹೆಚ್ಚಿನವರು ಅನಕ್ಷರಸ್ಥರಾಗಿರುವುದರಿಂದ ತಮ್ಮ ಆತ್ಮಕತೆಗಳನ್ನು ಹೆಚ್ಚಿನವರು ತಾವೇ ಬರೆದಿಡಲಾರರು. ಹೀಗೆ ಬರೆದಿಡದಿದ್ದಾಗ ಅವರ ಜೀವನಾನುಭವಗಳು ಅವರೊಂದಿಗೆ ಕಣ್ಮರೆಯಾಗುತ್ತವೆ. ಈ ದಿಸೆಯಲ್ಲಿ ಪ್ರತಿಯೊಬ್ಬ ರಂಗಭೂಮಿ ಕಲಾವಿದೆಯರ ಅನುಭವಗಳು ವಿಶೇಷವೆನಿಸುವುದರಿಂದ, ಮತ್ತೆ ಕೆಲವು ವಿಭಿನ್ನವಾಗಿರುವುದರಿಂದ ಕೆಲವು ಕಲಾವಿದೆಯರ ಆತ್ಮಕತೆಗಳು ನಿರೂಪಕರ ನೆರವಿನಿಂದ ದಾಖಲಾಗಿವೆ. ಕನ್ನಡ ರಂಗಭೂಮಿ ಕಲಾವಿದೆಯರಲ್ಲಿ ಬಹುತೇಕ ಕಲಾವಿದೆಯರು ತಮ್ಮ ಆತ್ಮಕತೆಗಳನ್ನು ಬರೆದಿಲ್ಲ. ಅವರ ಜೀವನ, ವ್ಯಕ್ತಿತ್ವ, ಕಲಾ ಸಾಧನೆಗಳೆಲ್ಲವನ್ನೂ ಇತರರು ನಿರೂಪಿಸಿದ ಜೀವನ ಚರಿತ್ರೆಗಳಲ್ಲಿ ದಾಖಲಿಸಿದ್ದಾರೆ. ಆದರೆ ಆಧುನಿಕ ಕನ್ನಡ ಗದ್ಯ ಸಾಹಿತ್ಯದಲ್ಲಿ ಆತ್ಮಚರಿತ್ರೆ ಮತ್ತು ಜೀವನ ಚರಿತ್ರೆಗಳ ಇತಿಹಾಸವನ್ನು ಗಮನಿಸಿದಾಗ ಆತ್ಮಚರಿತ್ರೆ ಎಂಬುದು ಜೀವನ ಚರಿತ್ರೆಗಳಿಂದ ನಂತರದಲ್ಲಿ ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಂಡಿರುವುದನ್ನು ಗಮನಿಸಬಹುದು. ಮೊದಲು ಜೀವನ ಚರಿತ್ರೆಗಳಲ್ಲಿಯೇ ಆತ್ಮಚರಿತ್ರೆ ಬೆರೆತು ಹೋಗಿತ್ತು.

ರಂಗಭೂಮಿ ಕಲಾವಿದೆಯರ ಆತ್ಮಕತೆಗಳು ಮತ್ತು ಜೀವನಚರಿತ್ರೆಗಳು ಸಂಸ್ಕೃತಿ ಚಿಂತನೆಯಲ್ಲಿ ತಿರಸ್ಕಾರಕ್ಕೆ ಒಳಗಾಗದೆ ಸ್ವೀಕಾರಾರ್ಹವಾಗಬೇಕು, ಪರಿಗಣಿತವಾಗಬೇಕು ಎಂಬ ಚಿಂತನೆಯನ್ನು ಈ ಅಧ್ಯಯನವು ಒಳಗೊಂಡಿದೆ. ಇಂತಹ ಆತ್ಮಕತೆಗಳು ರಂಗಭೂಮಿಯ ಸಮುದಾಯವನ್ನು ಪ್ರತಿನಿಧಿಸುವ ಮೂಲಕ ಬಹುಸಂಸ್ಕೃತಿಯನ್ನು ದಾಖಲಿಸುತ್ತವೆ. ಇವರ ಈ ಕೃತಿಗಳಲ್ಲಿ ಬದುಕಿನ ರೀತಿ ನೀತಿಗಳು, ಸಾಂಸ್ಕೃತಿಕ ತಲ್ಲಣಗಳ ಅನಾವರಣವಿರುವುದರಿಂದ ಇವು ಹತಾಶರಾದವರ ಬದುಕಿಗೆ ಮಾರ್ಗದರ್ಶನ ನೀಡಬಲ್ಲವು. ರಂಗಭೂಮಿಯ ಕಲಾವಿದೆಯರ ಆತ್ಮಕತೆಗಳ ಜೊತೆಗೆ ಪೂರಕ ಗ್ರಂಥಗಳಾಗಿ ರಂಗಭೂಮಿಯ ಕಲಾವಿದೆಯರ ಜೀವನ ಚರಿತ್ರೆಗಳನ್ನು ಗಮನಿಸಲಾಗಿದೆ. ಇವುಗಳಲ್ಲಿ ಸಾಂಸ್ಕೃತಿಕ ಸಂಗತಿಗಳು ಬಿಂಬಿತವಾಗಿರುವುದರಿಂದ, ಸಂಸ್ಕೃತಿ ಅಧ್ಯಯನಕ್ಕೆ ಪ್ರಸ್ತುತವಾಗಬಲ್ಲವೆಂಬ ಉದ್ದೇಶದಿಂದ ಈ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಅಸಂಖ್ಯ ರಂಗಕಲಾವಿದೆಯರ ಬದುಕು ಇತಿಹಾಸದ ಪುಟಗಳಲ್ಲಿ ಸೇರಿ, ಕಾಲ ಕಳೆದಂತೆ ಮುಸುಕಾಗುತ್ತಾ ಹೋದದ್ದು ಸಹಜ. ಈಗಲಾದರೂ ನಾವು ಲಭ್ಯವಿರುವ. ಲಭ್ಯವಾಗುವ ಎಲ್ಲಾ ವಿವರಗಳನ್ನು ಸಂಗ್ರಹಿಸಿ, ಈಗ ನಮ್ಮೊಡನಿರುವ ಕಲಾವಿದರ ಬದುಕಿನ ವರ್ಣಮಯ ನೆನಪುಗಳನ್ನು ಇತಿಹಾಸದ ಅರ್ಥಪೂರ್ಣ ಪುಟಗಳನ್ನಾಗಿ ಪರಿವರ್ತಿಸಲು ಯತ್ನಿಸುವುದು ಅಗತ್ಯವಾಗಿ ಆಗಬೇಕಾದ ಕಾರ್ಯ.

ರಂಗಭೂಮಿಯ ತೆರೆಯ ಮೇಲೆ ನಾಯಕಿಯರಾಗಿ ವರ್ಣರಂಜಿತವಾಗಿ ಬಾಳಿದ

ರಂಗಕಲಾವಿದೆಯರ ಅಂತರಂಗದ ಖಾಸಗಿ ಬದುಕನ್ನು ಇಣುಕಿ ನೋಡಿದರೆ ಅವರ ಖಾಸಗಿ ಬದುಕು ಅಷ್ಟೇ ವರ್ಣರಂಜಿತವಾಗಿಲ್ಲದಿರುವುದು ಅರಿವಾಗುತ್ತದೆ. ರಂಗದಲ್ಲಿ ಅವರಿಗೆ ಸದಾ ಎದುರಾಗುವ ಅಭಿಮಾನಿಗಳ ಕಾಟ ಒಂದೆಡೆಯಾದರೆ, ಅವರ ವೈಯಕ್ತಿಕ ಜೀವನದ ಸಾಂಸಾರಿಕ ತೊಂದರೆಗಳು, ಬಿಕ್ಕಟ್ಟುಗಳು, ಸಹನಟರು ಮತ್ತು ಕಂಪನಿ ಮಾಲೀಕರ ಜೊತೆ ತಮ್ಮ ಸಂಬಂಧವನ್ನು ನಾಜೂಕಾಗಿ ಉಳಿಸಿಕೊಳ್ಳುವ ಅವರ ಅನಿವಾರ್ಯತೆಗಳು ಅವರನ್ನು ಕಾಡುತ್ತಿರುತ್ತವೆ. ಈ ಎಲ್ಲಾ ವಿವರಗಳು ಒಂದು ಬೃಹತ್ ಸಾಹಿತ್ಯ ಕೃತಿಯಾಗುವಷ್ಟು ವಿಷಯದ ಹರವು ರಂಗಭೂಮಿ ಕಲಾವಿದೆಯರ ಆತ್ಮಕತೆಗಳಲ್ಲಿ ಮೂಡಿ ಬಂದಿರುತ್ತವೆ.

ಹೆಣ್ಣೊಬ್ಬಳು ರಂಗಭೂಮಿ ಕಲಾವಿದೆಯಾಗಿ ಅನೇಕ ಅಗ್ನಿದಿವ್ಯಗಳನ್ನು ಹಾದುಕೊಂಡು ಬರಬೇಕು ಎನ್ನುವ ಹಲವು ಚಿತ್ರಣಗಳು ಕಲಾವಿದೆಯರ ಆತ್ಮಕತೆಗಳಲ್ಲಿ ಮೂಡಿಬಂದಿವೆ. ಇವರ ಜೀವನ ವಿವರಗಳು ಇನ್ನುಳಿದ ಕಲಾವಿದರಿಗೆ ಬದುಕಿನಲ್ಲಿ ಪಾಠಗಳಾಗುತ್ತವೆ. ಬದುಕಿನ ಅನಿವಾರ್ಯತೆಗಳಿಂದ ಕಲಾ ಪ್ರಪಂಚಕ್ಕೆ ಬಂದು ಅಲ್ಲಿಯೇ ಬಹಳಷ್ಟು ಸಾಧಿಸಿ. ಇತಿಹಾಸ ನಿರ್ಮಾಣ ಮಾಡಿರುವ ರಂಗಭೂಮಿ ಕಲಾವಿದೆಯರು ನಮ್ಮ ನಡುವಿದ್ದಾರೆ. ಅಭಿನಯವನ್ನೇ ಉಸಿರಾಗಿ ಬದುಕುತ್ತಿದ್ದ ಈ ಅಭಿಜಾತ ಕಲಾವಿದೆಯರು ಮಾನಕ್ಕಾಗಿ, ಸ್ವಾಭಿಮಾನಕ್ಕಾಗಿ, ಕರುಳಿನ ಕುಡಿಗಾಗಿ, ತಾಯಿ–ತಂಗಿಯರಿಗಾಗಿ, ವೃತ್ತಿ ಗೌರವಕ್ಕಾಗಿ ಶ್ರಮಿಸಿರುವ ವಿವರಗಳು ರಂಗಕಲಾವಿದೆಯರ ಆತ್ಮಕತೆ ಮತ್ತು ಜೀವನಚರಿತ್ರೆಗಳಲ್ಲಿ ದಾಖಲಾಗಿದೆ. ಮಹಿಳಾ ಕಲಾವಿದೆಯರು ಹೆಣ್ಣು ಎಂಬ ಕಾರಣಕ್ಕಾಗಿಯೇ ಎದುರಿಸಿದ ತೊಂದರೆಗಳು, ಅವರ ಸುತ್ತ ಹುಟ್ಟಿಕೊಳ್ಳುವ ಊಹಾಪೋಹಗಳು, ಇದರಿಂದ ಇಂಥವರ ಜೀವನದಲ್ಲಿ ಆಗುವ ಪಲ್ಲಟಗಳು ಅವರ ಆತ್ಮಕತೆಗಳಲ್ಲಿ ತಿಳಿಯುತ್ತವೆ.

ರಂಗಭೂಮಿ ಕಲಾವಿದೆಯರ ಆತ್ಮಕತೆಗಳಿಗೆ ಕರ್ನಾಟಕದ ರಂಗಭೂಮಿಯ ಇತಿಹಾಸದಲ್ಲಿ ಅನನ್ಯವಾದ ಸ್ಥಾನವಿದೆ. ಕರ್ನಾಟಕದ ವೃತ್ತಿ ನಾಟಕ ಕಂಪನಿಗಳ ಇತಿಹಾಸ ಮತ್ತು ಹವ್ಯಾಸಿ ನಾಟಕಗಳ ಚರಿತ್ರೆಯನ್ನು ನಿರೂಪಿಸುವಲ್ಲಿ ಈ ಕೃತಿಗಳೆಲ್ಲ ಆಕರ ಗ್ರಂಥಗಳಾಗಿ ಉಪಯುಕ್ತವಾಗುತ್ತವೆ.

ನಾಡಿನ ವೃತ್ತಿ ರಂಗಭೂಮಿಗೆ ಕಲಾವಿದೆಯರ ಕೊಡುಗೆ ಹಿರಿದಾಗಿದೆ. ಆದರೆ ಇಂಥ ಕಲಾವಿದೆಯರ ಬದುಕನ್ನು ಕುರಿತ ಪುಸ್ತಕಗಳಾಗಲಿ, ಧ್ವನಿ ಸುರುಳಿಗಳಾಗಲಿ ಬಾರದಿದ್ದುದ್ದು ದುರದೃಷ್ಟಕರ. ಪುರುಷ ಕೇಂದ್ರಿತ ಸಮಾಜದ ಚಿಂತನೆಗಳಲ್ಲಿ ಬಾಳಿದ ರಂಗಭೂಮಿಯ ಕಲಾವಿದೆಯರು ತಮ್ಮ ಮನಸ್ಸನ್ನು, ಆಕೆಯ ಅಸ್ಮಿತೆಯನ್ನು ಎಲ್ಲಿಯೂ ದಾಖಲಿಸದೆ ಹೋದುದರಿಂದ ಅವಳ ಬದುಕಿನ ಅನುಭವಗಳೇನು? ಅವಳ ಲೋಕದೃಷ್ಟಿ ಏನಿತ್ತು? ರಂಗಕಲಾವಿದೆಯರ ಬದುಕಿನ ಅವಲೋಕನಗಳು ಯಾವುವು? ಎನ್ನುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಿದೆ.

ಬರವಣಿಗೆಯಲ್ಲಿ ತೊಡಗಿಸಿಕೊಂಡ ಇತರೆ ಮಹಿಳೆಯರಂತೆಯೇ ರಂಗಭೂಮಿ ಕಲಾವಿದೆಯರು ತಮ್ಮ ಬದುಕಿನ ಅನಾವರಣದ ಸಂದರ್ಭದಲ್ಲಿ ಆಕೆಗೆ ಇದ್ದಿರಬಹುದಾದ ನಿರ್ಬಂಧಗಳು, ಎದುರಾದ ತೊಡಕುಗಳು, ಹತಾಶೆಗಳು, ಅನುಭವಿಸಿದ ಮಾನಸಿಕ ದೈಹಿಕ ಹಿಂಸೆಗಳು, ರಂಗಭೂಮಿಯಲ್ಲಿ ತನ್ನ ಅಸ್ತಿತ್ವವನ್ನು ಅನನ್ಯತೆಯನ್ನು ಸ್ಥಾಪಿಸಲು ಆಕೆ ನಡೆಸಿದ ಹೋರಾಟ, ಆಕೆಯ ನಟನಾ ಅಭಿವ್ಯಕ್ತಿಯ ತುಡಿತ, ಆಕೆಯ ಮನದಾಳದ

ಮಾತುಗಳು, ನಿರೀಕ್ಷೆಗಳು ಹಂಬಲಗಳು, ಸುತ್ತಲಿನ ಪ್ರಪಂಚಕ್ಕೆ ಆಕೆ ಸ್ಪಂದಿಸಿದ ರೀತಿ ಇವೆಲ್ಲವೂ ಇವರ ಆತ್ಮಕತೆಗಳಲ್ಲಿ ದಾಖಲಾಗಿವೆ. ತಮ್ಮ ಅಂತರಂಗದ ಆಳಕ್ಕಿಳಿದು ತಮ್ಮ ನಿಜವಾದ ಅನಿಸಿಕೆಗಳನ್ನು ಮುಟ್ಟಲು ರಂಗಭೂಮಿ ಕಲಾವಿದೆಯರಿಗೆ ಸಾಧ್ಯವಾಯಿತೇ? ಹೀಗೆ ತೆರೆದಿಡಲು ಇದ್ದ ಹಿಂಜರಿಕೆಗಳೇನು? ಕಾಡಿದ ಗೊಂದಲಗಳು, ಎದುರಾದ ಸಮಸ್ಯೆಗಳು ಏನು? ಎಂಬುದು ಅಧ್ಯಯನಕ್ಕೆ ಒಳಪಡುತ್ತವೆ. ಸ್ತ್ರೀ ಪರಂಪರೆಯ ಅಪೂರ್ವ ಸಂವೇದನೆಗಳಿಗೆ ರಂಗಭೂಮಿಯ ಕಲಾವಿದೆಯರು ತಮ್ಮ ಆತ್ಮಕತೆಗಳಲ್ಲಿ ಹೇಗೆ ಸ್ಪಂದಿಸಿದ್ದಾರೆ ಎಂಬುದರ ಕುರಿತಾಗಿಯೂ ಬೆಳಕು ಚೆಲ್ಲಬೇಕಿದೆ.

ರಂಗಭೂಮಿಯ ಕಲಾವಿದೆಯರ ಬದುಕನ್ನು ಅವರ ಆತ್ಮಕಥೆಗಳ ಮೂಲಕ ಅರಿಯುವ ನಿಟ್ಟಿನಲ್ಲಿ ಈ ಕೆಳಕಂಡ ಅಂಶಗಳ ಮೇಲೆ ಆಸಕ್ತರು ಅಧ್ಯಯನ ಮಾಡಬಹುದಾದ ಸಾಧ್ಯತೆಗಳಿರುತ್ತವೆ.

1. ರಂಗಭೂಮಿ ಕಲಾವಿದೆಯರ ಆತ್ಮಕಥೆಗಳನ್ನು ಮತ್ತು ಜೀವನಚರಿತ್ರೆಗಳನ್ನು ಆಕರಗಳನ್ನಾಗಿಟ್ಟುಕೊಂಡು ಕರ್ನಾಟಕದ ವೃತ್ತಿನಾಟಕ ಕಂಪನಿಗಳ ಮತ್ತು ಹವ್ಯಾಸಿ ನಾಟಕ ಕಂಪನಿಗಳ ಚರಿತ್ರೆಯನ್ನು ನಿರೂಪಿಸುವ ನೆಲೆಯಲ್ಲಿ ಅಧ್ಯಯನ ಕೈಗೊಳ್ಳಬಹುದು.
2. ರಂಗಭೂಮಿ ಕಲಾವಿದೆಯರ ವೈಯಕ್ತಿಕ ಬದುಕು ಮತ್ತು ರಂಗಭೂಮಿಯ ಬದುಕನ್ನು ಎರಡು ನೆಲೆಗಳಿಂದಲೂ ಅಧ್ಯಯನಕ್ಕೆ ಒಳಪಡಿಸಬಹುದು.
3. ರಂಗಭೂಮಿ ಕಲಾವಿದೆಯರು ತಮ್ಮ ವೃತ್ತಿ ಬದುಕಿನಲ್ಲಿ ಎದುರಿಸುವ ಸಂಘರ್ಷಗಳು ಪ್ರತಿರೋಧಗಳ ಅಧ್ಯಯನವನ್ನು ಪ್ರತ್ಯೇಕವಾಗಿಯೇ ಗಮನಿಸಬಹುದು.
4. ವೃತ್ತಿನಾಟಕ ಕಂಪನಿಗಳ ಕಲಾವಿದೆಯರ ಸ್ಥಿತಿಗತಿಯನ್ನು ಮತ್ತು ಹವ್ಯಾಸಿ ನಾಟಕಗಳ ಸ್ಥಿತಿಗಳನ್ನು ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸಬಹುದು.
5. ವೃತ್ತಿನಾಟಕ ಕಂಪನಿಯ ಕಲಾವಿದೆಯರ ಬದುಕಿಗೆ ಹೋಲಿಸಿದಾಗ ಹವ್ಯಾಸಿ ನಾಟಕ ಕಂಪನಿಗಳ ಕಲಾವಿದೆಯರ ಬದುಕಿನ ಸ್ಥಿತ್ಯಂತರಗಳನ್ನು, ಸಂಕ್ರಮಣ ಸ್ಥಿತಿಗಳನ್ನು ಅಧ್ಯಯನಕ್ಕೆ ಒಳಪಡಿಸಬಹುದು.
6. ಆತ್ಮಕಥೆಗಳನ್ನು ಜೀವನ ಚರಿತ್ರೆಗಳನ್ನು ಯಾವುದನ್ನೂ ಬರೆಯದೆ ತಮ್ಮ ಕಲಾ ಬದುಕಿನಲ್ಲಿ ಮಿಂಚಿ ಈಗ ಮರೆವಿಗೆ ಸರಿದಿರುವ, ಅವಜ್ಞೆಗೆ ಒಳಗಾಗಿರುವ ರಂಗಭೂಮಿ ಕಲಾವಿದೆಯರ ಬದುಕನ್ನು ಅಧ್ಯಯನಕ್ಕೆ ಒಳಪಡಿಸಬಹುದು.
7. ರಂಗಭೂಮಿಯ ಹಿನ್ನೆಲೆಯಿಂದ ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಕೆಲವೊಂದು ಜಿಲ್ಲೆಗಳನ್ನು, ಪ್ರದೇಶಗಳನ್ನು ಪ್ರಧಾನವಾಗಿರಿಸಿಕೊಂಡು ಅಲ್ಲಿನ ರಂಗಭೂಮಿಯ ಕಲಾವಿದೆಯರನ್ನು ಗುರ್ತಿಸಿ ಅವರ ಜೀವನ ಮತ್ತು ಕಲಾ ಸಾಧನೆಯನ್ನು ಅಧ್ಯಯನಕ್ಕೆ ಒಳಪಡಿಸಬಹುದು. ಉದಾ: ಮರಿಯಮ್ಮನಹಳ್ಳಿ ರಂಗನಟಿಯರ ಅಧ್ಯಯನ, ಗದುಗಿನ ರಂಗಕಲಾವಿದೆಯರ ಅಧ್ಯಯನ ಇತ್ಯಾದಿ.
8. ಕನ್ನಡ ರಂಗಭೂಮಿ ಮತ್ತು ಸಿನಿಮಾ ಕಲಾವಿದೆಯರ ಆತ್ಮಕಥೆಗಳನ್ನು ಒಟ್ಟಿಗೆ ಅಧ್ಯಯನಕ್ಕೆ ಒಳಪಡಿಸಬಹುದು.
9. ರಂಗಭೂಮಿ ಕಲಾವಿದರ ಆತ್ಮಕಥೆಗಳಿಗೂ ಮತ್ತು ರಂಗಕಲಾವಿದೆಯರ ಆತ್ಮಕಥೆಗಳಿಗೂ ಇರುವ ಸಾದೃಶ್ಯ ಮತ್ತು ಭಿನ್ನತೆಗಳನ್ನು ಗಮನಿಸಿ ಇವರಿಬ್ಬರ ಆತ್ಮಕಥೆಗಳನ್ನು ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸಬಹುದು.

## ಆಕರ ಗ್ರಂಥಗಳು


1. ಮಳವಳ್ಳಿ ಸುಂದರಮ್ಮ ಸೀತಾರಾಮಯ್ಯ ಹಾ.ವೆಂ. – ನಿರೂಪಣೆ
   ಗುಡಿಹಳ್ಳಿ ನಾಗರಾಜ – ಪರಿಷ್ಕರಣೆ, ಅಭಿನಯ ವಿಶಾರದೆ, ಮಳವಳ್ಳಿ ಸುಂದರಮ್ಮ ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, 1975
2. ಬಿ.ಜಯಮ್ಮ, ಶೇಷಗಿರಿರಾವ್ ಮೈ.ಸೂ –ನಿರೂಪಣೆ ಅಭಿನೇತ್ರಿ, ಕಲಾಸಾಹಿತ್ಯ ಪ್ರಕಾಶನ, ಬೆಂಗಳೂರು, 1979
3. ಸರಸ್ವತಿ ದು, ಈಗೇನ್ ಮಾಡೀರಿ?, ಮಾನಸ, ಪಂಚಾಯಿತಿ ರಸ್ತೆ, ಕಾಡುಗೋಡಿ, ಬೆಂಗಳೂರು, 2001
4. ಅನ್ನಪೂರ್ಣ ಸಾಗರ, ಗವೀಶ ಹಿರೇಮಠ – ನಿರೂಪಣೆ, ನನ್ನ ಬದುಕಿನ ಪುಟಗಳಿಂದ ಶ್ರೀ ಸಂಗಮೇಶ್ವರ ಮಹಿಳಾ ಮಂಡಳ, ಗುಲಬರ್ಗಾ, 2007
5. ಚಿಂದೋಡಿಲೀಲಾ, ಗುಡಿಹಳ್ಳಿ ನಾಗರಾಜ – ನಿರೂಪಣೆ, ಚಿಂದೋಡಿಲೀಲಾ, ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು, 2009
6. ಭಾರ್ಗವಿ ನಾರಾಯಣ್, ನಾನು, ಭಾರ್ಗವಿ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು,2012
7. ಉಮಾಶ್ರೀ, ಗಣಪತಿ ಬಿ–ನಿರೂಪಣೆ, ಬೆಂಕಿ ಬೆಡಗು, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ,2013
8. ಮಾಲತಿ ಶ್ರೀ ಮೈಸೂರು, ಗುಡಿಹಳ್ಳಿ ನಾಗರಾಜ – ನಿರೂಪಣೆ, ತೆರೆ ಸರಿಯಿತು, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು, 2013
9. ಮಂಜಮ್ಮ ಜೋಗತಿ, ಚಂದ್ರಪ್ಪ ಸೊಬಟಿ – ನಿರೂಪಣೆ, ಮಂಜಮ್ಮ ಜೋಗತಿ, ವಿಸ್ತರಣೆ ಹಾಗೂ ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಗೊಟಗೋಡಿ, 2014
10. ಪ್ರತಿಭಾ ನಂದಕುಮಾರ್, ಅನುದಿನದ ಅಂತರಗಂಗೆ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ,2014
11. ಶಾಂತಹುಬಳೀಕರ, ಶಶಿಕಲಾ ಉಪಾಧ್ಯೆ– ಮೂಲ, ಕುಲಕರ್ಣಿ ಕೆ.ಎಸ್.– ಅನುವಾದ, ನಾಳೀನ ಚಿಂತ್ಯಾಕೆ ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, 2016
12. ಬಿ ಜಯಶ್ರೀ, ಪ್ರೀತಿನಾಗರಾಜ – ನಿರೂಪಣೆ, ಕಣ್ಣಾಮುಚ್ಚೇ.., ಕಾಡೇ ಗೂಡೇ.., ಮನೋಹರ ಗ್ರಂಥಮಾಲಾ, ಧಾರವಾಡ, 2016
13. ಕಲ್ಪನಾ, ರವಿ ಬೆಳೆಗೆರೆ – ನಿರೂಪಣೆ, ಕೆ.ಬಿ.ಪಂಕಜ – ವಿಷಯ ಸಂಗ್ರಹ, ಕಲ್ಪನಾ ವಿಲಾಸ ಭಾವನಾ ಪ್ರಕಾಶನ, ಬೆಂಗಳೂರು, 2017
14 ವಿಜಯಾ ಡಾ., ಕುದಿ ಎಸರು, ನಾಕುತಂತಿ ಪ್ರಕಾಶನ, ಬೆಂಗಳೂರು., 2017
15. ಪ್ರೇಮಾ ಕಾರಂತ್ ಸೋಲಿಸಬೇಡ, ಗೆಲಿಸಯ್ಯಾ, ಮನೋಹರ ಗ್ರಂಥಮಾಲಾ, ಧಾರವಾಡ, 2018
16. ಕೆ. ನಾಗರತ್ನಮ್ಮ, ಗುಡಿಹಳ್ಳಿ ನಾಗರಾಜ – ನಿರೂಪಣೆ ಮರಿಯಮ್ಮನಹಳ್ಳಿ, ರಂಗಸಿರಿ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾನಿಲಯ, ಹಂಪಿ, 2019


❖❖❖

# ಭಾರತದ ಸಂಸ್ಕೃತಿಯ ಲಕ್ಷಣಗಳು–ಒಂದು ಅಧ್ಯಯನ

**ಡಾ. ಸಂಜೀವಕುಮಾರ ತಾಂದಳೆ**
ಸಹ ಪ್ರಾಧ್ಯಾಪಕರು–ಇತಿಹಾಸ ವಿಭಾಗ
ರ್‍ಕಾರಿ ಪ್ರಥಮ ರ್‍ಜೆ ಕಾಲೇಜು ಔರಾದ (ಬಿ), ಬೀದರ್ ಜಿಲ್ಲೆ

ಭಾರತವು ಇತಿಹಾಸ, ಸಂಸ್ಕೃತಿ ಹಾಗೂ ಪರಂಪರೆಗಳಿಗೆ ವಿಶ್ವದಲ್ಲಿ ಅತ್ಯಂತ ಮಹತ್ವದ ಸ್ಥಾನವಿದೆ. ಭಾರತದ ಇತಿಹಾಸವು ಅವಿಚ್ಛಿನ್ನವಾದುದಾಗಿದ್ದು ಅದರ ಸಾಂಸ್ಕೃತಿಕ ಪರಂಪರೆ ಇಂದಿಗೂ ಜೀವಂತವಾಗಿರುವುದು. ಭಾರತದ ಸಂಸ್ಕೃತಿಯನ್ನು ರೂಪಿಸುವಲ್ಲಿ ಇಲ್ಲಿನ ಇತಿಹಾಸ, ಅನನ್ಯ ಭೌಗೋಳಿಕ ರಚನೆ, ವೈವಿಧ್ಯಮಯ ಜನ ಸಮುದಾಯ, ವಿಭಿನ್ನ ಸಂಪ್ರದಾಯ ಮತ್ತು ಆಚರಣೆಗಳು, ವಿವಿಧ ಭಾಷೆಗಳು ಬಹುಮುಖ್ಯ ಪಾತ್ರವನ್ನು ವಹಿಸಿವೆ. ಭಾರತದ ಸಂಸ್ಕೃತಿ ವೇದಗಳ ಕಾಲದಲ್ಲಿ ಅಸಾಧಾರಣವಾಗಿ ವಿಕಸನ ಹೊಂದಿ, ವಿದೇಶಗಲ್ಲೂ ಪ್ರಸಾರವಾಯಿತು. ನಂತರ ಮರ‍್ಯರು, ಗುಪ್ತರು, ಶಾತವಾಹನರು, ಪಲ್ಲವರು, ಚಾಲುಕ್ಯರು, ರಾಷ್ಟ್ರಕೂಟರು, 'ರ್ಧನರು, ವಿವಿಧ ಧರ್ಮ, ಸಂಪ್ರದಾಯ, ಮತ, ಪಂಥಗಳ ಸಂಯೋಜನೆಯಾಗಿರುವ ಭಾರತೀಯ ಸಂಸ್ಕೃತಿ ವಿಶ್ವದ ಬೇರೆ ಸಂಸ್ಕೃತಿಗಳ ಮೇಲೂ ತಮ್ಮ ಪ್ರಭಾವವನ್ನು ಬೀರಿದೆ.[1]

**ಭಾರತದ ವಿವಿಧ ಹೆಸರುಗಳು**

ಪ್ರಾಚೀನ ಸಾಹಿತ್ಯ ಮತ್ತು ಶಾಸನಗಳಲ್ಲಿ ನಮ್ಮ ದೇಶವನ್ನು ಬೇರೆ, ಬೇರೆ ಹೆಸರುಗಳಿಂದ ಕರೆಯಲಾಗಿದೆ. ಪುರಾಣಗಳಲ್ಲಿ ನಮ್ಮ ದೇಶವನ್ನು 'ಭರತ ರ್‍ಷ' 'ಭರತ ಖಂಡ' ಎಂದು ಕರೆಯಲಾಗಿದೆ. ಮುಂದೆ ಇದನ್ನು ಸಂಕ್ಷಿಪ್ತಗೊಳಿಸಿ 'ಭಾರತ' ಎಂದು ಕರೆಯಲಾಯಿತು. ವೇದಗಳ ಕಾಲದಲ್ಲಿ ರಾವಿ (ಪುರುಷ್ಣಿ) ಮತ್ತು ಬಿಯಾಸ (ವಿಪಾಶಾ) ನದಿಗಳ ಪ್ರದೇಶದಲ್ಲಿ ನೆಲೆಯೂರಿದ್ದ 'ಭರತ' ಎಂಬ ಪ್ರಖ್ಯಾತ ವಂಶವು ಆಡಳಿತ ನಡೆಸಿತ್ತುಹಿ ಅದರ ಪ್ರತೀಕವಾಗಿ ಭಾರತ ಎಂಬ ಹೆಸರು ಬಂದಿರಬಹುದಾಗಿದೆ.[2] ಜೈನ ಪುರಾಣಗಳ ಪ್ರಕಾರ ಋಷಭದೇವನ ಮಗನಾದ ಭರತ ಚಕ್ರರ್ತಿ ಆಡಳಿತ ನಡೆಸಿದ್ದರಿಂದ ಇದಕ್ಕೆ 'ಭರತ ಖಂಡ' ಎಂಬ ಹೆಸರು ಬಂದಿತೆಂದು ಹೇಳಲಾಗಿದೆ. 'ಭಾರತಕ್ಕೆ ವಿಹಿಂದೂಸ್ಥಾನ' ಮತ್ತು 'ಇಂಡಿಯಾ' ಎಂಬ ಹೆಸರುಗಳು ವಿದೇಶಿಯರ ಸಂರ‍್ಕದಿಂದ ಬಂದಿವೆ. ಹೀಗೆ ನಮ್ಮ ದೇಶವನ್ನು ಭರತರ‍್ಷ, ಜಂಬುದ್ವೀಪ, ರ‍್ಯಾರ‍್ತ, ಹಿಂದೂಸ್ಥಾನ, ಇಂಡಿಯಾ, ಭಾರತ ಮುಂತಾದ ಹೆಸರುಗಳಿಂದ ಕರೆದಿರುವುದನ್ನು ಗಮನಿಸಬಹುದು.[3]

**ಸಂಸ್ಕೃತಿಯ ಅರ್ಥ**

ಮಾನವ ಜನಾಂಗದ ಇತಿಹಾಸವನ್ನು ಚಿತ್ರಿಸುವಾಗ ಬಳಸುವ ಮತ್ತೊಂದು ಪ್ರಮುಖವಾದ ಪದ 'ನಾಗರಿಕತೆ' ಎಂಬುದಾಗಿದೆ. ಉದಾಹರಣೆಗೆ ಸಿಂಧೂ ನಾಗರಿಕತೆ, ವೈದಿಕ ಸಂಸ್ಕೃತಿ ಎಂಬಂತೆ ಎರಡು ಪದಗಳನ್ನು ಒಂದೇ ರ್‍ಥದಲ್ಲಿ ಬಳಸಿರುವುದನ್ನು ಗಮನಿಸಬಹುದು. ಹೆನ್ರಿ ಲ್ಯೂಕಾಸ್ ಎಂಬ ಪಂಡಿತರು ಸಂಸ್ಕೃತಿ ಮತ್ತು ನಾಗರಿಕತೆಯ

ಭಿನ್ನತೆಯನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. 'ಸಂಸ್ಕೃತಿ' ಎಂಬುದು ಸಂಕುಚಿತ, ವ್ಯಾಪ್ತಿಯುಳ್ಳದ್ದು. 'ನಾಗರೀಕತೆ'ಯ ವ್ಯಾಪ್ತಿ ವಿಶಾಲವಾದದು. ಪೌರಾತ್ಯ, ಪಾಶ್ಚಿಮಾತ್ಯ ಇತ್ಯಾದಿ ವ್ಯಾಪಕವಾದ ಅರ್ಥದಲ್ಲಿ ತೆಗೆದುಕೊಂಡಾಗ 'ನಾಗರಿಕತೆಯಂಬುದು ಭಾರತ, ಅಮೆರಿಕಾ, ಬ್ರಿಟನ್, ಇತ್ಯಾದಿ ಪರಿಮಿತ ದೇಶಗಳ ವ್ಯಾಪ್ತಿಯಲ್ಲಿ ಹೇಳುವಾಗ 'ಸಂಸ್ಕೃತಿ' ಎಂಬುದು ಅವರ ಅಭಿಪ್ರಾಯ.[4] 'ಸಂಸ್ಕೃತಿ' ಎಂಬ ಪದವನ್ನು ಸಂಸ್ಕಾರ ಎಂಬ ಪದಕ್ಕೆ ಪರ್ಯಾಯವಾಗಿ ಬಳಸುತ್ತೇವೆ. ಸಂಸ್ಕಾರವೆಂದರೆ ಅಂದವನ್ನಾಗಿಸುವುದು, ಸುಧಾರಿಸುವುದು, ಉತ್ತಮಪಡಿಸುವುದು ಎಂಬುದಾಗಿದೆ.[5]

**ಸಂಸ್ಕೃತಿಯ ವ್ಯಾಖ್ಯೆಗಳು:**

ಸಂಸ್ಕೃತಿಯ ಕುರಿತು ಅನೇಕ ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯೆಯನ್ನು ನೀಡಿದ್ದಾರೆ.[6]

1. ಆರ್.ಎಂ. ಮೈಕೈವರ್ ಮತ್ತು ಚರ್ಲ್ಸ್ ಹೆಚ್. ಪೇಜರವರ ಪ್ರಕಾರ "ನಮ್ಮ ಜೀವನ ಆಲೋಚನಾ ವಿಧಾನ, ವ್ಯವಹಾರ, ಸಾಹಿತ್ಯ, ಧರ್ಮ, ಮನೋರಂಜನೆ ಮತ್ತು ಉಪಭೋಗಗಳ ಮೂಲಕ ತಮ್ಮ ಸ್ವಭಾವ, ಅಭಿವ್ಯಕ್ತಿಪಡಿಸುವುದನ್ನು ಸಂಸ್ಕೃತಿ ಎನ್ನುತ್ತೇವೆ."
2. ಬೋಗರ್ಡನ್ ಈ.ಎನ್.ರವರ ಪ್ರಕಾರ "ಸಂಸ್ಕೃತಿಯು ಮಾನವನ ಸಮೂಹಕ್ಕೆ ಸಂಬಂಧಿಸಿದ ರೀತಿ ನೀತಿಗಳು, ಪರಂಪರೆಗಳು ಮತ್ತು ಪ್ರಚಲಿತ ರ್ತನೆಗಳಿಂದ ಕೂಡಿದ್ದು ಒಂದು ಸಮೂಹದ ಮೂಲಧನವಾಗಿದೆ."
3. ಕೌಂಟರವರ ಪ್ರಕಾರ "ಸಂಸ್ಕೃತಿಯು ನಮ್ಮ ಆಂತರಿಕ ಜೀವನಕ್ಕೆ ಸಂಬಂಧಿಸಿದ್ದು, ನಾಗರಿಕತೆಯು ನಮ್ಮ ಬಾಹ್ಯ ಜೀವನಕ್ಕೆ ಸಂಬಂಧಿಸಿದೆ" ಎಂದಿದ್ದಾರೆ.
4. ಗ್ರಾಹಂ ವ್ಯಾಲಸ್ರವರ ಪ್ರಕಾರ "ಸಂಸ್ಕೃತಿಯು ಸಾಂಪ್ರದಾಯಿಕವಾಗಿ ಬಂದ ಪದ್ಧತಿಗಳ, ಜೀವನ ಮೌಲ್ಯಗಳ ಮತ್ತು ಆರ್ಶಗಳ ಸಂಗ್ರಹ, ಈ ಸಾಮಾಜಿಕ ಪರಂಪರೆಯನ್ನು ನಾವು ಹಿಂದಿನ ತಲೆಮಾರುಗಳಿಂದ ಹಾಗೂ ಜ್ಞಾನರ್ಜನೆಯಿಂದ ಪಡೆದುಕೊಂಡಿರುತ್ತೇವೆ."
5. ವಿಶ್ವಕೋಶದ ಪ್ರಕಾರ "ಮಾನವ ಸಮುದಾಯವು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಯವರಿಗೂ ಮುಂದುವರೆಸಿಕೊಂಡು ಬಂದಿರುವ ಒಟ್ಟಾರೆ ಜೀವನ ವಿಧಾನವೆ ಸಂಸ್ಕೃತಿ" ಎಂದಿದ್ದಾರೆ.

ಸಂಸ್ಕೃತಿಯನ್ನು ಅತ್ಯಂತ ಸರಳವಾಗಿ ವ್ಯಾಖ್ಯಾನಿಸಬೇಕೆಂದರೆ ನಾವು ತಿನ್ನುವ ಆಹಾರ, ಧರಿಸುವ ಬಟ್ಟೆ, ಬಳಸುವ ಭಾಷೆ, ಪೂಜಿಸುವ ವಿಧಾನ ಇವೆಲ್ಲವುಗಳನ್ನು ಒಟ್ಟಾಗಿ ಸಂಸ್ಕೃತಿ ಎನ್ನಬಹುದಾಗಿದೆ. ಕಲೆ, ಸಂಗೀತ, ಸಾಹಿತ್ಯ ವಾಸ್ತುಶಿಲ್ಪ, ಮರ್ತಿಶಿಲ್ಪ, ತತ್ವಜ್ಞಾನ ಮತ್ತು ವಿಜ್ಞಾನ ಇವುಗಳು ಸಂಸ್ಕೃತಿಯ ವಿವಿಧ ಆಯಾಮಗಳಾಗಿವೆ. ಇವುಗಳ ಜೊತೆ ಸಂಪ್ರದಾಯಗಳು, ಆಚರಣೆಗಳು, ಹಬ್ಬಹರಿದಿನಗಳು, ನಂಬಿಕೆಗಳು ಒಟ್ಟಾರೆ ಮಾನವ ಜೀವನ ವಿಧಾನವೆ ಸಂಸ್ಕೃತಿಯಾಗಿದೆ.[7]

**ಭಾರತದ ಸಂಸ್ಕೃತಿಯ ಲಕ್ಷಣಗಳು**

ಭಾರತದ ಸಾಂಸ್ಕೃತಿಕ ಪರಂಪರೆ ತನ್ನದೇ ಆದ ಕೆಲವು ವಿಶಿಷ್ಟ ಲಕ್ಷಣಗಳನ್ನು

ಒಳಗೊಂಡಿದೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

**1. ಪ್ರಾಚೀನತೆ ಮತ್ತು ನಿರಂತರತೆ:**

ಪ್ರಪಂಚದಲ್ಲಿ ಅತ್ಯಂತ ಪುರಾತನವಾದ ಇಂದಿಗೂ ನಿರಂತರವಾಗಿ ಸಾಗುತ್ತಾ ಬಂದಿರುವ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ ದೇಶ ಭಾರತವಾಗಿದೆ. ಸೊರೊಕಿನ ಹಾಗೂ ಡಾ. ರಾಧಾಕೃಷ್ಣನ್‌ರವರ ಪ್ರಕಾರ "ಭಾರತ ಮತ್ತು ಚೀನಾ ದೇಶಗಳು ನಾಗರಿಕತೆ ಮತ್ತು ಸಂಸ್ಕೃತಿಗಳು ತಮ್ಮ ಆಂತರಿಕ ಸಂಘರ್ಷ ಮತ್ತು ಉತ್ಥಾನಗಳನ್ನು ಮೆಟ್ಟಿ ನಿಂತುದಲ್ಲದೆ ಗ್ರೀಕರು, ಪರ್ಶಿಯನ್ನರು, ಹೂಣರು, ಸಿಂಧಿಯನ್ನರು, ಅರಬರು, ಮೊಗಲರು, ಮುಂತಾದವರ ವಿದೇಶಿ ದಾಳಿಗಳನ್ನು ಎದುರಿಸಿದರೂ ತಮ್ಮಲ್ಲಿನ ಅಸ್ಮಿತತೆಯನ್ನು ಕಳೆದುಕೊಳ್ಳದೆ ಇಂದಿಗೂ ತಮ್ಮ ಪರಂಪರೆಯ ನಿರಂತರತೆಯನ್ನು ಉಳಿಸಿಕೊಂಡು ಬಂದಿವೆ. ...ಇವುಗಳ ಜೊತೆಗೆ ವೈದಿಕ, ಬೌದ್ಧ, ಜೈನ ಇನ್ನಿತರ ಅನೇಕ ಸಂಪ್ರದಾಯ, ಆಚರಣೆಗಳು ಇಂದಿಗೂ ನಿರಂತರವಾಗಿ ಮುಂದುವರೆದುಕೊಂಡು ಬಂದಿವೆ."[8] ಜದುನಾಥ ಸರ್ಕಾರರ ಪ್ರಕಾರ "ಈ ವಿಶಿಷ್ಠ ಸಾಮಾನ್ಯ ಭಾರತೀಯ ಮಾದರಿಯು ಕಾಲವೊಡ್ಡಿದ್ದ ಸತ್ವ ಪರೀಕ್ಷೆಗಳನ್ನು ಎದುರಿಸಿ, ರಾಜವಂಶದ ಕ್ರಾಂತಿಗಳ ಆಘಾತಗಳನ್ನು ತಡೆದುಕೊಂಡು, ಧಾರ್ಮಿಕ ಸಂಘರ್ಷ ಮತ್ತು ನೈಸರ್ಗಿಕ ಅನಾಹುತಗಳನ್ನು ಎದುರಿಸಿ ಇಂದಿಗೂ ನಿಶ್ಚಲವಾಗಿ ನಿಂತಿದೆ."

**2. ಸಮನ್ವಯ ಪ್ರವೃತ್ತಿ**

ಭಾರತೀಯ ಸಂಸ್ಕೃತಿಯು ವಿವಿಧ ನಾಗರಿಕತೆಗಳು ಮತ್ತು ಸಂಸ್ಕೃತಿಗಳ ಉದಾತ್ತ ಅಂಶಗಳನ್ನು ಅಳವಡಿಸಿಕೊಂಡು ಸಮನ್ವಯಗೊಳಿಸಿಕೊಂಡಿತು. ಮಧ್ಯಯುಗದಲ್ಲಿ ಮುಸ್ಲಿಂರ ಹಾಗೂ ಆಧುನಿಕ ಕಾಲದಲ್ಲಿ ಯುರೋಪಿಯನ್ನರ ಸಂರ್ಕದಿಂದಾಗಿ ಭಾರತೀಯ ಸಂಸ್ಕೃತಿಯು ಅವರ ಸಂಸ್ಕೃತಿಯಲ್ಲಿನ ಉತ್ತಮಾಂಶಗಳನ್ನು ಧಾರಾಳವಾಗಿ ಸ್ವೀಕರಿಸಿತು. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಯುಗದಲ್ಲಿ ಭಾರತೀಯ ಸಂಸ್ಕೃತಿಯು ಪಾಶ್ಚಾತ್ಯ ಸಂಸ್ಕೃತಿಯಿಂದಲೂ ಪ್ರಭಾವಿತವಾಗಿದೆ. ಹೀಗೆ ಆರಂಭ ಕಾಲದಿಂದಲೂ ತನ್ನ ಹೊಂದಾಣಿಕೆಯ ಪ್ರವೃತ್ತಿಯಿಂದಾಗಿ ಭಾರತೀಯ ಸಂಸ್ಕೃತಿಯು ತನ್ನ ಮೂಲಭೂತ ಆಧ್ಯಾತ್ಮಿಕತೆಯ (ಸಮನ್ವಯತೆ) ಸತ್ವವನ್ನು ಕಾಪಾಡಿಕೊಂಡು ಅನ್ಯ ಜನಾಂಗದ ಒಳ್ಳೆಯ ಅಂಶಗಳನ್ನು ಅರಗಿಸಿಕೊಳ್ಳುತ್ತ ಸಮ್ಮಿಶ್ರ ಸ್ವರೂಪ ಪಡೆಯಲು ಈ ಸಹಿಷ್ಣುತೆ ಮತ್ತು ಸಮನ್ವಯ ಶೀಲತೆ ಭಾರತೀಯ ಸಂಸ್ಕೃತಿಯ ಹೆಮ್ಮೆಯನ್ನು ಹಿಗ್ಗಿಸಿವೆ.[9]

**3. ನಿಸರ್ಗದೊಂದಿಗೆ ಸಾಮರಸ್ಯ**

ಮನುಷ್ಯನ ವಾಸ ಸ್ಥಾನವಾಗಿರುವ ಭೂಮಿಯ ಮೇಲಿನ ಎಲ್ಲಾ ಚರಾಚರ ವಸ್ತುಗಳ ಮಹತ್ವವನ್ನು ಭಾರತೀಯ ಸಂಸ್ಕೃತಿಯು ಪ್ರಾಚೀನ ಕಾಲದಲ್ಲೇ ಗುರುತಿಸಿದೆ. ಭೂಮಿ, ಗಿಡಮರಗಳು, ಬೆಟ್ಟಗುಡ್ಡಗಳು, ಪರ್ವತಗಳು, ಸಾಗರಗಳು, ನದಿಗಳು, ಜಲಚರಗಳು, ಸರೋವರಗಳು, ಪ್ರಾಣಿಸಂಕುಲ ಮುಂತಾದವುಗಳು ಹಿಂದೂಗಳ

ಧರ್ಮಿಕ ಹಾಗೂ ಸಾಂಸ್ಕೃತಿಕ ಜೀವನದ ಅವಿಭಾಜ್ಯ ಅಂಗಗಳಾಗಿವೆ. ಭೂಮಿಯನ್ನು 'ತಾಯಿ' ಎಂದು ಪೂಜ್ಯ ಭಾವನೆಯಿಂದ ಪೂಜಿಸಲಾಗುತ್ತದೆ. ಗಂಗಾ, ಯಮುನಾ, ಸಿಂಧೂ, ಕಾವೇರಿ, ಗೋದಾವರಿ, ಸರಸ್ವತಿ ಮುಂತಾದ ನದಿಗಳ ಹೆಸರು ಹಿಂದೂಗಳ ಮುಂಜಾನೆಯ ಸ್ಮರಣೆಯಲ್ಲಿಯೇ ಸೇರಿಹೋಗಿವೆ. "ಗಂಗಾ ಸ್ನಾನ, ತುಂಗಾ ಪಾನ" ಎಂಬ ಮಾತು ಜನಜನಿತವಾಗಿದೆ. ಪ್ರಾಚೀನ ಕಾಲದಿಂದಲೂ ಭಾರತೀಯರು ಸಕಲ ಚರಾಚರ ಜೀವಗಳ ಬಗ್ಗೆ ಸಾಮರಸದ ಸಹಬಾಳ್ವೆ ನಡೆಸುತ್ತಾ ಬಂದಿದ್ದಾರೆ.[10]

**4. ವಿಶಾಲ ದೃಷ್ಟಿಕೋನ**

ಸತ್ಯದ ಸಾಕ್ಷಾತ್ಕಾರವನ್ನು ಹೊಂದಿದ ಭಾರತದ ಸರಸ್ವತಿಯು ಭಾರತೀಯರಿಗೆ ಸಮಗ್ರ ದೃಷ್ಟಿಕೋನವನ್ನು ಪ್ರಧಾನ ಮಾಡಿತು. ಈ ಉದಾತ್ತ ಸಂಸ್ಕೃತಿಯು ವಿಶ್ವದ ಎಲ್ಲ ಕಡೆಗಳಿಂದಲೂ ಬಂದ ಸದ್ವಿಚಾರಗಳನ್ನು ಸ್ವಾಗತಿಸಿತು. 'ವಸುದೈವ ಕುಟುಂಬಂ', 'ಸರ್ವೆಜನಾ ಸುಖಿನೋಭವಂತು' ಎಂಬ ತತ್ವಗಳು ವಿಶ್ವವೇ ಒಂದು ಕುಟುಂಬ, ಕುಟುಂಬದಲ್ಲಿರುವ ರ್ವರು ಸುಖವಾಗಿ ಬಾಳಲಿ, ಒಂದು ಜೀವಿಯೂ ಕೂಡ ದುಃಖತಪ್ತವಾಗದಿರಲಿ ಎಂಬುದು ಭಾರತೀಯ ಸಂಸ್ಕೃತಿಯ ಧ್ಯೆಯವಾಗಿದೆ. ಈ ಸಂಸ್ಕೃತಿಯು ವಿಶಿಷ್ಟ ಪ್ರೇಮ, ವಿಶ್ವ ಭಾತೃತ್ವ ಮತ್ತು ವಿಶ್ವ ಶಾಂತಿ ಕಲ್ಯಾಣದ ತತ್ವಗಳನ್ನು ಬೋಧಿಸುತ್ತಾ ಬಂದಿದೆ.[11]

**5. ಧಾರ್ಮಿಕ ಸಹಿಷ್ಣುತೆ**

ಧಾರ್ಮಿಕ ಸಹಿಷ್ಣುತೆಯ ಗುಣ ಭಾರತೀಯ ಸಂಸ್ಕೃತಿಯಲ್ಲಿ ಒಂದು ಜೀವಂತ ಶಕ್ತಿಯಾಗಿದೆ. ಹಿಂದೂ ಧರ್ಮವು ಸರ್ವರ ಸಹಿಷ್ಣುತೆಯ ಗುಣವನ್ನು ಹೊಂದಿರುವುದರಿಂದ ಒಳ್ಳೆಯದನ್ನು ಅದು ಯಾವುದೇ ಮೂಲದಿಂದ ಬಂದಿದ್ದರು ಸ್ವೀಕರಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು. ಮಾನವ ಕುಲದ ಕಲ್ಯಾಣಕ್ಕೆ ಪ್ರಪಂಚದ ಪ್ರತಿಯೊಂದು ಧರ್ಮ ಹಾಗೂ ಜನಾಂಗ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಬಲ್ಲದೆಂದು ಹಿಂದೂಗಳು ಪ್ರಾಮಾಣಿಕವಾಗಿ ನಂಬಿದರು. ಈ ನಂಬಿಕೆಯಿಂದಾಗಿ ಹಿಂದೂಗಳು ಸರ್ವಧರ್ಮ ಸಮಭಾವ ಹಾಗೂ ಸರ್ವಜನಾಂಗಗಳ ಸಂಸ್ಕೃತಿಯ ಬಗ್ಗೆ ಗೌರವ ಭಾವನೆಗಳು ಹೊಂದಲು ಸಾಧ್ಯವಾಯಿತು. ಪರದೇಶಗಳಿಂದ ಓಡಿ ಬಂದ ಪರ್ಶಿಗಳಿಗೆ, ಯಹೂದಿಗಳಿಗೆ, ಟಿಬೇಟಿಯನ್ನರಿಗೆ ಆಶ್ರಯ ನೀಡುತ್ತಾ ಬಂದಿದೆ. ಮಾನವ ಕುಲಕ್ಕೆ ಭಾರತೀಯ ಸಂಸ್ಕೃತಿ ನೀಡಿದ ಅತ್ಯಮೂಲ್ಯ ಕೊಡುಗೆ ಎಂದರೆ ಸತ್ಯ, ಅಹಿಂಸೆ ಸಂಯಮ, ಸಹಿಷ್ಣುತೆಗಳಾಗಿವೆ.[12]

**6. ಧರ್ಮ ಕೇಂದ್ರಿತ ಸಮಾಜ**

ಭಾರತದಲ್ಲಿ ಧರ್ಮವು ಜೀವನದ ಒಂದು ಕೇಂದ್ರಬಿಂದುವಾಗಿದೆ. ಧರ್ಮ ಎಂದರೆ ಇಲ್ಲಿ ಕೇವಲ ಹಿಂದು, ಮುಸ್ಲಿಂ ಎಂದು ಅಲ್ಲ. ಒಳ್ಳೆಯದು ಎಂಬರ್ಥದಲ್ಲಿ ಬಳಕೆಯಾಗಿದೆ. ಭಾರತದಲ್ಲಿ ಜನಿಸಿದ ಪ್ರತಿಯೊಬ್ಬ ವ್ಯಕ್ತಿಯೂ ತನ್ನದೆ ಆದ ರ್ಮ, ಮತ, ಪಂಥಗಳಿಗೆ ಸೇರಿದವನಾಗಿದ್ದಾನೆ. ಡಾ॥ ಎಸ್. ರಾಧಾಕೃಷ್ಣರವರ ಅಭಿಪ್ರಾಯದಂತೆ "ಹಿಂದೂ ರ್ಮ ಮತ್ತು ತತ್ವಜ್ಞಾನಗಳ ಸಂದೇಶದ ಬಲದಿಂದಾಗಿ ಭಾರತ ತನ್ನ ಸಂಸ್ಕೃತಿ

ಶ್ರೀಮಂತಿಕೆಯನ್ನು ಮೆರೆದಿದೆ" ಎಂದಿದ್ದಾರೆ. ಈ ಎರಡು ಮಾತುಗಳು ಭಾರತೀಯರು ಧರ್ಮದೊಂದಿಗೆ ಹೊಂದಿದ ನಂಟನ್ನು ಕುರಿತು ತಿಳಿಯಲು ಸಾಧ್ಯವಾಗಿದೆ.[13]

**7. ವೈವಿಧ್ಯತೆಯಲ್ಲಿ ಏಕತೆ**

ಭಾರತದ ಉದ್ದಗಲಕ್ಕೂ ಕಂಡುಬರುವ ವೈವಿಧ್ಯಮಯ ಸಂಸ್ಕೃತಿಯ ಆವಿಷ್ಕಾರಕ್ಕೆ ಇಲ್ಲಿನ ಪ್ರಾಕೃತಿಕ ಲಕ್ಷಣಗಳು ಬಹುಮಟ್ಟಿಗೆ ಕಾರಣವಾಗಿವೆ. ಭಾರತವು ವಿವಿಧ ಧರ್ಮ, ಜನಾಂಗ, ಭಾಷೆ, ಜಾತಿ, ಸಂಪ್ರದಾಯ ಮುಂತಾದ ಅನೇಕ ಬಗೆಯ ವೈವಿಧ್ಯತೆಗಳಲ್ಲಿಯೂ ಏಕತೆಯನ್ನು ಸಾಧಿಸಿದೆ. ಈ ಕಾರಣದಿಂದ ಭಾರತವನ್ನು ವಿಶ್ವದ ಸಂಕ್ಷಿಪ್ತರೂಪ ಎಂದು ಕರೆಯಲಾಗಿದೆ.[14]

**ಉಪಸಂಹಾರ:**

ಭಾರತದಲ್ಲಿ ಪ್ರಾಚೀನ ವೇದಗಳ ಕಾಲದಲ್ಲಿ ಜಾತಿಭೇದ ಇರಲಿಲ್ಲ. ಆದರೆ ಕಾಲಾಂತರದಲ್ಲಿ ಅಸ್ಪೃಶ್ಯತೆ ಮತ್ತು ಜಾತಿಭೇದದಂತಹ ಅನಿಷ್ಠ ಆಚರಣೆಗಳು ಭಾರತೀಯ ಜೀವನದಲ್ಲಿ ಸೇರಿಕೊಂಡುದನ್ನು ಗಮನಿಸದೆ ಇರಲಾಗದು. ಆದರೆ, ಕಾಲಕಾಲಕ್ಕೆ ಬಂದ ಸುಧಾರಕರು ಇದನ್ನು ತಿದ್ದಲು ಯತ್ನಿಸಿದರು. ಸ್ವಾತಂತ್ರ್ಯಾನಂತರದ ಸಂವಿಧಾನವು ಇಂದು ಸಮಾನತೆಯ ಆಶಯವನ್ನು ಬಿತ್ತಿ ಬೆಳೆಯುತ್ತಿದೆ. ಹೀಗಾಗಿ ಅನೇಕ ಜಾತಿ, ಉಪಜಾತಿಗಳು, ಮತಧರ್ಮಗಳು ಇದ್ದರೂ ದೇಶದಲ್ಲಿ ಏಕತೆಯ ಕಲ್ಪನೆಯಿದೆ. ಅನೇಕಾನೇಕ ವೈವಿಧ್ಯತೆಗಳ ಮಧ್ಯದಲ್ಲೂ ಏಕತೆಯನ್ನು ಕಾಯ್ದುಕೊಂಡು ಬಂದಿರುವುದರಿಂದಲೇ ಭಾರತವು ಒಂದು ರಾಷ್ಟ್ರವಾಗಿ ನಿಂತಿದೆ.

**ಉಲ್ಲೇಖ ಮತ್ತು ಟಿಪ್ಪಣಿಗಳು:**


1. ಎನ್.ಕೆ. ಬೋಸ್–(1967), ಭಾರತದಲ್ಲಿ ಸಂಸ್ಕೃತಿ ಮತ್ತು ಸಮಾಜದಲ್ಲಿ ಭಾರತದ ಸಂಸ್ಕೃತಿ ವಲಯಗಳು, ಏಷ್ಯಾ ಪಬ್ಲಿಷಿಂಗ್ ಹೌಸ್, ಹೊಸ ದೆಹಲಿ. ಪು.ಸಂ.–32
2. ಸಚಿನ ಶೇಖರ್ ಬಿಸ್ವಾಸ್–(1999) ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸುವುದು, ರ್ಯನ್ ಪುಸ್ತಕ ಪ್ರಕಾಶನ, ಹೊಸ ದೆಹಲಿ. ಪು.ಸಂ–27
3. ಕೆ.ಟಿ. ಆಚಾರ್ಯ–(1994), ಭಾರತೀಯ ಆಹಾರ ಐತಿಹಾಸಿಕ ಒಡನಾಡಿ, ವಿಶ್ವವಿದ್ಯಾಲಯ ಮುದ್ರಣ, ನೋಯ್ಡಾ. ಪು.ಸಂ–42
4. ಎಸ್.ನಾರಾಯಣ್– (2004) ಭಾರತೀಯ ಶಾಸ್ತ್ರೀಯ ನೃತ್ಯಗಳ, ಸುಭಿ ಪ್ರಕಾಶನ, ಹೊಸ ದೆಹಲಿ. ಪು.ಸಂ–23
5. ಪ್ರಕಾಶ್ ಎಚ್.ಎಸ್.ಶಿವ–(2007) ಸಾಂಪ್ರದಾಯಿಕ ಚಿತ್ರಮಂದಿರಗಳು, ವಿಸ್ಡಮ್ ಟ್ರೀ, ಹೊಸ ದೆಹಲಿ. ಪು.ಸಂ–51
6. ಕೃಷ್ಣ ಎನ್.ರೆಡ್ಡಿ–(2019) ದಕ್ಷಿಣ ಭಾರತದ ಸಾಂಸ್ಕೃತಿಕ ಪರಂಪರೆ, ಶ್ರದ್ಧಾ ಪಬ್ಲಿಷಿಂಗ್ ಹೌಸ್ ಮಂಗಲ್, ಪುಣೆ, ಮಹಾರಾಷ್ಟ್ರ. ಪು.ಸಂ–18
7. ಎ.ಎಲ್ ಬಾಶಮ್–(2002) ಅದ್ಭುತ ಭಾರತ, ಆರ್ಯನ್ ಅಂತಾರಾಷ್ಟ್ರೀಯ ಪ್ರಕಾಶನ, ದರಿಯಾ ಗಂಜ್, ಹೊಸ ದೆಹಲಿ. ಪು.ಸಂ–16
8. ಸಚಿನ್ ಶೇಖರ್ ಬಿಸ್ವಾಸ್–(2008) ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸುವುದು, ರೂಟ್ಲೆಡ್ಜ್ ಪ್ರಕಾಶನ ಇಂಗ್ಲೆಂಡ್. ಪು.ಸಂ–65

9. ಗೋಕುಲ್ಸಿಂಗ್, ಕೆ.ಮೋತಿ(2013) ಜಾಗತೀಕರಣಗೊಂಡ ಭಾರತದಲ್ಲಿ ಜನಪ್ರಿಯ ಸಂಸ್ಕೃತಿ, ಜ್ಞಾನ್ ಪಬ್ಲಿಷಿಂಗ್ ಹೌಸ್, ಹೊಸ ದೆಹಲಿ. ಪು.ಸಂ–29
10. ಕಮಲ್ ಕಾಂತ್ ಮಿಶ್ರಾ–(2020) ಇಂಟ್ಯಾಂಜಿಬಲ್ ಕಲ್ಚರಲ್ ಹೆರಿಟೇಜ್ ಆಫ್ ಇಂಡಿಯಾ, ಪ್ರಭಾತ ಪ್ರಕಾಶನ, ಹೊಸ ದೆಹಲಿ. ಪು.ಸಂ.–83
11. ಪಿ.ಕೆ ಅಗರವಾಲ್–(2022) ಭಾರತೀಯ ಸಂಸ್ಕೃತಿ ಕಲೆ ಮತ್ತು ಪರಂಪರೆ, ಜಿ.ಕೆ. ಪ್ರಕಾಶನ, ಮಥುರಾ ರಸ್ತೆ, ಫರಿದಾಬಾದ್, ಪು.ಸಂ.–39
12. ಮಧುಕರ್ ಕುಮಾರ್ ಭಗತ್–(2022) ಭಾರತೀಯ ಪರಂಪರೆ, ಕಲೆ ಮತ್ತು ಸಂಸ್ಕೃತಿ, ಜಿ.ಪಿ. ಪ್ರಕಾಶನ ಹೊಸ ದೆಹಲಿ. ಪು.ಸಂ–47
13. ದೇವದತ್ ಪಟ್ನಾಯಕ್–(2022) ಭಾರತೀಯ ಸಂಸ್ಕೃತಿ, ಕಲೆ ಮತ್ತು ಪರಂಪರೆ, ಪಿರ್ಸನ್ ಇಂಡಿಯಾ ಎಜುಕೇಶನ್ ರ್ವಿಸಸ್ ಪ್ರೈ. ಲಿಮಿಟೆಡ್, ಚೆನ್ನೈ, ಪು.ಸಂ–15
14. ಸಂಜೀವಕುಮಾರ್ ಟಿ. ತಾಂದಳೆ – (2022) ಭಾರತದ ಸಾಂಸ್ಕೃತಿಕ ಪರಂಪರೆ, ಎಸ್. ಎಸ್. ಭಾವಿಕಟ್ಟಿ ಪ್ರಕಾಶನ ಕಲಬುರಗಿ. ಪು.ಸಂ–35

❖❖❖

**ಜನರು ಸೇರಿದರು ಚೋದ್ಯವ ನೋಡಲು**
**ನವಿಲು ನವಿರಿನಾ ಬಟ್ಟೆಯನು**
**ಅರಸನು ಅರಿವೆಯ ತೊಡಲು ನೋಡಿದನು**
**ಕಾಣದು ಕಣ್ಣಿಗೆ ಏನೇನೂ**

# ಶಾಸನ ಹಾಗೂ ಸಾಹಿತ್ಯದಲ್ಲಿ ಸೊನ್ನಗಾರ

**ಡಾ. ಸಿದ್ದಲಿಂಗಮ್ಮ ಬಿ.ಜಿ.**
ಸಹ ಪ್ರಾಧ್ಯಾಪಕರು
ಇತಿಹಾಸ ವಿಭಾಗ. ಸ.ಪ್ರ.ದ. ಮಹಿಳಾ ಕಾಲೇಜು. ದಾವಣಗೆರೆ–04

ಅಕ್ಕಸಾಲಿಗರನ್ನು ಪಂಚಬ್ರಹ್ಮರು, ಪಂಚಾಳರು ಅಥವಾ ವಿಶ್ವಕರ್ಮರು ಎಂದು ಕರೆಯುತ್ತಾರೆ. ಆಭರಣಗಳ ತಯಾರಿಕೆಯು ಪ್ರಮುಖ ಹಾಗೂ ಮಹತ್ವವುಳ್ಳ ಕುಶಲಕಲೆ. 'ಅಕ್ಕಸಾಲಿ'ಗೆ 'ಅರ್ಕಸಾಲೆ'ಯೇ ಮೂಲಪದ. ಅರ್ಕ ಎಂದರೆ ಅರಗು. ಅಂದರೆ ಅರಗು ಕೂಡಿಸುವ, ಕರಗಿಸುವ ಅಥವಾ ಭಟ್ಟಿ ಇಳಿಸಿ ಆಭರಣಗಳಿಗೆ ತುಂಬುವ ಸಾಲೆಯೇ 'ಅರ್ಕಸಾಲೆ' ಎಂದಿಟ್ಟುಕೊಳ್ಳಬಹುದು. ಕೌಟಿಲ್ಯನು ಬಂಗಾರದ ಒಡವೆ ಮಾಡುವ ಶಾಲೆಗೆ ಅಕ್ಷಶಾಲೆ ಎಂದಿದ್ದಾನೆ. ಅದೇ (ಇಗ ಪ್ರತ್ಯಯ ಸೇರಿ) ಅಕ್ಕಸಾಲೆಯಾಗಿರಬೇಕೆಂದು ಊಹಿಸುತ್ತಾರೆ. ಒಟ್ಟು ಬೆಳ್ಳಿ ಇಲ್ಲವೆ ಚಿನ್ನವನ್ನು ಭಟ್ಟಿ ಇಳಿಸುವ ಸಾಲೆಯೇ ಅರ್ಕಸಾಲೆ ಎಂದು ಕರೆಯಬಹುದು.

ಬೆಳ್ಳಿ ಹಾಗೂ ಬಂಗಾರದ ಒಡವೆಗಳನ್ನು ತಯಾರಿಸುವಲ್ಲಿ ಕುಶಲಕರ್ಮಿಗಳೆನಿಸಿ ಕೊಂಡ ಸುಪರ್ಣಸಗೋತ್ರದವರಾದ ದೈವಜ್ಞ ಅಕ್ಕಸಾಲಿಗರಿಗೆ ಚಿನಿವಾಲರು, ರಥಕಾರರು, ಸೋನೆಗಾರರು, ಪತ್ತಾರರುಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಅಲ್ಲದೇ ಅರ್ಕಸಾಲಿ, ಮನ್ವಾಚಾರಿ, ಮಾನಾಚಾರಿ, ಮಾಯಾಚಾರಿ, ಆಚಾರಿ, ಪಂಚಾಳ, ಪತ್ತಾರ ಇತ್ಯಾದಿ ಅಡ್ಡ ಹೆಸರುಗಳು ಇವರಿಗೆ ಸಾಮಾನ್ಯವಾದವುಗಳು. ಇಂಥಹ ಸೊನ್ನಗಾರ ಅಥವಾ ಅಕ್ಕಸಾಲಿಗಳ ಕುರಿತು ಶಾಸನ ಹಾಗೂ ಸಾಹಿತ್ಯಾಧಾರಗಳ ಮೂಲಕ ಬೆಳಕು ಚೆಲ್ಲುವುದು ಈ ಲೇಖನದ ಉದ್ದೇಶ.

ಕ್ರಿ.ಪೂ. 2500ರ ಕಾಲದಲ್ಲಿ ಸಿಂಧೂ ಕಣಿವೆಯ ನಾಗರಿಕತೆಯ ಘಟ್ಟದಲ್ಲಿ ಅಕ್ಕಸಾಲಿಗರು ತಯಾರಿಸಿದ ಬೆಳ್ಳಿ, ಬಂಗಾರ ಹಾಗೂ ತಾಮ್ರದ ಆಭರಣಗಳು ಅವರ ಪ್ರಾಚೀನತೆಗೆ ಸಾಕ್ಷಿಯಾಗಿವೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅಕ್ಕಸಾಲಿಗರ ವೃತ್ತಿ ಹಾಗೂ ಸರಕಾರವು ಅವರ ಮೇಲೆ ವಿಧಿಸಿದ ನಿಯಂತ್ರಣದ ಬಗೆಗೆ ಹೇಳಲಾಗಿದೆ. ಅಕ್ಕಸಾಲೆಯನ್ನು ಹೊರತುಪಡಿಸಿ ಎಲ್ಲಿಯಾದರೂ ಮುಚ್ಚುಮರೆಯಲ್ಲಿ ಬಂಗಾರ ಬೆಳ್ಳಿಯ ಕೆಲಸ ಮಾಡಿದವನಿಗೂ ದಂಡವಿಧಿಸಲಾಗುತ್ತಿತ್ತು.[1]

ವಿಶ್ವಕರ್ಮರೆಂದು ಕರೆದುಕೊಳ್ಳುವ ಅಕ್ಕಸಾಲಿಗಳನ್ನು ರಾಜನು ಕಮ್ಮಟಗಳಲ್ಲಿ ನೇಮಿಸಿಕೊಳ್ಳುತ್ತಿದ್ದನು.[2] ಈ ಅಕ್ಕಸಾಲಿಗಳು ಅಥವಾ 'ಕಮ್ಮಟದೋಜು'ಗಳು ತಾವೇ ಪ್ರತ್ಯೇಕವಾಗಿ ಶ್ರೇಣಿಗಳನ್ನು ಸ್ಥಾಪಿಸಿಕೊಂಡಿದ್ದರು. ಉದಾಹರಣೆಗೆ ಅಂತಹ ಶ್ರೇಣಿಯೊಂದು ಕಮ್ಮಟೇಶ್ವರ ದೇವಸ್ಥಾನಕ್ಕೆ ಆಯಾ ಕಮ್ಮಟಗಳಲ್ಲಿ ಕೊಡಬೇಕಾದ ಭಾಗವನ್ನು ನಿರ್ಧರಿಸಿದ ವಿಷಯವು ಶಾಸನವೊಂದರಲ್ಲಿದೆ.[3] ಅಶೇಷ ಕೊತ್ತಳೆಯುಮಿದ್ದು ಕಮ್ಮಟೇಶ್ವರ ದೇವರ ನಂದಾದೀವಿಗೆಗೆ ಬಿಟ್ಟ ದತ್ತಿ ಉಂಡಿಗೆಯ ಕಮ್ಮಟದಲು ತಿಂಗಳಿಗೆ ಸ(ಗ) ಒಂದು ಬಿಡಿಗಮ್ಮಟದಲು ತಿಂಗಳಿಗೆ ಹ ಒಂದು', ಪ್ರಾಚೀನ ಕರ್ನಾಟಕದ ಲೊಕ್ಕಿಗುಂಡಿ,[4] ಸೂಡಿ[5] ಮುಂತಾದ ಕಡೆಗಳಲ್ಲಿದ್ದ ಕಮ್ಮಟಗಳು ಪ್ರಸಿದ್ಧವಾಗಿದ್ದವು.

ರಾಜನು ತನ್ನ ಕಮ್ಮಟಗಳ ಮೇಲ್ವಿಚಾರಣೆಗೆ ಅಧಿಕಾರಿಗಳನ್ನು ನೇಮಿಸುತ್ತಿದ್ದನು.

ಕ್ರಿ.ಶ.1098ರ ಕುಡುತಿನಿ ಶಾಸನವು[6] 'ಎರಣಿಗ ಮಾದೋಜನ ಮಗಂ ಸಾವಿಮೋಜನುಂ ಬೇಚೋಜನ ಮಗ ಚಿಕ್ಕಮಾದೋಜನು ಸ್ವಾಮಿದೇವರ ನವಿಲಚ್ಚಿನ ಪೊನ್ನಂ, ಲೊಕ್ಕಿಯ ಪೊನ್ನಾಣಿಯು(ಂ) ಮಾಪೊನ್ನ ತೂಕಮುಮಾಗಿ ಪೊಯ್ದು ಸಲಿಸುವರು'. ಇದರಿಂದ ದೇವಸ್ಥಾನಗಳೂ ಕೂಡ ನಾಣ್ಯಗಳನ್ನು ಟಂಕಿಸುತ್ತಿದ್ದುದ್ದು ಗೊತ್ತಾಗುತ್ತದೆ. ಅಲ್ಲದೆ ಕಮ್ಮಟದ ಅಕ್ಕಸಾಲಿಗಳಿಗೆ ನಾಣ್ಯಗಳನ್ನು ಟಂಕಿಸುವ ಅಧಿಕಾರವನ್ನು ದೇವಸ್ಥಾನವು ಬಿಟ್ಟುಕೊಟ್ಟು, ಅದಕ್ಕೆ ಪ್ರತಿಯಾಗಿ ಅವರಿಂದ ವರ್ಷಕ್ಕೆ ಇಂತಿಷ್ಟು ಗದ್ಯಾಣ(ಪೋನ್)ಗಳನ್ನು ಪಡೆಯುತ್ತಿದ್ದಿತೆಂದು ಕಾಣುತ್ತದೆ.

ಕ್ರಿ.ಶ. 1259ರ ಮಾರೆಹಳ್ಳಿ ಶಾಸನವು[7] 'ಶ್ರೀನಾರಸಿಂಹ ದೇವರು ಅಕಸಾಲೆ ಕಾಳಜೀಗೆ ಕೊಟ್ಟಕೊಡಗೆ ನಕಾ....ಭಂಗಾರದ ಕೆಲಸ ವಿಸ ತಾಯ' ಅಂದರೆ ಹೊಯ್ಸಳ ನರಸಿಂಹನಿಗೆ ಬಂಗಾರದ ಕೆಲಸ ವಿಸತಾಯನು ಮಾಡುವುದಕ್ಕೆ ಅವನಿಗೆ (ಅಕ್ಕಸಾಲೆ ಕಾಳಜಿಗೆ) 1 ಗದ್ದೆ ಹೊಲವನ್ನು ಅನುಭವಿಸಲು ಬಿಟ್ಟುಕೊಡಲಾಗಿದೆ.

ಚಿನ್ನಾಭರಣಗಳು ಆ ದೇಶದ ಸಂಪತ್ತಿನ ಪ್ರತೀಕವಾಗಿದ್ದವು. ಅರಸೀಕೆರೆಯ ಶಾಸನವೊಂದು ಚಿನ್ನಾಭರಣದ ಖಜಾನೆಯನ್ನು ನೋಡಿಕೊಳ್ಳಲು ಮಾಣಿಕ್ಯ ಭಂಡಾರಿ[8] ಎಂಬ ಅಧಿಕಾರಿಯಿದ್ದನೆಂದು ತಿಳಿಸುತ್ತದೆ. ಮತ್ತೊಂದು ಅರಸೀಕೆರೆಯ ಶಾಸನವು[9] ಮುಮ್ಮಡಿ ನರಸಿಂಹನ ಕಾಲದಲ್ಲಿ ರತ್ನ ಪರಿಣಿತರುಇದ್ದ ಬಗ್ಗೆ ಮಾಹಿತಿ ನೀಡುತ್ತದೆ. ಅರಸೀಕೆರೆಯ ಶಾಸನಗಳೆರಡು[10] ಕಿವಿಯೋಲೆಯ ಉಲ್ಲೇಖವನ್ನು ಮಾಡುತ್ತವೆ. ನಾಣ್ಯ ತಯಾರಿಕೆಯಲ್ಲಿ ಗುಣವನ್ನು ಕಾಪಾಡುವ ದೃಷ್ಟಿಯಿಂದ ನಾಣ್ಯ ಪರೀಕ್ಷಕರಿದ್ದು[11] ಅವರುಗಳ ಮೇಲೆ ತೆರಿಗೆ ವಿಧಿಸುತ್ತಿದ್ದುದನ್ನು ಕಡೂರಿನ ಶಾಸನವೊಂದು ವಿವರಿಸುತ್ತದೆ.

ತಾಂತ್ರಿಕ ವಿವರಗಳು: ಬಂಗಾರ ಮತ್ತು ಬೆಳ್ಳಿಯ ಆಭರಣಗಳನ್ನು ತಯಾರಿಸುವ ಕುಶಲಕರ್ಮಕ್ಕೆ ಅಕ್ಕಸಾಲೆಯ ಕಸುಬು ಅಥವಾ ಚಿನಿವಾರಿಕೆ ಎನ್ನುವರು. ಇದಕ್ಕೆ ಹಳ್ಳಿಗರು ಪತ್ತಾರಿಕೆ ಎಂದೂ ಕರೆಯುವರು.

ಕಲ್ಲಬುಡದಲಿ ಅವಿತಿರುವ ಚಿನ್ನದ ಅದುರಿನ ಉಲ್ಲೇಖವೊಂದು ವಚನದಲ್ಲಿದೆ.[12] ಭೂಮಿಯೊಳಡಗಿರುವ ಚಿನ್ನದ ಕಣಗಳನ್ನು ತೊಳೆದು ಮಣ್ಣಿನಿಂದ ಬೇರ್ಪಡಿಸುತ್ತಿದ್ದರು.[13] ಚಿನ್ನದ ಶುದ್ಧಾಶುದ್ಧತೆಯನ್ನು ಒರೆಗಲ್ಲಿಗೆ ತಿಕ್ಕಿ ಪರೀಕ್ಷಿಸಲಾಗುತ್ತಿತ್ತು.[14] ಆಭರಣ ಮಾಡುವಾಗ ಬಂಗಾರಕ್ಕೆ ತಾಮ್ರ ಮತ್ತು ಬೆಳ್ಳಿಯನ್ನು ಮಿಶ್ರ ಮಾಡಲಾಗುತ್ತದೆ. ಕಾರಣ ಬಂಗಾರಕ್ಕೆ ಗಟ್ಟಿಗುಣ ಬಂದು ತಾಳಿಕೆ ಹೆಚ್ಚಿಗೆ ಬರಲು, ಬಂಗಾರದ ಗುಣಮಟ್ಟವನ್ನು ಒರೆಗಲ್ಲಿಗೆ ತಿಕ್ಕಿನೋಡುವುದರಿಂದ ಕಂಡುಕೊಳ್ಳುತ್ತಾರೆ. ಒರೆಗಲ್ಲಿನ ಮೇಲೆ ತಿಕ್ಕಿದ ಶುದ್ಧ ಬಂಗಾರದ ಗೆರೆ ಹೋಲಿಸಿ ಇತರ ಬಂಗಾರದ ಗುಣಮಟ್ಟ ನಿರ್ಧರಿಸುತ್ತಾರೆ. ಆಗ ಬಂಗಾರದಲ್ಲಿ ಮಿಶ್ರಿತವಾದದ್ದು ತಾಮ್ರವೋ, ಬೆಳ್ಳಿಯೋ ಎಂಬುದು ತಿಳಿದು ಬರುತ್ತದೆ. 'ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ, ಒರೆಗೆ ಬಣ್ಣಕ್ಕೆ ತಂದೆನ್ನ ಪುಟವನ್ನಿಕ್ಕಿ ನೋಡಯ್ಯಾ, ಕಡಿಹಕ್ಕೆ ಬಡಿಹಕ್ಕೆತಂದೆನ್ನಕಡೆಯಾಣೆಯ ಮಾಡಿ, ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹು ಕೂಡಲ ಸಂಗಮದೇವಾ' ಎಂಬ ಬಸವಣ್ಣನವರ ವಚನವು[15] ಚಿನ್ನವನ್ನು ಪುಟಕ್ಕಿಟ್ಟು ಕಡಿದು ಬಡಿದು ಬೇಕಾದ ಆಕಾರಗೊಳಿಸಿ ತೊಡಿಗೆಗಳನ್ನು ಅಕ್ಕಸಾಲಿ ಮಾಡುತ್ತಿದ್ದುದನ್ನು ಉಲ್ಲೇಖಿಸುತ್ತದೆ. 'ಜಗಮೆಲ್ಲಂ ಪೊನ್ನಂ ಪರೀಕ್ಷಿಸಲರೆಯದನಿತರೆಂ ಪೊನ್ನಂ ಪೊಲ್ಲೆನಲ್ಬಾರದು, ಪರದರುಮಕ್ಕಸಾಲಿಗರು

ಮರೆವೊಡೆ ಸಾಲ್ಗುಂ[16], 'ಪೊನ್ನಾಭರಣಂ ಮಾಡುವ ಅಕ್ಕಸಾಲಿಗಂ'[17] ಎಂದು ಹೇಳಿ ಅಕ್ಕಸಾಲಿಗರು ಪೊನ್ನ ಪರೀಕ್ಷೆಯನ್ನು ಬಲ್ಲವರಾಗಿದ್ದರೆಂದೂ, ಅವರು ಬಂಗಾರದಿಂದ ಆಭರಣಗಳನ್ನು ಮಾಡುತ್ತಿದ್ದರೆಂದೂ ನಯಸೇನ ಹೇಳುತ್ತಾನೆ.

ಗ್ರಾಮೀಣ ಅಕ್ಕಸಾಲಿ ಚಿನ್ನಕರಗಿಸಲು ಇದ್ದಿಲು ಉರಿಸುವ ಕುಪ್ಪಡಿಗೆಯನ್ನು ಉಪಯೋಗಿಸುತ್ತಿದ್ದ. ವಚನಗಳಲ್ಲಿ ಇದನ್ನು 'ಕುಪ್ಪಟಿಗೆ' 'ಅಗ್ಗಿಷ್ಟಿಕೆ'[18] ಎಂದು ಕರೆಯಲಾಗಿದೆ. ಅಕ್ಕಸಾಲೆ ತನ್ನ ಉದ್ಯಮಕ್ಕೆ ವಿವಿಧ ಬಗೆಯ ಆಯುಧಗಳನ್ನು ಉಪಯೋಗಿಸುತ್ತಾನೆ. ಇಕ್ಕಳ, ಅಡಿಗಲ್ಲು ಮತ್ತು ಚಮ್ಮಟಿಗಳೆಂಬ ಕೆಲವು ಆಯುಧಗಳ ಉಲ್ಲೇಖ ಚೆನ್ನಬಸವಣ್ಣನ ವಚನವೊಂದರಲ್ಲಿ ಉಕ್ತವಾಗಿದೆ.[19] ಚಿನಿವಾರು ಅಥವಾ ಅಕ್ಕಸಾಲಿಗರು ವಿಶ್ವಕರ್ಮ ವಂಶದವರೆಂದು ಚೆನ್ನಬಸವಣ್ಣನ ವಚನವೊಂದರಲ್ಲಿ ಉಲ್ಲೇಖಿತವಾಗಿದೆ.[20] ದೇವಾಲಯಗಳಿಗೆ ಚಿನ್ನದ ಕಳಸ ಇರುತ್ತಿದ್ದುದರ ಸೂಚನೆಯೊಂದು ಬಸವಣ್ಣನವರ ವಚನವೊಂದರಲ್ಲಿದೆ.[21]

ಆಭರಣಗಳನ್ನು ಮುಖ್ಯವಾಗಿ ಚಿನ್ನ, ಬೆಳ್ಳಿ ಮತ್ತು ತಾಮ್ರಗಳಿಂದ ಮಾಡಲಾಗುತ್ತಿತ್ತು. ಚಿನ್ನದ ತಟ್ಟೆ ಮತ್ತು ಬೆಳ್ಳಿಯ ತಟ್ಟೆಗಳನ್ನು ದೇವಾಲಯಗಳಿಗೆ ಕಾಣಿಕೆಯಾಗಿ ನೀಡಿರುವುದನ್ನು ಶಾಸನಗಳು ತಿಳಿಸುತ್ತವೆ.[22] ರಾಮಾಯಣ, ಮಹಾಭಾರತ ಕಾಲದಿಂದ ಇಂದಿಗೂ ಕೆಲವು ತೊಡುಗೆ ಅಥವಾ ಆಭರಣಗಳು ಸಮಾಜದಲ್ಲಿ ಉಳಿದುಬಂದಿವೆ. ಪುರುಷರು, ಸ್ತ್ರೀಯರು, ಮಕ್ಕಳುಧರಿಸುವ ವಿವಿಧ ಕೊರಳಹಾರಗಳು, ತೋಳಬಂಧಿಗಳು, ಕೈಬಳೆಗಳು, ತಲೆಯ ಆಭರಣಗಳು, ಮುಕುಟಗಳು, ಉಂಗುರಗಳು, ಮೂಗುತಿಗಳು, ಕಡಗಗಳು, ಓಲೆಗಳು ಮುಂತಾದವು ವಚನಗಳಲ್ಲಿ ಉಲ್ಲೇಖಗೊಂಡಿವೆ. ಸ್ತ್ರೀಯರ ತೊಡಿಗೆಗಳ ಉಲ್ಲೇಖಗಳೇ ವಚನಗಳಲ್ಲಿ ಹೆಚ್ಚಾಗಿ ಉಕ್ತವಾಗಿವೆ. ಸಾಮಾನ್ಯವಾಗಿ ಕಿವಿ, ಮೂಗು, ತಲೆ, ಕೊರಳು ಮುಂತಾದ ಭಾಗಗಳಲ್ಲಿ ಚಿನ್ನದ ಆಭರಣಗಳನ್ನು, ಸೊಂಟ, ಕಾಲುಗಳಿಗೆ ಬೆಳ್ಳಿಯ ಆಭರಣಗಳನ್ನು ಧರಿಸಿರುತ್ತಿದ್ದಂತಿದೆ.

ಒಡವೆ[23] (ಬಂಗಾರದಆಭರಣ)ಯ ಉಲ್ಲೇಖ ವಚನಗಳಲ್ಲಿ ಉಕ್ತವಾಗಿದೆ. ನವರತ್ನ[24]ಗಳನ್ನು ಚನ್ನಬಸವಣ್ಣನ ವಚನವೊಂದು ಉಲ್ಲೇಖಿಸಿದೆ. ವಜ್ರ[25], ಹೊನ್ನು[26], ಮುತ್ತು[27], ರತ್ನ[28], ಪಚ್ಚೆ, ಕನಕ,ವಜ್ರ, ಪವಳ, ಮಾಣಿಕ್ಯ ಮೊದಲಾದವುಗಳಿಂದ ಆಭರಣಗಳನ್ನು ತಯಾರಿಸುತ್ತದ್ದುದುಂಟು.[29] ಪಚ್ಚೆ, ಪವಳವನ್ನು ಆಭರಣದ ಅಲಂಕಾರಕ್ಕೆ ಉಪಯೋಗಿಸುತ್ತಿದ್ದರೆಂದು ತೋರುತ್ತದೆ.[30] ಮುತ್ತು ನೀರಿನಲ್ಲಿ ದೊರಕುತ್ತದೆಂಬ ನಂಬಿಕೆ ಇಂದಿನಂತೆ ಅಂದೂ ಇತ್ತು.[31] ರತ್ನದ ಹೊಳಪು ಕಡಿಮೆಯಾಗದಿರಲೆಂದು ಸ್ಪಟಿಕದ ಘಟದೊಳಗೆ ಅಡಗಿಸಿ ಇಡುತ್ತಿದ್ದರೆಂದು ತೋರುತ್ತದೆ.[32] ನವರತ್ನ ಹಾರದ[33] ಉಲ್ಲೇಖವೊಂದು ಬಸವಣ್ಣನ ವಚನವೊಂದರಲ್ಲಿದೆ. ಚಿಂತಾಮಣಿಯ[34] ಹೆಸರೂ ವಚನಗಳಲ್ಲಿ ಉಕ್ತವಾಗಿದೆ.[35] ದರ್ಪಣ[36]ವನ್ನು ಆಭರಣಗಳಿಂದ ಅಲಂಕರಿಸಿಕೊಂಡ ಮೇಲೆ ನೋಡಿಕೊಳ್ಳಲು ಉಪಯೋಗಿಸುತ್ತಿದ್ದರೆಂದುತೋರುತ್ತದೆ.ರತ್ನ. ಮಾಣಿಕ್ಯಗಳಿಂದ ಗುಡಿಯ ಕಳಸವನ್ನು ಅಲಂಕರಿಸುತ್ತಿದ್ದರೆಂದು ತೋರುತ್ತದೆ.[37]

ಕಂಕಣ[38] ಅಥವಾ ಬಳೆಗಳ[39] ಉಲ್ಲೇಖ ವಚನಗಳಲ್ಲಿದೆ. ಕಣಗಿಲೆ ಉಂಗುರ[40]ದ ಉಲ್ಲೇಖವೊಂದು ವಚನದಲ್ಲಿಉಕ್ತವಾಗಿದೆ. ಕಣಗಿಲೆ ಉಂಗುರವೆಂದರೆ ಉಂಗುರದ ಮಾಟ ಅಥವಾ ಆಕಾರ ಕಣಗಿಲೆಯ ಎಲೆಯನ್ನು ಹೋಲುವಂತಿರುತ್ತದೆ. 'ನಂದಿ ಉಂಗುರ'[41]ದ ಉಲ್ಲೇಖವೂ ಇದೆ. ಕಾಲುಂಗುರ, ಕುಳಿ, ಪೈಜಣ, ಗೆಜ್ಜೆ ಮೊದಲಾದವು

ಕಾಲಿಗೆ ಹಾಕಿಕೊಳ್ಳುವ ಆಭರಣಗಳು. ಉಲಿಯುವ ಗೆಜ್ಜೆ,[42] ಅಂದುಗೆ[43] (ಕಾಲಿನ ಕಡಗ) ಕಡೆಯಾಣಿ[44] ಮೊದಲಾದ ಕಾಲಿಗೆ ಧರಿಸುವ ಆಭರಣಗಳು ಹಾಗೂ ಮೂಗುತಿ[45]ಯ ಬಗ್ಗೆ ವಚನಗಳಲ್ಲಿ ಉಕ್ತವಾಗಿವೆ. ಓಲೆ, ಉಡುಗೆ, ವಾಲಿ, ಬುಗುಡಿ ಮೊದಲಾದ ಆಭರಣಗಳನ್ನು ಸ್ತ್ರೀಯರು ಕಿವಿಯಲ್ಲಿಧರಿಸುವುದುಂಟು. ಓಲೆ[46]ಯ ಉಲ್ಲೇಖವೊಂದು ವಚನದಲ್ಲಿ ಬಂದಿದೆ. ನಾಗಕುಂಡಲಿ[47] ಮತ್ತು ಕರ್ಣಕುಂಡಲ[48]ಗಳೆಂಬ ಆಭರಣಗಳು ವಚನಗಳಲ್ಲಿ ಉಲ್ಲೇಖಗೊಂಡಿವೆ. ಹಿಂದಿನ ಕಾಲದಲ್ಲಿ ರಾಜರುಗಳು ಇಂಥ ಕಿವಿಯ ಆಭರಣಗಳನ್ನು ಧರಿಸುತ್ತಿದ್ದರು. ಈ ಕರ್ಣಕುಂಡಲಗಳು ನಾನಾ ಬಗೆಯವುಗಳಿರುತ್ತಿದ್ದುವೆಂದು ತೋರುತ್ತದೆ. 'ಮಣಿಮಾಲೆ'[49]ಯ ಉಲ್ಲೇಖವೊಂದು ಚನ್ನಬಸವಣ್ಣನ ವಚನದಲ್ಲಿ ಮತ್ತು ಭೋಗಣ್ಣಗಳ ವಚನವೊಂದರಲ್ಲಿದೆ.[50] ಹೆಣ್ಣು ಮಕ್ಕಳು ಸೊಂಟಕ್ಕೆ ಹಾಕಿಕೊಳ್ಳುವ ಪಟ್ಟಿ ಅಥವಾ 'ಡಾಬು'ವನ್ನು ವಚನದಲ್ಲಿ ಒಡ್ಯಾಣ[51] ಎಂದೇ ಕರೆಯಲಾಗಿದೆ.

ವಿಶ್ವಕರ್ಮರೆಂದು ಕರೆದುಕೊಳ್ಳುವ ಈ ಅಕ್ಕಸಾಲಿಗಳು ಕೇವಲ ಆಭರಣತಯಾರಿಕಾ ಕೆಲಸವಲ್ಲದೇರಾಜನ ಕಮ್ಮಟಗಳಲ್ಲೂ ಕೆಲಸ ನಿರ್ವಹಿಸುತ್ತಿದ್ದರು.[52] ಈ ಕಮ್ಮಟಗಳಲ್ಲಿ ನಾಣ್ಯಗಳನ್ನು ಟಂಕಿಸುತ್ತಿದ್ದರು. ಇವುಗಳನ್ನು 'ಅಚ್ಚಿನ ಟಂಕಸಾಲೆ'[53]ಗಳೆಂದೂ ಕರೆಯುತ್ತಿದ್ದರು. ಗದ್ಯಾಣ, ಪಣ, ಅಡ್ಡ, ಹಾಗ, ಬೇಳೆ, ವೀಸ – ಇವೆಲ್ಲವೂ ಪ್ರತ್ಯೇಕ ನಾಣ್ಯಗಳೆಂದು ಶಾಸನಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ನಾಣ್ಯಗಳಲ್ಲಿ ಪ್ರಸಿದ್ಧವಾದುದು ಗದ್ಯಾಣ[54] ಅಥವಾ ಪೋನ್ ಎಂಬ ಹೆಸರಿನ ನಾಣ್ಯ.

**ಆಧಾರ ಗ್ರಂಥಗಳು:**


1. (ಲೇ)ಸೋಮಶೇಖರ ಇಮ್ರಾಪೂರ., ಅಕ್ಕಸಾಲಿ, ಜಾನಪದ ಸಾಹಿತ್ಯ ದರ್ಶನ: ಏಳು, (ಸಂ) ವೃಷಭೇಂದ್ರಸ್ವಾಮಿ, ಎಸ್.ಎಂ. ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ., ಧಾರವಾಡ, 1982, ಪು.169.
2. SII XI(ii) ನಂ.153, ಸೂಡಿ, ರೋಣ(ತಾ), ಕ್ರಿ.ಶ. 1103, ಪು.192.
3. EC XII(Old)ಶಿರಾ37, ಸು.ಕ್ರಿ.ಶ. 1040, ಪು.274.
4. SII XI(ii) ನಂ.202, ಲಕ್ಕುಂಡಿ, ಗದಗ(ತಾ), ಕ್ರಿ.ಶ. 1125, ಪು.257.
5. SII XI(ii) ನಂ.153, ಸೂಡಿ, ರೋಣ(ತಾ), ಕ್ರಿ.ಶ. 1103, ಪು.192.
6. SII IX(i) ನಂ.164, ಕುಡುತಿನಿ, ಬಳ್ಳಾರಿ(ತಾ), ಕ್ರಿ.ಶ.1098, ಪು.155.
7. EC VII ಮವ 64, ಕ್ರಿ.ಶ. 1259, ಪು.385.
8. EC V (Old) ಅಕೆ 123, ಕ್ರಿ.ಶ. ?, ಪು.380.
9. EC V (Old) ಅಕೆ 108, ಕ್ರಿ.ಶ. ?, ಪು.359.
10. EC X, ಅಕೆ 149, ಕ್ರಿ.ಶ. 1142, ಪು.193.
(ಯಜ್ಞೋಪವೀತಬದ್ದರುಂ ಹೇಮಕರ್ಣಕುಂಡಲರುಂ ಕ್ಷತ್ರಿಯ ವೈಶ್ಯಶೂದ್ರತ್ರಯಲ)
11. EC XII, ಕ 126, ಕ್ರಿ.ಶ. 1291, ಪು.135.
12. ಬಸವಣ್ಣನವರ ವಚನಗಳು, ವಚನ 962, (ಕಲ್ಲೊಳಗೆ ಹೊನ್ನುಂಟು ಮರದೊಳಗೆ ಅಗ್ನಿಯುಂಟು), (ಸಂ) ಹಿರೇಮಠ ಆರ್.ಸಿ., ಪೂರ್ವೋಕ್ತ. ಪು.403.
13. ಚನ್ನಬಸವಣ್ಣನವರ ವಚನಗಳು, ವಚನ 295, (ಭೂಮಿಯಜಲಗುಗರ್ಜಿ ಹೇಮವನರಸುವಂತೆ),(ಸಂ) ಹಿರೇಮಠ, ಆರ್.ಸಿ., ಪೂರ್ವೋಕ್ತ. ಪು.129.
14. ಬಸವಣ್ಣನವರ ವಚನಗಳು, ವಚನ 965,(ಸಂ) ಹಿರೇಮಠ ಆರ್.ಸಿ., ಪೂರ್ವೋಕ್ತ.ಪು.405.

15. ಬಸವಣ್ಣನವರ ವಚನಗಳು, ವಚನ 251, ಪೂರ್ವೋಕ್ತ. ಪು.62.
16. ನಯಸೇನ ವಿರಚಿತಧರ್ಮಾಮೃತಂ, ಗದ್ಯಾನುವಾದ: ವೆಂಕಟರಾಮಪ್ಪ ಕೆ., ಕ.ಸಾ.ಪ. ಬೆಂಗಳೂರು, 1977, ಪು.609.
17. ಅದೇ, ಪು.811.
18. ಚನ್ನಬಸವಣ್ಣನವರ ವಚನಗಳು, ವಚನ 71, (ಅಕ್ಕಸಾಲೆಯ ಭಕ್ತಿ ಅಗ್ಗಿಷ್ಟಿಕೆಯಲ್ಲಿ ಹೋಯಿತ್ತು), (ಸಂ) ಹಿರೇಮಠ, ಆರ್.ಸಿ., ಪೂರ್ವೋಕ್ತ. ಪು.33.
19. ಅದೇ, ವಚನ 357, (ಆವಂಗೆ ಇಕ್ಕುಳ, ಅಡಿಗಲ್ಲು, ಚಿಮ್ಮಟಿಗೆ ಮೊದಲಾದ ಸಂಪಾದನೆಗಳ ಕೊಟ್ಟವರಾರು?), ಪು.162.
20. ಅದೇ.
21. ಬಸವಣ್ಣನವರ ವಚನಗಳು, ವಚನ 362,(ಕಾಗೆ ವಿಷ್ಟಿಸುವ ಹೊನ್ನಕಳಸವಹುದರಿಂದ), ಪೂರ್ವೋಕ್ತ. ಪು.87.
22. (ಲೇ) ಗೋಪಾಲ್, ಆರ್., ಹೊಯ್ಸಳ ಕಾಲದ ಕೈಗಾರಿಕೆಗಳು, ಇತಿಹಾಸ ದರ್ಶನ, ಸಂಪುಟ–6, ಕ.ಇ.ಅ, ಬೆಂಗಳೂರು, 1991,ಪು.122
23. ಸಕಲ ಪುರಾತನರ ವಚನಗಳು–2, ನಗೆಯ ಮಾರಿತಂದೆಗಳ ವಚನ 1190, (ಸಂ) ಸುಂಕಾಪುರ, ಎಂ.ಎಸ್.(ನಿನಗೆ ಇವು ಒಡವೆಯಲ್ಲ), ಕರ್ನಾಟಕ ವಿ.ವಿ., ಧಾರವಾಡ, 1976, ಪು.416.
24. ಚನ್ನಬಸವಣ್ಣನವರ ವಚನಗಳು, ವಚನ 20, (ದರಿದ್ರ ಬಲ್ಲನೆ ನವರತ್ನಂಗಳ?),(ಸಂ) ಹಿರೇಮಠ, ಆರ್.ಸಿ., ಪೂರ್ವೋಕ್ತ. ಪು.15.
25. ಅದೇ, ವಚನ 433, (ವಜ್ರದಗೊರಲೆ ಮುಟ್ಟ ಬಲ್ಲುದೆ ಅಯ್ಯಾ?), ಪೂರ್ವೋಕ್ತ, ಪು.193.
26. ಬಸವಣ್ಣನವರ ವಚನ ಸಂಪುಟ, ವಚನ 870, (ಹೊನ್ನಕಬ್ಬುನವಾಗದು ಕ್ರೀಯಳಿದು), ಪೂರ್ವೋಕ್ತ. ಪು.227.
27. ಸಂಕೀರ್ಣ ವಚನ ಸಂಪುಟ–1, ಆದಯ್ಯಗಳ ವಚನ 1071, (ಮುತ್ತು ನೀರೊಳಗೆ ಹುಟ್ಟಿ ಮರಳಿ ನೀರಾಗದಂತೆ) ಪೂರ್ವೋಕ್ತ, ಪು.331.
28. ಸಕಲ ಪುರಾತನರಬೆಡಗಿನ ವಚನಗಳು, ಆದಯ್ಯಗಳ ವಚನ 299,(ಸಂ) ಸುಂಕಾಪುರ, ಎಂ.ಎಸ್., ಪೂರ್ವೋಕ್ತ, ಪು.389.
29. ಅಕ್ಕನ ವಚನಗಳು, ವಚನ 76,(ಸಂ) ಬಸವರಾಜುಎಲ್., ಗೀತಾ ಬುಕ್ ಹೌಸ್, ಮೈಸೂರು, 1990 (ಪಚ್ಚೆಯ ನೆಲಗಟ್ಟು, ಕನಕದತೋರಣ, ವಜ್ರದಕಂಭ, ಪವಳದ ಚಪ್ಪರವಿಕ್ಕಿ ಮದುವೆಯ ಮಾಡಿದರು. ನಮ್ಮವರೆನ್ನ ಮದುವೆಯ ಮಾಡಿದರು ಕಂಕಣ(ಕೈದಾರಗಟ್ಟಿ) ಸ್ಥಿರಸೇಸಸೆಯ ನಿಟ್ಟು ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು) ಪು.71.
30. ಚನ್ನಬಸವಣ್ಣನವರ ವಚನಗಳು, ವಚನ 431 (ಪಚ್ಚೆಯ ಪವಳದ ಗುಡಿಗೂಡಾರವೇಕೆ ಗೂಗೆಗೆ?), ಪೂರ್ವೋಕ್ತ. ಪು.192.
31. ಬಸವಣ್ಣನವರ ವಚನ ಸಂಪುಟ, ವಚನ 768 (ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಪ್ಪುದೆ?), ಪೂರ್ವೋಕ್ತ. ಪು.195.
32. ಚನ್ನಬಸವಣ್ಣನವರ ವಚನಗಳು, ವಚನ 1121 (ಸ್ಫಟಿಕದ ಘಟದೊಳಗಿರಿಸಿದ ರತ್ನದಂತಿರಬೇಕು), ಪೂರ್ವೋಕ್ತ. ಪು.521.
33. ಬಸವಣ್ಣನವರ ವಚನಗಳು, ವಚನ 1178, (ನವರತ್ನದ ಹಾರವ ತೋರಣವಕಟ್ಟಿ), (ಸಂ) ಹಿರೇಮಠ ಆರ್.ಸಿ., ಪೂರ್ವೋಕ್ತ. ಪು.490.
34. ಚನ್ನಬಸವಣ್ಣನವರ ವಚನಗಳು, ವಚನ 30, (ಗಾರ್ದಭ ಬಲ್ಲುದೆ ಚಿಂತಾಮಣಿಯ?),

ಪೂರ್ವೋಕ್ತ. ಪು.15.
35. ಸಂಕೀರ್ಣ ವಚನ ಸಂಪುಟ–1, ಆದಯ್ಯಗಳ ವಚನ 873, (ಗೋರಿಕಲ್ಲೊಳಗೆ ಚಿಂತಾಮಣಿಯನರಸಿ ಬೆರಟುಗೊಂಡವನಂತೆ), ಪೂರ್ವೋಕ್ತ, ಪು.264.
36. ಚನ್ನಬಸವಣ್ಣನವರ ವಚನಗಳು, ವಚನ 1121, ಪೂರ್ವೋಕ್ತ. ಪು. 521.
37. ಸಕಲ ಪುರಾತನರ ಬೆಡಗಿನ ವಚನಗಳು, ಮನುಮುನಿ ಗುಮ್ಮಟಯ್ಯಗಳ ವಚನ 175, (ಗುಡಿಯ ಮೇಲೆ ಮೂರು ಕಳಸ ಮೂರಕ್ಕೊಂದೇ ರತ್ನದ ಕುಡಿ ಬೆಳಗು, ಕಳಸದ ಕಳೆ ಅಡಗಿತ್ತು ಮಾಣಿಕ್ಯದ ಬೆಳಗಿನಲ್ಲಿ)(ಸಂ) ಸುಂಕಾಪುರ, ಎಂ.ಎಸ್. ಪೂರ್ವೋಕ್ತ, ಪು.201.
38. ಅಕ್ಕನ ವಚನಗಳು, ವಚನ 176, (ಸಂ) ಬಸವರಾಜು ಎಲ್., ಪೂರ್ವೋಕ್ತ, ಪು.104.
39. ಶಿವಲೆಂಕ ಮಂಚಣ್ಣ ಮತ್ತು ಢಕ್ಕೆಯ ಬೊಮ್ಮಣ್ಣಗಳ ವಚನಗಳು, ಢಕ್ಕೆಯ ಬೊಮ್ಮಣ್ಣಗಳ ವಚನ 1. (ತನುವೆಂಬ ಮೊರದಲ್ಲಿ ಮಾಯಾಗುಣವೆಂಬ ಬಾಳು ಬಟ್ಟಲು ಕೈಯಲ್ಲಿ ಪ್ರಳಯ ಸಂಹಾರವೆಂಬ ಬಳೆಯ ಕೈಯಲ್ಲಿಕ್ಕಿ ಅಂಗದ ಮನೆಯ ಬಾಗಿಲಲ್ಲಿ ಕೊಂಡು ಬಂದಿದೇನೆ) (ಸಂ) ಸಣ್ಣಯ್ಯ ಬಿ.ಎಸ್. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.1971,ಪು.53.
40. ಬಸವಣ್ಣನವರ ವಚನಗಳು, ವಚನ 1197, (ಕಣಗಿಲೆಲೆಯ ಉಂಗುರವನಿಕ್ಕಿ), (ಸಂ)ಪೂರ್ವೋಕ್ತ. ಪು.496.
41. ಚನ್ನಬಸವಣ್ಣನವರ ವಚನ ಸಂಪುಟ, ವಚನ 244, (ಅನ್ಯಮಣಿಮಾಲೆ ನಂದಿವುಂಗುರ ನಾಗಕುಂಡಲ ಮೊದಲಾದ), ಪೂರ್ವೋಕ್ತ. ಪು.108.
42. ಅಲ್ಲಮ ಪ್ರಭುದೇವರ ವಚನಗಳು, ವಚನ 1142, (ಸಂ) ಹಿರೇಮಠ ಆರ್.ಸಿ. ಮತ್ತು ಸುಂಕಾಪುರ ಎಂ.ಎಸ್. (ಉದಕದ ಕೊಡನ ಹೊತ್ತಾಡುವ ಗೊರವಿತಿಯ ಕೈಯಲ್ಲಿ ಕಂಕಣ, ಉರಿವ ಗೆಜ್ಜೆಚರಣದಲ್ಲಿ...) ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ., ಧಾರವಾಡ, 1976, ಪು.423.
43. ಅಕ್ಕನ ವಚನಗಳು, ವಚನ 176, (ಕರದಲ್ಲಿಕಂಕಣ, ಉರದ ಮೇಲಂದುಗೆ, ಕಿವಿಯಲ್ಲಿ ಹಾವುಗೆ! ಉಭಯ ಸಿರಿವಂತಹ ಮೊಣಕಾಲಲ್ಲಿ ಝುಳವಟ್ಟಿಗೆ) (ಸಂ) ಬಸವರಾಜುಎಲ್., ಪೂರ್ವೋಕ್ತ, ಪು.105.
44. ಬಸವಣ್ಣನವರ ವಚನಗಳು, ವಚನ 251, (ಕಡಿಹಕ್ಕೆ ಬಡಿಹಕ್ಕೆ ತಂದೆನ್ನಕಡೆಯಣೆಯ ಮಾಡಿ, ನಿಮ್ಮ ಶರಣರ ಪಾದಕ್ಕೆತೊಡಿಗೆಯ ಮಾಡಿ ಸಲಹಯ್ಯಾ), ಪೂರ್ವೋಕ್ತ. ಪು.104.
45. ಅಕ್ಕನ ವಚನಗಳು, ವಚನ 176, (ಸಂ) ಬಸವರಾಜುಎಲ್., ಪೂರ್ವೋಕ್ತ, ಪು.104.
46. ಅದೇ ವಚನ 87, ಪು.76.
47. ಚನ್ನಬಸವಣ್ಣನವರ ವಚನಗಳು, ವಚನ 244, ಪೂರ್ವೋಕ್ತ. ಪು.108.
48. ಅಕ್ಕನ ವಚನಗಳು, ವಚನ 86, (ಫಣಿಮಣಿಕರ್ಣಕುಂಡಲದವ ನೋಡವ್ವ), ಪೂರ್ವೋಕ್ತ, ಪು.75.
49. ಚನ್ನಬಸವಣ್ಣನವರ ವಚನಗಳು, ವಚನ 244, ಪೂರ್ವೋಕ್ತ. ಪು.108.
50. ಸಕಲ ಪುರಾತನರ ಬೆಡಗಿನ ವಚನಗಳು, ಭೋಗಣ್ಣಗಳ ವಚನ 471,(ಸಂ) ಸುಂಕಾಪುರ, ಎಂ.ಎಸ್. ಪೂರ್ವೋಕ್ತ. ಪು.667.
51. ಅಲ್ಲಮ ಪ್ರಭುದೇವರ ವಚನಗಳು, ವಚನ 374, ಪೂರ್ವೋಕ್ತ. ಪು.142.
52. SII XI(ii) ನಂ.153, ಸೂಡಿ, ರೋಣ(ತಾ), ಕ್ರಿ.ಶ.1103, ಪು.192.
53. SII IX(i) ನಂ.228, ಪೆದ್ದತುಂಬಲಂ, ಅದೋನಿ (ತಾ), ಕ್ರಿ.ಶ.1133, ಪು.233.
54. SII IX(i)ನಂ.165, ಕುರುವತ್ತಿ. ಹರಪನಹಳ್ಳಿ (ತಾ), ಕ್ರಿ.ಶ.1099, ಪು.159.

❖❖❖

# ವೀರ ಮೌಲ್ಯಕ್ಕೆ ಬರೆದ ಭಾಷ್ಯ : ಪಂಪನ 'ವಿಕ್ರಮಾರ್ಜುನ ವಿಜಯ'

**ಡಾ. ಶ್ರೀಧರ ಎನ್.**
ಸಹ ಪ್ರಾಧ್ಯಾಪಕರು, ಸರಕಾರಿ ಕಾಲೇಜು, ಕಾಸರಗೋಡು

ಸಾಹಿತ್ಯಚರಿತ್ರೆಯಲ್ಲಿ ಕ್ರಿ.ಶ. ಹತ್ತನೇ ಶತಮಾನವನ್ನುಕನ್ನಡ ಸಾಹಿತ್ಯದ ಸುವರ್ಣಯುಗ ಎಂದು ಕರೆದು ಗೌರವಿಸಲಾಗಿದೆ. ಹತ್ತು ಹನ್ನೆರಡನೇ ಶತಮಾನಗಳು ರಾಜಕೀಯವಾಗಿ ಕರ್ನಾಟಕದಲ್ಲಿ ಸಾಮ್ರಾಜ್ಯಗಳ ಸ್ಥಾಪನೆಗಾಗಿ ನಿರಂತರವಾಗಿ ಯುದ್ಧಗಳು ನಡೆಯುತ್ತಿದ್ದ ಕಾಲವೂ ಆಗಿತ್ತು. ಯುಗಧರ್ಮವೋ ಎಂಬಂತೆ ಪಂಪ, ಪೊನ್ನ, ಚಾವುಂಡರಾಯ, ದುರ್ಗಸಿಂಹ, ಜನ್ನ ಮೊದಲಾದ ಕವಿಗಳು ಕಲಿಗಳೂ ಆಗಿದ್ದರು. ಹೀಗಾಗಿ ಈ ಕಾಲವನ್ನು ವೀರಯುಗವೆಂದೂ, ಕ್ಷಾತ್ರಯುಗವೆಂದೂ ಕರೆಯುವ ರೂಢಿ ಪ್ರಚಲಿತವಾಗಿದೆ. ಪಂಪನ ವಿಕ್ರಮಾರ್ಜುನ ವಿಜಯ ವೀರ ಮೌಲ್ಯವನ್ನು ಪ್ರತಿನಿಧಿಸುವ ಒಂದು ಮಹತ್ವದ ಕಾವ್ಯ. ಮಹಾಭಾರತದ ಕಥೆಯನ್ನು ಸಮಕಾಲೀನ ರಾಜಕೀಯ ವ್ಯಕ್ತಿಗಳೊಂದಿಗೆ 'ತಗುಳ್ಚಿ' ಹೇಳಿರುವುದರಿಂದ ಈ ಕಾವ್ಯದಲ್ಲಿ ಸಮಕಾಲೀನ ಜನಜೀವನ, ರಾಜಕೀಯ, ಯುದ್ಧ, ಸಾಮಾಜಿಕ ಮೌಲ್ಯಗಳು ಧಾರಾಳವಾಗಿ ದೊರಕುತ್ತವೆ.

ವೀರ ಎಂಬ ಪದಕ್ಕೆ ಶೂರ. ಪರಾಕ್ರಮಿ, ಪರಾಕ್ರಮವನ್ನು ಮೆರೆಯುವವನು, ಕಲಿ ಮೊದಲಾದ ಅರ್ಥಗಳನ್ನು ಕೊಡಲಾಗಿದೆ. (ಸಂಕ್ಷಿಪ್ತ ಕನ್ನಡ ನಿಘಂಟು, ಪು.1176). ಆರಂಭಕಾಲದಲ್ಲಿ ಯುದ್ಧವೀರ ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದ್ದ ಪದ, ಕ್ರಮೇಣ ತಾತ್ವಿಕವಾದ ಅರ್ಥವನ್ನು ಪಡೆದುಕೊಂಡು ದಾನವೀರ, ದಯಾವೀರ, ಧರ್ಮವೀರ ಮೊದಲಾದ ಅರ್ಥವಿಸ್ತಾರವನ್ನು ಹೊಂದಿತು. ಹೀಗೆ ಮಧ್ಯಕಾಲೀನ ಯುಗದಲ್ಲಿ ವೀರವು ಒಂದು ಸಾಮಾಜಿಕ ಮೌಲ್ಯವಾಗಿ ಕನ್ನಡ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಯಿತು.

**ಜಿತೇನ ಲಭ್ಯತೇ ಲಕ್ಷ್ಮೀ**
**ಮೃತೇನಾಪಿ ಸುರಾಂಗನಾ**
**ಕ್ಷಣವಿಧ್ವಂಸಿನೀ ಕಾಯೇ**
**ಕಾ ನ ಚಿಂತಾ ಮರಣೇರಣೇ**

ಎಂಬುದು ವೀರರ ಆದರ್ಶವಾಗಿತ್ತು. ಇದು ಕರ್ನಾಟಕದ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ದೊರಕುವ ಧ್ಯೇಯವಾಕ್ಯ. ಯುದ್ಧವೇ ರಾಜಧರ್ಮವಾಗಿದ್ದ ಕಾಲದಲ್ಲಿ ರಾಜನಿಗಾಗಿ, ನಾಡಿನ ಗಡಿರಕ್ಷಣೆಗಾಗಿ, ಗೋವುಗಳ ರಕ್ಷಣೆಗಾಗಿ, ಹೆಣ್ಣಿನ ಮಾನ ಮತ್ತು ಪ್ರಾಣರಕ್ಷಣೆಗಾಗಿ ಹೋರಾಡಿ ಜಯ ಗಳಿಸುವುದು, ಇಲ್ಲವೇ ಮಡಿಯುವುದು ವೀರರ ಆದರ್ಶವಾಗಿತ್ತು. ಯುದ್ಧದಲ್ಲಿ ಗೆದ್ದರೆ ಜಯಲಕ್ಷ್ಮಿ ದೊರಕುತ್ತಾಳೆ; ಸತ್ತರೆ ಸ್ವರ್ಗದಲ್ಲಿ ಅಪ್ಸರೆಯರು ಸಿಗುತ್ತಾರೆ ಎಂಬ ಆಮಿಷರೂಪದ ಆಪ್ತವಾಕ್ಯವು ವೀರರ ಬದುಕನ್ನು ಮುನ್ನಡೆಸುತ್ತಿತ್ತು. ಯುದ್ಧದಲ್ಲಿ ಗೆದ್ದರೆ ವೀರರಿಗೆ ಬಾಳ್ಗೆಳ್ಚು, ದಾನದತ್ತಿಗಳ ಗೌರವ ದೊರೆಯುತಿತ್ತು. ಮಡಿದರೆ ವೀರಗಲ್ಲುಗಳನ್ನು ನಡೆಸಿ ಅವನ ಹೆಸರನ್ನು

ಶಾಶ್ವತಗೊಳಿಸುವ ಸಂಪ್ರದಾಯ ಕರ್ನಾಟಕದಲ್ಲಿತ್ತು. 'ಪ್ರಾಚೀನ ಕರ್ನಾಟಕದಲ್ಲಿ ಜನಜೀವನದ ಆದರ್ಶಗಳಾಗಿದ್ದು, ಅವರ ಬಾಳನ್ನು ಹಿಡಿದು ನಡೆಯಿಸಿದ ಮೌಲ್ಯಗಳೆಂದರೆ ಬೀರ (=ವೀರ) ಮತ್ತು ಚಾಗ (=ತ್ಯಾಗ)' (ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ. ಎಂ.ಎಂ.ಕಲ್ಬುರ್ಗಿ, ಪು. 36).

ಪಂಪಭಾರತವನ್ನು ಒಂದು ರಾಜಕೀಯ ಪಠ್ಯವೆಂದು ಪರಿಭಾವಿಸಿದಾಗ, ಮಧ್ಯಕಾಲೀನ ಯುಗದ ಅನೇಕ ಯುದ್ಧಗಳ ವಿವರಗಳು ಅದರಲ್ಲಿ ದೊರಕುತ್ತವೆ. ತಾನು ಕಂಡ ಸಮಕಾಲೀನ ಯುದ್ಧ ವೀರರಗುಣ ಸ್ವಭಾವಗಳು ಪಂಪನು ಚಿತ್ರಿಸಿದ ಪಾತ್ರಗಳ ಮೇಲೆ ಪ್ರಭಾವವನ್ನು ಬೀರಿರಬಹುದು. ಪಂಪ ತನ್ನಕಾಲದ ಸಾಮಾಜಿಕ ಮೌಲ್ಯಗಳನ್ನು ಮಹಾಭಾರತದ ಪಾತ್ರಗಳಲ್ಲಿ ಕಂಡರಿಸುವಪ್ರಯತ್ನವನ್ನು ಮಾಡಿದ್ದಾನೆ. ಹೀಗೆ ಮಾಡುವ ಮೂಲಕ ಮಹಾಭಾರತದ ನಿರ್ದಿಷ್ಟಪಾತ್ರಗಳಿಗೆ ವಿಶೇಷವಾದ ಹೊಳಪನ್ನು ನೀಡಲು ಅವನಿಗೆ ಸಾಧ್ಯವಾಗಿದೆ.

**ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ**
**ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ ಚಾಪವಿದ್ಯಾ**
**ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ**
**ರ್ಮಲಚಿತ್ತಂಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ**

**(ಪಂಪಭಾರತ, 14–64)**

ಈ ಪದ್ಯವನ್ನು ಕೇಂದ್ರದಲ್ಲಿಟ್ಟುಕೊಂಡು ಪಂಪನು ಕಂಡರಿಸಿದ ವೀರಮೌಲ್ಯದ ನಾನಾಮುಖಗಳನ್ನು ಶೋಧಿಸಬಹುದು. ಈ ಪದ್ಯದಲ್ಲಿ ಪಂಪನು ತನ್ನಕಾವ್ಯದ ಎಂಟು ಪ್ರಮುಖ ಪಾತ್ರಗಳನ್ನು ಎಂಟು ಗುಣಗಳಿಗೆ ಸಮೀಕರಿಸಿದ್ದಾನೆ. ಚಲಕ್ಕೆ ದುರ್ಯೋಧನ, ನನ್ನಿಗೆಕರ್ಣ, ಪೌರುಷಕ್ಕೆ ಭೀಮ, ಬಲಕ್ಕೆ ಶಲ್ಯ, ಅತ್ಯುನ್ನತಿಗೆ ಭೀಷ್ಮ, ಚಾಪವಿದ್ಯಾಬಲಕ್ಕೆ ದ್ರೋಣ, ಸಾಹಸಕ್ಕೆ ಅರ್ಜುನ, ಧರ್ಮಕ್ಕೆ ಧರ್ಮರಾಯ ಎಂಬ ಹಾಗೆ ವಿಶಿಷ್ಟವಾದ ಗುಣಗಳನ್ನು ಪಾತ್ರಗಳಿಗೆ ಸಮನ್ವಯಗೊಳಿಸಿದ್ದಾನೆ.

ಪಂಪನ ಪ್ರಕಾರ ಚಲ, ನನ್ನಿ, ಪೌರುಷ, ಬಲ, ಅತ್ಯುನ್ನತಿ, ಚಾಪವಿದ್ಯೆ, ಸಾಹಸದ ಮಹಿಮೆ ಮತ್ತುಧರ್ಮನಿಷ್ಠೆ ಮೊದಲಾದ ಗುಣಗಳು ವೀರಜೀವನದ ಮೌಲ್ಯಗಳಾಗಿವೆ. ಈ ಮೌಲ್ಯಗಳು ಮತ್ತು ಅವುಗಳನ್ನು ಪ್ರತಿನಿಧಿಸುವ ವೀರಪಾತ್ರಗಳ ಮೂಲಕ ಅವನು ತನ್ನ ಕೃತಿಯನ್ನು 'ಲೋಕಪೂಜ್ಯ'ವನ್ನಾಗಿ ಮಾಡಿಕೊಂಡಿದ್ದಾನೆ. ಎಲ್ಲ ಗುಣಗಳು ಒಟ್ಟಿಗೆ ಒಬ್ಬನಲ್ಲೇ ಇರುವುದಿಲ್ಲ ಮತ್ತು ಇರಬೇಕಾಗಿಲ್ಲ. ಪಂಪನು ಚಿತ್ರಿಸಿದ ವೀರಪಾತ್ರಗಳಲ್ಲಿ ಯಾವುದೋ ಒಂದು ನಿರ್ದಿಷ್ಟ ಗುಣ ಅಥವಾ ಸ್ವಭಾವ ಢಾಳಾಗಿ ಕಾಣಿಸಿಕೊಳ್ಳುತ್ತದೆ. ಹೀಗೆ ಯಾದಿಯನ್ನು ಮಾಡುವಾಗ ತನ್ನಕಾವ್ಯದ ನಾಯಕನಾಗಿರುವ ಅರ್ಜುನಿಗೆ ಪಂಪ ನೀಡಿದ್ದು ಏಳನೇ ಸ್ಥಾನ. ಧರ್ಮರಾಯ ಕೊನೆಯ ಸ್ಥಾನದಲ್ಲಿದ್ದಾನೆ.

ಈಗಾಗಲೇ ವಿದ್ವಾಂಸರು ಈ ಪದ್ಯದ ಕುರಿತಾಗಿ ಸಾಕಷ್ಟು ಚರ್ಚೆಗಳನ್ನು ಮಾಡಿದ್ದಾರೆ. ಮುಳಿಯ ತಿಮ್ಮಪ್ಪಯ್ಯನವರ ಪ್ರಕಾರ ಈ ಪಾತ್ರ ವಿಶೇಷಗಳಲ್ಲಿ ಅರ್ಜುನ, ಭೀಮ, ಧರ್ಮರಾಯರು ನಾಯಕ ವರ್ಗಕ್ಕೆ ಸೇರಿದವರು. ಕರ್ಣ, ದುರ್ಯೋಧನರು ಪ್ರತಿನಾಯಕ ವರ್ಗಕ್ಕೆ ಸೇರಿದವರು. ಭೀಷ್ಮ, ದ್ರೋಣ, ಶಲ್ಯರು ಉಭಯ ವರ್ಗಕ್ಕೆ ಸೇರಿದವರು. (ನಾಡೋಜ ಪಂಪ, ಪು.380). ವಿವಿಧ ವಿಭಾಗಗಳಿಗೆ ಸೇರಿದ ಪಾತ್ರಗಳನ್ನು ಒಂದೆಡೆ ತಂದು ಪಂಪನು ತನ್ನ ಗುಣಪಕ್ಷಪಾತವನ್ನು ಮೆರೆದಿದ್ದಾನೆ.

ಈ ವಾದವಿವಾದಗಳು ಏನೇ ಇರಲಿ, ಪಂಪನು ತನ್ನ ಕಾವ್ಯದ ಎಂಟು ಪಾತ್ರಗಳನ್ನು ಅವರ ಗುಣಸ್ವಭಾವಗಳ ಆಧಾರದಲ್ಲಿ ಪಟ್ಟಿ ಮಾಡಿದ್ದಾನೆ ಎಂಬುದು ಸತ್ಯ. ಪಂಪ ತನ್ನ ಕಾಲದ ಸಾಮಾಜಿಕ ಮೌಲ್ಯಗಳನ್ನು ಪ್ರಮುಖ ಪಾತ್ರಗಳ ಮೂಲಕ ಕಡೆದು ನಿಲ್ಲಿಸಿ, ವೀರಯುಗದ ಮೌಲ್ಯಗಳನ್ನು ಸಹೃದಯರಿಗೆ ತಲುಪಿಸುವ ಪ್ರಯತ್ನವನ್ನು ಮಾಡಿದ್ದಾನೆ.

ವೀರ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಚಲ, ನನ್ನಿ, ಪೌರುಷ, ಅತ್ಯುನ್ನತಿ, ಧರ್ಮಮೊದಲಾದ ಪರಿಭಾಷೆಗಳನ್ನು ಅರ್ಥ ಮಾಡಿಕೊಳ್ಳುವ ಅಗತ್ಯವಿದೆ. 'ಚಲದೊಳ್ ದುರ್ಯೋಧನಂ' ಎಂಬ ಮಾತಿನಿಂದ ಅವನಲ್ಲಿ ಚಲ ಮಾತ್ರವೇ ಇತ್ತು; ಬೇರಾವ ಗುಣಗಳೂ ಇರಲಿಲ್ಲ ಎಂದು ಭಾವಿಸಿಕೊಳ್ಳಬೇಕಾಗಿಲ್ಲ. ನನ್ನಿಗೆ ಸತ್ಯ ಎಂಬುದು ಸಾಮಾನ್ಯ ಅರ್ಥ. ಆದರೆ ಪಂಪ ನನ್ನಿಗೆ ಕೃತಜ್ಞತಾಭಾವ, ರಾಜನಿಷ್ಠೆ, ಉಂಡ ಮನೆಗೆ ಎರಡು ಬಗೆಯದ ಗುಣ ಮೊದಲಾದ ಅನೇಕಾರ್ಥಗಳನ್ನು ಕರ್ಣ ಪಾತ್ರದ ಮೂಲಕ ನೀಡಿದ್ದಾನೆ. 'ಜೋಳದ ಪಾಟಿ'ಗಾಗಿ ತನ್ನನ್ನು ದುರ್ಯೋಧನನಿಗೆ ಅರ್ಪಿಸಿಕೊಂಡ ಕರ್ಣ ಅಪ್ರತಿಮ ವೀರ; ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ ದುರಂತನಾಯಕ.

ಪಂಪ ಕರ್ಣನಲ್ಲಿ ಕಂಡ ಮುಖ್ಯವಾದ ಗುಣ ನನ್ನಿಯಾದರೂ, ಅವನ ಚಲ, ಚಾಗ, ಅಳವು, ಕಲಿತನ, ಕುಲ ಮೊದಲಾದ ಅಂಶಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ನೆನಪಿಸಿಕೊಳ್ಳುತ್ತಾನೆ. ಕರ್ಣಾವಸಾನದ ಸಂದರ್ಭದಲ್ಲಿ ಪಂಪ ಕರ್ಣನಿಗೆ ರಚಿಸಿದ ಚರಮಗೀತೆಯಲ್ಲಿ ಅವನ ಎಲ್ಲ ಗುಣಗಳನ್ನೂ ಒಂದೆಡೆ ಕೂಡಿ ಹಾಕಿ ಹಾಡಿ ಹೊಗಳುತ್ತಾನೆ.

**ನೆನೆಯದಿರಣ್ಣಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿ**
**ನೆನೆವೊಡೆಕರ್ಣನಂ ನೆನೆಯ... (ವಿಕ್ರಮಾರ್ಜುನ ವಿಜಯ, 12–217)**

ಹೀಗೆ ನಿಜವಾದ ವೀರನಲ್ಲಿ ಒಂದಕ್ಕಿಂತ ಹೆಚ್ಚು ಗುಣಗಳು ಹಾಸುಹೊಕ್ಕಾಗಿರುತ್ತವೆ ಎಂದು ಪಂಪ ಕರ್ಣನ ಪಾತ್ರದ ಮೂಲಕವೂ ಸಾಧಿಸಿ ತೋರಿಸುತ್ತಾನೆ.

ಭೀಮಸೇನನ ಗಂಡುತನ ಅವನ ದೈಹಿಕ ಶಕ್ತಿಯಲ್ಲಿದೆ. ಬಕ, ಹಿಡಿಂಬ, ಕಿಮ್ಮೀರ, ಮೊದಲಾದ ರಾಕ್ಷಸರನ್ನೂ, ಕೀಚಕಾದಿಗಳನ್ನೂ, ಕೌರವರನ್ನೂ ಕೊಂದು ಪಾಂಡವರ ಗೆಲುವಿಗೆ ಕಾರಣಕರ್ತನಾದ ಭೀಮನ ಪೌರುಷವನ್ನು ಪಂಪನು ಮೆಚ್ಚಿದ್ದಾನೆ. ಭೀಮನ ಪೌರುಷವೆಂದರೆ ಅದು ಸಾಮಾನ್ಯವಾದುದಲ್ಲ. ತನ್ನ ಹುಟ್ಟು ಹಗೆಯಾದ ದುರ್ಯೋಧನನನ್ನೇ ಅಡಗಿಸಿದ ಪೌರುಷವದು. ಅಂತೆಯೇ ಪ್ರತಿಜ್ಞೆಗಳನ್ನು ಪೂರೈಸಿದ ಭೀಮಸೇನನನ್ನು ಕುರಿತು ಪಂಪನು 'ಪೂಣ್ದುದನೆಯ್ದೆ ಪೂಣ್ದು ಪಗೆಯಂ ಕೊಂಡಾಡದಂ ಗಂಡನೇ' ಎಂದು ಮನಸಾರೆ ಹೊಗಳಿದ್ದಾನೆ.

ಪಂಪನ ವೀರಪಾತ್ರಗಳ ಸಾಲಿಗೆ ಸೇರಿದ ಶಲ್ಯನ ವ್ಯಕ್ತಿತ್ವ ಎಂತಹುದು? ಶಲ್ಯ ಮದ್ರ ದೇಶದ ದೊರೆ. ನಕುಲ ಸಹದೇವರಿಗೆ ಸೋದರ ಮಾವ. ಕೌರವನಿಗಿಂತಲೂ ಪಾಂಡವರೇ ಅವನಿಗೆ ಹತ್ತಿರದ ಸಂಬಂಧಿಕರು. ಆದರೂ ಈ ಬಲದ, ಕುಲದ, ಚಲದ ಅಭಿಮಾನಿ ಕೌರವರನ್ನು ಸೇರಿಕೊಂಡು ಯಾಕೆ ಯುದ್ಧವನ್ನು ಮಾಡಿದ ಎಂಬ ವಿಷಯದಲ್ಲಿ ಪಂಪನು ಮೌನವಾಗಿದ್ದಾನೆ. ಕರ್ಣನ ಸಾವಿನ ನಂತರ ದುರ್ಯೋಧನನು ಶಲ್ಯನಿಗೆ ಸೈನ್ಯದ ವೀರಪಟ್ಟವನ್ನು ಕಟ್ಟುತ್ತಾನೆ. 'ವೀರಲಕ್ಷ್ಮಿ ನಿಮ್ಮ ಅನುಬಲದಿಂದ ಅಲ್ಲದೆ ಎನಗಾಗದು... ನೀಮೆ ದಲಾಂಪದು ವೀರಪಟ್ಟಮಂ' ಎಂಬ ಮಾತಿನಲ್ಲಿ ಶಲ್ಯನ

ಅತುಲ ಬಲದ ಬಗೆಗೆ ದುರ್ಯೋಧನನಿಗೆ ಉತ್ತಮ ವಿಶ್ವಾಸವಿತ್ತು ಎಂದು ತಿಳಿಯಬೇಕು.

ಶಲ್ಯನನ್ನು ಗೆಲ್ಲುವುದಕ್ಕೆ ಧರ್ಮರಾಯನಿಗೆ ಮಾತ್ರ ಸಾಧ್ಯ ಎಂಬ ಅರಿವು ಕೃಷ್ಣನಿಗೆ ಇತ್ತು. ಆದುದರಿಂದ ಶಲ್ಯಪರ್ವದಲ್ಲಿ ಅರ್ಧ ದಿವಸದ ಮಟ್ಟಿಗೆ ಧರ್ಮರಾಯನೇ ಪಾಂಡವ ಸೈನ್ಯದ ಅಧಿಪತಿಯಾಗುತ್ತಾನೆ. ಹೀಗೆ ವಿಶೇಷವಾದ ಗುಣಗಣಗಳಿಂದ ಕೂಡಿದ ಶಲ್ಯ ಕೌರವರ ಸೇನಾಧಿಪತಿಯಾಗಿ ಮರಣವನ್ನಪ್ಪುತ್ತಾನೆ.

ಭೀಷ್ಮರ ಅತ್ಯುನ್ನತಿ ಅವರ ಶೌಚ ಗುಣದಲ್ಲಿದೆ. ಭೀಷ್ಮರ ಸೇನಾಧಿಪತ್ಯದಲ್ಲಿ ಆಯುಧವನ್ನು ಹಿಡಿಯುವುದಿಲ್ಲ ಎಂದು ಕರ್ಣ ಶಪಥವನ್ನು ಮಾಡಿದ. ಆದರೆ ಭೀಷ್ಮಾಚಾರ್ಯರು ಈ ಯುದ್ಧದಲ್ಲಿ ನಾನು ಏನನ್ನು ಮಾಡುತ್ತೇನೆ ಎಂದು ರಚನಾತ್ಮಕವಾದ ಉತ್ತರವನ್ನುಕೊಟ್ಟರು. ಹೀಗೆ ಹಸ್ತಿನಾಪುರದ ಸಿಂಹಾಸನಕ್ಕೆ ಯಾವತ್ತೂ ಬದ್ಧರಾಗಿ ಬದುಕಿದ ಪ್ರತಿಜ್ಞಾಗಾಂಗೇಯ ಭೀಷ್ಮರು 'ವೀರ ಸಿದ್ಧಾಂತದ ಶಾಸನ ಬರೆದ ಪೊತ್ತಗೆಯಂತೆ' ವೀರ ಮರಣವನ್ನಪ್ಪಿದರು. ಯಾವ ಮಗ್ಗುಲಿನಿಂದ ನೋಡಿದರೂ ಭೀಷ್ಮರಲ್ಲಿ ಅತ್ಯುನ್ನತಿಯ ಭವ್ಯತೆಯನ್ನು ಪಂಪ ಕಡೆದಿದ್ದಾನೆ.

ವೀರಯುಗದ ಸಮಸ್ತ ವಿದ್ಯೆಗಳಿಗೂ ಪ್ರತಿನಿಧಿಯಂತಿರುವ ದ್ರೋಣಾಚಾರ್ಯರು ಸ್ವತ: ಯುದ್ಧವೀರರು. ಬಗೆಬಗೆಯ ಯುದ್ಧ ಕೌಶಲ್ಯಗಳನ್ನು ತನ್ನ ಶಿಷ್ಯರಿಗೆ ಧಾರೆ ಎರೆದ ದ್ರೋಣರು ಬಿಲ್ವಿದ್ಯೆಯಲ್ಲಿ ಅರ್ಜುನನನ್ನು ತನ್ನ ಮಗನಿಗಿಂತಲೂ ಮಿಗಿಲಾಗಿ ಬೆಳೆಸುತ್ತಾರೆ. ತನ್ನ ಶಿಷ್ಯರ ಏಳಿಗೆಯೇ ತನ್ನ ಏಳಿಗೆ ಎಂದು ಬಗೆದು, ಅವರಿಂದ ಸೋಲುವಲ್ಲಿಯೂ ಸಾರ್ಥಕತೆಯನ್ನು ಕಂಡುಕೊಂಡ ಆದರ್ಶ ಅವರದ್ದು.

ವಿಕ್ರಮಾರ್ಜುನ ವಿಜಯದಲ್ಲಿ ಅರ್ಜುನನ ಸಾಹಸದ ಮಹಿಮೆಯನ್ನು ವರ್ಣಿಸುವುದೇ ಪಂಪನ ಮುಖ್ಯ ಉದ್ದೇಶ. ಅರ್ಜುನನ ಪಾತ್ರದ ಮೂಲಕ ತನ್ನ ಆಶ್ರಯದಾತ ರಾಜ ಅರಿಕೇಸರಿಯ ಮೈದಳೆಯುವ ಕಾರಣ ಪಂಪನು ಅವನನ್ನು ವಿಶೇಷ ಶ್ರದ್ಧೆಯಿಂದ ರೂಪಿಸಿದ್ದಾನೆ. ಪಂಪನ ಪ್ರಕಾರ ವೀರಯುಗಕ್ಕೆ ಆದರ್ಶ ಪ್ರಾಯನೂ, ಭೂಷಣನೂ ಆಗಿ ಮೆರೆದ ಅರ್ಜುನನು ಮಹಾಭಾರತದ ಯುದ್ಧವನ್ನು ತನ್ನ ಸಾಹಸದ ಮಹಿಮೆಯಿಂದ ಗೆದ್ದುಕೊಡುತ್ತಾನೆ. 'ಈಯಲ್ ಇರಿಯಲ್ ಶರಣ್ಬುಗೆ ಕಾಯಲ್ ಕ್ಷತ್ರಿಯರೆ ಬಲ್ಲರ್' ಎಂಬ ಮಾತು ಪಂಪನ ಕಾಲದಲ್ಲಿ ಕ್ಷತ್ರಿಯರ ಆದರ್ಶವಾಗಿತ್ತು. ಹೀಗಾಗಿ ತನ್ನ ಕಾವ್ಯದ ನಾಯಕ ಅರ್ಜುನನಲ್ಲಿ ಕಲಿತನ, ವಿನಯ, ಶೌಚ ಗುಣಗಳನ್ನು ಪಂಪನು ವಿಶೇಷವಾಗಿ ಚಿತ್ರಿಸಿದ್ದಾನೆ.

"ಒತ್ತಿ ತಱುಂಬಿ ನಿಂದರಿಪುಭೂಜಸಮಾಜದ ಬೇರ್ಗಳಂ ನಭಕ್ಕೆತ್ತದೆ..." (ವಿಕ್ರಮಾರ್ಜುನ ವಿಜಯ, 5–75) ಎಂಬ ಸಾಲುಗಳಲ್ಲಿ ಶತ್ರುಧ್ವಂಸನ, ಶರಣಾಗತರಕ್ಷಣೆ ಮತ್ತು ದಾನಗುಣಗಳು ಕ್ಷತ್ರಿಯರಿಗೆ ಸಹಜವಾಗಿ ಇರಬೇಕಾದ ಅಗತ್ಯವನ್ನು ಅರ್ಜುನ ಎತ್ತಿ ಹಿಡಿಯುತ್ತಾನೆ. ಇವೆಲ್ಲವೂ ತನ್ನ ಆಶ್ರಯದಾತ ಅರಿಕೇಸರಿಯ ಗುಣಗಳೂ ಆಗಿರುವುದರಿಂದ ಅರ್ಜುನ ಗುಣಾರ್ಣವನಾಗಿ ಚಿತ್ರಿತನಾಗಿದ್ದಾನೆ.

ವೀರಯುಗದ ಧಾರ್ಮಿಕ ಪ್ರತಿನಿಧಿ ಎಂಬಂತೆ ಪಂಪಭಾರತದಲ್ಲಿ ಧರ್ಮರಾಯನ ಚಿತ್ರಣವಿದೆ. ಧರ್ಮನಿಷ್ಠೆಯು ನಿರ್ಮಲ ಚಿತ್ತದ ಧರ್ಮರಾಯನ ಗುಣ. ಚಲ, ನನ್ನಿ, ಪೌರುಷ, ಅತ್ಯುನ್ನತಿ, ಶಸ್ತ್ರವಿದ್ಯೆಗಳ ನಡುವೆ ಧರ್ಮನಿಷ್ಠೆಯೂ ಸೇರಿಕೊಂಡಾಗ ವೀರ ಮೌಲ್ಯ ಪರಿಪೂರ್ಣತೆಯನ್ನು ಪಡೆಯುತ್ತದೆ. ಪಂಪನ ಕಾಲದಲ್ಲಿ ಧರ್ಮ ಮತ್ತು ರಾಜಕೀಯಗಳು ಸಮಾಜದ ಎರಡು ಮುಖಗಳಾಗಿದ್ದುವು. ರಾಜಕೀಯದಲ್ಲಿ

ಯಶಸ್ಸು ಪಡೆಯಬೇಕಾದರೆ ಧರ್ಮದ ಬೆಂಬಲ ಬೇಕು. ಆ ಕಾಲದಧರ್ಮ ಸಂಬಂಧಿ ಗುಣಗಳನ್ನು ಧರ್ಮರಾಯನಲ್ಲಿ ಪಂಪ ಚಿತ್ರಿಸಿದ್ದಾನೆ.

**ಪರಾಮರ್ಶನ ಗ್ರಂಥಗಳು**


1. ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ (ಸಂ.1), ಡಾ. ಸಿ. ವೀರಣ್ಣ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 2011.
2. ನಾಡೋಜ ಪಂಪ, ಮುಳಿಯ ತಿಮ್ಮಪ್ಪಯ್ಯ, (ಸಂ.) ಎಂ. ಕೇಶವ ಭಟ್ಟ, ಗೀತಾ ಬುಕ್ ಹೌಸ್, ಮೈಸೂರು, 1977.
3. ಪಂಪಭಾರತ ಒಂದು ಸಾಂಸ್ಕೃತಿಕ ಅಧ್ಯಯನ, ಡಾ.ಶಾಂತಿನಾಥ ದಿಬ್ಬದ, ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ, ಗುಲ್ಬರ್ಗ, 2011.
4. ಪಂಪ ಸಂಪುಟ, (ಸಂ.) ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.
5. ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು, 2001.


❖❖❖

**ನವಿರು ನುಣುಪಿನ ಈ ದುಕೂಲವು**
**ದೃಷ್ಟಿವಂತನಿಗೆ ಕಾಣುವುದು**
**ಅನೃತದಿ ಕುರುಡಾದ ಕಣ್ಣಿಗೆ ಅರಿವೆಯ**
**ಅರಿವೇ ಆಗದದು.**

# ಶಿವರಾಮ ಕಾರಂತರ ಬೆಟ್ಟದ ಜೀವ : ಸಮಕಾಲೀನ ಓದು

**ಶಿವರಾಜು ಎನ್.**
ಸಂಶೋಧನಾರ್ಥಿ, ಕುವೆಂಪು ಕನ್ನಡ ಅಧ್ಯಯನ ಕೇಂದ್ರ,
ಕುಪ್ಪಳಿ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

**ಪ್ರಸ್ತಾವನೆ**

ಕನ್ನಡ ಕಥಾ ಸಾಹಿತ್ಯಕ್ಕೆ ಕರಾವಳಿಗೆ ಭಾಗದ ಕೊಡುಗೆಯನ್ನು ಕುರಿತು ಚರ್ಚೆ ಮಾಡುವ ಸಂದರ್ಭದಲ್ಲಿ ಶಿವರಾಮ ಕಾರಂತರು ಅಗ್ರಗಣ್ಯರಾಗಿ ನಿಲ್ಲುತ್ತಾರೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಅವರು ಕೃಷಿ ಮಾಡಿದ್ದಾರೆ. ಕಾರಂತರು ಅಪ್ಪಟ ಕಥನ ಪ್ರತಿಭೆ. ಕಾದಂಬರಿ ಅವರ ಮುಖ್ಯ ಸಾಹಿತ್ಯ ಪ್ರಕಾರವಾಗಿದ್ದರೂ ಕಾವ್ಯ, ನಾಟಕ, ಸಣ್ಣಕಥೆ, ಹರಟೆ–ವಿಡಂಬನೆ, ಬಾಲ ಸಾಹಿತ್ಯ, ವಿಚಾರಸಾಹಿತ್ಯ, ಯಕ್ಷಗಾನ, ಚಿತ್ರಕಲೆ, ವಯಸ್ಕರ ಶಿಕ್ಷಣ, ಪ್ರವಾಸ ಕಥನ, ಜೀವನ ಚರಿತ್ರೆ, ಆತ್ಮಕಥೆ, ನಿಘಂಟು, ಪತ್ರಿಕೋದ್ಯಮ, ಸಂಪಾದನೆ, ಅನುವಾದ, ವಿಜ್ಞಾನ – ಹೀಗೆ ಹಲವು ಹತ್ತು ಕ್ಷೇತ್ರಗಳಲ್ಲಿ ಪಸರಿಸಿರುವ ದೈತ್ಯ ಪ್ರತಿಭೆ ಅವರದು.

ಅವರ 47 ಕಾದಂಬರಿಗಳ ಪೈಕಿ 'ಬೆಟ್ಟದ ಜೀವ' ತುಂಬ ಮಹತ್ತ್ವದ್ದಾಗಿದೆ. 1943ರಲ್ಲಿ ಪ್ರಕಟವಾದ 'ಬೆಟ್ಟದ ಜೀವ' ಕಾದಂಬರಿ ವಿಭಿನ್ನ ನಿರೂಪಣಾ ವಿಧಾನ, ಪ್ರಕೃತಿ ವರ್ಣನೆ, ತಿಳಿಹಾಸ್ಯ, ಸಾಹಸಪ್ರಿಯತೆ, ಕಾದಂಬರಿಯನ್ನು ಮುಕ್ತಾಯಗೊಳಿಸಿರುವ ಜಾಣ್ಮೆ ಇತ್ಯಾದಿ ಕಾರಣಗಳಾದ 80 ವರ್ಷಗಳ ನಂತರವೂ ಓದುಗರನ್ನು ಸೆಳೆಯುತ್ತದೆ. ಕನ್ನಡದ ಖ್ಯಾತ ವಿಮರ್ಶಕ ಜಿ.ಎಸ್. ಅಮೂರರು ವಿಮರ್ಶಿಸುವ ಕನ್ನಡದ ಶ್ರೇಷ್ಠ ಹತ್ತು ಕಾದಂಬರಿಗಳ ಪೈಕಿ 'ಬೆಟ್ಟದ ಜೀವ' ಕಾದಂಬರಿಯೂ ಸೇರಿದೆ ಎಂಬುದು ಗಮನಾರ್ಹ. ಮನುಷ್ಯ ತನ್ನ ಅನ್ನಕ್ಕಾಗಿ ನಿಸರ್ಗದೊಂದಿಗೆ ನಡೆಸಿದ ಹೋರಾಟದ ಕಥೆಯನ್ನು 'ಬೆಟ್ಟದ ಜೀವ' ಕಾದಂಬರಿಯಲ್ಲಿ ಕಾಣಬಹುದು. ಈ ಕಥೆಯ ಮುಖ್ಯ ಪಾತ್ರಧಾರಿ ಹಾಗೂ ಕಥಾನಾಯಕರಾದ ಗೋಪಾಲಯ್ಯನವರು ಶ್ರಮಜೀವಿಗಳು, ಸಾಹಸಿಗಳು. ಅಪಾರ ಜೀವನಶ್ರದ್ಧೆಯುಳ್ಳವರು.

'ಬೆಟ್ಟದ ಜೀವ' ಕಾದಂಬರಿಯ ಕಥಾಸಾರವನ್ನು ಸಂಕ್ಷಿಪ್ತವಾಗಿ ಹೀಗೆ ವಿವರಿಸಬಹುದು. ಜನ ಸಂಚಾರ ವಿರಳವಿದ್ದ, ಜ್ವರದ ಕೊಂಪೆಯಾಗಿದ್ದ, ಕಾಡಿನ ಮೂಲೆಯಲ್ಲೊಂದು ತುಣುಕು ಜಾಗವನ್ನು ಪಡೆದುಕೊಂಡು ಗೋಪಾಲಯ್ಯ ಸೊಂಪಾದ ಅಡಿಕೆ ತೋಟವನ್ನು ಮಾಡಿಕೊಂಡು ಹೆಂಡತಿ ಶಂಕರಿಯೊಡನೆ ಜೀವನ ಸಾಗಿಸುತ್ತಾರೆ. ನಿಸರ್ಗದೊಂದಿಗೆ ಹೋರಾಟ ನಡೆಸಿ, ಗೆದ್ದವರು ಗೋಪಾಲಯ್ಯ. ಒಬ್ಬನೇ ಮಗನನ್ನು ಇಂಗ್ಲೀಷ್ ವಿದ್ಯಾಭ್ಯಾಸದ ಮೋಹದಿಂದ ನಗರಕ್ಕೆ ಕಳಿಸಿದರು. ಆತ ತಂದೆ–ತಾಯಿಗಳ ಪ್ರೀತಿಯನ್ನು ತಿರಸ್ಕರಿಸಿ ಅವರ ಕಣ್ಣಿಗೆ ಬೀಳದಂತೆ ಯಾವುದೋ ಊರಿನಲ್ಲಿ ಜೀವಿಸುತ್ತಿದ್ದಾನೆ. ಈ ಕೊರಗು ಅವರ ಬದುಕನ್ನು ಹೆಣ್ಣು ಮಾಡುತ್ತದೆ. ಮಗನನ್ನು ಕಳೆದುಕೊಂಡ ದುಃಖವನ್ನು ಮರೆಯಲು ದಿಕ್ಕಿಲ್ಲದ ಒಬ್ಬ ಬಡ ಹುಡುಗನನ್ನು ಎಲ್ಲಿಂದಲೋ ತಂದು ಅವನಿಗೊಂದು ಭೂಮಿಯನ್ನು ಕೊಡಿಸಿ

ಮದುವೆ ಮಾಡಿಸಿ, ಅವರಿಬ್ಬರ ಮಕ್ಕಳನ್ನು ತಮ್ಮ ಮೊಮ್ಮಕಳೆಂದೇ ಪ್ರೀತಿಸಿ, ತಮ್ಮ ಬದುಕಿನ ಕೊರತೆಯನ್ನು ತುಂಬಿಸಿಕೊಳ್ಳಲೆತ್ನಿಸಿದರು.

ಹೆತ್ತೊಡಲು ತನ್ನ ಕುಡಿಯನ್ನು ಮರೆಯಲೊಲ್ಲದು. ಪಂಜದ ಬದಲು ಗುತ್ತಿಗಾರಿನ ರಸ್ತೆಯನ್ನು ಹಿಡಿದು ತನ್ನೂರಿನ ಹಾದಿಯನ್ನು ತಪ್ಪಿದ ಶಿವರಾಮಯ್ಯ ದಾರಿಹೋಕರ ಕೃಪೆಯಿಂದ ಗೋಪಾಲಯ್ಯನವರ ಮನೆಯನ್ನು ಸೇರುತ್ತಾರೆ. ಗೋಪಾಲಯ್ಯ ದಂಪತಿಗಳ ಆದರ ಆತಿಥ್ಯ ವಿಶೇಷವಾದ ಮಮತೆಯನ್ನುಂಡ ಶಿವರಾಮಯ್ಯನಿಗೆ ಅವರು ಆ ಹಾಳು ಕೊಂಪೆಯಲ್ಲಿದ್ದುಕೊಂಡು ಸಾಧಿಸಿದ ಸಾಹಸದ ಪರಿಚಯವಾಗುತ್ತದೆ. "ಅವರು ಒಕ್ಕಲು ಮಕ್ಕಳ ಮೇಲೆ ತೋರುತ್ತಿದ್ದ ಪ್ರೀತಿ, ಅನಾಥ ಹುಡುಗ ನಾರಾಯಣನಿಗೆ ಬದುಕನ್ನು ದೊರಕಿಸಿಕೊಟ್ಟು ನಾರಾಯಣ ಮತ್ತವನ ಕುಟುಂಬವನ್ನವರು ಪ್ರೀತಿಸುತ್ತಿದ್ದ ದೃಶ್ಯಗಳನ್ನು ಕಂಡು ಶಿವರಾಮಯ್ಯನಿಗೆ ಅವರ ಬದುಕಿನ ಧೀಮಂತಿಕೆಗೆ ತಲೆಬಾಗುವಂತಾಗುತ್ತದೆ. ಮಾತಿನ ಮಧ್ಯದಲ್ಲಿ ತಾನು ಪುಣೆಯಲ್ಲಿ ಕಂಡ ಕೆ.ಎಸ್. ಶರ್ಮನೇ ಇವರ ಮಗನಿರಬೇಕೆಂಬ ಸಂಶಯ ಹುಟ್ಟುತ್ತದೆ. ಫೋಟೋ ತರಿಸಿಕೊಂಡು ನೋಡಿದಾಗ, ಅವನ ಅನುಮಾನ ನಿಜವಾಗುತ್ತದೆ. ಪುಣೆಗೆ ಹೋದಾಗ ಶರ್ಮ ಮತ್ತವನ ಪತ್ನಿಯ ಭೇಟಿಯಾದುದನ್ನೂ ತಾನವರ ಆತಿಥ್ಯದಲ್ಲಿ ಅವರ ಮನೆಯಲ್ಲಿದ್ದ ಸಂಗತಿಯನ್ನೂ ಅವರಿಬ್ಬರು ತೃಪ್ತ ಸುಖದ ಬಾಳ್ವೆಯನ್ನು ನಡೆಯಿಸುತ್ತಿರುವುದನ್ನು, ಶರ್ಮನ ಪತ್ನಿ ಪರ ಜಾತಿಯವಳೆಂಬುದನ್ನೂ ತಿಳಿಸುತ್ತಾನೆ. ಮಗ ಯಾವ ಜಾತಿಯವಳನ್ನು ಕಟ್ಟಿಕೊಂಡರೂ ಚಿಂತೆಯಿಲ್ಲ, ತಂದೆ ತಾಯಿಗಳನ್ನೊಮ್ಮೆ ಬಂದು ಕಾಣುವಂತಾದರೆ ಸಾಕು ಎಂದು ಗೋಪಾಲಯ್ಯ ಹಂಬಲಿಸುತ್ತಾರೆ. ಮಗನನ್ನು ಹೇಗಾದರೂ ಹುಡುಕಿ ಮನೆಗೆ ಕರೆತರಬೇಕೆಂಬ ಹಂಬಲದಿಂದ ಶಿವರಾಂಯ್ಯನೊಡನೆ ಪುಣೆಗೆ ಹೋಗುತ್ತಾರೆ. ಇಲ್ಲಿಗೆ ಕಾದಂಬರಿ ಮುಕ್ತಾಯಗೊಳ್ಳುತ್ತದೆ.[1] ಕಾದಂಬರಿಯ ಅಂತ್ಯ ಓದುಗರನ್ನು ಭಾವನಾತ್ಮಕವಾಗಿ ಕಾಡುತ್ತದೆ.

ಇಡೀ ಕಾದಂಬರಿಯಲ್ಲಿ ಎಲ್ಲ ಮುಖ್ಯ ಪಾತ್ರಗಳು 'ಶಂಭು'ವನ್ನು ಕುರಿತು ಮಾತನಾಡುತ್ತವೆ. ಅವನ ಬಗ್ಗೆ ತಮ್ಮ ಅತೃಪ್ತಿ–ಬೇಸರಗಳನ್ನು ವ್ಯಕ್ತಪಡಿಸುತ್ತವೆ. ಹೀಗೆ ಹಲವು ನಿರೂಪಕರ ಬಹುಮುಖಿ ನಿರೂಪಣೆಗಳಿಗೆ ಒಳಗಾಗುವ ಶಂಭು ಒಂದು ಜೀವಂತ ಪಾತ್ರವಾಗಿ ಕಾದಂಬರಿಯಲ್ಲಿ ಕಾಣಿಸಿಕೊಳ್ಳುವುದಿಲ್ಲ ಎಂಬುದು ಈ ಕಾದಂಬರಿಯ ವಿಶೇಷ. "ಕಥನಗಾರನ ಸೃಜನಶೀಲ ಪ್ರತಿಭೆಗೂ ಅವನ ತಂತ್ರ ಕುಶಲತೆಗೂ ಸಾಕ್ಷಿಯಾಗಿದೆ. ಮುಖ್ಯಪಾತ್ರವೊಂದರ ಗೈರುಹಾಜರಿಯಲ್ಲಿ ಆತನ ಬಗ್ಗೆ ಉಳಿದವರು ನಡೆಸುವ ಕಥನಗಳೂ ಇದರಿಂದ ಸಮಸ್ಯಾತ್ಮಕವಾಗುತ್ತವೆ".[2] ಶಂಭುವಿನ ವರ್ತನೆಯ ಬಗ್ಗೆ ಗೋಪಾಲಯ್ಯನವರ ಸಾಕು ಸೊಸೆ ಲಕ್ಷ್ಮಿ ಹೇಳುವ ಮಾತುಗಳು ಹೀಗಿವೆ. "...ನಾನು ವಂಚನೆಯಿಲ್ಲದೆ, ಅಣ್ಣನೆಂದು ಅವನೊಡನೆ ಹರಟುತಿದ್ದರೆ ಅವನು ಒಂದು ದಿನ ಬೆನ್ನಿನ ಮೇಲೆ ಕೈಯಿರಿಸಿದ. ಯಾಕೆಂಬುದು ನನಗೂ ತಿಳಿಯಿತು. ನನಗೆ ಸಿಟ್ಟು ಬಂದು ನಾನು ಅವನ ಕೈಯನ್ನು ಕಿತ್ತೆಸೆದೆ. ಅಂದಿನಿಂದಲೂ ಅವನು ಬರುವುದು ಕಡಿಮೆಯಾಯಿತು. ನನ್ನೊಡನೆ ಅವನ ಮಾತುಕಥೆಗಳೆಲ್ಲ ನಿಂತವು. ಆಮೇಲೆ ಅವನು ತಿರುಗಿ ಇಲ್ಲಿಗೆ ಬರಲೂ ಇಲ್ಲ".[3] ಶಂಭು ತನ್ನ ತಪ್ಪನ್ನು ತಿದ್ದಿಕೊಂಡು ಬದುಕುವ ಅವಕಾಶಗಳಿದ್ದರೂ ಮನೆಬಿಟ್ಟು ಹೋಗುತ್ತಾನೆ. ಶಂಭು ಮನೆ ಬಿಟ್ಟು ಹೋದ ನಂತರ ಗೋಪಾಲಯ್ಯನವರ ಬದುಕಿನಲ್ಲಿ ಮಹತ್ತರ ಬದಲಾವಣೆಗಳಾಗುತ್ತವೆ. ಶಿವರಾಮಯ್ಯ

ಪುಣೆಯಲ್ಲಿ ಕಂಡ ಕೆ.ಎಸ್. ಶರ್ಮನೇ ಗೋಪಾಲಯ್ಯನವರ ಮಗನಿರಬಹುದೆಂಬ ವಿಚಾರ ಹೇಳಿದ ನಂತರ ಗೋಪಾಲಯ್ಯನವರ ಮನಸ್ಸಿನಲ್ಲಿ ಹೊಸ ಹೊಸ ಆಲೋಚನೆಗಳು ಹೊಳೆಯುತ್ತವೆ.

ಕಾರಂತರು ಎಂಬತ್ತು ವರ್ಷಗಳ ಹಿಂದೆಯೇ ಇಂಗ್ಲೀಷ್ ವಿದ್ಯಾಭ್ಯಾಸದ ಪರಿಣಾಮಗಳನ್ನು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಮಗನನ್ನು ದೂರಮಾಡಿಕೊಂಡ ಗೋಪಾಲಯ್ಯನವರು ಬದುಕಲು ಹಲವಾರು ಕಾರಣಗಳನ್ನು ಸೃಜನೆ ಮಾಡಿಕೊಳ್ಳುತ್ತಾರೆ. ಒಂದರ್ಥದಲ್ಲಿ ಪ್ರಕೃತಿಯ ಶಿಶುವೇ ಆಗಿ ಬಿಡುತ್ತಾರೆ. ತಮ್ಮ ಮಗ ಶಂಭು ತಮ್ಮಿಂದ ದೂರವಾಗಿದ್ದರೂ ನಾರಾಯಣನನ್ನೇ ತಮ್ಮ ಮಗನ ಹಾಗೆಯೇ ನೋಡಿಕೊಳ್ಳುತ್ತಾರೆ.

ಕಾರಂತರು ತಮ್ಮ ಕೃತಿಗಳಲ್ಲಿ ಅದರಲ್ಲೂ ವಿಶೇಷವಾಗಿ ಕಥೆ, ಕಾದಂಬರಿಗಳಲ್ಲಿ ಜೀವನ ಹೋರಾಡಿದ ಕಣವಾಗಿ, ಕ್ಷೇತ್ರವಾಗಿ ಪ್ರಕೃತಿಯನ್ನು ಚಿತ್ರಿಸಿದ್ದಾರೆ. ಗೋಪಾಲಯ್ಯನವರು ಕಾಡನ್ನು ಕಡಿದು ತೋಟ ಮಾಡಿದ ರೀತಿ ಬೆರಗುಗೊಳಿಸುವಂತಹದ್ದು. ಗೋಪಾಲಯ್ಯನವರು ಕಾಟುಮೂಲೆಯ ಜಮೀನನ್ನು ನೋಡಲು ಹೋಗೋಣ ಎಂದಾಗ ಶಿವರಾಮಯ್ಯನವರು ಹೀಗೆ ಹೇಳುತ್ತಾರೆ. “ಅಲ್ಲಿಗೆ ಹೋಗುವುದಾದರೆ ಹೋಗುವ. ನಿಮ್ಮ ಊರಿನಲ್ಲಿ ಎಲ್ಲಿ ಸಂಚರಿಸಿದರೂ ದೇವಲೋಕದಲ್ಲಿ ತಿರುಗಿದ ಹಾಗೆ ಕಾಣುತ್ತದೆ. ಇಲ್ಲಿನ ನೀರು, ಸಸ್ಯಗಳ ಸಮೃದ್ಧಿ ಇನ್ನೊಂದು ಕಡೆ ಕಂಡಿಲ್ಲ. ಇಂಥ ಸುಂದರವಾದ ಸ್ಥಳವನ್ನು ಬಿಟ್ಟು ಜನ ಎಂಥೆಂಥ ಬರಡು ಬೆಂಗಾಡುಗಳಲ್ಲಿ ವಾಸ ಮಾಡುತ್ತಾರಲ್ಲ”[4] ಮನುಷ್ಯ ಪ್ರಕೃತಿಯನ್ನು ಗೆಲ್ಲಲಾರ; ಆದರೆ ನಿಸರ್ಗ ಒಡ್ಡುವ ಸವಾಲನ್ನು ಸ್ವೀಕರಿಸುವುದು ಅವರ ಸಂಕಲ್ಪ ಬಲವನ್ನು ತೋರುತ್ತದೆ.

ಪ್ರಸ್ತುತ ಕಾದಂಬರಿಯಲ್ಲಿ ಬರುವ ದೇರಣ್ಣ, ಬಟ್ಯ, ಗೋಪಾಲಯ್ಯ, ಶಾರದೆ, ನಾರಾಯಣ ಮುಂತಾದ ಪಾತ್ರಗಳು ದಟ್ಟ ಕಾಡಿನ ನಡುವಿನ ನಾಗರೀಕ ಜಗತ್ತಿನಿಂದ ದೂರವಾದ ಪರಿಸರದಲ್ಲಿ ಬದುಕುವ ಪರಿಯನ್ನು ಕಾದಂಬರಿ ಚಿತ್ರಿಸಿದೆಯಾದರೂ ಗೋಪಾಲಯ್ಯನ ಪಾತ್ರವೇ ಮುಖ್ಯ. ‘ಬೆಟ್ಟದ ಜೀವ’ದ ನಿರೂಪಕ ಶಿವರಾಮಯ್ಯ ಆಕಸ್ಮಿಕವಾಗಿ ಕಾಡನ್ನು ಸಂದರ್ಶಿಸುವನು.[5] ಶಿವರಾಮಯ್ಯ ಒಂದು ಹಂತದಲ್ಲಿ ಕುಮಾರಪರ್ವತದಲ್ಲಿನ ಮುಂಜಾನೆ, ಮುಸ್ಸಂಜೆಗಳ ವರ್ಣನೆ, ನದಿಯು ಸೌಂದರ್ಯ, ದಟ್ಟಕಾಡಿನ ಸೌಂದರ್ಯಕ್ಕೆ ಮನಸೋತು ಕಾಟು ಮೂಲೆಯಲ್ಲಿ ಉಳಿಯುವ ನಿರ್ಧಾರ ಮಾಡುತ್ತಾನೆ. ಆದರೆ ವಾಸ್ತವ ವಿಚಾರ ತಿಳಿದು ತಟಸ್ಥನಾಗುತ್ತಾನೆ. ಗೋಪಾಲಯ್ಯನವರ ಔದಾರ್ಯಕ್ಕೆ ಮಾರುಹೋಗಿ ಆ ಕಾಡಿನ ಪರಿಸರದಲ್ಲಿ “ನನಗೆ ನಿಮ್ಮ ಇನ್ನೊಬ್ಬ ಅಳಿಯನಾಗಿ ಇಲ್ಲಿ ಬಂದು ಯಾಕೆ ತಣ್ಣಗೆ ಕುಳಿತಿರಬಾರದು ಎನ್ನಿಸುತ್ತದೆ”[6] ಎಂದು ಶಿವರಾಮಯ್ಯ ಹೇಳುವಲ್ಲಿ ಆ ಬೆಟ್ಟದ ಮೂಲೆಯ ಜೀವನ ತಣ್ಣಗಿರುವುದು ಎಂದು ತಿಳುವಳಿಕೆ ಇದೆ.

ಕಾದಂಬರಿಯಲ್ಲಿನ ಹಾಸ್ಯ ಸನ್ನಿವೇಶಗಳು ಸಹೃದಯರನ್ನು ಖುಷಿಪಡಿಸುತ್ತವೆ. ಶಿವರಾಮಯ್ಯ ತೋಟದಲ್ಲಿ ದುಡಿಯುತ್ತಿದ್ದ ಹಿರಿಯ ಜೀವ ಬಟ್ಯನೊಡನೆ ಗೋಪಾಲಯ್ಯನವರು ತೀರ ತಮಾಷೆಯಾಗಿ ಮಾತನಾಡುತ್ತಾರೆ. ಗೋಪಾಲಯ್ಯನವರು ಶಿವರಾಮಯ್ಯನವರನ್ನು ಪುತ್ತೂರು ತಾಲೂಕಿನ ತಹಸೀಲ್ದಾರ್ ಎಂದು ನಂಬಿಸುತ್ತಾರೆ. ಭಟ್ಯನ ಮೈಯ ಮಾಂಸಖಂಡಗಳು ನಿರಿಗಟ್ಟಿದು, ಮೈಯಿಂದ ಲಘೂವಾಗಿ

ತೂಗೂಡುತ್ತಿದ್ದವು".[7] ಬಟ್ಯನನ್ನು ಕಂಡರೆ ಗೋಪಾಲಯ್ಯನವರಿಗೆ ಎಲ್ಲಿಲ್ಲದ ಪ್ರೀತಿ, ಗೌರವ ಬಟ್ಯ ಗೋಪಾಲಯ್ಯನವರ ಮನೆಯ ಬಳಿ ಬಂದಾಗ ಸಹಜವಾಗಿ ಶಿವರಾಮಯ್ಯನವರ ಪೂರ್ವಪರವನ್ನು ವಿಚಾರಿಸುತ್ತಾನೆ. ಆಗ ಗೋಪಾಲಯ್ಯನವರು ಶಿವರಾಮಯ್ಯನವರ ಪರಿಚಯವನ್ನು ಹೀಗೆ ಮಾಡಿಕೊಡುತ್ತಾರೆ. "ಬಟ್ಯ, ನೋಡು ನಮ್ಮ ಮನೆಗೆ ತಹಸೀಲ್ದಾರ್ ಬಂದಿದ್ದಾರೆ. ಅವರಿಗೆ ನಮ್ಮ ಗ್ರಾಮವನ್ನು ನೋಡುವ ಆಸೆಯಾಗಿದೆ. ಗ್ರಾಮದೊಳಗಿನ ಅತಿಹಳಬರ ಖಾನೆಶುಮಾರಿ ಬೇಕಂತೆ ಅವರಿಗೆ".[8] ಶಿವರಾಮಯ್ಯರನ್ನು ನಿಜ ತಹಶೀಲ್ದಾರ್ ಎಂದು ತಿಳಿದ ಬಟ್ಯ ಶಿವರಾಮಯ್ಯನವರ ಬಳಿ ತನ್ನ ದರಬಾಸ್ತು ಜಮೀನಿನ ಖಾತಾ ವರ್ಗಾವಣೆಯ ಬಗ್ಗೆ ಮಾತನಾಡುತ್ತಾನೆ.

"ವಸಾಹತುಶಾಹಿ ಆಧುನಿಕತೆಯ ನಮ್ಮ ಸಮಾಜದ ಮೇಲೆ ಬೀರಿದ ಪರಿಣಾಮಗಳು ತೀರಾ ಸಂಕೀರ್ಣ ಸ್ವರೂಪದವು. ಅದು ನಗರೀಕರಣಕ್ಕೆ ದಾರಿ ಮಾಡಿಕೊಟ್ಟಿತು. ಹೊಸ ಶಿಕ್ಷಣ ಮತ್ತು ಉದ್ಯೋಗಗಳಿಗಾಗಿ ಹಳ್ಳಿಗಳಿಂದ ನಗರಗಳಿಗೆ ವಲಸೆ ಪ್ರಾರಂಭವಾಯಿತು. ಪಾಶ್ಚಾತ್ಯೀಕರಣದ ವ್ಯಾಮೋಹಕ್ಕೆ ಅನೇಕ ವಿದ್ಯಾವಂತ ತರುಣರು ಸಿಲುಕಿಕೊಂಡರು. ಜೀವನ ಆದ್ಯತೆ ಮತ್ತು ಆಶೋತ್ತರಗಳು ಬದಲಾಗತೊಡಗಿದವು".[9] ಹೊಸ ವಿದ್ಯಾವಂತ ಮಧ್ಯಮವರ್ಗವೊಂದು ಸೃಷ್ಟಿಯಾಗಿ ಅದು ತನ್ನದೇ ಆದ ಜೀವನಕ್ರಮವೊಂದನ್ನು ಅನ್ವೇಷಿಸಿಕೊಂಡಿತು. ಹೀಗಾಗಿ ಬದುಕಿನ ಗೊತ್ತು ಗುರಿಗಳು, ಮೌಲ್ಯ ಕಲ್ಪನೆಗಳು, ಯಶಸ್ಸಿನ ಅಳತೆಗೋಲುಗಳು ಬೇರೆಯಾಗತೊಡಗಿದವು. ಇದಕ್ಕೆ ಕೇವಲ ಯುವ ಜನಾಂಗವನ್ನು ದೂರುವಂತಿಲ್ಲ. ಹೊಸತನ ಹಂಬಲವು ಹಳೆಯ ಪೀಳಿಗೆಯಲ್ಲಿ ಕಾಣಿಸಿಕೊಂಡಿತ್ತು. "ಶಂಭು ಮನೆಬಿಟ್ಟು ಹೋಗುವುದರಲ್ಲಿ ಅವನ ವೈಯಕ್ತಿಕ ಅಭೀಪ್ಸೆ ಕೆಲಸ ಮಾಡಿರಬಹುದಾದಂತೆ ಅವನ ತಂದೆ ಗೋಪಾಲಯ್ಯನ ಇಂಗ್ಲೀಷ್ ವ್ಯಾಮೋಹವು ಕೆಲಸ ಮಾಡಿಬಹುದೆಂಬ ಸೂಚನೆ ಸ್ವತಃ ಅವರ ಮಾತುಗಳಲ್ಲೇ ಸೂಚಿತವಾಗಿದೆ".[10]

'ಬೆಟ್ಟದ ಜೀವ' ಕಾರಂತರ ಅನುಭವಗಳಿಂದ ಪ್ರೇರಿತವಾದ ಕಾದಂಬರಿ. 'ಬೆಟ್ಟದ ಜೀವ' ಕಾದಂಬರಿ ರಚನೆಗೆ ಪ್ರೇರಣೆಯಾದ ಸಂಗತಿಗಳನ್ನು ಕಾದಂಬರಿಯ ಮುನ್ನುಡಿಯಲ್ಲಿ ಹೀಗೆ ವಿವರಿಸುತ್ತಾರೆ..." ...ಕಟ್ಟ ಎಂಬಲ್ಲಿ ಗೋವಿಂದಯ್ಯ ಎಂಬ ಹಿರಿಯರು ಅತಿ ಸಾಹಸದ ಕೃಷಿಕರಾಗಿ ದುಡಿದುದನ್ನು ಕಂಡೆ. ಅವರ ಬದುಕು ನನ್ನನ್ನು ಅಚ್ಚರಿಗೊಳಿಸಿತು. ಅವರ ಧೀಮಂತಿಕೆ, ನಡೆ, ನುಡಿ, ಸಾಹಸ ಬೆರಗುಗೊಳಿಸಿತು. ಅವರ ಬದುಕಿನ ಸಮಗ್ರ ಚಿತ್ರ ಕಣ್ಮುಂದೆ ಕುಣಿಯತೊಡಗಿತು. ಮುಂದೊಂದು ದಿನ ನಾನು ಕೊಡಗಿನ ಮಿತ್ರ ಮಂಜುನಾಥಯ್ಯ ಎಂಬುವವರಲ್ಲಿ ಹೋದಾಗ ಅಲ್ಲೇ ಹತ್ತು ದಿನ ಕುಳಿತು ಗೋವಿಂದಯ್ಯನವರ ಬದುಕಿನ ಸಾರಸರ್ವಸ್ವವನ್ನು ಬರೆದು ಮುಗಿಸಿದೆ. ಇಂದಿಗೂ ಕಿಳಂಜಿಮಲೆಯ ಪಳಂಗಾಯಿ ದೇವಣ್ಣಗೌಡರು, ಕಟ್ಟದ ಗೋವಿಂದಯ್ಯನವರು ನನ್ನ ಸ್ಮರಣೆಯಲ್ಲಿ ನೆಲೆ ನಿಂತ ಧೀಮಂತರು. ಅವರು ಇಂದು ಉಳಿದಿಲ್ಲ. ಅವರ ನೆನಪು ಮಾತ್ರ ನನಗೆ ಅಳಿದಿಲ್ಲ".[11] ಅಂದರೆ ಗೋಪಾಲಯ್ಯನವರಂತಹ ಸಾಹಸ ಜೀವಿಗಳ ಅಗತ್ಯ ಇಂದಿನ ಸಮಾಜಕ್ಕೆ ಇದೆ.

**ಕೊನೆಟಿಪ್ಪಣಿಗಳು**

1. ಮಾಲಿನಿ ಮಲ್ಯ, ಶಿವರಾಮ ಕಾರಂತ ವಾಙ್ಞಯ ವೃತ್ತಾಂತ, 2016, ಪುಟ–133
2. ಟಿ.ಪಿ. ಅಶೋಕ, ಕಥನ ವೈವಿಧ್ಯ ; 2014, ಪುಟ 199.
3. ಶಿವರಾಂ ಕಾರಂತ, ಬೆಟ್ಟದ ಜೀವ ; 2022 ; ಪುಟ 75–76
4. ಶಿವರಾಮ ಕಾರಂತ, ಬೆಟ್ಟದ ಜೀವ ; 2012, ಪುಟ. 75.
5. ಸುಮಿತ್ರಾ ಎಲ್.ಸಿ., ಕಾಡು ... ಕಡಲು ... ; 2003, ಪುಟ 87.
6. ಶಿವರಾಂ ಕಾರಂತ, ಬೆಟ್ಟದ ಜೀವ ; 2012 ; ಪುಟ 61.
7. ಶಿವರಾಂ ಕಾರಂತ, ಬೆಟ್ಟದ ಜೀವ ; 2022 ; ಪುಟ 64–65.
8. ಶಿವರಾಂ ಕಾರಂತ, ಬೆಟ್ಟದ ಜೀವ ; 2022: ಪುಟ 65.
9. ಟಿ.ಪಿ. ಅಶೋಕ, ಕಥನ ವೈವಿಧ್ಯ ; 2014, ಪುಟ 198–199.
10. ಟಿ.ಪಿ. ಅಶೋಕ, ಕಥನ ವೈವಿಧ್ಯ ; 2014, ಪುಟ 200.
11. ಶಿವರಾಂ ಕಾರಂತ, ಬೆಟ್ಟದ ಜೀವ ; 2022 ; ಪುಟ ll

**ಆಕರ ಗ್ರಂಥಗಳು**

1. ಶಿವರಾಂ ಕಾರಂತ, ಬೆಟ್ಟದ ಜೀವ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2022
2. ಮಾಲಿನಿ ಮಲ್ಯ, ಶಿವರಾಮ ಕಾರಂತ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 2017.
3. ಸುಮಿತ್ರ ಎಲ್.ಸಿ., ಕಾಡು... ಕಡಲು... ಶಿವರಾಂ ಕಾರಂತ ಅಧ್ಯಯನ ಕೇಂದ್ರ, ವಿವೇಕಾನಂದ ಕಾಲೇಜು, ಪುತ್ತೂರು, 2002.
4. ಟಿ.ಪಿ. ಅಶೋಕ, ಕಥನ ವೈವಿಧ್ಯ, ಕಣ್ವ ಪ್ರಕಾಶನ, ಬೆಂಗಳೂರು, 2014.
5. ಮಾಲಿನಿ ಮಲ್ಯ, ಶಿವರಾಂ ಕಾರಂತ, ವಾಙ್ಮಯ ವೃತ್ತಾಂತ, ಸಪ್ನ ಬುಕ್ ಹೌಸ್, ಬೆಂಗಳೂರು, 2012.

❖❖❖

**ದರ್ಜಿಯ ಮಾತಿಗೆ ತಲೆದೂಗುತ ರಾಜನು**
**ಧರಿಸುವ ನಾಟಕವಾಡಿದನು**
**ಬಟ್ಟೆಯ ನವಿರನು ಹೊಗಳುತಲವನು**
**ಸತ್ಯವಂತನಂತೆ ನಟಿಸಿದನು**

# ಆದಿ – ಅನಾದಿ ತತ್ವ

**ಡಾ. ರವಿಶಂಕರ್ ಎ.ಕೆ, ಡಾ. ಸರ್ವೇಶ್ ಬಿ.ಎಸ್, ಡಾ. ಎಂ. ಬೈರಪ್ಪ**
ಸಹಾಯಕ ಪ್ರಾಧ್ಯಾಪಕರು
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ, ಕೆ. ನಾರಾಯಣಪುರ, ಬೆಂಗಳೂರು

ಸೃಷ್ಟಿಯ ಬಗ್ಗೆ ಚರಿತ್ರೆಯು ಸಿಂಧೂ ನದಿ, ಹರಪ್ಪ, ಮಹೆಂಜದಾರೋ ಮುಂತಾದ ವಿವಿಧ ನಾಗರೀಕತೆಗಳವರೆಗೆ, ಮೆಸೆಪಟೋಮಿಯಾದಲ್ಲಿ ನೆಡೆದ ಭೀಕರ ನೆರೆಯ ಕಥೆಯವರೆಗೆ ಕೆಲವು ಸಾಕ್ಷಿಗಳನ್ನು ತೆರೆದಿಡುತ್ತದೆ. ವಿವಿಧ ಮತ ಧರ್ಮಗಳ ಗ್ರಂಥಗಳು, ಮೌಖಿಕ ಪರಂಪರೆಗಳು ಸೃಷ್ಟಿಯ ಕಥೆಗಳನ್ನು ಹೇಳುತ್ತವೆ. ಪ್ರಸ್ತುತ ವಚನ ಸಾಹಿತ್ಯವನ್ನು ಮೂಲಪಠ್ಯವಾಗಿಸಿಕೊಂಡು, ವಚನಗಳು ನಿರ್ವಚಿಸುವ ಸೃಷ್ಟಿಯ ಅರ್ಥಗಳನ್ನು ಕಂಡುಕೊಳ್ಳಲು ಇಲ್ಲಿ ಯತ್ನಿಸಲಾಗುವುದು.

**ವಚನಸಾಹಿತ್ಯದಲ್ಲಿ ಕಂಡುಬರುವ ಸೃಷ್ಟಿಯ ಸ್ವರೂಪ**

ವಚನಸಾಹಿತ್ಯದ ಹಿನ್ನಲೆಯಲ್ಲಿ ಲಿಂಗ ಸ್ವರೂಪದ ಮೂಲಕ ಸೃಷ್ಟಿಯ ಬಗೆಗಳನ್ನು ಹೀಗೆ ಚರ್ಚಿಸಬಹುದು. ಈ ಸೂಕ್ಷ್ಮಪ್ರಕೃತಿಯು ಒಂಬತ್ತು ಶಕ್ತಿಗಳ ಮೊತ್ತವಾಗಿದೆ. (ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿತ್ ಶಕ್ತಿ, ನಿರಾಲಂಬಶಕ್ತಿ, ನಿರವಯಶಕ್ತಿ) ಇವು ಇಂದ್ರಿಯಗಳಿಗೆ ಆಗೋಚರ. ಇದು ಮನಸ್ಸಿಗೆ ಹೊಳೆಯುವ ಕ್ರಿಯೆ. ಇದು ಸ್ವಪ್ನದಲ್ಲಿ ಕಾಣಿಸುವ ಜ್ಞಾನ ಅದುವೆ ಸೃಷ್ಟಿ. (ಲಿಂಗತತ್ವ – ಶಿವಾನಂದ ಸ್ವಾಮಿಗಳು, ಗವಿಮಠ, ತೆಗ್ಗಿಹಳ್ಳಿ, ಇಂಡಿ; ಶಿವಾನುಭವ–1958)

**ಸತ್ – ಚಿತ್ – ಆನಂದ**

**ಪರಾಪ್ರಕೃತಿ (ಚಿತ್ ಶಕ್ತಿ) (ಹೆಣ್ಣು) (ಪಾರ್ವತಿ)**

**(ಸೃಷ್ಟಿಗೆ ಕಾರಣವಾದ ತ್ರಿಕೋನ ಸರಣಿ)**

ವಚನಸಾಹಿತ್ಯದಲ್ಲಿ ಅಲ್ಲಮಪ್ರಭು, ಅಕ್ಕಮಹಾದೇವಿ, ಬಸವಣ್ಣ, ಚೆನ್ನಬಸವಣ್ಣ ಇವರೆಲ್ಲರೂ ಜ್ಞಾನ–ವಿಜ್ಞಾನಗಳನ್ನು ಜಂಗಮ ತತ್ತ್ವದಲ್ಲಿ ದರ್ಶನ ಮಾಡಿದ ವಿಚಾರ ಚಿಂತಕರು. ಇವರ ಪ್ರಕಾರ ಹೆಣ್ಣು ಸೃಷ್ಟಿಯ ಸ್ವರೂಪ. ಜೀವೋತ್ಪತ್ತಿಯ ಪೂರ್ಣಪ್ರಭೆ, ಆಕೆಯೊಂದು ಶಕ್ತಿ. ವಚನಸಾಹಿತ್ಯದಲ್ಲಿ 'ಹೆಣ್ಣು ಪ್ರತ್ಯಕ್ಷ ದೇವರಾಗಿ' ಗೌರವಿಸಿದ ಹೊಸ ಬಗೆಯು ವಿಭಿನ್ನವಾದುದು. ಇಂತಹ ದೇಸಿಯ ಬೇರಿನಿಂದ ಅಭಿವ್ಯಕ್ತಿಗೊಂಡ ಕನ್ನಡದ ಮೊದಲ ಸಾಹಿತ್ಯವೆಂದೇ ಕರೆಯುವ 'ವಚನಸಾಹಿತ್ಯ'ವು ಸಂಸ್ಕೃತ ಸಾಹಿತ್ಯದ ವೇದ, ಉಪನಿಷತ್ತುಗಳ ಸಮಗ್ರೀಯ ಅಧ್ಯಯನವನ್ನೂ ಕರಗತಮಾಡಿಕೊಂಡು ತಮ್ಮ ವಿಚಾರದ ನಿಲವನ್ನು ಶಕ್ತಿಪೂರ್ಣಮಾಡಿಕೊಂಡ ಬೃಹತ್ ಸಾಹಿತ್ಯವೆನ್ನಬಹುದು. ವಚನ ಸಾಹಿತ್ಯದ ಪ್ರಮುಖ ತತ್ವಗಳಾದ ಗುರು–ಲಿಂಗ–ಜಂಗಮ–ದಾಸೋಹಗಳು ಸದಾ ಚಲನಶೀಲವಾದವು. ಒಂದಲ್ಲ ಒಂದು ಅಂಶದಲ್ಲಿ ಸೃಷ್ಟಿಯ ಸಂಕೇತಗಳೇ ಆಗಿವೆ. ಇವು ಜಡವಲ್ಲ, ಜಡದಲ್ಲಿ ಸೃಷ್ಟಿಯಿಲ್ಲ. ಯಾವ ವಿಚಾರಗಳು ಜ್ಞಾನದಲ್ಲಿ ಹುಟ್ಟಿ ವಿಜ್ಞಾನವನ್ನು ಬಯಸುತ್ತವೆಯೋ ಅಲ್ಲಿ ಅನಂತತೆ ಅಡಗಿರುತ್ತದೆ.

ಅಕ್ಕನ ಜೊತೆಯಲ್ಲಿ ಅಲ್ಲಮ, ಬಸವಣ್ಣ, ಚೆನ್ನಬಸವಣ್ಣ ಹೀಗೆ ಕೆಲವು ವಚನಕಾರರ ವಿಭಿನ್ನ ನೋಟಗಳು ವಿಶ್ವಸೃಷ್ಟಿಯ ತತ್ತ್ವವನ್ನು ಹೊಸಬಗೆಯಲ್ಲಿ ನೋಡಿವೆ. ವಚನವೆಂಬ ದೇಸಿಯ ಚಿಂತನೆಯು ಅದೆಷ್ಟು ಅಂದಿನ ಸಾಹಿತ್ಯ ಗ್ರಹಿಕೆಗಳ ಮೂಲ ವಿಕಾಸದಲ್ಲಿ ಬೆಳವಣಿಗೆ ಕಂಡಿದೆ ಹಾಗೂ ಸಂಪದ್ಭರಿತಗೊಂಡಿದೆ ಎಂಬುದನ್ನು ಚರ್ಚಿಸಬಹುದು.

ಆದಿ ಎಂದರೇನು? ಸೃಷ್ಟಿಯ ಕುರಿತು ಈ ಪದದ ಜಿಜ್ಞಾಸೆಗಳೇನು? ಇದರೊಟ್ಟಿಗೆ ನಿರ್ವಚಿಸಬಹುದಾದ ಅನಾದಿ ಎಂಬ ಪರಿಕಲ್ಪನೆಯೂ ಹೊಸ ವಿಚಾರಗಳನ್ನು ಅನ್ವೇಷಿಸಲು ಸಹಕರಿಸುತ್ತದೆ. ಆದಿಯಿಲ್ಲದ ವಿಚಾರವೇ ಅನಾದಿಯೆಂದು ಶಬ್ದಕೋಶವು ತಿಳಿಸಿದರೆ, ಮೂಲಜ್ಞಾನವೇ ಇಲ್ಲದ ಇನ್ನೊಂದು ಅರ್ಥ 'ಮಾಯೆ' ಎಂಬ ಹೊಸ ಸ್ವರೂಪ ಕಾಣಿಸುತ್ತದೆ. ವಚನ ಸಂಚಯದ ಪ್ರಕಾರ ನಮ್ಮ ವಚನ ಸಾಹಿತ್ಯದಲ್ಲಿ ಆದಿ ಎಂಬ ಪದವನ್ನು ಒಟ್ಟು 1279ಕಡೆಯಲ್ಲಿ 771 ವಚನಗಳಲ್ಲಿ 82 ವಚನಕಾರರು ಪ್ರಯೋಗಿಸಿದ್ದಾರೆ. ಅನಾದಿ ಎಂಬ ಪದವನ್ನು ಒಟ್ಟು 755ಕಡೆಯಲ್ಲಿ 497 ವಚನಗಳಲ್ಲಿ 58 ವಚನಕಾರರು ಪ್ರಯೋಗಿಸಿದ್ದಾರೆ. ಈ ಪದಗಳು ಆಯಾ ವಿಷಯಗಳಿಗೆ ಅನುಗುಣವಾಗಿ ವಿವಿಧ ಅರ್ಥಗಳನ್ನು ಧ್ವನಿಸುತ್ತಾ ಪ್ರಯೋಗಗೊಂಡಿರುವುದನ್ನು ಕಾಣಬಹುದು.

ಈ ಆದಿ ಮತ್ತು ಅನಾದಿ ಕುರಿತು ವಿವಿಧ ವಚನಕಾರರು ವಿಭಿನ್ನವಾಗಿ ಚರ್ಚಿಸಿದ್ದಾರೆಂದರೆ, ಈ ವಿಚಾರವು ಸಮಕಾಲೀನ ತಾರ್ಕಿಕ ಜಿಜ್ಞಾಸೆಯಾಗಿಯೂ ಕಂಡುಬಂದಿರುತ್ತದೆ. ಅಲ್ಲಮಪ್ರಭುವಿನ ಒಂದು ವಚನದ ಚಿಂತನೆಗಳು ಹೀಗಿವೆ.

**ಅನಾದಿಯ ಮಗನು ಆದಿ, ಆದಿಯ ಮಗನತೀತ**
**ಅತೀತನ ಮಗನು ಆಕಾಶ, ಆಕಾಶನ ಮಗನು ವಾಯು,**
**ವಾಯುವಿನ ಮಗನಗ್ನಿ, ಅಗ್ನಿಯ ಮಗನು ಅಪ್ಪು,**
**ಅಪ್ಪುವಿನ ಮಗನು ಪೃಥ್ವಿ.**
**ಪೃಥ್ವಿಯಿಂದ ಸಕಲ ಜೀವರೆಲ್ಲರು ಉದ್ಭವಿಸಿದರು ಗುಹೇಶ್ವರಾ!**

ಸೃಷ್ಟಿಯ ಕುರಿತ ಅಲ್ಲಮಪ್ರಭುವಿನ ಈ ವಚನವು ನಮ್ಮ ಬ್ರಹ್ಮಾಂಡ ಸೃಷ್ಟಿಯ 'ಮಹಾಸ್ಫೋಟ' ತತ್ವವನ್ನು ವಿವರಿಸುತ್ತಿದೆ. ಇದರ ಪೂರ್ವವನ್ನು ಅಲ್ಲಮ ಪ್ರಭು 'ಅನಾದಿ' ಎಂದಿದ್ದಾರೆ. ಸೂಕ್ಷ್ಮಬಿಂದು(ಗುಹೇಶ್ವರ)ವಿನಿಂದ ಅಸಂಖ್ಯಾತ ಕಣಗಳು ಸಿಡಿದು 'ಮಹಾಸ್ಫೋಟ'ವಾದ ಬಗೆಯಲ್ಲಿಯೇ, ಅವುಗಳು ಕೂಡಿ ನಕ್ಷತ್ರಗಳು ರಚನೆಯಾದವು. ನಕ್ಷತ್ರಗಳಿಂದ ಗ್ರಹಗಳು, ಗ್ರಹಗಳಿಂದ ಉಪಗ್ರಹ ಹೀಗೆ ಬ್ರಹ್ಮಾಂಡ ರಚನೆಯಾದ ಬಗೆಯನ್ನು ಕಾಣಬಹುದು.

ಇದನ್ನು ಅಲ್ಲಮಪ್ರಭುಗಳು ಅದೆಷ್ಟು ವಿಸ್ತಾರವಾಗಿ ವಿವರಿಸಿದ್ದಾರೆ ಎಂದರೆ, ಮಹಾಸ್ಫೋಟಕ್ಕೂ ಮೊದಲು ಅನಾದಿ, ಈ ಅನಾದಿಯಿಂದ ಆದಿ ಸೃಷ್ಟಿಗೊಳ್ಳುವ ಬಗೆಯನ್ನು ಇಲ್ಲಿ ಸಹಜವಾಗಿ ತಂದು ಅದುವೆ ಪ್ರಾರಂಭವೆಂದು ಖಗೋಳ ವಿಜ್ಞಾನವನ್ನು ದಾಖಲಿಸುತ್ತಾರೆ. ಈ ಆದಿ ಕಂಡ ಮೇಲೆ ಅಂತ್ಯವೂ ಕಾಣಬೇಕಲ್ಲವೆ. ಅದೊಂದು ಅತೀತವಾದುದು. ಅಂದರೆ ಕೈಗೆ ನಿಲುಕದ, ಕಾಣದ ವ್ಯವಸ್ಥೆ. ಆದಿಯೊಂದಿಗೆ ಅಂತ್ಯವೂ ಜೊತೆಯಾಗುವ ನಡಿಗೆ. ಇದನ್ನು ಅಲ್ಲಮನ 'ಬಯಲ ದೀಪಿಕೆ' ಎಂದು ಕರೆಯಬಹುದು. ಈ ಅತೀತದಲ್ಲಿಯೇ ಆಕಾಶದ ಸೃಷ್ಟಿ, ಆಕಾಶದಲ್ಲಿಯೇ ವಾಯುವಿನ ಸೃಷ್ಟಿ, ವಾಯುವಿನಲ್ಲಿಯೇ ಅಗ್ನಿಯ ಸೃಷ್ಟಿ. ಅಗ್ನಿಯಿಂದ ನೀರು, ನೀರಿನಿಂದ

ಭೂಮಿಯು ಸೃಷ್ಟಿಗೊಳ್ಳುವ ಸರಳ ವಿಜ್ಞಾನವು 'ಪಂಚಭೂತಗಳ ನಿರ್ವಚನ'ದಲ್ಲಿ ಸರಳವಾಗಿ ವ್ಯಾಖ್ಯಾನಿಸಿದ್ದಾರೆ. ಇಷ್ಟೆಲ್ಲಾ ಹೇಳಿದರೂ, ಅಲ್ಲಮ ಪ್ರಭುವಿನ ನಿಲುವು 'ಬಯಲ ಶೂನ್ಯ ಭಾವ'. ಈ ಬಯಲ ತತ್ವದಲ್ಲಿಯೇ ಎಲ್ಲಾ ವಿಚಾರಗಳನ್ನು ಕೇಂದ್ರೀಕರಿಸಿ 'ಕಾಲ'ದ ಪರಿಕಲ್ಪನೆಯನ್ನು ಹಿಂದಣ ಅನಂತ–ಮುಂದಣ ಅನಂತವಾಗಿ ತಂದು ಒಂದು ದಿನದಲ್ಲಿ ಒಳಗೊಳ್ಳುವ ಕೇಂದ್ರ ತೃಪ್ತಿಗೆ ಸ್ವರೂಪಗೊಳಿಸುತ್ತಾರೆ.

ಇದೇ ತತ್ವವನ್ನು ಬಸವಣ್ಣನವರು ಉತ್ತರಿಸುವ ಬಗೆ ಹೀಗಿದೆ.

**"ಆದಿ ಲಿಂಗ, ಅನಾದಿ ಜಂಗಮವು,**
**ಆ ಜಂಗಮಕ್ಕೆ ಮಾಡಿದಡೆ ಪರಮಾನಂದ ಸುಖವಯ್ಯಾ.**
**ಗುರುವಿಂಗೆ ಪರಮಗುರು ಜಂಗಮವೆಂದುದು**
**ಕೂಡಲಸಂಗಯ್ಯನ ವಚನ(ಬಸವಣ್ಣ)"**
**"ಆದಿ ಅನಾದಿಗಳಿಲ್ಲದಂದು, ಸದಾಶಿವನಿಲ್ಲದಂದು.."**
**"ಆದಿ ಭಕ್ತ, ಅನಾದಿ ಜಂಗಮ**
**ಆದಿ ಶಕ್ತಿ, ಅನಾದಿ ಶಿವನು ನೋಡಾ.."**
**"ಆದಿಯನರುಹಿದ, ಅನಾದಿಯ ತೋರಿದ,**
**ಇಹವ ಕೆಡಿಸಿದ, ಪರವ ನಿಲಿಸಿದ, ಘನವ ತೋರಿದ."**
**"ಆದಿಯನಾದಿಯಿಂದತ್ತತ್ತ ಮುನ್ನ**
**ಲಿಂಗ ಜಂಗಮವೆಂಬುದನಾರು ಬಲ್ಲವರಿಲ್ಲವೆಂದು"**
**"ಆದಿಯ ಲಿಂಗವ ತಂದಾತನಲ್ಲಯ್ಯನು**
**ಅನಾದಿಯ ಲಿಂಗವ ತಂದಾತನಲ್ಲಯ್ಯನು"**
**"ಆದಿಯಲ್ಲಿ ಸಾಧ್ಯವೆಂಬೆನೆ ಅಲ್ಲಿಂದತ್ತತ್ತ,**
**ಅನಾದಿಯಲ್ಲಿ ಸಾಧ್ಯವೆಂಬೆನೆ ಅಲ್ಲಿಂದತ್ತತ್ತ,**
**ಸಾಧ್ಯಾಸಾಧ್ಯಾವೆಂಬ ಸೂತಕ ಶಬ್ದಕ್ಕತೀತ"**

ಅಲ್ಲಮನ ತತ್ವಕ್ಕಿಂತ ವಿಭಿನ್ನವಾದ ಅರ್ಥವನ್ನು ಇಲ್ಲಿ ಬಸವಣ್ಣನವರು 'ಜಂಗಮ ತತ್ವ'ದ ಹಿನ್ನಲೆಯಲ್ಲಿ ನಿರೂಪಿಸಿದ್ದಾರೆ. ಈ ಲಿಂಗ ಮತ್ತು ಜಂಗಮ ಕಲ್ಪನೆಗಳು ನಿರಾಕಾರ ಸ್ವರೂಪದ ದೈವ ಭಾವ ಹಾಗು ಅದನ್ನು ಅನುಸರಿಸುತ್ತಲೇ ಅದರ ಚೈತನ್ಯವನ್ನು ನಿರಾಕಾರ ಹಾಗೂ ಸ್ಥಾವರವಲ್ಲದ ನೆಲೆಯಲ್ಲಿ ಚಲಿಸುವ ಜಂಗಮತತ್ವಕ್ಕೆ ಸಂಯೋಜಿಸಲಾಗಿದೆ. ಈ ಜಂಗಮತನವೇ ಶ್ರೇಷ್ಠಸುಖವನ್ನು ನೀಡುವ ಗುರುವಿಂಗೆ ಗುರುವಾದ ಪರಮಗುರು ಕೂಡಲಸಂಗನೆನ್ನುತ್ತಾ, ಮಾಯೆಯ ಮನ್ವಂತರದ ಮೂಲಕ ಸೃಷ್ಟಿಯ ಬೀಜವನ್ನು ಕಾಣಿಸಿದ್ದಾರೆ. ಇಲ್ಲಿ ಮುಖಾಮುಖಿಯಾಗುವ ತತ್ವಗಳು ಲಿಂಗ ಮತ್ತು ಜಂಗಮವೇ ಆಗಿವೆ. ಲಿಂಗವು ಮಾಯೆಯಾದರೆ, ಜಂಗಮವು ಅದನ್ನು ಅರಿತ ಜ್ಞಾನ. ಇಂತಹ ಸುವಿಧ ಪರಿಯ ಸಮ್ಯಕ್ ದರ್ಶನವು ಏಕಮುಖವಾಗಿಯೇ ಚಲಿಸಿ ಐಕ್ಯವಾಗುತ್ತದೆ. ಬಸವಣ್ಣನವರೂ ಕೂಡ ಲಿಂಗದ ಮೂಲಕ ಜಂಗಮ ಪ್ರವೇಶವನ್ನು ಸೃಷ್ಟಿ ಸಾರ್ಥಕತೆಯನ್ನು ಬಿಂಬಿಸಿದ್ದಾರೆ.

ತನು–ಮನ–ಧನಗಳನ್ನು ಗುರು–ಲಿಂಗ–ಜಂಗಮಕ್ಕೆ ಅರ್ಪಿಸುವ ಶರಣರ ತ್ರಿವಿಧ ದಾಸೋಹಗಳನ್ನು ಬಸವಣ್ಣನವರು ಭಕ್ತಿ ದಾಸೋಹ, ಯುಕ್ತಿ ದಾಸೋಹ, ಮಮಕಾರ ದಾಸೋಹಗಳಾಗಿ ಪರಿಚಯಿಸಿ, ಸೃಷ್ಟಿಯ ಪ್ರತಿಯೊಂದು ಅಂಶವು

ಸರ್ವತೋಮುಖವಾಗಿ ಬೆಳೆಯಲು, ಬದುಕಲು ಹೊಸದಾಗಿ ವ್ಯಾಖ್ಯಾನಿಸಿದರು. ಅರಿವು–ಆಚಾರ–ಅನುಭಾವಕ್ಕೆ ಸಂಕೇತಗೊಳಿಸುವಲ್ಲಿ ಅಡಗಿರುವ ತತ್ವವೇ ಸೃಷ್ಟಿ–ಸ್ಥಿತಿ–ಲಯಗಳ ಜೀವಾಂಶವಾಗಿದೆ.

ಇದಕ್ಕಿಂತ ಭಿನ್ನವಾದ ಚಿಂತನೆ ಚೆನ್ನಬಸವಣ್ಣನದು.

**"ಆದಿ ಬಸವಣ್ಣ ಅನಾದಿ ಲಿಂಗವೆಂದೆಂಬರು ಹುಸಿಹುಸಿ**
**ಈ ನುಡಿಯ ಕೇಳಲಾಗದು**
**ಆದಿ ಲಿಂಗ ಅನಾದಿ ಬಸವಣ್ಣ**
**ಲಿಂಗವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು**
**ಜಂಗಮವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು**
**ಪ್ರಸಾದವು ಬಸವಣ್ಣನ ಅನುಕರಿಸಲು ಆಯಿತ್ತು**
**ಇಂತೀ ತ್ರಿವಿಧಕ್ಕೆ ಬಸವಣ್ಣನೇ ಕಾರಣನೆಂದರಿದೆನಯ್ಯಾ**
**ಕೂಡಲಚೆನ್ನಸಂಗಮದೇವಯ್ಯ"** **–ಚೆನ್ನಬಸವಣ್ಣ(ಸ.ವ.ಸಂ.3 ವ:5,1993)**

ಆ ಎಲ್ಲ ವಚನಗಳಿಗೂ, ಅಲ್ಲಮನ ಚಿಂತನೆಗೆ ಮುಂದುವರೆದಂತೆಯೂ ಲಿಂಗ–ಜಂಗಮ–ಪ್ರಸಾದಗಳು ಬಸವಣ್ಣನ ಉದರದಲ್ಲಿಯೇ ಅಡುಗುವ ತ್ರಿವಿಧ ಕಾರಣ ಕಾರ್ಯಸಂಗತಿಯನ್ನು ಅನುಭೂತಿಯಾಗಿಸಿದ್ದಾರೆ.

ಚೆನ್ನಬಸವಣ್ಣನ ತತ್ವವನ್ನು ಅಲ್ಲಮಪ್ರಭುಗಳು ಮುಂದುವರೆಸುತ್ತಾ...

**"ಆದಿ ಜಂಗಮ ಅನಾದಿ ಭಕ್ತನೆಂಬುದನಾರು ಬಲ್ಲರು ಹೇಳಾ ಬಸವಣ್ಣಾ ನೀನಲ್ಲದೆ ?**
**ನಿತ್ಯ ನಿರಾಕಾರ ಘನವು ಶಕ್ತಿಯಿಲ್ಲದೆ ಇದ್ದಡೆ**
**ಆಗಲೆ ಬಯಲಾದಹುದೆಂದು..."**

ಈ ವಚನದಲ್ಲಿ ಆದಿಯನ್ನು ಜಂಗಮವೆಂದು ಕರೆಯುವಾಗ ಅನಾದಿಯಾದ ಮಾಯೆಯನ್ನು ಭಕ್ತನಿಗೆ ಹೋಲಿಸುವ ತತ್ವವು ಬಸವಣ್ಣನಲ್ಲದೆ ಅನ್ಯರಿಗೆ ತಿಳಿದಿಲ್ಲವೆಂಬ, ಕಾರ್ಯಕಾರಣ ಧರ್ಮವನ್ನು ಅಲ್ಲಮಪ್ರಭು ಚರ್ಚಿಸಿದ್ದಾರೆ. ಆದಿ ಮತ್ತು ಅನಾದಿಯ ಘನ ಶಕ್ತಿಯನ್ನು ಅರಿತು ಘನಚೈತನ್ಯದ ಕಾಯವನ್ನು ಧರಿಸಿದರೆ, ಜಗದ ಸೃಷ್ಟಿಗೆ ಕಾರಣನಾದ ಶಿವನ ನಾಮರೂಪದ ಬೆಳಕು ಕಾಣಿಸುತ್ತದೆ ಎಂದಿದ್ದಾರೆ.

ಈ ವಿಚಾರವನ್ನು ಅಕ್ಕ ಮಹಾದೇವಿಯು ಹೀಗೆ ಮುಂದುವರೆಸುತ್ತಾರೆ. ಆದಿ, ಅನಾದಿಗಳ ಚರ್ಚೆಯು ಸಕಲರೂ ತಮಗನಿಸಿದಂತೆ ಮೂಡಿದ ಕುತೂಹಲವನ್ನು ತಮ್ಮ ಜ್ಞಾನಗಳ ಪರಿಮಿತಿಯಲ್ಲಿ ಚರ್ಚಿಸಿದ್ದಾರೆ. ಈ ವಿಚಾರವು ಅಂದಿನ ಎಲ್ಲಾ ವಚನಕಾರರ ಚಿಂತನೆಯೂ ಆಗಿತ್ತೆಂದು ಭಾವಿಸಬೇಕಾಗುತ್ತದೆ.

**ಆದಿ ಅನಾದಿ ನಿತ್ಯಾನಿತ್ಯವ ತಿಳಿಯಲರಿಯದೆ**
**ವಾಯಕ್ಕೆ ಪರಬ್ರಹ್ಮವ ನುಡಿವ ವಾಯುಪ್ರಾಣಿಗಳವರೆತ್ತ ಬಲ್ಲರೋ**
**ಆ ಪರಬ್ರಹ್ಮದ ನಿಜದ ನಿಲವ?** **(ವಚನ 57)**

ಅಕ್ಕಮಹಾದೇವಿಯವರು ಸೃಷ್ಟಿಯ ಕುರಿತು ವಿಭಿನ್ನವಾಗಿ ನುಡಿದಿರುವ ವಚನವಿದು. ಮಾಯೆಯನ್ನು ಕುರಿತು ತಿಳಿಸುವ ವಿಭಿನ್ನ ವಚನವಿದು. ಆದಿ ಎಂದರೆ ಮೂಲ/ ಮೂಲಜ್ಞಾನವೆಂದರ್ಥ. ಅನಾದಿ ಎಂದರೆ ಮೂಲವಲ್ಲದ/ ಮಾಯೆ ಎಂದರ್ಥ. ಮೂಲಜ್ಞಾನ, ಮೂಲಜ್ಞಾನವಲ್ಲದ ನಿತ್ಯಾನಿತ್ಯವೇ ಈ ಸೃಷ್ಟಿ. ಈ ಸೃಷ್ಟಿಯ ಕುರಿತು ವಿಜ್ಞಾನವು ಇಂದಿಗೂ ಸಂಶೋಧನೆ ನಡೆಸುತ್ತಲೇ ಇದೆ. ಇಂತಹ

ವಿಚಾರವನ್ನು ತಿಳಿಯಲರಿಯದೆ ಮಾಯೆಯನ್ನು ಕುರಿತು ಪರಬ್ರಹ್ಮ ಸ್ವರೂಪವೆನ್ನುವ ಎಂದರೆ, ಎಲ್ಲವನ್ನೂ ದೇವರೇ ಸೃಷ್ಟಿಸಿದೆ ಎಂದು ಇಂದಿಗೂ ಮಿಥ್ಯದೊಳಗಿರುವ ವಾಯುಪ್ರಾಣಿಗಳು. ಈ ವಾಯುಪ್ರಾಣಿಗಳೆಂದರೆ ಎಂದರೆ ಭೂತದೇಹಿಗಳು(ಭವಿಗಳು).

**ಅದೆಂತೆಂದಡೆ :**

**ಆದಿಯೆ ದೇಹ, ಅನಾದಿಯೆ ನಿರ್ದೇಹ,**

**ಆದಿಯೆ ಸಕಲ, ಅನಾದಿಯೆ ನಿಷ್ಕಲ,**

**ಆದಿಯೆ ಜಡ, ಅನಾದಿಯೆ ಅಜಡ.**

**ಆದಿಯೆ ಕಾಯ, ಅನಾದಿಯೆ ಪ್ರಾಣ.**

**ಈ ಎರಡರ ಯೋಗವ ಭೇದಿಸಿ**

**ತನ್ನಿಂದ ತಾನೆ ತಿಳಿದು ನೋಡಲು**

**ಆದಿ ಸಂಬಂಧವಪ್ಪ ಭೂತಂಗಳು ನಾನಲ್ಲ.**

ಆದಿ ಎಂದರೆ ಕಾಣುವ ಕಾಯ ಸ್ವರೂಪ, ಅದನ್ನು ದೇಹ, ಸಕಲ, ಜಡ, ಕಾಯವೆಂದು ತಿಳಿಸಿದ್ದಾರೆ. ಇದೆಲ್ಲವೂ ವಿಜ್ಞಾನದ ಭೌತಿಕ ಸ್ವರೂಪ. ಆದರೆ, ಅನಾದಿಯು ಈ ಮುಖದ ಚಿಂತನೆಯಲ್ಲ. ಅದು ದೇಹವಿಲ್ಲದ ಮಾಯೆ, ನಿಷ್ಕಲ, ಅಜಡ, ಪ್ರಾಣದಂತಹ ಉಸಿರು. ಈ ಎರಡರ ನಡುವಿನ ಭೇದವನ್ನು ಚರ್ಚಿಸುತ್ತಾ ತಾನು ಆದಿ ಸಂಬಂಧವಾಗಿ ಚಿಂತಿಸುವವಳು, ಅನಾದಿಯ ಭವಿತನವು ನಾನಲ್ಲವೆಂದಿದ್ದಾರೆ. ಈ ಮಾಯೆಯು ಭವಿತನದ ವಿಚಾರವಾಗಿ ಚರ್ಚಿಸುವ ಕಾರಣದಿಂದಲೇ ಅಕ್ಕಮಹಾದೇವಿ ಅದೇ ಮಾರ್ಗದ ವಿಚಾರವನ್ನಿಟ್ಟು ನಿರಾಕರಿಸುತ್ತಲೇ ಸಾಗುವುದನ್ನು ಗಮನಿಸಬಹುದು. ಸೃಷ್ಟಿಯೆಂಬುದು ಕಲ್ಪನೆಯಲ್ಲ. ಮಾಯೆಯೂ ಅಲ್ಲ. ಅದೊಂದು ಜ್ಞಾನ.

**ಪಾತಾಳವಿತ್ತಿತ್ತ, ಪಾದಂಗಳತ್ತತ್ತ,**

**ದಶದಿಕ್ಕು ಇತ್ತಿತ್ತ, ದಶಭುಜಂಗಳತ್ತತ್ತ,**

**ಬ್ರಹ್ಮಾಂಡವಿತ್ತಿತ್ತ, ಮಣಿಮುಕುಟವತ್ತತ್ತ**

**ಚೆನ್ನಮಲ್ಲಿಕಾರ್ಜುನಯ್ಯಾ, ನೀವೆನ್ನ**

**ಕರಸ್ಥಲಕ್ಕೆ ಬಂದು ಚುಳುಕಾದಿರಲ್ಲಾ ಲಿಂಗವೆ.**

ಇದೇ ಅಕ್ಕಮಹಾದೇವಿಯ ವಿಭಿನ್ನ ವಚನವು ವ್ಯಂಗ್ಯದೊಳಗಿನ ವಿಜ್ಞಾನವನ್ನು ನಮಗೆ ಉಣಬಡಿಸುವಂತಿದೆ. ಈ ಭೂಮಿ, ಪಾತಾಳ, ಆಕಾಶ, ದಿಕ್ಕುಗಳು, ಗಿರಿ ಶಿಖರಗಳು ಒಟ್ಟಾರೆ ಈ ಬ್ರಹ್ಮಾಂಡವು ನಮ್ಮ ನಮ್ಮ ಕಲ್ಪನೆಯಂತೆ ಕಾಣುವ ಕ್ರಿಯೆ ಅಷ್ಟು ಸುಲಭವಾದುದಲ್ಲ. 'ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಲ್ಲಾ ಲಿಂಗವೆ' ಎನ್ನುವಾಗ ವಿಶ್ವಸೃಷ್ಟಿಯು ಅಷ್ಟು ಚಿಕ್ಕದಾದ ವಿಚಾರವೇ ಎಂಬುದನ್ನು ವ್ಯಂಗ್ಯವಾಗಿ ಪ್ರಶ್ನಿಸುತ್ತಿದ್ದಾರೆ ಅಕ್ಕಮಹಾದೇವಿ. ವಾಕ್ಯಾರ್ಥದಲ್ಲಿ ಈ ಸಾಲುಗಳನ್ನು ಅರ್ಥೈಸಿಕೊಂಡದ್ದೇ ಜಾಸ್ತಿ ಎನ್ನಬಹುದು. ಆದರೆ, ಈ ಸಾಲುಗಳು ಮೀಮಾಂಸೆಯ ಭಾಷೆಯಲ್ಲಿ ಅಡಗಿರುವ ವ್ಯಂಗ್ಯಾರ್ಥದ ಚಿಂತನೆಗಳು ವಿಭಿನ್ನ. ಲಿಂಗವೇ ಒಂದು ವಿಶ್ವವಾಗಿ ಅದೊಂದು ಅಂಗೈ ಮೇಲಣ ಕಿರಿದರ್ಥವಲ್ಲವೆಂಬ ಚಿಂತನೆಯನ್ನು ನಮ್ಮ ವಿಶಾಲ ಗ್ರಹಿಕೆಗೆ ತೆರೆದಿಡುವ ಶರಣ ಚಿಂತನೆಯು ವಿಶೇಷವಾದುದು.

ಅಕ್ಕನ ವಚನದಲ್ಲಿ ಆದಿಯೇ ಬಸವಣ್ಣವೆಂಬ ವಿಚಾರವು ಜ್ಞಾನಕ್ಕೆ ಮೂಲವಾಗಿ ಬಸವಣ್ಣನನ್ನು ಸಂಬೋಧಿಸುವ ಕ್ರಮವನ್ನು ಗ್ರಹಿಸಬಹುದು.

**ಆದಿ–ಅನಾದಿ, ಸಾಕಾರ–ನಿರಾಕಾರ.**

**ಆದಿ ಗುರು, ಅನಾದಿ ಶಿಷ್ಯ! –ಬಸವಣ್ಣ**

ಈ ಭೂಮಿಯಲ್ಲಿನ ಸಕಲ ಜೀವಿಗಳಲ್ಲೂ ಆದಿಯು ಮತ್ತು ಅನಾದಿಯು ಒಟ್ಟಾಗಿ ಸೇರಿ ಸಾಕಾರಗೊಂಡಿದೆ. ಇಲ್ಲಿ ಶಿವತತ್ವ ಮತ್ತು ಪರಶಿವತತ್ವಗಳು ವಿಭಿನ್ನವಾಗಿ ಕೆಲಸಮಾಡಿವೆ. ಶುದ್ಧ ಚೇತನವಾದ ಶಿವತತ್ವವೂ ಒಮ್ಮೆ ಮೀರುವ ಅನಾದಿ ಪರತತ್ವಕ್ಕೆ ತನ್ನನ್ನು ಚಾಚಿಕೊಳ್ಳುತ್ತದೆ. ಇಂತಹ ಸೃಷ್ಟಿ ತತ್ವವನ್ನು ಮನುಷ್ಯಮಾತ್ರ ಅರಿಯುತ್ತಾನೆ. ಈ ಮನುಷ್ಯ ಜೀವಿಯು ಇತರ ಜೀವಿಗಳಂತೆ ಬದುಕಲಷ್ಟೇ ಯೋಚಿಸುವುದಿಲ್ಲ. ತನ್ನ ಬದುಕಿನ ಜೊತೆಯಲ್ಲಿ ಪ್ರಪಂಚದ ಸಕಲ ಚರಾಚರಗಳಿಗೂ ಪರತತ್ವವನ್ನು ಕಾಣಿಸುವ ಚೈತನ್ಯವೇ ವಿಭಿನ್ನವಾದುದು.

**ಕಲ್ಲೊಳಗೆ ಹೊನ್ನುಂಟು,**

**ಮರದೊಳಗೆ ಅಗ್ನಿಯುಂಟು,**

**ಹಾಲೊಳಗೆ ತುಪ್ಪವುಂಟು,**

**ಅಂತರ್ಯಾಮಿಯಲ್ಲಿ ಶಿವನಿಹನು.**

**ಇದೇನು ಕಾರಣ ಕತ್ತಲೆ ಕಾಣಬಾರದು,**

**ತೋರಬಲ್ಲ ಗುರು ಸುಳಿಯನು, ಕೂಡಲಸಂಗಮದೇವಾ.**

ಅಡಗಿರುವ ಬ್ರಹ್ಮತತ್ವವನ್ನು ಯಾರು ಅರಿಯಲು ಸಾಧ್ಯವಿಲ್ಲ. ಸೃಷ್ಟಿಯು ಸರ್ವಮುಖದಲ್ಲೂ ಅಡಗಿರುತ್ತದೆ. ಆದರೆ ಅದರ ವಿಕಾಸ ಎಲ್ಲರಿಗೂ ಗೋಚರಿಸುವುದಿಲ್ಲ.

**ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು ಸಗಣಕ್ಕೆ ಸಾವಿರ ಹುಳಹುಟ್ಟವೇ ದೇವ?**

**ಊರ ಮೃಗ ಒಂದಾಗಿ ಬಾಳಲಾರವೆ ಹರನೆ,**

**ಕಾಡ ಮೃಗ ಒಂದಾಗಿ ಇರಲಾರವೇ ದೇವ,**

**ಕೂಡಲ ಸಂಗನ ಶರಣರಿಲ್ಲದ ಊರು ದೇಶ ವನವಾಸ, ನರವಿಂಧ್ಯ ಕಾಣಿರಣ್ಣಾ.**

ಸುಜ್ಞಾನೋದಯವಾಗಿರದ ಶಿಷ್ಯನಿಗೆ ತನ್ನ ಸ್ವರೂಪ ಶಿವತತ್ವವೆಂಬುದು ಇನ್ನೂ ಅರಿವಿಗೆ ಬಂದಿರುವುದಿಲ್ಲ. ಆದರೆ ಗುರುವಿಗೆ ಮಾತ್ರ ಎಲ್ಲವೂ ಶಿವಮಯವೆಂದು ಗೊತ್ತಿರುತ್ತದೆ. ಹಾಗೆಯೇ ಶಿಷ್ಯನೂ ಶಿವಸ್ವರೂಪನೆಂದು ಗೊತ್ತಿರುತ್ತದೆ. ಶಿಷ್ಯನಲ್ಲಿರುವ ಶುದ್ಧ ಚೇತನವೂ ಸಹ ಜಂಗಮ ತತ್ವವೆಂದು ಗೊತ್ತಿರುತ್ತದೆ. ಶಿಷ್ಯನಿಗೆ ಇನ್ನೂ ಅರಿವಿಗೆ ಬಾರದೇ ಇದ್ದರೂ ಸಹ, ಮೊದಲಿನಿಂದಲೂ ಸಾಕ್ಷಿಚೇತನವಾಗಿ ಅವನಲ್ಲಿ ಜಂಗಮ ತತ್ವ ಇದ್ದೂ ಇಲ್ಲದಂತೆ ಇದೆ. ಆದ್ದರಿಂದ ಅನಾದಿವಿಡಿದು ಬಂದಾತನೇ ಜಂಗಮವಾಗುತ್ತದೆ. ತನ್ನ ಅರಿವೇ ಗುರು ಎಂದು ತಿಳಿದಿರುವ ಭಕ್ತ ಆದಿಯಾಗುತ್ತಾನೆ. ಶಿವಜ್ಞಾನ ಉದಯವಾದ ಮೇಲೆ ಅರಿವಿನಿಂದ ಶಿಷ್ಯ ಗುರುವಾಗುತ್ತಾನೆ. ಅಂದರೆ ಸಾಧನೆಯಲ್ಲಿರುವ ಶಿಷ್ಯ ಅನಾದಿಯಾದರೆ, ಗುರು ಆದಿಯಾಗುತ್ತಾನೆ; ಅಥವಾ ಅರಿವಿನಿಂದ ಗುರುವಾದವನು (ಆದಿ) ಮೊದಲು ಶಿಷ್ಯನೇ (ಅನಾದಿ) ಆಗಿರುತ್ತಾನೆ. 'ಈ ಉಭಯ ಕುಳಸ್ಥಳವ ಬಲ್ಲಾತ ಲಿಂಗಸಂಬಂಧಿ' ಎನ್ನುತ್ತಾರೆ ಗುರು ಬಸವಣ್ಣನವರು:

'ಮನದ ಕೊನೆಯ ಮೊನೆಯ ಮೇಲೆ ಮನೆಯ ಮಾಡಿಕೊಂಡಿಪ್ಪನೊಬ್ಬ ದಾಸೋಹಿ. ಆದಿವಿಡಿದು ಬಂದಾತನೆ ಭಕ್ತ, ಅನಾದಿ ವಿಡಿದು ಬಂದಾತನೆ ಜಂಗಮ. ಆದಿ ಗುರು, ಅನಾದಿ ಶಿಷ್ಯ. ಈ ಉಭಯ ಕುಳಸ್ಥಳವ ಬಲ್ಲಡೆ ಆತ ಲಿಂಗಸಂಬಂಧಿ ಕೂಡಲಸಂಗಮದೇವಾ.'

ಇದನ್ನೇ ಅಲ್ಲಮಪ್ರಭು ಇನ್ನೂ ವಿಭಿನ್ನವಾಗಿ ಚರ್ಚಿಸಿದ್ದಾರೆ. ಈ ಗುರು ಶಿಷ್ಯ ಸಂಬಂಧಗಳಿಗೆ ಆದಿ-ಅನಾದಿಯ ಸಂಬಂಧವನ್ನು ಜೋಡಿಸಿದ್ದಾರೆ. ಈ ಆದಿ ಅನಾದಿಗಳು ಬೇರೆಯಲ್ಲ, ಒಂದೇ ಮಾದರಿಯ ಅದ್ವೈತಗಳು ಅವಿನಾಭಾವ ಸಂಬಂಧ ಹೊಂದಿರುವ ತತ್ವಗಳು, ಅಗಲದ ಕೂಟಗಳು ಎಂದು ಅಲ್ಲಮಪ್ರಭು ತಿಳಿಸುತ್ತಾರೆ. ಈ ವಿಚಾರಕ್ಕೆ ಪೂರಕವಾಗಿ ಇನ್ನೊಂದು ವಚನವನ್ನು ಇಲ್ಲಿ ಚರ್ಚಿಸಬಹುದು.

ವಚನಕಾರ್ತಿ ನೀಲಮ್ಮನವರು ತಮ್ಮ ವಚನದಲ್ಲಿ 'ಆದಿ ಅನಾದಿ ತತ್ವವ ಭೇದಿಸಿಕೊಟ್ಟ ಗುರುವೆ, ಅಪ್ರಮಾಣದ ಬೆಳಗ ಭೇದಿಸಿಕೊಟ್ಟ ಗುರುವೆ' ಎಂದು ಬಸವಣ್ಣನನ್ನು ಹೇಳುತ್ತಲೇ, ಶಿವಮಯವಾದ ಜ್ಞಾನದ ವಿಸ್ತಾರವನ್ನು ಸೃಷ್ಟಿಯ ಸಾಮಿಪ್ಯಕ್ಕೆ ಕೊಂಡೊಯ್ಯುತ್ತಾರೆ. ಈ ಬಸವಣ್ಣನ ಕುರಿತು ಅಕ್ಕಮಹಾದೇವಿಯು ಆದಿ ಅನಾದಿಗಳಿಂದತ್ತಲಯ್ಯಾ ಬಸವಣ್ಣನು, ಮೂದೇವರ ಮೂಲಸ್ಥಾನವಯ್ಯಾ ಬಸವಣ್ಣನು ಎಂದಿದ್ದಾರೆ. ಅದನ್ನೆ ಮುಂದುವರಿಸಿದಂತೆ ಇನ್ನೊಂದು ವಚನ, ಆದಿ ಅನಾದಿಯೆನ್ನದೆ ಬಸವಣ್ಣ ಗಣಮೇಳಾಪವಾಗಿ ಅನಂತ ಯುಗಂಗಳಲ್ಲಿಯೂ ಸಕಲ ಲೋಕದೊಳು ಚರಿಸುತ್ತಿಪ್ಪ ಸುಳುಹನರಿಯದೆ, ಸಕಲ ನಿಃಕಲರೆಲ್ಲ ಭ್ರಮೆಗೊಂಡು ಬೀಳುತ್ತೇಳುತ್ತಿರ್ದ್ದರು. ಇವರೆಲ್ಲರ ಮುಂದೆ ಆ ಗಣಂಗಳ ನಾನರಿದು ಬದುಕಿದೆನು ಕಾಣಾ ಶ್ರೀಶೈಲ ಚೆನ್ನಮಲ್ಲಿಕಾರ್ಜುನಾ ಎಂದಿದ್ದಾರೆ.

ಒಟ್ಟಾರೆ, ಸೃಷ್ಟಿಯ ವಿಚಾರವು ಈ ಭವದ ವಿಚಾರದಂತಲ್ಲ. ಅದೊಂದು ಮಾಯೆಯಂತೆ ನಿರ್ಮೋಹಿ. ಆದಿ, ಅನಾದಿಯ ಸಂಬಂಧದೊಳಗೆ ಅರಿವಿಲ್ಲದೆ ಅರಿವಾಗುವ ಚೈತನ್ಯವಾಗಿದೆ. ಸೃಷ್ಟಿಯು ಚಲನಶೀಲವಾದ ಪ್ರಕ್ರಿಯೆ. ಎದುರಿನ ಭಾವವನ್ನು ಬಸವಣ್ಣನಂತೆ ಅಂತರಂಗದ ಶಿಶುವಾಗಿ ತಿಳಿಯುವ ಮುಕ್ತ ಜ್ಞಾನದ ತಿಳಿವು. ಪ್ರತಿ ಕ್ಷಣವೂ ಒಂದೊಂದು ಸೃಷ್ಟಿಯಲ್ಲಿ ನಮ್ಮ ಕಾಯ, ವಾಚ, ಮನಸಗಳು ಪ್ರಕ್ರಿಯೆಗೊಳ್ಳುತ್ತವೆ. ಯಾವುದು ವಿನಾಶವೆಂದು ಭಾವಿಸುತ್ತೇವೆಯೋ, ಅದು ವಿನಾಶವಲ್ಲ. ಇನ್ನೊಂದು ಸೃಷ್ಟಿಯ ಆದಿಯಾಗುವುದನ್ನು ಅರಿಯಲೇಬೇಕಿದೆ. ಇದು ಪ್ರಕೃತಿಯ ಸಂವಿಧಾನ.

**ಪರಾಮರ್ಶನ ಸಾಹಿತ್ಯ**

1. ಬಸವಯುಗದ ವಚನ ಮಹಾಸಂಪುಟ., ಎಂ.ಎಂ ಕಲಬುರ್ಗಿ(ಸಂ)., 1993, 2001, 2016., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
2. ಅಲ್ಲಮಪ್ರಭು., ವಿ. ಚಂದ್ರಶೇಖರ ನಂಗಲಿ., ಎಚ್.ಟಿ.ಪೋತೆ., 2011., ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

❖❖❖

# ಕನ್ನಡದ ಸಣ್ಣಕಥಾಸಾಹಿತ್ಯ – ಅವಲೋಕನ

**ಡಾ. ಎಚ್.ಎಮ್. ಚನ್ನಪ್ಪಗೋಳ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ – 590001

'ಅಲ್ಲಿ ಏನೋ ಮಾತುಕತೆ ನಡೆಯುತ್ತಿದೆ'. 'ಮಾತಿಲ್ಲ ಕತೆ ಇಲ್ಲ ಸುಮ್ಮನಿದ್ದಾರೆ.' 'ಮಾತುಕತೆ ಮಾಡಿದಿರಾ? ಏನು ಮಾತೋ? ಏನ ಕತಿನೋ?' ಇಂಥ ಅನೇಕ ಮಾತುಗಳನ್ನು ನಾವು ಕೇಳಿರುತ್ತೇವೆ. ಮಾತು ಮತ್ತು ಕತೆ ಎರಡೂ ಜೊತೆಯಾಗಿಯೇ ಬರುವ ಪದಗಳಾಗಿವೆ. ಮಾತು ಎಲ್ಲಿರುತ್ತದೆಯೋ ಅಲ್ಲಿ ಕತೆಯೂ ಇರುತ್ತದೆ. ಮಾತು ಎಂದರೆ ಕತೆಯೇ ಎಂದಂತಾಯಿತು. ಅಂದರೆ ಮಾತು ಎಂದು ಉದಯಿಸಿತೋ ಕತೆಯೂ ಅಂದೇ ಉದಯಿಸಿತು ಎನ್ನಬಹುದು. ಮಾತು ಕತೆಯನ್ನು ಕಟ್ಟುತ್ತದೆ. ಕತೆಗೆ ಇದೇ ವಸ್ತು ಇರಬೇಕೆಂದೆನೂ ಇಲ್ಲ ಯಾವುದೂ ಆಗಬಹುದಾಗಿದೆ. ಕೇಳುವವರಿದ್ದರೆ ಸಾಕು ಕತೆ ತಾನೇ ಹುಟ್ಟಿಕೊಳ್ಳುತ್ತದೆ.

ಭಾರತೀಯರ ಬದುಕಿನ ಎಲ್ಲ ಅಂಗಗಳಲ್ಲೂ 18 ಮತ್ತು 19ನೇ ಶತಮಾನ ಬದಲಾವಣೆಯ ಕಾಲ. ಇದು ಕನ್ನಡಿಗರ ಬದುಕಿಗೂ ಸಾಹಿತ್ಯಕ್ಕೂ ಸಂಬಂಧಿಸುತ್ತದೆ. ಸಾಕಷ್ಟು ಬದಲಾವಣೆಯ ಕಾರಣದಿಂದ ಕನ್ನಡ ನಾಡಿನಲ್ಲಿ ಅಕ್ಷರ ಕ್ರಾಂತಿಯುಂಟಾಯಿತು. ಅದರ ಭಾಗವಾಗಿ ಇಲ್ಲಿ ಮುದ್ರಣಾಲಯಗಳು ಬಂದವು ಅಷ್ಟೇ ಅಲ್ಲ ಪತ್ರಿಕಾ ರಂಗದಲ್ಲಿ ಕ್ರಾಂತಿಯುಂಟಾಯಿತು. ಹಾಗೆಯೇ ಸಾಹಿತ್ಯ ರಂಗವೂ ಇದಕ್ಕೆ ಹೊರತಾಗಲಿಲ್ಲ. ಭಾರತೀಯ ಭಾಷೆಗಳಲ್ಲಾಗುತ್ತಿದ್ದ ರೀತಿಯಲ್ಲಿಯೇ ಕನ್ನಡದಲ್ಲಿಯೂ ಸಾಕಷ್ಟು ಬದಲಾವಣೆ ಕನ್ನಡದಲ್ಲೂ ಆಗತೊಡಗಿತು, ಕನ್ನಡದ ಮೊದಲ ಸಾಮಾಜಿಕ ಕಾದಂಬರಿ ಎನಿಸಿದ 'ಇಂದಿರಾಬಾಯಿ' (1899) ಪ್ರಕಟಗೊಳ್ಳುವ ಹೊತ್ತಿಗೆ, ಬಿ. ವೆಂಕಟಾಚಾರ್ಯರು ಬಂಗಾಳಿಯನ್ನು ಕಲಿತು ಬಂಗಾಳಿಯಿಂದ ಕನ್ನಡಕ್ಕೆ ಕಾದಂಬರಿಗಳನ್ನು ಅನುವಾದಿಸತೊಡಗಿದ್ದರು. ಇದಲ್ಲದೇ ಭಾರತೀಯ ಭಾಷೆಗಳಾದ ತೆಲಗು, ತಮಿಳು, ಮರಾಠಿ, ಗುಜರಾತಿ, ಮಲಿಯಾಳಂ ಹೀಗೆ ಮುಂತಾದ ಭಾಷೆಗಳಲ್ಲಿನ ಹೊಸ ಹೊಸ ಕೃತಿಗಳು ಕನ್ನಡಕ್ಕೆ ಭಾಷಾಂತರವಾಗತೊಡಗಿದ್ದವು. 'ತೆನಾಲಿ ರಾಮಕೃಷ್ಣನ ಹಾಸ್ಯರಸ ಕತೆಗಳು', 'ಬೇತಾಳ ಕತೆಗಳು', ಕನ್ನಡಕ್ಕೆ ಅನುವಾದಗೊಂಡವು. ಹೀಗೆ ಕನ್ನಡದಲ್ಲಿ ಭಾಷಾಂತರಿತ ಕತೆಗಳು ಸಾಕಷ್ಟು ಪ್ರಮಾಣದಲ್ಲಿ ಪ್ರಕಟವಾಗತೊಡಗಿದವು.

ಐತಿಹಾಸಿಕವಾಗಿ ನೋಡಿದಾಗ ಮಂಗಳೂರಿನ ಪಂಜೆ ಮಂಗೇಶರಾಯರು ಕನ್ನಡದ ಆಧುನಿಕ 'ಸಣ್ಣಕತೆ'ಗೆ ಮೊದಲಿಗರಾಗಿದ್ದಾರೆ. ಪಂಜೆ ಮಂಗೇಶರಾಯರು 1900ರ 'ಸುವಾಸಿನಿ' ಪತ್ರಿಕೆಯ ಅಗಸ್ಟ್–ಸೆಪ್ಟಂಬರ್ ಸಂಚಿಕೆಯಲ್ಲಿ ಪ್ರಕಟಿಸಿದ 'ನನ್ನ ಚಿಕ್ಕತಾಯಿ' ಕತೆಯನ್ನು ಕನ್ನಡದ ಮೊದಲ ಕತೆ ಎಂದು ಗುರುತಿಸಲಾಗಿದೆ. ಪಂಜೆಯವರಿಗೆ ಹೊಸಕನ್ನಡದ ಮೊದಲ ಕತೆಗಾರರೆಂಬ ಮನ್ನಣೆಯನ್ನೂ ಕೊಡಲಾಗಿದೆ. ಸಂಖ್ಯೆಯ ದೃಷ್ಟಿಯಿಂದ ನೋಡಿದಾಗ ಇವರ ಕತೆಗಳು ಸ್ವಲ್ಪವಾಗಿವೆ; ಅವು ಸಣ್ಣಕತೆಯ ಸಾಹಿತ್ಯಿಕ ಲಕ್ಷಣಗಳನ್ನೆಲ್ಲ ಸಂಪೂರ್ಣವಾಗಿ ಒಳಗೊಂಡಿಲ್ಲ. ಅವಿನ್ನೂ

ಅನುಕರಣದ ಸ್ಥಿತಿಯಲ್ಲಿರುವ ಕತೆಗಳಾಗಿವೆ. ಕೆಲವು ಸಾರಿ ಇವು ಪಂಜೆಯವರ ವೈಯಕ್ತಿಕ ಅನುಭವಕಥನಗಳಾಗಿ ಮಾತ್ರ ಬರುತ್ತವೆ. ಆದರೂ ಪಂಜೆಯವರ ಸರಳವಾದ ಕಥನಶೈಲಿ ಈ ಕತೆಗಳ ರಂಜಕತೆಯನ್ನು ಇಂದಿಗೂ ಕಾಪಾಡಿಕೊಂಡು ಬಂದಿವೆ.

ಈ ರೀತಿಯ ಮೊದಲಿಗರಲ್ಲಿ ಇನ್ನೊಬ್ಬರೆಂದರೆ ಕೆರೂರ ವಾಸುದೇವಾಚಾರ್ಯರು. ಉತ್ತರ ಕರ್ನಾಟಕದಲ್ಲಿ ಸಾಹಿತ್ಯಿಕ ಚಳುವಳಿ, ಪತ್ರಿಕೆಗಳ ಮುಖಾಂತರವಾಗಿ ರಭಸದಿಂದ ನಡೆಯುತ್ತಿದ್ದ ಕಾಲಕ್ಕೆ ಕೆರೂರ ಅವರು 'ಸಚಿತ್ರಭಾರತ' ಮತ್ತು 'ಶುಭೋದಯದ' ಸಂಪಾದಕರಾಗಿ ಕೆಲಸ ಮಾಡಿದರು. ಅಲ್ಲದೇ ಕತೆಗಳ ಮೂಲಕ ಲಲಿತ ಸಾಹಿತ್ಯಕ್ಕೆ ಅನುಕೂಲವಾಗುವಂತೆ ತಮ್ಮ ಲೇಖನಿಯನ್ನು ಪಳಗಿಸಿದರು. ಪಂಜೆಯವರಿಗಿಂತ ಇವರು ಹೆಚ್ಚು ಕತೆಗಳನ್ನು ಬರೆದರು. ಅವುಗಳಲ್ಲಿ ಕೆಲವು ಐತಿಹಾಸಿಕವಾಗಿದ್ದು, ಕೆಲವು ಮಾತ್ರ ಸಾಮಾಜಿಕವಾಗಿವೆ. ಕೆಲವು ಪತ್ತೇದಾರಿ ಕತೆಗಳನ್ನೂ ಕಾಣಬಹುದು.

ಶ್ರೀನಿವಾಸರ ಕತೆಗಳನ್ನು ಕಾಣುವ ತನಕ 'ಸಚಿತ್ರಭಾರತ' ಹಾಗೂ 'ಸದ್ಬೋಧಚಂದ್ರಿಕೆ'ಯಂಥ ಪತ್ರಿಕೆಗಳಲ್ಲಿ ನಾವು ಸಣ್ಣ ಕತೆಗಳನ್ನು ಕಾಣಬೇಕಾಗಿದೆ. ಅವೆಲ್ಲ ಹೆಚ್ಚಾಗಿ ಅನುಕರಣದ ಬರಹಗಳಾಗಿವೆ. ಕತೆಗಳನ್ನು ಪ್ರಕಟಿಸುವುದಕ್ಕಾಗಿಯೇ ಮೀಸಲಾದ ಮಾಸಿಕ 'ಕಥಾಂಜಲಿ' 1929ರಲ್ಲಿ ಹುಟ್ಟಿಕೊಂಡಿತು. ಬೆಳಗಾವಿಯ 'ಒಂದಾಣೆ ಗ್ರಂಥಮಾಲೆ' ಆರಂಭವಾಗಿತ್ತು. ಈ ಗ್ರಂಥಮಾಲೆಯ ಮೂಲಕ ಅನೇಕ ಕತೆಗಾರರು ಕತಾ ಸಂಗ್ರಹಗಳನ್ನು ಪ್ರಕಟಿಸಿದರು. ಕಥೆಗಾಗಿಯೇ ಮೀಸಲಾದ 'ಕಥೆಗಾರ' (ಬೆಂಗಳೂರು) 'ಕಥಾಕುಂಜ' (ಬೆಳಗಾವಿ ಮಾಸಪತ್ರಿಕೆಗಳು ಆರಂಭವಾದದ್ದೂ ಗಮನಾರ್ಹ ಬೆಳವಣಿಗೆಯೇ.

ಆಧುನಿಕ ಕನ್ನಡ ಸಣ್ಣ ಕಥೆ ಎಂಬುದು ಕನ್ನಡಕ್ಕೆ ಹೊರಗಿನಿಂದ ಆಮದಾದ ಸರಕು. ದೇಶೀಯ ಭಾಷೆಗಳ ಅನುವಾದಗಳ ಮೂಲಕ ಕಥೆಗಳು ಕನ್ನಡಕ್ಕೆ ಬಂದಿದ್ದರೂ, ಹೊಸ ರೀತಿಯ ಹೊಸ ತಂತ್ರದ ಹೊಸ ಶೈಲಿಯ ಕಥೆಗೆ ಪ್ರೇರಣೆಯಾಗಿದ್ದು ಜನಸಾಮಾಜ್ಯರ ಮಟ್ಟಕ್ಕೆ ತಲುಪುವಂತೆ ಮಾಡಿದ್ದು ಇಂಗ್ಲಿಷ್ ಭಾಷೆಯ ಕಾರಣದಿಂದಲೇ. ಅಮೇರಿಕ, ರಷ್ಯ, ಪ್ರಾನ್ಸ್, ಜರ್ಮನಿ, ಇಟಲಿ ಇತ್ಯಾದಿ ರಾಷ್ಟ್ರಗಳ ಅನೇಕ ಭಾಷೆಗಳಲ್ಲಿ ಈ ಪ್ರಕಾರವನ್ನು ಕಂಡುಕೊಂಡಿದ್ದ ರೀತಿ ನಮಗೆ ಗೊತ್ತಾಗಿದ್ದು ಇಂಗ್ಲಿಷ್ ಭಾಷೆಯ ಮೂಲಕವೇ. ಹೀಗೆ ಕಥಾ ಪ್ರಪಂಚವನ್ನು ಪರಿಚಯ ಮಾಡಿಕೊಂಡ ಕನ್ನಡದ ಬರಹಗಾರರು ತಮ್ಮ ಭಾಷೆಯ, ಸಂಸ್ಕೃತಿಯ ಚೌಕಟ್ಟಿನ ಒಳಕ್ಕೆ ತಂದುಕೊಳ್ಳಲು ನಡೆಸಿದ ಪ್ರಯತ್ನದೊಂದಿಗೆ ಪ್ರಭಾವ, ಪ್ರೇರಣೆ, ಅನುಕರಣೆ, ಪುನರ್‌ಸೃಷ್ಟಿ ಈ ರೀತಿಯ ಎಲ್ಲ ಅಂಶಗಳೂ ಕಾಣಸಿಗುತ್ತವೆ.

ಬಡತನ, ಗ್ರಾಮೀಣ ಜೀವನದ ಚಿತ್ರಗಳು, ಕೆಳಸ್ತರದ ಬದುಕು ಇವನ್ನೆಲ್ಲ ಈ ಸಣ್ಣ ಕಥೆಗಳ ಮೂಲಕ ಹಿಡಿಯಲು ಕಥೆಗಾರರು ಯತ್ನಿಸಿದ್ದಾರೆ. ಅಲ್ಲದೇ ಕೆಳಸ್ತರದ ಬದುಕನ್ನು ಅವರದೇ ಭಾಷೆಯಲ್ಲಿ ಹಿಡಿದಿಡಲು ಕಥೆಗಾರರು ಪ್ರಯತ್ನಿಸಿದ್ದಾರೆ. ಶಿವರಾಮ ಕಾರಂತರ 'ಹೋಳಿಗೆ' ಬಡತನದ ಮುಖವನ್ನು ತೋರಿಸುತ್ತಲೇ, ಅದರ ಹಿಂದಿರುವ ಘೋರ ಚಿತ್ರಗಳನ್ನು ಕೊಡುತ್ತದೆ. ಗೋರೂರು ರಾಮಸ್ವಾಮಿ ಅಯ್ಯಂಗಾರರ 'ಗ್ರಾಮ ಪಂಚಾಯತಿಯ ಅಧ್ಯಕ್ಷ ಗೌಡರು' ಕತೆ ಗೂರೂರು ಅವರಿಗಿರುವ ಗ್ರಾಮೀಣ ಬದುಕಿನ ದಟ್ಟ ಅನುಭವವನ್ನು ತೋರಿಸುತ್ತದೆ. ಭಾರತಿಪ್ರಿಯರ 'ಮೋಚಿ' ಮತ್ತು 'ಟೇಂಗ್ಸೆ' ಗೋವಿಂದರಾಯರ 'ಗಂಗೆಯ ಗುತ್ತಿಗೆ' ಕೆಳಸ್ತರದ ಬದುಕಿಗೆ ಕೈಚಾಚಿದ ಕಥೆಗಳು. ಆ ಸ್ತರದ ಭಾಷೆಯನ್ನೇ ಹಿಡಿಯಲು ಎರಡೂ ಕಥೆಗಳು ಯತ್ನಿಸಿವೆ. ಇವೆರಡರಲ್ಲಿ ಹೆಚ್ಚು ಯಶಸ್ವಿಯಾಗಿರುವ ಕಥೆ 'ಗಂಗೆಯ ಗುತ್ತಿಗೆ' ಇವತ್ತಿಗೂ ಮಹತ್ವದ ಕಥೆಯಾಗಿದೆ. ಈ ಮಾಧ್ಯಮದ ಮೇಲೆ ಕಥೆಗಾರರಿಗಿರುವ

ನಿಯಂತ್ರಣ, ಆಡುಭಾಷೆಯ ಬಳಕೆ ಮತ್ತು ವಸ್ತುವನ್ನು ನಿರೂಪಿಸುವ ಅದ್ಭುತ ರೀತಿ ಇವೆಲ್ಲ ಈ ಕಥೆಯನ್ನು ಕನ್ನಡದ ಅಪರೂಪದ ಕಥೆಯನ್ನಾಗಿ ಮಾಡಿವೆ. ಈ ಕಾಲದ ಇನ್ನಷ್ಟು ವಿಶಿಷ್ಟವಾದ ಕಥೆಗಳನ್ನಿಲ್ಲಿ ಉಲ್ಲೇಖಿಸುವುದಾದರೆ, ಪೇಜಾವರ ಸದಾಶಿವರಾಯರ 'ಮುದುಕಿ', ನವರತ್ನ ರಾಮರಾವ್ ಅವರ 'ಲಕ್ಷ್ಮಣರಾಯನ ಭಾಗ್ಯ', ಆನಂದ ಅವರ 'ಹೆಂಡತಿಯ ಕಾಗದ' ಮುಂತಾದವನ್ನು ಹೆಸರಿಸಬಹುದಾಗಿದೆ.

ಅ.ನ.ಕೃಷ್ಣರಾಯರು ಮತ್ತು ಕೆ. ಶಿವರಾಮ ಕಾರಂತರು ಮುಖ್ಯವಾಗಿ ಕಾದಂಬರಿಕಾರರಾಗಿ ಕಂಡರೂ ಕಥಾ ಪ್ರಕಾರವು ಅವರನ್ನು ಆರಂಭದಲ್ಲಿ ಸೆಳೆದುಕೊಂಡಿರುವುದು ಸುಳ್ಳಲ್ಲ. ಇವರೂ ಕೂಡ ಆರಂಭದಲ್ಲಿ ಕತೆಗಳನ್ನು ಬರೆದಿದ್ದಾರೆ. ಕಡೆಂಗೋಡ್ಲು ಶಂಕರಭಟ್ಟರು ಕವಿಯಾಗಿ ಪ್ರಸಿದ್ಧರಾಗಿದ್ದರೂ ಮೂರು ಕಥಾ ಸಂಕಲನಗಳನ್ನು ಹೊರತಂದಿದ್ದಾರೆ. ಹೀಗೆಯೇ ಅಂದಿನ ಕಾಲದಲ್ಲಿ ಅನೇಕರ ಕಥೆಗಳು 'ಪ್ರಬುದ್ಧ ಕರ್ನಾಟಕ'ದಲ್ಲಿ ಪ್ರಕಟಗೊಂಡಿರುತ್ತವೆ. ಅವು ಅಂದಿನ ಕನ್ನಡ ಕಥಾಲೋಕಕ್ಕೆ ಬಹುದೊಡ್ಡ ಕೊಡುಗೆಗಳಾಗಿವೆ. ಅದರಲ್ಲಿ ಬಂದ ಎಸ್.ಜಿ. ಶಾಸ್ತ್ರಿಗಳ 'ಹಬ್ಬದ ಉಡುಗೊರೆ' ಹೆಚ್ಚಾಗಿ ಸಂಭಾಷಣೆಯ ರೂಪದಲ್ಲಿದೆ. ಹಬ್ಬಕ್ಕೆ ತಾಯಿ ತಾನು ತೆಗೆದುಕೊಳ್ಳಬೇಕಾದ ಸೀರೆಯನ್ನು ಕೊಳ್ಳದೇ ಮಗನ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದು ಪುಸ್ತಕಗಳನ್ನು ಕೊಂಡು ಉಡುಗೊರೆಯಾಗಿ ಕಳಿಸುತ್ತಾಳೆ. ಅದರಲ್ಲಿ ಬಂದ ಇನ್ನೊಂದು ಕಥೆ ಆನಂದರ 'ದೂರದ ಆಶೆ' ವರದಕ್ಷಿಣೆ ಸಮಸ್ಯೆಯ ಮೇಲೆ ಅಂದೇ ಬೆಳಕು ಚಲ್ಲುತ್ತದೆ. ಅದೇ 'ಪ್ರಬುದ್ಧ ಕರ್ನಾಟಕ'ದಲ್ಲಿ 1925–26 ರಲ್ಲಿ ಎ.ಆರ್. ಕೃಷ್ಣಶಾಸ್ತ್ರಿಗಳು (ಶ್ರೀಪತಿ) ಅನೇಕ ಕಥೆಗಳನ್ನು ಪ್ರಕಟಿಸಿದ್ದಾರೆ. ಹೀಗೆಯೇ ಇನ್ನೂ ಅನೇಕ ಕಥೆಗಾರರು ಇದೇ ಸಂದರ್ಭದಲ್ಲಿ ಅನೇಕ ಕಥೆಗಳನ್ನು ಬರೆದು ಪ್ರಕಟಿಸಿದ್ದಾರೆ.

ಈ ಎಲ್ಲ ಕತೆಗಾರರ ಮಧ್ಯದಿಂದಲೇ ಬಂದ ಮಾಸ್ತಿ ವೆಂಕಟೇಶ ಅಯ್ಯಂಗಾರರು ಮಾತ್ರ ತೀರ ಭಿನ್ನ ಕಥೆಗಾರರಾಗಿ ಕಾಣುತ್ತಾರೆ. ಸಣ್ಣ ಕತೆಗಳ ಕ್ಷೇತ್ರದಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದುಕೊಂಡಿರುವ ಶ್ರೀನಿವಾಸರದು (ಮಾಸ್ತಿ ವೆಂಕಟೇಶ ಅಯ್ಯಂಗಾರ) ಬಹಳ ದೊಡ್ಡ ಹೆಸರು. ಇವರ ಮೊದಲ ಕತೆ ಪ್ರಕಟವಾದ್ದು 1911ರಲ್ಲಿ, ಅನಂತರ ಅವರ ಅನೇಕ ಕತೆಗಳು ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಾ ಹೋದವು. 1920ರಲ್ಲಿ ಅವರ ಪ್ರಥಮ ಕವನ ಸಂಕಲನ 'ಕೆಲವು ಸಣ್ಣ ಕತೆಗಳು' ಪ್ರಟವಾಯಿತು. ಇದು ಕನ್ನಡದ ಮೊದಲ ಕಥಾ ಸಂಕಲನವಾಗಿದೆ. ಇದರ ಇನ್ನೊಂದು ಹಿರಿಮೆ ಎಂದರೆ ಕನ್ನಡ ಸಣ್ಣ ಕಥೆಗಳ ಪ್ರೌಢಿಮೆಯನ್ನು ಎತ್ತಿ ತೋರಿಸುತ್ತದೆ. ಮಾಸ್ತಿಯವರ ಎಲ್ಲ ಕಥೆಗಳು ಎಲ್ಲರಿಗಿಂತ ಭಿನ್ನವಾಗಿ ಸಣ್ಣಕತಾ ಪ್ರಕಾರದ ಅರ್ಥವಂತಿಕೆಯನ್ನು ಎತ್ತಿ ತೋರಿಸುತ್ತವೆ, ಅಷ್ಟೇ ಅಲ್ಲದೇ ಮುಂದಿನ ಕನ್ನಡದ ಕತೆಗಾರರಿಗೆ ಮಾರ್ಗದರ್ಶಿಯಾಗಿವೆ. ಹಾಗಾಗಿಯೇ ಇವರನ್ನು 'ಸಣ್ಣ ಕತೆಗಳ ಜನಕ' ಎನ್ನುವುದು. ಪ್ರಾರಂಭದಲ್ಲಿ ಮಾಸ್ತಿಯವರೂ ಎಲ್ಲರಂತೆಯೇ ಬರೆಯಲು ಪ್ರಾರಂಭಿಸಿದರೂ ಬಹುಬೇಗನೇ ಕನ್ನಡ ಸಣ್ಣಕಥಾಜಗತ್ತಿಗೊಂದು ಮಾದರಿಯಾದರು. ಉಳಿದವರಂತೆ ತಮ್ಮ ಕತೆಗಳಲ್ಲಿ ರಸಪ್ರಸಂಗಗಳನ್ನು ಹೇಳಿದರೂ ಅಲ್ಲಿಯೇ ಉಳಿಯುವುದಿಲ್ಲ. ಮಾಸ್ತಿಯವರ ಪ್ರಥಮ ಕಥಾಸಂಕಲನದಲ್ಲಿಯೇ ಬಂದ 'ರಂಗನ ಮದುವೆ', 'ರಂಗಪ್ಪನ ದೀಪಾವಳಿ' ಕತೆಗಳಲ್ಲಿಯ ಸರಳತೆ ಸೂಕ್ಷ್ಮ ಸಂವೇದನೆಯಂತ ಗುಣಗಳಿಂದ ಓದುಗರ ಗಮನಸೆಳೆಯುತ್ತವೆ. ಮಾಸ್ತಿಯವರ ಯಾವ ಕತೆಗಳಲ್ಲೂ ಉಳಿದವರಂತೆ ಕುಟುಕುವ ಗುಣ ಕಾಣಸಿಗುವುದಿಲ್ಲ. ಇದಕ್ಕೆ

ಅವರ ಮನೋಧರ್ಮವೂ ಕಾರಣವಿರಬಹುದು. ಆ ಕಾಲದ ಒತ್ತಡಗಳ ಪ್ರಭಾವಕ್ಕೆ ಒಳಗಾಗಿರುವ ಮಾಸ್ತಿಯವರು ಅಂದಿನ ಬಹಳಷ್ಟು ಕತೆಗಾರರು ವೇಶ್ಯೆಯರ ಬದುಕಿನ ಕಡೆಗೆ ಗಮನ ಹರಿಸಿ ಕತೆ ಕಟ್ಟುತ್ತಿದ್ದಂತೆ ಮಾಸ್ತಿಯವರೂ 'ಬೀದಿಯಲ್ಲಿ ಹೋಗುವ ನಾರಿ' ಕತೆಯಲ್ಲಿ ಅಂಥ ಪ್ರಯತ್ನ ಮಾಡಿದ್ದಾರೆಂಬುದಕ್ಕೆ ಸಾಕ್ಷಿಯಾಗಿದೆ. ಇಲ್ಲಿ ಮಾಸ್ತಿಯವರು ವೇಸ್ಯೆಯೊಬ್ಬಳ ಬದುಕನ್ನು ಗ್ರಹಿಸಲು ಪ್ರಯತ್ನಿಸಿದ್ದಾರೆ. ಅದರೊಂದಿಗೆ ಅಂದಿನ ಒತ್ತಡ ಮತ್ತು ಸಾಮಾಜಿಕ ವಿದ್ಯಮಾನಗಳಿಗೆ ಅವರ ಮನಸ್ಸು ತುಡಿದಿದ್ದುದರ ಪರಿಣಾಮವನ್ನು ಇನ್ನೆರಡು ಕತೆಗಳಲ್ಲಿ ಕಾಣುತ್ತೇವೆ. ಮತಾಂತರದ ಪಿಡುಗು ಮತ್ತು ಬ್ರಿಟೀಷರ ದೇಶ ಕೊಳ್ಳೆ ಹೊಡೆಯುವಿಕೆಯ ವಿಚಾರಗಳು ಮಾಸ್ತಿಯವರಲ್ಲಿ ತಲ್ಲಣವನ್ನುಂಟು ಮಾಡಿವೆ. ಅವರ ತಲ್ಲಣವನ್ನು 'ಇಲ್ಲಿಯ ತೀರ್ಪು' ಮತ್ತು 'ಮಸುಮತ್ತಿ' ಕತೆಗಳಲ್ಲಿ ಕಾಣುತ್ತದೆ.

ಆನಂದಕಂದ (ಬೆಟಗೇರಿ ಕೃಷ್ಣಶರ್ಮ), ಕೃಷ್ಣಕುಮಾರ ಕಲ್ಲೂರ, ಹ.ಪಿ.ಜೋಶಿ, ಗೋರುರು ರಾಮಸ್ವಾಮಿ ಅಯ್ಯಂಗಾರ, ಕೆ. ಅಶ್ವತ್ಥನಾರಾಯಣ, ಬಾಗಲೋಡಿ ದೇವರಾಯ, ಕೊರಡ್ಕಲ್ ಶ್ರೀನಿವಾಸ, ಸೇಡಿಯಾಪು ಕೃಷ್ಣಭಟ್ಟ, ನಿರಂಜನ, ಬಸವರಾಜ ಕಟ್ಟಿಮನಿ, ಚದುರಂಗ, ಬಾಳಾಸಾಹೇಬ ಲೋಕಾಪುರ, ವೈದೇಹಿ, ಅನುಪಮಾ ನಿರಂಜನ ಹೀಗೆ ನೂರಾರು ಜನ ಕನ್ನಡ ಸಣ್ಣಕತಾ ಸಾಹಿತ್ಯಕ್ಕೆ ತಮ್ಮದೇ ಆದ ಅನೇಕ ಕೊಡುಗೆಯನ್ನು ನೀಡಿದ್ದಾರೆ. ಮಾಸ್ತಿಯವರ ನಂತರ ಬಂದ ಹಲವು ಕತೆಗಾರರು ಆಂಶಿಕವಾಗಿಯೋ, ಪೂರ್ಣವಾಗಿಯೋ ಆವರ ಪ್ರಭಾವಕ್ಕೆ ಒಳಗಾದವರೇ ಇದ್ದಾರೆ. ಮುಂದೆ ಪ್ರಗತಿಶೀಲರು, ನವ್ಯ ಕಾಲದ ಕತೆಗಾರರು ಅನೇಕ ಹೊಸ ಹೊಸ ಶೈಲಿಯಲ್ಲಿ ಮತ್ತಷ್ಟು ವಿವಿಧ ವಿಷಯಗಳನ್ನಾಯ್ದು ಕತೆಗಳನ್ನು ಬರೆದಿದ್ದಾರೆ.

ಸಣ್ಣಕತೆಯ ತಂತ್ರ, ವ್ಯಾಪ್ತಿ, ಬರವಣಿಗೆಯ ರೀತಿ, ಅದರ ಒಟ್ಟಂದದ ಪರಿಣಾಮ ಹಾಗೂ ಅದು ತೊಡಬಹುದಾದ ಅನೇಕ ರೂಪಗಳು, ಇವುಗಳ ಬಗ್ಗೆ ವಿಮರ್ಶಕರು ಅಭ್ಯಾಸಪೂರ್ಣವಾದ ಲೇಖನಗಳನ್ನು ಬರೆದು ಅದರ ಬರವಣಿಗೆ ತಿಳಿದುಕೊಂಡಷ್ಟು ಸುಲಭವಾಗಿಲ್ಲವೆಂದು ಮನವರಿಕೆ ಮಾಡಿಕೊಟ್ಟಿದ್ದರೂ, ಇಂದು ಸಣ್ಣಕತೆಯ ಬರವಣಿಗೆ ತೀರ ಹಗುರವಾಗಿಬಿಟ್ಟಿದೆ. ಮೊದಮೊದಲು ಈ ಹೊಸ ಸಾಹಿತ್ಯ–ಪ್ರಕಾರ ಸಣ್ಣಕತೆಯ ಬಗೆಗೆ ಕನ್ನಡದ ಲೇಖಕರು ಬಹಳ ಗಂಭೀರವಾಗಿ ಪರಿಗಣಿಸಿದ್ದರು ಮತ್ತು ಬಹಳ ಉತ್ಸಾಹವನ್ನೂ ತಳೆದಿದ್ದರು. ಈ ಗಾಂಭೀರ್ಯ ಮತ್ತು ಉತ್ಸಾಹವು ಆಗಿನ ಕಾಲದ ಎಷ್ಟೋ ಸಣ್ಣಕತೆಗಳಲ್ಲಿಯ ಉತ್ತಮಿಕೆಗೆ ಕಾರಣವಾಗಿದೆ.

ಒಟ್ಟಾರೆ ಹೊಸಗನ್ನಡದಲ್ಲಿ ಈವರೆಗೆ ಬಂದಿರುವ ಕನ್ನಡ ಸಣ್ಣ ಕತೆಗಳ ಸಂಖ್ಯೆಯನ್ನು ಹೇಳುವುದೂ ಕೂಡ ಪ್ರಯಾಸದ ಕೆಲಸವಾಗಿದೆ. ದಿನಪತ್ರಿಕೆ, ವಾರಪತ್ರಿಕೆ, ಹಾಗೂ ಮಾಸಿಕಗಳಲ್ಲಿ ದಿನಕ್ಕೊಂದು ಬಗೆಯಲ್ಲಿ ಹೊಸ ಹೊಸ ಶೈಲಿಯಲ್ಲಿ ಸಣ್ಣ ಕತೆಗಳು ಹುಟ್ಟುತ್ತಲೇ ಇವೆ. ಇವುಗಳಲ್ಲಿ ಕೆಲವು ಪತ್ರಿಕೆಗಳ ಪುಟ ತುಂಬಲೋ ಕೆಲವರು ಸಾಹಿತಿಯಾಗಬೇಕೆಂಬ ಅಡ್ಡ ಪ್ರವೃತ್ತಿಯಿಂದ ಹುಟ್ಟಿಕೊಂಡವುಗಳಾಗಿವೆ. ಈಚಿನ ವರ್ಷಗಳಲ್ಲಿ ದೀಪಾವಳಿ, ಯುಗಾದಿ ಹೀಗೆ ವಿವಿಧ ಸಂದರ್ಭಗಳಲ್ಲಿ ಅನ್ಯಾನ್ಯ ಪತ್ರಿಕೆಗಳು ನಡೆಸುವ ಕಥಾಸ್ಪರ್ಧೆಗಳಲ್ಲಿ ಬಹುಮಾನ ಪಡೆಯುವ ಕಥೆಗಳ ಬಗ್ಗೆ ಕೂಡ ವಿಮರ್ಶಕರು ಬಹಳ ಉತ್ಸಾಹದ ಮಾತುಗಳನ್ನು ಹೇಳುತ್ತಿಲ್ಲ ಎನ್ನುವುದು ಗಮನಾರ್ಹ ಸಂಗತಿಯಾಗಿದೆ. ಈಚಿನ ಕಥೆಗಳು ನಿರೀಕ್ಷಿತ ಮಟ್ಟದಲ್ಲಿ ಬರುತ್ತಿಲ್ಲ ಎಂಬುದನ್ನು ಇದು ತೋರಿಸುತ್ತದೆ.

❖❖❖

# ಅಡಿಗರ ಕಾವ್ಯದಲ್ಲಿ ಹೊಸತನ್ನು ಕಟ್ಟುವ ಬಗೆ

**ಡಾ ಜಯಪ್ಪ ಎನ್.**
ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಚಾಮರಾಜಪೇಟೆ, ಬೆಂಗಳೂರು–26

ಆಧುನಿಕ ಕನ್ನಡ ಸಾಹಿತ್ಯ ಹಲವು ಮಹತ್ವದ ಪ್ರಕಾರಗಳನ್ನು ಮತ್ತು ಮುಖ್ಯವಾಗಿ ಬಹುಸಂಖ್ಯೆಯ ಸಾಹಿತಿಗಳನ್ನು ರೂಪಿಸಿತೆನ್ನುವುದು ಇತಿಹಾಸ. ಅಂತಹ ಕಾವ್ಯ ಪರಂಪರೆಯಲ್ಲಿ ತಮ್ಮ ಸೃಜನಶೀಲ ಪ್ರತಿಭೆಯಿಂದ, ವ್ಯಕ್ತಿತ್ವದಿಂದ, ಆಳವಾದ ಅಧ್ಯಯನ ಮತ್ತು ಕ್ರಿಯಾಶೀಲತೆಯಿಂದ, ಸಾಮಾಜಿಕ ಕಳಕಳಿಯಿಂದ ಸಾಹಿತ್ಯಕ್ಕೆ ಮಹತ್ವದ ಮೈಲುಗಲ್ಲುಗಳಾದ ಸಾಹಿತಿಗಳು ಕೆಲವರು. ಅಂತಹ ಸಾಹಿತಿಗಳಲ್ಲಿ ಒಬ್ಬರು ಗೋಪಾಲ ಕೃಷ್ಣ ಅಡಿಗರು. ಕನ್ನಡ ಕಾವ್ಯ ಕೃಷಿಯಲ್ಲಿ ಆಧುನಿಕ ಸಾಹಿತ್ಯ ಪರಂಪರೆಯ ಮೊದಲ ಕಾವ್ಯದ ಉತ್ಕೃಷ್ಟ ಘಟ್ಟದಲ್ಲಿ ಕಾಣಿಸಿಕೊಂಡ ಅಡಿಗರು, ಕಾವ್ಯದ ಕಾಲದ ಬದಲಾವಣೆಯ ಅರಿವಿನೊಂದಿಗೆ ಕ್ರಿಯಾಶೀಲರಾಗಿದ್ದುಕೊಂಡು ಕನ್ನಡ ಸಾಹಿತ್ಯದ ಭಿನ್ನ ಮಾದರಿಯನ್ನು ಹಾಕಿಕೊಡುವ ತುರ್ತನ್ನು ಕಂಡುಕೊಂಡವರು. ಅದರಿಂದಲೇ ಅಡಿಗರು ಗಟ್ಟಿಯಾಗಿ ಪ್ರತಿಪಾದಿಸಿ ನವ್ಯ ಕಾವ್ಯದ ವಕ್ತಾರರೂ ಆದರು.

ತಮ್ಮ ಭಾವತರಂಗ ಕೃತಿಯ ಮೂಲಕ ಕನ್ನಡ ಸಾಹಿತ್ಯಕ್ಕೆ ಕಾಲಿಟ್ಟ ಅಡಿಗರು ಸರಿ ಸುಮಾರು ಐವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಸಮಾಜಮುಖಿ ಬರಹಗಾರರಾಗಿ ಕಾಣಿಸಿಕೊಂಡಿದ್ದಾರೆ. ಇವರು ರಚಿಸಿರುವ 'ಭಾವತರಂಗ' ದಿಂದ 'ಬಾ ಇತ್ತ ಇತ್ತ' ಎಂಬ ಕವನ ಸಂಕಲನದವರೆಗೂ ಸಾಮಾಜಿಕ ಕಳಕಳಿ ಕಾಣಿಸುತ್ತದೆ. ಮಾನವನ ದು:ಖ ದುಮ್ಮಾನ, ತುಡಿತ, ದುಡಿತ, ಜಾತೀಯತೆ, ಮಾನ–ಅವಮಾನ, ಸಾಮರ್ಥ್ಯ–ಅಸಮರ್ಥ್ಯ ಇತ್ಯಾದಿಗಳನ್ನು ಎತ್ತಿಹಿಡಿಯುವ ಸಾಹಿತ್ಯವಾಗಿದೆ.

12 ಕವನ ಸಂಕಲನಗಳನ್ನು ಪ್ರಕಟಿಸಿದ ಅಡಿಗರು ತಮ್ಮ ಕಾಲಕ್ಕೆ ಸ್ಪಂದಿಸಿದ ಬಗೆ ಅನನ್ಯವಾಗಿದೆ. ಅಡಿಗರ ಎರಡನೇ ಕವನ ಸಂಕಲನ 'ಕಟ್ಟುವೆವು ನಾವು' 1948 ರಲ್ಲಿ ರಚನೆಯಾಗಿದ್ದು ಸಮಾಜವಾದದ ತತ್ವ, ದೀನದಲಿತರ, ಕಾರ್ಮಿಕರ, ರೈತರ ಉದ್ದಾರದ ಹಂಬಲ, ಜಾತಿ ಮತ ತೊಡೆಯುವ, ಸಮಾನತೆಯ ಸಾಮರಸ್ಯದ ಸಮಾಜ ಕಟ್ಟುವ ಛಲ, ಅದರ ವಿರೋಧಿಗಳ ಬಗ್ಗೆ ಆವೇಶ, ಹೊಸ ಸಮಾಜ ಕಟ್ಟುವ ಕನಸು, ರಾಷ್ಟ್ರ ಸ್ವಾತಂತ್ರ ಪಡೆದ ನೆಲಗಟ್ಟಿನಲ್ಲಿ ಮುಂದಿನ ಸಮಾಜಿಕ ಕಳಕಳಿಯ ದೂರದೃಷ್ಟಿ ಈ ಕವನದಲ್ಲಿ ವ್ಯಕ್ತವಾಗಿದೆ,

'ಕಟ್ಟುವೆವು ನಾವು" ಕವನದಲ್ಲಿ ನಾನೂ, ನನ್ನ ಎಂಬುದಿಲ್ಲ. ನಾವು ಎಂಬುದರ ಕಡೆಗಿನ ಸಮಾಜ ಕೇಂದ್ರಿತ ಒಲವಿದೆ. ಸಾಹಿತ್ಯ ಸೃಜಿಸುವ ಕಸುಬಿನಲ್ಲಿ ಅಡಿಗರು ತಮ್ಮ ಕಾವ್ಯ, ಸಮಾಜ ಹಾಗೂ ವ್ಯಕ್ತಿಯ ಸಮಗ್ರ ದರ್ಶನ ಸಾಧ್ಯತೆಯ ಬಂಧವಾಗಿ ರೂಪುಗೊಳ್ಳಬೇಕೆಂದು ಬಯಸಿದವರು. ಸಾಹಿತ್ಯವು ಸಮಾಜ ಕೇಂದ್ರಿತವಾದಾಗ ಅದಕ್ಕೆ ಮೌಲ್ಯವಿದೆ. ಅಡಿಗರು ನವ್ಯ ಕವಿಯಾದರೂ ಸಮಾಜಕೇಂದ್ರಿತ ಕವನಗಳನ್ನೂ ಬರೆದರು.

ಅಡಿಗರ ಆರಂಭದ ಕವನಗಳಲ್ಲಿ ಆದರ್ಶ, ಕನಸುಗಾರಿಕೆಯ ರಮ್ಯ ಪರಿಕಲ್ಪನೆಗಳ ಭಾವ ಇದೆ. ಅಡಿಗರ ಮೊದಲ ಹಂತದ ಕವನಗಳು ನವೋದಯ ಶೈಲಿಯಲ್ಲಿದ್ದರೂ ಪ್ರಗತಿಶೀಲ ಸಾಹಿತ್ಯವನ್ನು ಅರಗಿಸಿಕೊಂಡದ್ದಾಗಿದೆ ಎನ್ನುವ ಲಕ್ಷ್ಮೀನಾರಾಯಣ ಭಟ್ಟರ ಮಾತುಗಳನ್ನು ಇಲ್ಲಿ ಸ್ಮರಿಸಬಹುದು. ಇಲ್ಲಿಯ ಕವಿತೆಗಳು ಸಹ ನಿರೀಕ್ಷೆಯ, ಹೊಸತನದ ಬದುಕಿನ, ವ್ಯಕ್ತಿತ್ವ ನಿರ್ಮಾಣದ, ನಾಡು, ನುಡಿ, ಸಮಾಜ ಮೊದಲಾದ ಸಂಗತಿಗಳನ್ನು ಕುರಿತಾದ ಆದರ್ಶದ ಕನವರಿಕೆಗಳನ್ನು ಹೊಂದಿವೆ. ಅಂದರೆ, ಸಮಾಜ, ದೇಶ, ಸಮುದಾಯದ ಆಶಯಗಳಲ್ಲಿ ಪ್ರಧಾನ ನೆಲೆಯಲ್ಲಿ ಕಾಣಿಸುತ್ತದೆ. 1948ರಲ್ಲಿ ಪ್ರಕಟವಾದ ಕಟ್ಟುವೆವು ನಾವು ಸಂಕಲನದಲ್ಲಿ ಮೂಡಿಬಂದಿರುವ ಒಟ್ಟು 36 ಬಿಡಿ–ಬಿಡಿ ಕವಿತೆಗಳಲ್ಲಿ ಸದಾಶಯದ, ಸಮುದಾಯದ ಪರವಾದ ಕಳಕಳಿಯನ್ನು ಕಾಣಬಹುದಾಗಿದೆ.

ಈ ಸಂಕಲನಕ್ಕೆ ಕನ್ನಡದ ಹಿರಿಯ ಕವಿ ಪು.ತಿ.ನ. ಅವರು ಮುನ್ನುಡಿಯ ಮಾತುಗಳನ್ನು ಹೀಗೆ ಬರೆಯುತ್ತಾರೆ: ವಿಅನುಭವಗಳ ನೈಜತೆ ಮತ್ತು ತೀವ್ರತೆ, ಭಾವಗಳ ನಾವೀನ್ಯತೆ, ಶಬ್ದಗಳ ಸೌಂದರ್ಯ, ಪದಗಳ ಸಾರ್ಥಕ್ಯ ಶೈಲಿಯ ಬಂಧುರತೆ ಮತ್ತು ಛಂದಸ್ಸಿನ ಅರ್ಥೋಚಿತ ಸ್ವಾಚ್ಛಂದ್ಯ, ಈ ಎಲ್ಲಾ ಗುಣಗಳನ್ನು ಹೊಂದಿ ಜೀವಕಳೆಯಿಂದ ಕಳಕಳಿಸುವ ಅನೇಕ ಪದ್ಯಗಳನ್ನು ಈ ಸಂಕಲನದಲ್ಲಿ ಕಾಣಬಹುದು." ಅಂದಿನ ಕುವೆಂಪು ಮತ್ತು ಬೇಂದ್ರೆ ಅವರ ಪ್ರಭಾವದಿಂದ ತಪ್ಪಿಸಿಕೊಂಡು ಬರೆಯುವುದು ಎಷ್ಟು ಸವಾಲಿನ ಸಂಗತಿಯೆಂದು ಅವರು ಪ್ರಸ್ತಾಪಿಸುತ್ತಾರೆ.

ಈ ಕವನದ ಮೊದಲನೆಯ ಸಾಲು ವಿಹೊಸನಾಡನ್ನು, ರಸದ ಬೀಡನ್ನು ಕಟ್ಟುವೆವುಹಿ ಎನ್ನುವ ಧ್ವನಿಯಲ್ಲಿ ಸಮುದಾಯದ ಬಹುಜನರ ಶಕ್ತಿ ಮತ್ತು ಆದರ್ಶದ ಅರ್ಥವನ್ನು ಪ್ರಸ್ತಾಪಿಸುತ್ತಿದೆ. ನಾಡು ಕಟ್ಟುವ ಕನಸಿನಲ್ಲಿ ಜನರ ಶಕ್ತಿ, ಉತ್ಸಾಹ, ಮತ್ತು ಚೈತನ್ಯಗಳೆಲ್ಲಾ ನಿರೂಪಿಸಲ್ಪಡುತ್ತವೆ.

ತಮ್ಮ ಶಕ್ತಿ, ಚೈತನ್ಯ, ಮತ್ತು ವಯಸ್ಸು ಕಳೆದುಹೋಗುವ ಮೊದಲು ಹೊಸದನ್ನು ಕಟ್ಟಬೇಕು ಎನ್ನುವುದು, ಕಾಲದ ಮಿತಿಯನ್ನು ಮತ್ತು ನಾಡಿನ ಅಜರಾಮರತ್ವವನ್ನು ಪ್ರತಿಪಾದಿಸುತ್ತಿದೆ. ಈ ಮೂಲಕ ಕವಿತೆ ಯುವಕರನ್ನು ಸಹ ಪ್ರತಿನಿಧಿಸುತ್ತಿದೆ. ಸಾಧನೆಯ ಹಾದಿಯಲ್ಲಿ ಕನಸು, ಬಯಕೆಗಳೆಲ್ಲವೂ ಇಲ್ಲಿ ಗುರುತಿಸಲ್ಪಡುತ್ತವೆ, ಜೊತೆಗೆ ಆದರ್ಶನಾಡನ್ನು ಕಟ್ಟಲು ಇರುವ ತೊಡಕುಗಳು ಮತ್ತು ಆತಂಕಗಳ ಬಗೆಗಿನ ಅರಿವೂ ಇದೆ. ಜಾತಿ–ಮತ–ಭೇದಗಳಂತಹ ಸಮಸ್ಯೆಗಳು ರಾಕ್ಷಸವತಾರವಾಗಿರುವಾಗ, ಅದನ್ನು ಮೀರಿ, ನಾಶಮಾಡಿ ಸಾಧಿಸುವ ತಾರುಣ್ಯದ ಸಂಕಲ್ಪ ಇಲ್ಲಿ ಸ್ಥಾಯಿಭಾವವಾಗಿ ಕಾಣಿಸುತ್ತದೆ.

**"ಕೋಟೆ ಗೋಡೆಗೆ ನಮ್ಮ ಹೆಣಗಳೇ ಮೆಟ್ಟಿಲು,**
**ನಮ್ಮ ಸಾವೇ, ನೋವೇ ಹೊಸನಾಡು ತೊಟ್ಟಿಲು"**

ಎನ್ನುವ ತೀವ್ರ ತೀರ್ಮಾನವು ಅದರ ಅನಿವಾರ್ಯತೆಯನ್ನು ಸಹ ಸ್ಪಷ್ಟಪಡಿಸುತ್ತಿದೆ. ಸಾವನ್ನು ಮೀರಿ ನಾಡು ಕಟ್ಟುವುದು, ಮನುಷ್ಯನಿಗಿಂತ ನಾಡು ದೊಡ್ಡದಾಗಬೇಕಾದ ತುರ್ತನ್ನು ಪ್ರತಿಪಾದಿಸುತ್ತದೆ. ಕವಿತೆ ಆವೇಶದ ಜೊತೆಗೆ ನಾಡಿನ ದುರಂತಕ್ಕೆ ಕಾರಣಗಳನ್ನು ಹುಡುಕುತ್ತದೆ. ಬದುಕಿನ ಅಸ್ತಿತ್ವದ ಹೋರಾಟವನ್ನು, ಅಸಮಾನತೆಯ ಅನ್ಯಾಯವನ್ನು, ಆ ಕಾರಣಕ್ಕೆ ಮಾನವೀಯತೆ, ಪ್ರೀತಿ, ಮತ್ತು ಸಂಸ್ಕೃತಿಯ ಅರ್ಥಗಳೆಲ್ಲ ಕರಗಿಹೋದ ವಿಪರ್ಯಾಸವನ್ನು ಗುರುತಿಸಲಾಗಿದೆ. ಹಾಗಾಗಿ ಸಾಮರಸ್ಯದ ಸಮಾಜ ನಿರ್ಮಾಣವೇ ಇಲ್ಲಿನ ಕನಸಾಗಿದೆ.

**"ಸಾಮರಸ್ಯದ ಸಾಮಗಾನ ಲಹರಿಯ ಮೇಲೆ**

**ತೇಲಿಬರಲಿದೆ ನೋಡು ನಮ್ಮ ನಾಡು"**

ಎನ್ನುವುದು ಗುರಿ ಮತ್ತು ಆದರ್ಶದ ಕಲ್ಪನೆ. ಅಂತಹ ಆಶಯಕ್ಕೆ ಎದುರಾಗುವ ಯಾವುದೇ ತೊಡಕುಗಳಾದರೂ ಎದುರಿಸಲು ಸಜ್ಜಾಗುವ ಆತ್ಮಸ್ಥೈರ್ಯವನ್ನು ಇಲ್ಲಿ ಗುರುತಿಸಬಹುದು. ಕವಿತೆ ಆದರ್ಶದ ಕನಸಿನ ಹಲವು ಆಯಾಮಗಳನ್ನು ಹೊಂದಿರುವಂತೆ ತೋರುತ್ತದೆ.

ಭಾವುಕ ಸ್ಥಿತಿಯಂತೆ ತೋರಿದ ಈ ಕವಿತೆಯು ಅಂದಿನ ಅನಿವಾರ್ಯತೆಯನ್ನು ವ್ಯಕ್ತಪಡಿಸುತ್ತದೆ. ಮನುಷ್ಯನಿಗಿಂತ ನಾಡು ಮತ್ತು ನುಡಿ ಮುಖ್ಯವಾಗಲೇಬೇಕಾದ ಸತ್ಯವನ್ನು ಕವಿತೆ ಪ್ರಸ್ತಾಪಿಸುತ್ತದೆ. ನವೋದಯ ಮತ್ತು ಪ್ರಗತಿಶೀಲ ತತ್ವಗಳ ಹಿನ್ನೆಲೆಯಲ್ಲಿ ನಾಡಿನ ಅಭಿಮಾನದ ಉತ್ಕರ್ಷದಲ್ಲಿ, ಸಮುದಾಯದ ಹಿತದ ನಿರೀಕ್ಷೆಯಲ್ಲಿ ಈ ಕವಿತೆಯನ್ನು ಪರಿಭಾವಿಸಬಹುದಾಗಿದೆ. ಒಟ್ಟಿನಲ್ಲಿ, ಕವಿತೆಯ ನಾಡು ಕಟ್ಟುವ ಕಾರ್ಯಕಲ್ಪನೆಯನ್ನು ಪರಿಭಾವಿಸಿಕೊಳ್ಳುವಂತಹ ಅಂಶಗಳು ಆಶಾದಾಯಕವಾಗಿವೆ. ವಿನಾವು ಮನುಜರುಹಿ ಎನ್ನುವ ವಿಶ್ವ ಮಾನವತೆಯ ಅರ್ಥವೇ ಇಲ್ಲಿ ಪ್ರತಿಧ್ವನಿಸುತ್ತಿದೆ, ಮತ್ತು ಜಾತಿ-ಮತ-ಕುಲಗಳನ್ನು ಒಂದೇ ಮಾಡಿಸುವ ಗಂಭೀರ ಪ್ರಯತ್ನಕ್ಕೂ ಕವಿತೆ ವಿಸ್ತರಿಸುತ್ತಿದೆ. ತನ್ಮೂಲಕ ಹೊಸ ಬಾಳಿನ ಸಮಾನತೆಯ ಸಮರಸವನ್ನು ಸಾಧಿಸಿ, ನವ ವಿಧಾತರಾಗುವ ಕನಸನ್ನು ಕವಿತೆ ಸ್ಥಾಯಿ ಮಾಡಿಕೊಂಡಿದೆ.

ಇತರರ ಟೀಕೆಗಳಿಗೆ ಅಥವಾ ಮಾತುಗಳಿಗೆ ಪಕ್ಕಾಗದಂತೆ, ಹಾಗೆಯೇ ಅಂಜದಂತೆ ಬದುಕಬೇಕಾದಾಗ, ತಾನೇ ತನ್ನೊಳಗೆ ಪರಿಶುದ್ಧವಾಗುವ ಅನಿವಾರ್ಯತೆಯನ್ನು ಕವಿತೆಯ ಸಾಲುಗಳು ಪ್ರಸ್ತಾಪಿಸುತ್ತವೆ.

**"ವಿಕಟನೆಂದರನ್ಯರು ಜರೆದರು ಬೆದರದೆ,**

**ಸುಖಸಾಧನೆಗೆ ಸಿದ್ಧನಾಗು."**

ಇಂತಹ ನಿರ್ಲಿಪ್ತತೆಯನ್ನು ಈ ಪರಿಸರದ ಜಗತ್ತಿನ ಸಂದರ್ಭದಲ್ಲಿ ಬೆಳೆಸಿಕೊಳ್ಳಲೇಬೇಕಾದ ಅನಿವಾರ್ಯತೆಯನ್ನು ಕವಿತೆಯಲ್ಲಿ ಕಾಣಬಹುದು. ಇಂತಹ ಮನಸ್ಸು, ಭಾವನೆಗಳ ಅರ್ಥದಲ್ಲಿ, ಕವಿತೆಯು ಪರಿಶುದ್ಧವಾದ, ನಿಷ್ಕಲ್ಮಶವಾದ ಹೃದಯವನ್ನು ಕುರಿತು ಪ್ರಸ್ತಾಪಿಸುತ್ತದೆ. ಹಾಗೆ ಪರಿಶುದ್ಧವಾದ ಭಾವನೆಗಳಿದ್ದರೆ, ಅದು ಆನಂದದ ಅನುಭೂತಿಯ ಪರಮಾವಧಿಯಾಗಿ, ದೃಷ್ಟಿಯಂತೆ ಸೃಷ್ಟಿಯನ್ನೆಬಹುದಾದ ಸಾರ್ಥಕತೆಯಾಗುತ್ತದೆ. ತನ್ಮೂಲಕ ಇಡೀ ಜಗತ್ತು ಸುಂದರವಾಗಿ ಕಾಣಿಸುತ್ತಾ, ಬದುಕಿನ ಬಗೆಗಿನ ಹೆಮ್ಮೆಯನ್ನು ಪ್ರತಿನಿಧಿಸುವಂತಾಗುತ್ತದೆ ಎನ್ನುವುದನ್ನು ಕವಿತೆಯ ಒಟ್ಟಾರೆ ಅರ್ಥವಾಗಿ ಗ್ರಹಿಸಬಹುದು.

ಕವಿತೆ ಮನುಷ್ಯನ ಮೌಲ್ಯಪರವಾದ ಭಾವನೆಗಳನ್ನು, ಸತ್ವಯುತವಾದ ಆಲೋಚನೆಗಳನ್ನು ಪ್ರೇರೇಪಿಸುತ್ತಲೇ, ಅದರೊಂದಿಗೆ ಮೌಲ್ಯಯುತವೂ, ಪರಿಪೂರ್ಣವೂ ಆದ ಸಮಾಜವನ್ನು ನಿರ್ಮಿಸಬಹುದಾದ ಸಾಧ್ಯತೆಯನ್ನು ಕುರಿತು ಗಂಭೀರವಾಗಿ ಆಲೋಚಿಸುತ್ತದೆ. ಒಂದು ಹೊಸ ಸಮಾಜದ, ಹೊಸ ಆಶಯದ ಆದರ್ಶರಾಜ್ಯದ ನಿರ್ಮಾಣದ ಕನಸು ಅಂದಿನ ಅವಶ್ಯಕತೆಯಲ್ಲಿ ಒಂದಾಗಿತ್ತು. ಅದರಲ್ಲಿ ಕಾಣುವ ನಾಡು-ನುಡಿಯ ಚಿಂತನೆ ಕೂಡ ಸಮಾಜದ ಕಳಕಳಿಯೆ ಹೌದು.

ಇದು ಈಗಾಗಲೇ ನಾವು ಗಮನಿಸಿದಂತೆ, ಆದರ್ಶದ ಆಶಯಗಳ ಮಿತಿಯಲ್ಲಿ

ಮಾತ್ರ ಪ್ರಸ್ಥಾಪವಾಗುವುದಿಲ್ಲ; ಬದಲಾಗಿ ಅಂತಹ ಒಂದು ಸರ್ವೋದಯದ ಬದುಕಿನ ಅರ್ಥ, ಸಾರ್ಥಕತೆ, ಮತ್ತು ಸಾಧ್ಯತೆಗಳನ್ನು ಕುರಿತು ಸಹ ಗಂಭೀರವಾದ ಚಿಂತನೆಯನ್ನು ನಡೆಸುತ್ತದೆ. ಹೊಸಗನ್ನಡ ಸಾಹಿತ್ಯದ ಸಂಕ್ರಮಣ ಕಾಲಘಟ್ಟದಲ್ಲಿ ಕಾಣಿಸಿಕೊಂಡ ಈ ಕವನ ಸಂಕಲನ, ಸಮಕಾಲೀನ ಸವಾಲುಗಳು ಮತ್ತು ಸಾಧ್ಯತೆಗಳನ್ನು ಗುರುತಿಸಿತ್ತು.

**ಪರಾಮರ್ಶನ ಗ್ರಂಥಗಳು**


1) ಕಟ್ಟುವೆವು ನಾವು ಎಂ ಗೋಪಾಲಕೃಷ್ಣ ಅಡಿಗರು. ಸಪ್ನ ಬುಕ್ ಹೌಸ್, ಬೆಂಗಳೂರು,1999

2) ಸಮಗ್ರ ಕಾವ್ಯ (ಪೂರ್ಣ ಸಂಪುಟ), ಸಪ್ನ ಬುಕ್ ಹೌಸ್, ಬೆಂಗಳೂರು, 1999

3) ಅನನ್ಯ (ಸಂ) ಪ್ರೊ. ಲಕ್ಷ್ಮೀನಾರಾಯಣ ಭಟ್ಟ, ಬೆಂಗಳೂರು, 1997


❖❖❖


## Form IV

Statement about ownership and other particulars about
CHINTHANA BAYALU (Quarterly)

| | | | |
|---|---|---|---|
| 1. | Place of Publication | : | Bantwal, Dakshina Kannada |
| 2. | Periodicity of its publication | : | Quarterly |
| 3. | Printers Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 4. | Publishers Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 5. | Editors Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 6. | Names and address of individuals who own the newspaper and partners or sharesholders holding more than one percent of the total capital | : | No other shareholders |

I, Reshma G. Bhat, hereby declare that the particulars given above are true to the best of my knowledge and belief.

Date: 1 January 2025

**Reshma G. Bhat**
(Publisher)

# ಮೈಮನಗಳ ಸುಳಿಯೊಳಗೆ ಸಿಲುಕಿದ 'ಶಿಖಂಡಿ'ಯ ಜೀವಭಾವದ ಬಿಡುಗಡೆಯ ಕಥನ

**ಡಾ. ಮೈತ್ರಿ ಭಟ್**
ಸಹಾಯಕ ಪ್ರಾಧ್ಯಾಪಕಿ, ಕನ್ನಡ ವಿಭಾಗ, ಸಂತ ಫಿಲೋಮಿನಾ ಕಾಲೇಜು
ಫಿಲೋನಗರ, ದರ್ಬೆ, ಪುತ್ತೂರು – 574 202

ಪಾಶ್ಚಾತ್ಯ ಮನೋವಿಜ್ಞಾನಿ ಸಿ.ಜೆ. ಯೂಂಗ್ ಮಾನವನ ವ್ಯಕ್ತಿತ್ವದ ವಿವರಗಳನ್ನು ವಿಶ್ಲೇಷಿಸುತ್ತಾ 'ಅನಿಮಾ' ಮತ್ತು 'ಅನಿಮಸ್' ಎಂಬ ವಿಚಾರಗಳನ್ನು ಪ್ರಸ್ತಾಪಿಸುತ್ತಾನೆ. ಆತನ ಪ್ರಕಾರ 'ಅನಿಮಾ' ಎಂದರೆ ಪ್ರತೀ ಗಂಡಿನಲ್ಲೂ ಅಡಗಿರಬಹುದಾದ ಹೆಣ್ಣಿನ ಮನಸ್ಸು ಹಾಗೂ 'ಅನಿಮಸ್' ಎಂದರೆ ಪ್ರತೀ ಹೆಣ್ಣಿನಲ್ಲೂ ಇರಬಹುದಾದ ಗಂಡು ಮನಸ್ಸು. ಇದೇ ರೀತಿಯ ವಿಚಾರಧಾರೆಯನ್ನು ನಾವು ಭಾರತೀಯ ವಿಚಾರಧಾರೆಗಳಾದ ಪ್ರಕೃತಿ–ಪುರುಷ ಮತ್ತು ಅರ್ಧನಾರೀಶ್ವರ ಕಲ್ಪನೆಗಳಲ್ಲಿ ಗಮನಿಸಬಹುದು. ಈ ಎಲ್ಲಕ್ಕೂ ಪೂರಕವೆನ್ನುವಂತೆ ರೂಪಕವಾಗಿ ನಿಲ್ಲುವ ಪಾತ್ರ ಶಿಖಂಡಿಯದು.

ತನಗೆ ಹುಟ್ಟಿದ ಹೆಣ್ಣು ಮಗುವನ್ನು ಗಂಡು ಮಗುವೆಂದು ಸುಳ್ಳು ಹೇಳಿ ಗಂಡು ಮಗುವಿನಂತೆ ಬೆಳೆಸುವ ದ್ರುಪದನ ನಿರ್ಧಾರ ಶಿಖಂಡಿಯ ಬದುಕಿನ ಎಲ್ಲ ಮಾನಸಿಕ ತೊಳಲಾಟ, ತಲ್ಲಣಗಳ ಮೂಲಬೇರು. ಹಿಂದಿನ ಜನ್ಮದಲ್ಲಿ ಅಂಬೆಯಾಗಿ ಜನಿಸಿದ್ದ ಶಿಖಂಡಿನಿ ಭೀಷ್ಮನ ಪ್ರತಿಜ್ಞೆಯ ಕಾರಣ ಅವನನ್ನು ವರಿಸಲಾಗದೆ, ಅತ್ತ ಶಾಲ್ವನನ್ನೂ ಹೊಂದಲಾಗದೆ ಬೇಗುದಿಯಿಂದ ಬೆಂದು ಮರುಜನ್ಮ ತಾಳಿದವಳು. ತಾನು ಹೆಣ್ಣಾಗಿದ್ದರೂ, ಗಂಡಿನ ಭಾವವನ್ನು ಹೊಂದಿ ಬಾಳಬೇಕಾಗುವ ಶಿಖಂಡಿನಿಗೆ ತಾನು ಗಂಡಾದಾಗ ಹೆಣ್ಣಿನ ಮನಸ ಸುಕೋಮಲ ಭಾವವನ್ನು ಕಳೆದು ಬದುಕಲು ಸಾಧ್ಯವಾಗುವುದಿಲ್ಲ.

ಹೆಣ್ಣಾಗಿ ಹುಟ್ಟಿ ಗಂಡಾಗಿ ಬೆಳೆದು ಸ್ಥೂಣಾಕರ್ಣನೆಂಬ ಯಕ್ಷನ ಮೂಲಕ ಶಿಖಂಡಿನಿಯು ಗಂಡಾದುದನ್ನು ಪುರಾಣದಲ್ಲಿ ಕಂಡರೆ, ಇಂದಿನ ಸಮಾಜದಲ್ಲಿ ಲಿಂಗ ಬದಲಾವಣೆಯ ಪ್ರಕ್ರಿಯೆಯನ್ನು ಗುರುತಿಸಬಹುದು. ಇಂತಹ ಪುರಾಣದ ವಸ್ತುವೊಂದನ್ನು ಆಯ್ದುಕೊಂಡು ಅದಕ್ಕೊಂದು ಸುಂದರ ನಾಟಕದ ರೂಪವನ್ನು ನೀಡಿದವರು ಡಾ. ಶ್ರೀಧರ ಎಚ್.ಜಿ. ಸರಳ ಸುಲಲಿತ ಭಾಷೆ ಹಾಗೂ ಶೈಲಿಯಿಂದೊಡಗೂಡಿದ 'ಶಿಖಂಡಿ' ನಾಟಕವು ಪುರಾಣದ ಬೆಳಕಿನಲ್ಲಿ ವರ್ತಮಾನದ ಬಿಂಬವನ್ನು ಮೂಡಿಸುತ್ತದೆ.

'ಅನಿಮಾ' ಮತ್ತು 'ಅನಿಮಸ್'ಗಳ ತಾಕಲಾಟವನ್ನು ಮೇಳದವರು ಹಾಡುವ ಹಾಡಿನ ಮೊದಲ ಸಾಲಿನಲ್ಲಿಯೇ ಗುರುತಿಸಬಹುದು: "ಅವನು ಅವಳಲ್ಲ; ಅವಳು ಅವನಲ್ಲ"(ಪು.3) ಅವನೊಳಗೆ ಅವಳೂ, ಅವಳೊಳಗೆ ಅವನೂ ಇರುವುದನ್ನು, ಸನ್ನಿವೇಶಕ್ಕೆ ಅನುಗುಣವಾಗಿ ಈ ವರ್ತನೆಗಳನ್ನು ಮನೋವಿಜ್ಞಾನದ ಪ್ರಕಾರ ಸಹಜವಾಗಿ ಗಮನಿಸಬಹುದು. ಆದುದರಿಂದ ಮೇಳದ ಹಾಡಿನಲ್ಲಿರುವ "ಇಬ್ಬರ ನಡುವಿನ ಬೇಧ ನಾವು ತಿಳಿದಂತೆ ಯಾವುದು ಇಲ್ಲ"(ಪು. 30) ಎನ್ನುವುದು ವೇದ್ಯವಾಗುತ್ತದೆ.

ಈ ಗಂಡು-ಹೆಣ್ಣು ಎನ್ನುವ ಬೇಧ ಗೆರೆ ಎಳೆದು ತೋರಿಸುವಷ್ಟು ಸುಲಭ ಅಲ್ಲ ಎಂಬುದನ್ನು ಅಲ್ಲಮನು ಹೇಳಿದಂತೆ "ಒಳಗೆ ಸುಳಿವ ಆತ್ಮ ಹೆಣ್ಣಲ್ಲ ಗಂಡಲ್ಲ"(ಪು.3) ಎಂದು ಆರಂಭದಲ್ಲಿಯೇ ಗುರುತಿಸುವ ಮೂಲಕ ನಾಟಕಕಾರರು ನಾಟಕಕ್ಕೆ ಸೂಕ್ತ ಆರಂಭವನ್ನು ಒದಗಿಸಿದ್ದಾರೆ. ನಾಟಕವು ಮಹಾಭಾರತದಿಂದ ಆಯ್ದ ಕಥಾವಸ್ತುವಾಗಿದ್ದರೂ ನಾಟಕಕಾರರು ಬಳಸಿರುವ ದಿನನಿತ್ಯದ ಬದುಕಿನಲ್ಲಿ ಬಳಕೆಯಲ್ಲಿರುವ ನುಡಿಗಟ್ಟುಗಳು ಹಾಗೂ ಮಾತುಗಳ ಮೂಲಕ ನಾಟಕವು ಇನ್ನಷ್ಟು ಆಪ್ತವಾಗುವುದರೊಂದಿಗೆ ಸಮಕಾಲೀನತೆಯನ್ನು ಪಡೆಯುತ್ತದೆ. ಉದಾ: ಮಹತ್ವಾಕಾಂಕ್ಷೆ ಮಾನವನನ್ನು ಅಸಹಾಯಕತೆಯ ಕಡೆಗೆ ತಳ್ಳುತ್ತದೆ; ಬದುಕಿನ ಒತ್ತಡಗಳು ಸಹನೆಯನ್ನು ಕಳೆದುಕೊಳ್ಳುವಂತೆ ಮಾಡುತ್ತವೆ; ಮಾನವನ ಬದುಕಿನ ನಿಜವಾದ ಪರೀಕ್ಷೆಯಾಗುವುದೇ ಇಂತಹ ಸಂದಿಗ್ಧಗಳು ಒದಗಿ ಬಂದಾಗ. ಎಲ್ಲ ಸಮಸ್ಯೆಗಳಿಗೂ ಕಾಲ ಪ್ರವಾಹದಲ್ಲಿ ಉತ್ತರವಿರುತ್ತದೆ. ಆ ಸಮಯಕ್ಕಾಗಿ ನಾವು ಕಾಯಬೇಕು; ಸಮಾಧಾನ ಮನುಷ್ಯನಿಗೆ ಮುನ್ನಡೆಯುವ ದಾರಿಯನ್ನು ತೋರಿಸುತ್ತದೆ. (ಪು.4) ಸತ್ಯಕ್ಕೆ ಒಂದು ಮುಖ ಮಾತ್ರ. ಸುಳ್ಳಿಗೆ ಹಲವು ಮುಖಗಳಿವೆ.(ಪು.9) ಪರಿಹಾರವಿಲ್ಲದ ಸಮಸ್ಯೆ ಜಗತ್ತಿನಲ್ಲಿ ಯಾವುದು ಇರಲಾರದು. (ಪು.12) ಹಲಸಿನ ಹಣ್ಣನ್ನು ಮಟ್ಟೆಯಲ್ಲಿ ಬಚ್ಚಿಡುವುದಕ್ಕೆ ಆಗುತ್ತದೆಯೇ?(ಪು.13) ಬೆಳಕಿನ ಭರವಸೆಯೇ ಇಲ್ಲದ ದಾರಿಯಲ್ಲಿ ಮನುಷ್ಯರು ನಡೆಯುವುದಾದರೂ ಹೇಗೆ(ಪು.15) ಆರ್ತರಿಗೆ ಸಹಾಯ ಮಾಡಬೇಕಾದ್ದು ಜಗತ್ತಿನ ನಿಯಮ.(ಪು.18) ಯುದ್ಧ ವಿನಾಶವನ್ನು ತರುತ್ತದೆಯೇ ಹೊರತು ಅಭಿವೃದ್ಧಿಗೆ ಪೂರಕವಲ್ಲ; ಸಣ್ಣ ಕಿಡಿಗೂ ಕಾಳ್ಗಿಚ್ಚಿನ ರೂಪವನ್ನು ಪಡೆಯುವ ಶಕ್ತಿಯಿದೆ.(ಪು.21) ಇತ್ಯಾದಿ. ಈ ಎಲ್ಲ ವಾಕ್ಯಗಳೂ ಸಮಯ, ಸಂದರ್ಭ, ಸನ್ನಿವೇಶಕ್ಕೆ ಪೂರಕವಾಗಿ ಬಳಕೆಯಾಗಿದ್ದರೂ ಇವು ಮಾನವನ ಬದುಕಿನ ವರ್ತಮಾನದ ಸನ್ನಿವೇಶಗಳಿಗೆ ಕೈದೀವಿಗೆಯಂತಿವೆ.

ಶಿಖಂಡಿನಿಯು ದ್ರುಪದನಿಗೆ ಹೇಳುವ "ಈ ಹೊತ್ತಿನಲ್ಲಿ ಹೆಣ್ಣಿನ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಇರುವವರು ಯಾರಿದ್ದಾರೆ. ನಾಚಿಕೆ, ಅವಮಾನ, ಸೋಲು ಶತಮಾನಗಳಿಂದ ಹೆಣ್ಣಿಗೆ ಮೀಸಲಾಗಿ ಹೋಗಿದೆ. ಇದು ಬದಲಾಗುವುದು ಹೇಗೆ? ಹೆಣ್ಣಿನ ಸ್ವಾಭಿಮಾನಕ್ಕೆ ಬೆಲೆ ಎಲ್ಲಿದೆ? ಅಂತಃಪುರದ ಗೋಡೆಗಳ ನಡುವೆಬಂಧಿಯಾಗಿರುವ ಹೆಣ್ಣಿನ ನಿಟ್ಟುಸಿರು ಪುರುಷನ ಅಹಂಕಾರಕ್ಕೆ ಹೇಗೆ ಕೇಳುವುದಕ್ಕೆ ಸಾಧ್ಯ?"(ಪು.5) ಎಂಬಲ್ಲಿ ಹೆಣ್ಣಿನ ಭಾವನೆ, ಸಂಕಟಗಳ ವಿಶ್ಲೇಷಣೆಯಿದೆ. ಶತಶತಮಾನಗಳಿಂದ ಹೆಣ್ಣು ಅನುಭವಿಸುತ್ತಿರುವ ಸ್ಥಿತಿಯ ವಿವರಗಳಿವೆ. ಬದಲಾಗುವುದು ಹೇಗೆ ಎನ್ನುವುದಕ್ಕೆ ಶಿಖಂಡಿನಿಯ ಬದುಕೇ ಕನ್ನಡಿಯನ್ನು ಹಿಡಿಯುತ್ತದೆ.

ಜನಿಸಿದ ಹೆಣ್ಣು ಮಗುವನ್ನು ರಾಜ್ಯದ ಹಿತದೃಷ್ಟಿಯಿಂದ ಗಂಡೆಂದು ಸಾರಿದ ವಿಚಾರವನ್ನು ಮನಸ್ವಿನಿ ಹೇಳಿದಾಗ ಶಿಖಂಡಿನಿಯು ಹೇಳುವ "ಗಂಡು ಮತ್ತು ಹೆಣ್ಣು ಎರಡೂ ಭಗವಂತನ ಸೃಷ್ಟಿ. ಹುಟ್ಟಿನಲ್ಲಿಯೂ ರಾಜಕಾರಣವನ್ನು ನೋಡುವ ಅಗತ್ಯವಿತ್ತೇ?"(ಪು.6) ಎಂಬುದು ಹುಟ್ಟಿನೊಂದಿಗೆ ರೂಪು ತಳೆಯುವ ಲಿಂಗ ತಾರತಮ್ಯದ ರಾಜಕಾರಣದ ವಿಚಾರವನ್ನು ನಿಕಷಕ್ಕೊಡ್ಡುತ್ತದೆ. ನಾಟಕದುದ್ದಕ್ಕೂ ಶಿಖಂಡಿನಿಯ ಅಸಹಾಯಕತೆ, ವರ ಮತ್ತು ನಂಬಿಕೆಯ ನಡುವೆ ಆಟಿಕೆಯಾಗುವ ಶಿಖಂಡಿನಿಯ ಬಾಳು, ರಾಜಕಾರಣ, ಅಸ್ತಿತ್ವ ಹಾಗೂ ಕಾರ್ಯ-ಕಾರಣ ಸಂಬಂಧದ ವಿಶ್ಲೇಷಣೆಯಿದೆ.

ಸತ್ಯಕ್ಕೆ ಮುಖಾಮುಖಿಯಾಗುವಂತೆ ಶಿಖಂಡಿನಿಯನ್ನು ಉದ್ದೀಪಿಸುವ ಸುವರ್ಣಿನಿ ತಾನು ಸ್ತ್ರೀ ಎಂಬುದನ್ನು ನೆನಪಿಸುತ್ತಾಳೆ: "ನಾನು ನಿಮ್ಮ ರಾಣಿವಾಸದ ಪ್ರಜೆಯೂ ಅಲ್ಲ, ದಾಸಿಯೂ ಅಲ್ಲ. ನಾನು ಸ್ತ್ರೀ ಎಂಬುದನ್ನು ಮರೆಯಬೇಡಿ." (ಪು.11) ಅಂದರೆ ತನ್ನ ಸಮಸ್ಯೆ ಒಬ್ಬ ಸ್ತ್ರೀಯದು ಎಂಬ ಭಾವನೆಯನ್ನು ಆಕೆಯು ವ್ಯಕ್ತಪಡಿಸುವುದನ್ನು ಇಲ್ಲಿ ಗಮನಿಸಬಹುದು.

ಹೆಣ್ಣು–ಗಂಡು ಎಂಬ ಬೇರ್ಪಡಿಸುವಿಕೆ ಗೆರೆ ಎಳೆದು ಬೇರ್ಪಡಿಸಿದಷ್ಟು ಸುಲಭ ಅಲ್ಲ; ಅದು ಕೇವಲ ದೇಹ ರಚನೆಗೆ ಮಾತ್ರ ಸಂಬಂಧಿಸಿದುದಾಗಿರದೆ ಮನಸ್ಸಿನ ಸ್ಥಿತಿಯೂ ಹೌದು ಎನ್ನುವುದು ಶಿಖಂಡಿನಿ ಪುರುಷತ್ವವನ್ನು ಪಡೆದು ಬಂದ ನಂತರ ಪತಿ–ಪತ್ನಿಯರ ನಡುವೆ ನಡೆಯುವ ಈ ಸಂಭಾಷಣೆಯಲ್ಲಿ ಗಮನಿಸಬಹುದಾಗಿದೆ:

"ಸುವರ್ಣಿನಿ: ಈಗ ನಿಮ್ಮನ್ನು ಗಂಡನೆಂದು ಸ್ವೀಕರಿಸಲೇ ಅಥವಾ ಹೆಣ್ಣೆಂದು ಭಾವಿಸಲೇ

ಶಿಖಂಡಿ: ..ಹೆಣ್ತನದ ಗೊಂದಲಗಳನ್ನು ಕಳೆದುಕೊಂಡು ನಿಮ್ಮೆದುರು ನಿಂತಿದ್ದೇನೆ.

ಸುವರ್ಣಿನಿ: ಇದುವರೆಗೂ ನೀವು ನನ್ನಂತೆಯೇ ಹೆಣ್ಣೇ ಆಗಿದ್ದಿರಲ್ಲ. ಮಾನಸಿಕವಾಗಿ ನಿಮ್ಮನ್ನು ಗಂಡನೆಂದು ಸ್ವೀಕರಿಸುವುದಕ್ಕೆ ನನ್ನ ಮನಸ್ಸು ಸಿದ್ಧವಾಗಿಲ್ಲ.. ವೈದ್ಯರು ನಿಮ್ಮನ್ನು ಪುರುಷನೆಂದು ಹೇಳಿರಬಹುದು. ಅದನ್ನು ನನ್ನ ತಂದೆಯೂ ಒಪ್ಪಿರಬಹುದು... ನಿಮ್ಮನ್ನು ಪುರುಷನೆಂದು ಸ್ವೀಕರಿಸಬೇಕಾಗಿರುವುದು ನಾನು, ಅವರಲ್ಲ! ...ನನ್ನ ಮನಸ್ಸಿನ ಭಾವನೆಗಳ ಬಗೆಗೂ ಸ್ವಲ್ಪ ಯೋಚಿಸಿ. ನಿಮ್ಮನ್ನು ಮೊದಲ ಸಲ ನಾನು ಹೆಣ್ಣಾಗಿ ನೋಡಿದವಳು. ಈಗ ಒಮ್ಮೆಗೇ ಪುರುಷನೆಂದು ಹೇಗೆ ಸ್ವೀಕರಿಸಲಿ."(ಪು.32–33)

ಶಿಖಂಡಿಯು ಭೀಷ್ಮರ ಜೊತೆ ಆಡುವ ಮಾತುಗಳಲ್ಲಿ ಹೆಣ್ಣಿನ ಭಾವನೆಯ ವಿಶ್ಲೇಷಣೆಯಿದ್ದರೆ, ಸುವರ್ಣಿನಿ ಶಿಖಂಡಿಯಲ್ಲಿ "ಕೊನೆಗೂ ಗೆಲ್ಲಬೇಕಾಗಿರುವುದು ಪುರುಷನ ಅಹಂಕಾರವೇ ಅಲ್ಲವೇ?.. ದಯವಿಟ್ಟು ನನ್ನ ಮನಸ್ಸಿನ ಮೇಲೆ ಪುರುಷತ್ವದ ಒತ್ತಡವನ್ನು ಹಾಕಬೇಡಿ"(ಪು.34) ಎಂದು ಹೆಣ್ಣಿನ ಮನದ ಭಾವನೆಗಳನ್ನು ತೋಡಿಕೊಳ್ಳುತ್ತಾಳೆ. ವಾಸ್ತವಕ್ಕೆ ಎದುರಾಗುವಂತೆ ಶಿಖಂಡಿನಿಗೆ ಸವಾಲನ್ನೊಡ್ಡುವ ಸುವರ್ಣಿನಿ ಹೆಣ್ಣಿನ ಮಾನಸಿಕ ಹಾಗೂ ಭಾವನಾತ್ಮಕ ದೃಢತೆಗೆ ಸಾಕ್ಷಿಯಾಗುತ್ತಾಳೆ.

ಲಿಂಗ ಬದಲಾವಣೆ ಪ್ರಕೃತಿ ಸಹಜವಾದುದಲ್ಲ; ಪ್ರಕೃತಿಗೆ ವಿರುದ್ಧವಾದುದು ಎಂಬ ಇಂಗಿತವನ್ನು ನಾಟಕಕಾರರು ಕುಬೇರ–ಸ್ಥೂಣಾಕರ್ಣರ ಸಂಭಾಷಣೆಯ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಾರೆ. (ಸ್ತ್ರೀಪುರುಷರು ಬದಲಾಗುವುದು ಪ್ರಕೃತಿಗೆ ವಿರುದ್ಧವಾದುದು–ಪು.24)

ಭೀಷ್ಮ–ಅಂಬೆಯರ ಸಂವಾದದ ಸಂದರ್ಭ ಅಂಬೆ ಹೇಳುವ "ಹೆಣ್ಣು ಜನ್ಮವೆಂದರೆ ಏನೆಂದು ಭಾವಿಸಿದೆ?.. ಹೆಣ್ಣಾಗಿ ಹುಟ್ಟಿ ಗಂಡಾಗಿ ಬರುವುದು"(ಪು.31) ಎಂಬ ಮಾತುಗಳು ಶತಶತಮಾನಗಳಿಂದ ಹೆಣ್ಣು ಎದುರಿಸುತ್ತಿರುವ ಅಪಮಾನ, ತುಳಿತವನ್ನು ಮೀರಿ ನಿಲ್ಲಬೇಕಾದರೆ ಆಗಬೇಕಾಗಿರುವ ಬದಲಾವಣೆಗಳ ಬಗ್ಗೆ ಯೋಚಿಸುವಂತೆ ಮಾಡುತ್ತದೆ. "ಗಂಡೆಂದರೆ ಗಂಡಲ್ಲ, ಹೆಣ್ಣೆಂದರೆ ಹೆಣ್ಣಲ್ಲ, ಹೆಣ್ಣು ಗಂಡಾಗಿ ಗಂಡು ಹೆಣ್ಣಾಗಿ, ಹೆಣ್ಣೆಂದು ಹೋದವನು ಗಂಡಾಗಿ ಬಂದಿಹನು .. ಹೆಣ್ಣಾಗಲು ಹೋದವನು ಗಂಡಾಗಿ ಬಂದಿಹನು"(ಪು.26) ಎನ್ನುವುದು ಅರ್ಧನಾರೀಶ್ವರ ಕಲ್ಪನೆಯನ್ನೂ ನೆನಪಿಸುತ್ತದೆ.

ನಾಟಕವು ಕೇವಲ ಇಷ್ಟಕ್ಕೇ ಸೀಮಿತವಾಗದೆ, ಅಲ್ಲಲ್ಲಿ ಪಾತ್ರಗಳ ಮೂಲಕ ಬದುಕಿನ ವಿಶ್ಲೇಷಣೆಯನ್ನು ಮಾಡುತ್ತದೆ. "ಕಾಲಪ್ರವಾಹದ ಎದುರು ನಾನು, ನನ್ನದು ಎಲ್ಲವು ಕ್ಷಣಿಕ. ಭೂತಕಾಲದ ಸಮಾಧಿಯ ಮೇಲೆ ವರ್ತಮಾನದ ಬದುಕು ಚಿಗುರೊಡೆಯಲು ಹಾತೊರೆಯುತ್ತಿರುತ್ತದೆ. ಬದುಕಿನಲ್ಲಿ ಯಾವುದೂ ಶಾಶ್ವತವಲ್ಲ ಎಂಬ ಸತ್ಯ ಅರ್ಥವಾದರೆ ಬದುಕನ್ನು ನೋಡುವ ದೃಷ್ಟಿ ಬದಲಾಗುತ್ತದೆ."(ಪು.36) ಬದುಕಿನಲ್ಲಿ ವರ್ತಮಾನವು ಭೂತವಾಗುವ ಮೂಲಕ ನೆನಪಿನ ಸುರುಳಿಯೊಳಗೆ ಸೇರಿಹೋಗುವುದನ್ನು "ಬದುಕಿನ ನೂತನ ಪುಟಗಳು ತೆರೆದುಕೊಳ್ಳುವಾಗ ಹಳೆಯ ಪುಟಗಳು ಹಿನ್ನೆಲೆಗೆ ಸರಿಯುತ್ತವೆ. ಅನೇಕ ಸಂಗತಿಗಳು ನೆನಪಿನಿಂದ ಮರೆಯಾಗುತ್ತವೆ"(ಪು.37) ಎಂಬುದು ಸೂಚಿಸುತ್ತದೆ.

ಇಲ್ಲಿ ಕೇವಲ ಶಿಖಂಡಿಯ ಮನೋವೇದನೆ ಅಥವಾ ಮಾನಸಿಕ ಹೋರಾಟದ ವಿವರಗಳು ಮಾತ್ರ ಅಡಕವಾಗಿರುವುದಲ್ಲ. ಹೆಣ್ಣನ್ನು ಮದುವೆಯಾಗಿ ಬರುವ ಸುವರ್ಣಿನಿಯ ದುಃಖ, ಭೀಷ್ಮರು ಅನುಭವಿಸಿದ ನೋವಿನ ಆಳದ ವಿವರಗಳು ಮನೋಜ್ಞವಾಗಿ ಮೂಡಿ ಬಂದಿವೆ. ಮೂಲದಲ್ಲಿಲ್ಲದ ಭೀಷ್ಮ–ಶಿಖಂಡಿಯರ ಸಂವಾದದ ಸನ್ನಿವೇಶ ಹಾಗೂ ಶಿಖಂಡಿಗೆತನ್ನ ಹಿಂದಿನ ಜನ್ಮದ ನೆನಪುಗಳನ್ನು ತರುವುದಕ್ಕಾಗಿ ಸೃಷ್ಟಿಸಿದ ಮಾಯಾಂಗನೆಯರ ಪಾತ್ರ ನಾಟಕಕ್ಕೆ ಹೊಸತನದೊಂದಿಗೆ ಮೆರುಗನ್ನು ನೀಡಿದೆ.

ನಾಟಕದ ಕೊನೆಯ ಅಧ್ಯಾಯದಲ್ಲಿ ಶಿಖಂಡಿಯು ಹೇಳುವ "ಆತ್ಮವೊಂದು ಗಂಡಾಗುವ ಇಲ್ಲವೇ ಹೆಣ್ಣಾಗುವ ಪ್ರಕ್ರಿಯೆ ಮಾನವನ ನಿಯಂತ್ರಣವನ್ನು ಮೀರಿದ್ದು. ಇದು ದೈಹಿಕ ಮತ್ತು ಮಾನಸಿಕ ಸ್ಥಿತಿ. ದೇಹದೊಳಗಿನ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ. ಆದ್ದರಿಂದ ಹುಟ್ಟಿದ ಮಗು ಯವುದೇ ಇರಲಿ, ಅದನ್ನು ಗೌರವಿಸಿ. ಕಲಿಯುಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತದೆ. ಇಲ್ಲಿ ಹೆಣ್ಣು ಗಂಡಾಗುವ, ಗಂಡು ಹೆಣ್ಣಾಗುವ ಪ್ರಕ್ರಿಯೆ ಸಹಜವೆಂಬಂತೆ ನಡೆಯುತ್ತದೆ. ಇಂತಹ ವ್ಯಕ್ತಿಗಳನ್ನು ಸಮಾಜ ಸಹಾನುಭೂತಿಯಿಂದ ನಡೆಸಿಕೊಳ್ಳಬೇಕೆಂಬ ಕಳಕಳಿ ನನ್ನದು"(ಪು.49) ಎನ್ನುವುದು ವಚನಕಾರರ ನಿಲುವನ್ನೂ, ಗಂಡು–ಹೆಣ್ಣನ್ನು ಸಮಾಜ ಸಮಾನವಾಗಿ ಕಂಡು ಗೌರವಿಸಬೇಕಾದ ಅವಶ್ಯಕತೆಯನ್ನೂ, ವರ್ತಮಾನದಲ್ಲಿ ಲಿಂಗ ಬದಲಾವಣೆಯನ್ನು ಸಹಜವೆಂಬಂತೆ ಸ್ವೀಕರಿಸುವುದನ್ನೂ ವ್ಯಕ್ತಪಡಿಸುತ್ತದೆ.

ಇವೆಲ್ಲದರ ಜೊತೆಗೆ ಶಿಖಂಡಿಯ ಮೂಲಕ "ಮಾನವ ಜನಾಂಗಕ್ಕೆ ಕುರುಕ್ಷೇತ್ರ ನೀಡಿದ ಸಂದೇಶವೇನು?(ಪು.49) ಕುರುಕ್ಷೇತ್ರ ಯುದ್ಧದಲ್ಲಿ ಗೆದ್ದವರು ಯಾರು?"(ಪು.52) ಎಂಬ ಪ್ರಶ್ನೆಗಳನ್ನು ಎತ್ತುವುದು ಮಾತ್ರವಲ್ಲ; "ಸೇಡು ತೀರಿಸಿಕೊಂಡೆನೆಂದುಕೊಳ್ಳುವುದು ಗೆಲುವಲ್ಲ; ಅದು ಸೋಲಿನ ಆರಂಭ"(ಪು.51) ಎಂಬ ಅಪೂರ್ವ ವಿಶ್ಲೇಷಣೆಯೂ ಇಲ್ಲಿದೆ.

'ಜಗತ್ತಿನ ಎಲ್ಲ ಜೀವಿಗಳಿಗೂ ಸಾವೆನ್ನುವುದು ಬಿಡುಗಡೆ'(ಪು.48) ಎಂಬ ಅರ್ಥಪೂರ್ಣ ವಿಶ್ಲೇಷಣೆಯನ್ನು ಹೊಂದಿರುವ ಡಾ. ಶ್ರೀಧರ ಎಚ್.ಜಿ. ಅವರ 'ಶಿಖಂಡಿ' ನಾಟಕ "ಬಿಡುಗಡೆಯ ಕಥನ"ವೇ ಆಗಿದೆ. ಸಾವು ಭವ ಬಂಧನದ ಬಿಡುಗಡೆಯೊಂದಿಗೆ ಆತ್ಮಕ್ಕೆ ಹೆಣ್ಣು–ಗಂಡೆಂಬ ಬಂಧನದ ಬಿಡುಗಡೆಯೂ ಹೌದು. ಆ ಮೂಲಕ ಹೆಣ್ಣು ಅಥವಾ ಗಂಡು ಎನ್ನುವುದು ಕೇವಲ ವ್ಯಕ್ತಿಯ ಲಿಂಗಸೂಚಕ ಮಾತ್ರ

ಆಗಿರದೇ, ವ್ಯಕ್ತಿತ್ವದ ಸೂಚಕವಾಗಿ ಹೊಸ ಅರ್ಥವ್ಯಾಪ್ತಿಯನ್ನು ಪಡೆದಿದೆ ಎನ್ನುವುದು ಕೇವಲ ಪಾತ್ರದ ಯಶಸ್ಸಷ್ಟೇ ಅಲ್ಲ; ನಾಟಕದ ಯಶಸ್ಸೂ ಆಗಿದೆಯೆನ್ನುವುದು ಇದರ ಹೆಗ್ಗಳಿಕೆ.

**ಪರಾಮರ್ಶನ ಕೃತಿಗಳು:**

1. ಶ್ರೀಧರ ಎಚ್. ಜಿ. (2019). ಶಿಖಂಡಿ: ಬಿಡುಗಡೆಯ ಕಥನ. (ಮೊದಲ ಮುದ್ರಣ). ಪುತ್ತೂರು.
2. ಪವಿತ್ರ ಕೆ. ಎಸ್. (2011). ಸಿ. ಜಿ. ಯೂಂಗ್. (ಮೊದಲ ಮುದ್ರಣ). ಮೈಸೂರು: ವಿಸ್ಮಯ ಪ್ರಕಾಶನ.
3. ಶ್ರೀಧರ್ ಕೆ. ಆರ್. (2011). ಸಿಗ್ಮಂಡ್ ಫ್ರಾಯ್ಡ್. (ಮೊದಲ ಮುದ್ರಣ.) ಮೈಸೂರು: ವಿಸ್ಮಯ ಪ್ರಕಾಶನ.
4. ಬೆನಗಲ್ ರಾಮರಾವ್, ಪಾನ್ಯಂ ಸುಂದರ ಶಾಸ್ತ್ರಿ. (2010). ಪುರಾಣನಾಮ ಚೂಡಾಮಣಿ. (ಏಳನೆಯ ಮುದ್ರಣ). ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
5. ಗೋಪಾಲಕೃಷ್ಣಶಾಸ್ತ್ರಿ ಸಿ. ಮೂಡಂಬೈಲು. (2020). ಮಹಾಭಾರತ ಕೋಶ. (ಎರಡನೆಯ ಮುದ್ರಣ). ಮೈಸೂರು: ಶ್ರೀರಾಮಕೃಷ್ಣ ಆಶ್ರಮ.

❖❖❖

**ದರ್ಜಿಯ ವಂಚನೆ ತಿಳಿದಿಹನಾದರೂ**
**ಹೇಳದೆ ಸುಮ್ಮನೆ ಕುಳಿತಿಹನು**
**ಮಂತ್ರಿಗಡಣವು ಭಲೆಭಲೆಯೆನ್ನುತ ಬಟ್ಟೆಯ**
**ಹೊಗಳುವುದ ಕೇಳಿದನು**

# ದಾನ ಮತ್ತು ಲೋಕೋಪಕಾರಗಳ ಧಾರ್ಮಿಕ ಬೇರುಗಳು

**ಡಾ. ನಿರೀಕ್ಷಣ್ ಸಿಂಗ್ ಗೌಗಿ ಎಸ್.ಕೆ.,** ಸಹಾಯಕ ಪ್ರಾಧ್ಯಾಪಕ
ಸಮಾಜಕಾರ್ಯ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಟ್ಟಂಪಾಡಿ–574259

**ಪೀಠಿಕೆ**

ಭಾರತೀಯ ಸಂಸ್ಕೃತಿ ಬಹು ವೈಶಿಷ್ಟ್ಯಪೂರ್ಣವಾದದ್ದು. ಏಕೆಂದರೆ ಭಾರತೀಯ ಸಂಸ್ಕೃತಿಯ ಲಕ್ಷಣವೆಂದರೆ ವೈವಿಧ್ಯತೆಯಲ್ಲಿ ಏಕತೆ. ಹಲವು ಧರ್ಮ, ಜಾತಿ, ಭಾಷೆ, ಆಹಾರ ಪದ್ಧತಿ ಮುಂತಾದವುಗಳು ಇದ್ದರೂ ಸಹ ನಾವೆಲ್ಲರೂ ಒಂದೇ (ಭಾರತೀಯರು) ಎಂಬ ಆಶಯದಲ್ಲಿ ಜೀವನ ಸಾಗಿಸುತ್ತಿದ್ದೇವೆ. ಈ ಪರಿಕಲ್ಪನೆ ಇಂದು ನೆನ್ನೆಯದಲ್ಲ. ಭಾರತೀಯ ಸಂಸ್ಕೃತಿಯಲ್ಲಿ ಅಡಕವಾಗಿರುವ ಸೇವೆ ಎಂಬ ಪರಿಕಲ್ಪನೆ ಧರ್ಮವನ್ನು ಆಳವಾಗಿ ಅವಲಂಬಿಸಿದೆ. ಹಾಗೆಯೇ ನಮ್ಮ ಆಚಾರ–ವಿಚಾರ, ಮಕ್ಕಳ ಪಾಲನೆ ಪೋಷಣೆ ಮುಂತಾದವುಗಳನ್ನು ಸಹ ಇದು ಅವಲಂಬಿಸಿದೆ. ಧರ್ಮ–ಸಂಸ್ಕೃತಿ ಇವುಗಳು ಒಂದಾಗಿ ಸಾಗುವ ಅಂಶಗಳು. ಭಾರತೀಯ ದೃಷ್ಟಿಕೋನದಲ್ಲಿ ಸಮಾಜಸೇವೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ಧಾರ್ಮಿಕ ಹಿನ್ನಲೆಯನ್ನು ಅರ್ಥ ಮಾಡಿಕೊಳ್ಳುವುದು ಅವಶ್ಯಕ.

**ಹಿಂದೂ ಸಂಸ್ಕೃತಿಯ ಅಥವಾ ಧಾರ್ಮಿಕ ಬೇರುಗಳಲ್ಲಿ ಅಡಕವಾಗಿರುವ ದಾನದ ಪರಿಕಲ್ಪನೆ**

ಧರ್ಮದ ತಾತ್ವಿಕ ಮತ್ತು ನೈತಿಕ ಬೋಧನೆಗಳಲ್ಲಿ ಆಳವಾಗಿ ಬೇರೂರಿರುವ ಹಿಂದೂ ಸಂಸ್ಕೃತಿಯಲ್ಲಿ ವಿದಾನಹಿ ಮಹತ್ವದ ಸ್ಥಾನವನ್ನು ಹೊಂದಿದೆ. ಹಿಂದೂ ಧರ್ಮದ ಮೂಲ ಕೇಂದ್ರವು ನಿಸ್ವಾರ್ಥ ಕೊಡುಗೆಯಲ್ಲಿನ ನಂಬಿಕೆಯಾಗಿದೆ. ಇದು ಆಧ್ಯಾತ್ಮಿಕ ಬೆಳವಣಿಗೆಯನ್ನು ಸಾಧಿಸಲು ಮತ್ತು ಕರ್ಮವನ್ನು ಸಮತೋಲನಗೊಳಿಸುವ ಸಾಧನವಾಗಿ ಕಂಡುಬರುತ್ತದೆ. ದಾನ ನೀಡುವುದು ಕೇವಲ ಪರೋಪಕಾರಿ ಕಾರ್ಯ ಅಲ್ಲ. ಅದು ಎಲ್ಲಾ ಜೀವಿಗಳ ಪರಸ್ಪರ ಸಂಬಂಧವನ್ನು ಪ್ರತಿಬಿಂಬಿಸುವ ನೈತಿಕ ಹೊಣೆಗಾರಿಕೆ ಕೂಡ ಆಗಿದೆ.

ವೈದಿಕ ಪಠ್ಯಗಳಲ್ಲಿ ದಾನಕ್ಕೆ ವಿಶೇಷ ಮಹತ್ತ್ವವಿದೆ. ದಾನವು ವೈವಿಧ್ಯಮಯವಾಗಿದೆ. ಹಸಿದವರಿಗೆ ಆಹಾರ ನೀಡುವುದು, ಶಿಕ್ಷಣವನ್ನು ನೀಡುವುದು, ಧನ, ಗೋವು ಇತ್ಯಾದಿ ಸಂಪತ್ತನ್ನು ನೀಡುವುದು ಇತ್ಯಾದಿ. ದೇವಾಲಯಗಳು ಸಾಮಾನ್ಯವಾಗಿ ದತ್ತಿ ಚಟುವಟಿಕೆಗಳಲ್ಲಿ ತೊಡಗುತ್ತವೆ. ಆಹಾರ ಮತ್ತು ಸಂಪನ್ಮೂಲಗಳನ್ನು ವಿತರಿಸುತ್ತವೆ.

ಹಿಂದೂ ಸಂಸ್ಕೃತಿಯಲ್ಲಿ ವ್ಯಕ್ತಿಯ ಅತ್ಯುನ್ನತವಾದ ಗುರಿ ಎಂದರೆ ಮೋಕ್ಷ. ಮೋಕ್ಷ ಹೊಂದಬೇಕಾದರೆ ವ್ಯಕ್ತಿಯು ಧರ್ಮಪ್ರಕಾರ ಬದುಕಬೇಕು. ಧರ್ಮವೆಂದರೆ ದಾನವೂ ಸೇರುತ್ತದೆ. ಧನದಿಂದ ಧರ್ಮ, ಧರ್ಮದಿಂದ ಸುಖ– ಇದು ಪ್ರಾಚೀನ ಕಲ್ಪನೆ. ವ್ಯಕ್ತಿಯ ಜೀವನಕ್ಕೆ ಅವಶ್ಯಕವಾಗಿರುವ ಸಂಪಾದನೆಯನ್ನು ಸಂಪಾದಿಸುವುದು ಅನಿವಾರ್ಯವಾಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ಅವಶ್ಯಕವಾಗಿರುವ ಹಣದ

ಸಂಪಾದನೆಯನ್ನು ಧರ್ಮದ ದಾರಿಯಲ್ಲಿ ಅಂದರೆ ನ್ಯಾಯಸಮ್ಮತವಾದ ಮಾರ್ಗದಲ್ಲಿ ಗಳಿಸುವುದಷ್ಟೇ ಅಲ್ಲ ಹಣವನ್ನು ದೀನ ದಲಿತರ ಏಳಿಗೆಗಾಗಿ ಬಳಸುವುದು ಯೋಗ್ಯವಾದದ್ದು.

**ಆಶ್ರಮ ವ್ಯವಸ್ಥೆ ಅಥವಾ ಆಶ್ರಮ ಪರಿಕಲ್ಪನೆ**

ಒಬ್ಬ ವ್ಯಕ್ತಿ ಸರಿ ಸುಮಾರು ನೂರು ವರ್ಷ ಜೀವಿತಾವಧಿಯನ್ನು ಹೊಂದಿರುತ್ತಾರೆ ಎಂದು ಭಾವಿಸಿ ವಯಸ್ಸಿನ ಆಧಾರದ ಮೇಲೆ ವ್ಯಕ್ತಿಯ ಜೀವನವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ. ಈ ವ್ಯವಸ್ಥೆಯನ್ನು ಆಶ್ರಮ ವ್ಯವಸ್ಥೆ ಎಂದು ಕರೆಯಲಾಗಿದೆ. ಸನ್ಯಾಸವೆಂದರೆ ಇತರರ ದಾನದಲ್ಲಿಯೇ ಬದುಕುವ ಹಂತ.

ಬೌದ್ಧ, ಜೈನ ಧರ್ಮಗಳ ಶ್ರಮಣ ಪರಂಪರೆಯಲ್ಲಿಯೂ ಸನ್ಯಾಸಿಗಳು ಅಥವಾ ಭಿಕ್ಕುಗಳನ್ನು ಸಂಸಾರಿಗಳು ತಮ್ಮ ದಾನಧರ್ಮಗಳ ಮೂಲಕವೇ ಸಾಕಬೇಕು. ಶೈವರ ಜಂಗಮರೂ ಹಾಗೆಯೇ.

**ಇಸ್ಲಾಂ ಧಾರ್ಮಿಕ ಬೇರುಗಳಲ್ಲಿ ಅಡಕವಾಗಿರುವ ದಾನದ ಪರಿಕಲ್ಪನೆ**

ಇಸ್ಲಾಂ ಸಂಸ್ಕೃತಿಯಲ್ಲಿ ದಾನ–ಧರ್ಮ ಮತ್ತು ಸೇವೆಗಳ ಅಂಶಗಳು ಅಡಕವಾಗಿವೆ. ಕುರಾನ್ ಇಸ್ಲಾಂ ಧರ್ಮದ ಮೂಲ ಆಧಾರ ಗ್ರಂಥವಾಗಿದೆ. ಈ ಗ್ರಂಥವನ್ನು ಅಭ್ಯಾಸ ಮಾಡುವುದರಿಂದ ತಿಳಿದುಬರುವ ಅಂಶಗಳೇನೆಂದರೆ 'ಯಾರು ತನ್ನ ಸಂಬಂಧಿಕರಿಗೆ ಸಂಪತ್ತನ್ನು ದಾನ ಮಾಡುತ್ತಾನೋ ಆತ ಅಥವಾ ಆಕೆ ದೇವರ ಕಾರ್ಯವನ್ನು ಮಾಡುತ್ತಾರೆ'. ಅನಾಥ ಮಕ್ಕಳಿಗೆ, ಅತ್ಯಂತ ಕಡು ಬಡವರಿಗೆ ಮತ್ತು ಪ್ರಯಾಣಿಕರಿಗೆ ಸೇವೆ ಮಾಡುವುದರಿಂದ ಅಲ್ಲಾನಿಗೆ ಹತ್ತಿರವಾದಂತೆ ಎಂಬ ನಂಬಿಕೆ ಇಸ್ಲಾಂ ಸಂಸ್ಕೃತಿಯಲ್ಲಿದೆ.

ಝುಕಾತ್ ಪರಿಕಲ್ಪನೆ: ವಿಝುಕಾತ್‌ಹಿ ಎಂದು ಕರೆಯಲ್ಪಡುವ ದಾನದ ಕಲ್ಪನೆಯು ಇಸ್ಲಾಮಿಕ್ ಸಂಸ್ಕೃತಿಯ ಮೂಲಭೂತ ಅಂಶವಾಗಿದೆ. ಇಸ್ಲಾಮಿನ ಐದು ಸ್ತಂಭಗಳಲ್ಲಿ ಒಂದಾದ ಝುಕಾತ್, ಮುಸ್ಲಿಮರು ಸಂಪತ್ತಿನ ಒಂದು ಭಾಗವನ್ನು ಅಗತ್ಯವಿರುವವರಿಗೆ ದಾನ ಮಾಡಬೇಕಾಗಿರುತ್ತದೆ. ಈ ನಿಯಮವು ಒಬ್ಬರ ಸಂಪತ್ತನ್ನು ಶುದ್ಧೀಕರಿಸುವ ಮತ್ತು ಸಾಮಾಜಿಕ ನ್ಯಾಯದ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ. ಒಬ್ಬ ಪ್ರಾಮಾಣಿಕ ಮುಸ್ಲಿಂ ವ್ಯಕ್ತಿ ತನ್ನ ಒಟ್ಟು ಆದಾಯದ ಶೇಕಡಾ 2.5ರಷ್ಟು ಆದಾಯವನ್ನು ದೀನದಲಿತರಿಗೆ ಬಡವರಿಗೆ ದಾನ ಮಾಡುವುದು ಕಡ್ಡಾಯ ಕಾರ್ಯಗಳಲ್ಲಿ ಒಂದಾಗಿದೆ.

ಇಸ್ಲಾಮಿಕ್ ಬೋಧನೆಗಳು ದಾನ ಕಾರ್ಯಗಳ ಹಿಂದಿನ ಉದ್ದೇಶದ ಮಹತ್ವವನ್ನು ಒತ್ತಿಹೇಳುತ್ತವೆ. ಕುರಾನ್ ಹೊಗಳಿಕೆಗೆ ಬದಲಾಗಿ ಅಲ್ಲಾಹನ ಸಲುವಾಗಿ ಪ್ರಾಮಾಣಿಕವಾಗಿ ದಾನ ನೀಡಬೇಕೆಂದು ಎತ್ತಿ ತೋರಿಸುತ್ತದೆ. ದಾನ ಕಾರ್ಯಗಳನ್ನು ಆಧ್ಯಾತ್ಮಿಕ ಪ್ರತಿಫಲಗಳನ್ನು ಹೊಂದುವ ಸಾಧನವಾಗಿ ನೋಡಲಾಗುತ್ತದೆ. ಇಸ್ಲಾಮಿಕ್ ಸಂಸ್ಕೃತಿಯಲ್ಲಿ ದಾನವು ಹಣಕಾಸಿನ ಕೊಡುಗೆಗಳಿಗೆ ಸೀಮಿತವಾಗಿಲ್ಲ. ಇದು ಅಗತ್ಯವಿರುವವರಿಗೆ ಆಹಾರ, ವಸತಿ ಮತ್ತು ಬೆಂಬಲವನ್ನು ನೀಡುವುದನ್ನು ಒಳಗೊಂಡಿರುತ್ತದೆ. ರಂಜಾನ್ ಸಮಯದಲ್ಲಿ, (ಉಪವಾಸದ ಪವಿತ್ರ ತಿಂಗಳು) ದಾನ ನೀಡುವ ಕಾರ್ಯವು ತೀವ್ರಗೊಳ್ಳುತ್ತದೆ. ಅನೇಕ ಮುಸ್ಲಿಮರು ತಮ್ಮ ಆತ್ಮಗಳನ್ನು

ಶುದ್ಧೀಕರಿಸುವ ಮತ್ತು ಸಮುದಾಯ ಬಂಧಗಳನ್ನು ಬೆಳೆಸುವ ಮಾರ್ಗವಾಗಿ ಉದಾರತೆಯ ದಾನ ನೀಡುವ ಕಾರ್ಯಗಳಲ್ಲಿ ತೊಡಗುತ್ತಾರೆ. ಇಸ್ಲಾಂ ಸಂಸ್ಕೃತಿಯ ಮತ್ತೊಂದು ಪ್ರಮುಖ ಅಂಶವೇನೆಂದರೆ ಯಾವ ವ್ಯಕ್ತಿ ನಿರ್ಗತಿಕ ವ್ಯಕ್ತಿಯ ಕಷ್ಟಗಳನ್ನು ದೂರ ಮಾಡುತ್ತಾನೋ ಆ ವ್ಯಕ್ತಿಯ ಈ ಜನುಮದ ಕಷ್ಟಗಳನ್ನು ಮತ್ತು ಮುಂದಿನ ಜನುಮಗಳ ಕಷ್ಟವನ್ನು ಅಲ್ಲಾ ದೂರ ಮಾಡುತ್ತಾನೆ ಎಂಬುದಾಗಿದೆ. ಒಟ್ಟಾರೆಯಾಗಿ, ಇಸ್ಲಾಂನಲ್ಲಿ ದಾನವು ನಂಬಿಕೆಯ ಪ್ರಮುಖ ಅಭಿವ್ಯಕ್ತಿಯಾಗಿದೆ. ಒಗ್ಗಟ್ಟು, ಸಹಾನುಭೂತಿ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಉತ್ತೇಜಿಸುವುದರ ಜೊತೆಗೆ ಸಮುದಾಯದೊಳಗೆ ಒಬ್ಬರನ್ನೊಬ್ಬರು ಮೇಲೆತ್ತುವ ಸಾಧನವಾಗಿ ದಾನ ಕಾರ್ಯನಿರ್ವಹಿಸುತ್ತದೆ.

**ಕ್ರೈಸ್ತ ಸಂಸ್ಕೃತಿಯಲ್ಲಿ ಅಥವಾ ಧಾರ್ಮಿಕ ಬೇರುಗಳಲ್ಲಿ ಅಡಕವಾಗಿರುವ ದಾನದ ಪರಿಕಲ್ಪನೆ**

ದಾನವನ್ನು ಸಾಮಾನ್ಯವಾಗಿ ಪ್ರೀತಿಗೆ ಸಮಾನಾಂತರವಾಗಿ ಪರಿಗಣಿಸಲಾಗಿದೆ. ಇದು ಕ್ರಿಶ್ಚಿಯನ್ ಧರ್ಮದ ಕೇಂದ್ರ ಸಿದ್ಧಾಂತವಾಗಿದ್ದು, ಇತರರಿಗೆ ಸಹಾನುಭೂತಿ, ಔದಾರ್ಯ ಮತ್ತು ಸೇವೆಯ ಪ್ರಮುಖ ಮೌಲ್ಯಗಳನ್ನು ತಿಳಿಸಿಕೊಡುತ್ತದೆ.ಯೇಸುಕ್ರಿಸ್ತನ ಬೋಧನೆಗಳಲ್ಲಿ ನೆರೆಹೊರೆಯವರನ್ನು ತಮ್ಮಂತೆಯೇ ಪ್ರೀತಿಸುವ ಗುಣಗಳನ್ನು ಕಾಣಬಹುದು. ಇದು ಪರಹಿತಚಿಂತನೆ ಮತ್ತು ನಿಸ್ವಾರ್ಥತೆಯ ಮಹತ್ವವನ್ನು ಒತ್ತಿಹೇಳುತ್ತದೆ.

ಸಮಾಜದ ಕನಿಷ್ಠ ವ್ಯಕ್ತಿಗಾಗಿ ಏನು ಮಾಡಿದರೂ (ಉದಾಹರಣೆಗೆ ಹಸಿದವರಿಗೆ ಆಹಾರ ನೀಡುವುದು, ಬಟ್ಟೆ ನೀಡುವುದು, ರೋಗಿಗಳನ್ನು ಭೇಟಿ ಮಾಡುವುದು) ದೇವರಿಗೆ ಮಾಡುವ ಕಾರ್ಯ ಎಂದು ನಂಬಲಾಗಿದೆ. ಕ್ರಿಶ್ಚಿಯನ್ ಧರ್ಮದಲ್ಲಿನ ಚಾರಿಟಿಯು ಹಣಕಾಸಿನ ನೆರವು, ಸ್ವಯಂಸೇವಕತೆ ಮತ್ತು ದಯೆಯ ಕಾರ್ಯಗಳನ್ನು ಒಳಗೊಂಡಂತೆ ವಿವಿಧ ರೂಪಗಳನ್ನು ಒಳಗೊಂಡಿದೆ. ದಾನದ ಅಭ್ಯಾಸವನ್ನು ಸಂಸ್ಥೆಗಳು ಮತ್ತು ಚರ್ಚ್ ಉಪಕ್ರಮಗಳ ಮೂಲಕ ಸಾಂಪ್ರದಾಯಿಕ ಆಚರಣೆಯಾಗಿ ಪರಿವರ್ತಿಸಲಾಗಿದೆ.

ಕಷ್ಟದಲ್ಲಿರುವ ವ್ಯಕ್ತಿಗಳ ಪಾಲನೆ ಮಾಡುವುದು ಮತ್ತು ಅವರ ಕಷ್ಟಗಳ ನಿವಾರಣೆ ಮಾಡುವುದರಿಂದ ದೇವರಿಗೆ ಹತ್ತಿರವಾಗಬಹುದು ಎಂಬ ಪರಿಕಲ್ಪನೆ ಕ್ರೈಸ್ತ ಧರ್ಮದಲ್ಲಿದೆ. ಅಂದರೆ ಬೇರೆಯವರಿಗೆ ಸೇವೆ ಒದಗಿಸುವುದು ದೇವರ ಕಾರ್ಯವಾಗಿದೆ.

**ಸಿಖ್ ಮತ್ತು ಪಾರ್ಸಿ ಸಂಸ್ಕೃತಿಯಲಿ ಸಂಸ್ಕೃತಿಯಲ್ಲಿ ಅಥವಾ ಧಾರ್ಮಿಕ ಬೇರುಗಳಲ್ಲಿ ಅಡಕವಾಗಿರುವ ದಾನದ ಪರಿಕಲ್ಪನೆ :**

ಸಿಖ್ ಧರ್ಮದಲ್ಲಿ, ದಾನವು ಕೇವಲ ವಸ್ತುಗಳನ್ನು ನೀಡುವುದಲ್ಲ. ಯಾವುದೇ ಪ್ರತಿಫಲದ ನಿರೀಕ್ಷೆಯಿಲ್ಲದೆ ಮಾನವೀಯತೆಗೆ ಸೇವೆ ಸಲ್ಲಿಸುವ ವಿಶಾಲ ಪರಿಕಲ್ಪನೆಯನ್ನು ಸಿಖ್ ಧರ್ಮ ತಿಳಿಸುತ್ತದೆ. ಗುರುದ್ವಾರಗಳಲ್ಲಿ (ಸಿಖ್ ದೇವಾಲಯಗಳು) ಬಡಿಸುವ ಸಾಮುದಾಯಿಕ ಊಟವಾದ 'ಲಂಗರ್' ತತ್ವವು ಈ ಕಲ್ಪನೆಗೆ ಒಂದು ಉತ್ತಮ ಉದಾಹರಣೆ. ಸಮಾನತೆ ಮತ್ತು ಒಳಗೊಳ್ಳುವಿಕೆಯ ಮೌಲ್ಯಗಳನ್ನು ಒಳಗೊಂಡಿರುವ

ಜೊತೆಗೆ, ಜಾತಿ ಅಥವಾ ಧರ್ಮವನ್ನು ಲೆಕ್ಕಿಸದೆ ಎಲ್ಲರಿಗೂ ಉಚಿತ ಊಟವನ್ನು ಲಂಗರ್ ಒದಗಿಸುತ್ತದೆ. ಈ ಅಭ್ಯಾಸವು ಸಮುದಾಯದ ಒಗ್ಗಟ್ಟನ್ನು ಉತ್ತೇಜಿಸುವುದಷ್ಟೇ ಅಲ್ಲದೆ ಇತರರಿಗೆ ಸೇವೆ ಸಲ್ಲಿಸುವುದು ಆಧ್ಯಾತ್ಮಿಕ ನೆರವೇರಿಕೆಯ ಮಾರ್ಗವಾಗಿದೆ.

ಸಿಖ್ಖರು ತಮ್ಮ ಸಂಪನ್ಮೂಲಗಳು, ಸಮಯ ಮತ್ತು ಕೌಶಲ್ಯಗಳನ್ನು ಅಗತ್ಯವಿರುವವರನ್ನು ಮೇಲಕ್ಕೆತ್ತಲು ಬಳಸಿಕೊಳ್ಳುವಂತೆ ಪ್ರೋತ್ಸಾಹಿಸಲಾಗುತ್ತದೆ. 'ವಂದನ್' ಅಥವಾ ಒಬ್ಬರ ಸಂಪತ್ತು ಮತ್ತು ಆಶೀರ್ವಾದಗಳನ್ನು ಹಂಚಿಕೊಳ್ಳುವ ಪರಿಕಲ್ಪನೆಯು ಸಿಖ್ ಬೋಧನೆಗಳ ಪ್ರಮುಖ ತಳಹದಿಯಾಗಿದೆ. ಒಬ್ಬ ವ್ಯಕ್ತಿಯು ಹೊಂದಿರುವ ಎಲ್ಲವೂ ದೇವರ ಕೊಡುಗೆಯಾಗಿದೆ ಎಂಬ ತಿಳುವಳಿಕೆಯನ್ನು ಇದು ಪ್ರತಿಬಿಂಬಿಸುತ್ತದೆ ಮತ್ತು ಅದನ್ನು ಹಂಚಿಕೊಳ್ಳುವುದು ಕೃತಜ್ಞತೆಯನ್ನು ವ್ಯಕ್ತಪಡಿಸುವ ಒಂದು ಮಾರ್ಗವಾಗಿದೆ ಎಂಬ ನಂಬಿಕೆಯನ್ನು ಪ್ರತಿಫಲಿಸುತ್ತದೆ.

ಸಿಖ್ ಧರ್ಮಗ್ರಂಥ, ಗುರು ಗ್ರಂಥ ಸಾಹಿಬ್, ದಾನ ಮತ್ತು ನಿಸ್ವಾರ್ಥ ಸೇವೆಯ ಸದ್ಗುಣಗಳನ್ನು ಶ್ಲಾಘಿಸುವ ಹಲವಾರು ಸ್ತೋತ್ರಗಳನ್ನು ಒಳಗೊಂಡಿದೆ. ಅಂತಿಮವಾಗಿ ದಾನವು ಒಬ್ಬರನ್ನು ದೇವರಿಗೆ ಹತ್ತಿರ ತರುತ್ತದೆ ಎಂದು ಸಿಖ್ಖರು ನಂಬುತ್ತಾರೆ. ಇದಲ್ಲದೆ, ಶಿಕ್ಷಣ, ಆರೋಗ್ಯ ರಕ್ಷಣೆ ಮತ್ತು ವಿಪತ್ತು ಪರಿಹಾರ ಸೇರಿದಂತೆ ವಿವಿಧ ಕಾರ್ಯಗಳಲ್ಲಿ ತೊಡಗಿಕೊಳ್ಳಲು ವ್ಯಕ್ತಿಗಳನ್ನು ಪ್ರೋತ್ಸಾಹಿಸುತ್ತದೆ. ಈ ಪ್ರಯತ್ನಗಳು ಸಾಮಾಜಿಕ ನ್ಯಾಯ ಮತ್ತು ಸಹಾನುಭೂತಿಯ ಬದ್ಧತೆಯನ್ನು ಗಟ್ಟಿಗೊಳಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಿಖ್ ಸಂಸ್ಕೃತಿಯಲ್ಲಿ ದಾನವು ಸಮಾನತೆ, ಸಮುದಾಯ ಸೇವೆ ಮತ್ತು ಆಧ್ಯಾತ್ಮಿಕ ಬೆಳವಣಿಗೆಯ ತತ್ವಗಳೊಂದಿಗೆ ಆಳವಾಗಿ ಹೆಣೆದುಕೊಂಡಿದೆ. ಇತರರ ಯೋಗಕ್ಷೇಮಕ್ಕೆ ಸಕ್ರಿಯವಾಗಿ ಕೊಡುಗೆ ನೀಡಲು ವ್ಯಕ್ತಿಗಳನ್ನು ಪ್ರೋತ್ಸಾಹಿಸುತ್ತದೆ.

ಪಾರ್ಸಿ ಸಂಸ್ಕೃತಿಯಲ್ಲಿ 'ದಾನ'ದ ಪರಿಕಲ್ಪನೆಯು ವಿವಿಧ ರೀತಿಯ ಕೊಡುಗೆಗಳನ್ನು ಒಳಗೊಂಡಿದೆ. ಸಹಾನುಭೂತಿಯ ಮೌಲ್ಯ, ಸಮುದಾಯ ಬೆಂಬಲ ಮತ್ತು ಅಗತ್ಯವಿರುವವರಿಗೆ ಸಹಾಯ ಮಾಡುವ ನೈತಿಕ ಹೊಣೆಗಾರಿಕೆಯನ್ನು ಪಾರ್ಸಿ ಸಂಸ್ಕೃತಿಯಲ್ಲಿ ಹೆಚ್ಚಾಗಿ ಪರಿಗಣಿಸಲಾಗಿದೆ.

**ಉಪಸಂಹಾರ**

ಪರಸ್ಪರ ಕರುಣೆ, ಪ್ರೀತಿ, ಸಹಾನುಭೂತಿ ಮತ್ತು ಪರಸ್ಪರ ಸಹಾಯದ ನೆಲೆಗಟ್ಟಿನ ಮೇಲೆ ಮನುಷ್ಯ ಸಂಬಂಧಗಳ ತುಲನೆಯಾಗಬೇಕು. ಎಲ್ಲ ಧರ್ಮಗಳೂ ದಾನ ಮತ್ತು ಇತರರಿಗೆ ಸಹಾಯ ಮಾಡುವ ಮೌಲ್ಯವನ್ನು ಎತ್ತಿ ಹಿಡಿಯುತ್ತವೆ. ಆದರೂ ಯಾರುಯಾರಿಗೆ ದಾನ ನೀಡಬಹುದು; ದಾನ ಪಡೆಯುವ ಅರ್ಹತೆ ಯಾರಿಗಿದೆ ಎನ್ನುವ ವಿಚಾರದಲ್ಲಿ ಬೇರೆ ಬೇರೆ ಮತಧರ್ಮಗಳ ನಿಲುವುಗಳು ಬೇರೆ ಬೇರೆ ಇವೆ ಎನ್ನುವುದನ್ನೂ ನಾವು ನೆನಪಿಡಬೇಕು. ಇಂದಿನ ಕಾಲಕ್ಕನುಗುಣವಾಗಿ ದಾನದ ಪಾತ್ರತ್ವವು ಎಲ್ಲರಿಗೂ ಸಿದ್ಧಿಸಬೇಕಾದುದು ಅಗತ್ಯ.

**ಪರಾಮರ್ಶನ ಸಾಹಿತ್ಯ:**

ಅಜಕ್ಕಳ ಗಿರೀಶ ಭಟ್ (2024): ಸಂಸ್ಕೃತಿ – ಒಂದು ಟಿಪ್ಪಣಿ, ಚಿಂತನ ಬಯಲು, 13(1), p.128.

Agarwal, Sanjay (2010): Daan and Other Giving Traditions in India: The Forgotten Pot of Gold, AccountAid India.

Shapiro, Ruth A; Mirchandan, Manisha and Jang, Heesu (2018): Pragmatic Philanthropy: Asian Charity Explained, Palgrave Macmillan.

Sundar, Pushpa (2007): Giving with Thousand Hands: The Changing Face of Indian Philanthropy, Oxford University Press.

Watt, Carey Anthony (2005): Serving the Nation: Cultures of Service, Association, and citizenship, Oxford University Press.

❖❖❖

**ಆಡಲು ಆಗದೆ ನೋಡಲೂ ಆಗದೆ**
**ಕೆಲವರ ಕಂಠವು ಬಿಗಿದಿತ್ತು**
**ನೆರೆದ ಜನತೆಗೆ ಏನೂ ಕಾಣದೆ**
**ನಿರಾಸೆಯಿಂದಲೆ ಕಾದಿತ್ತು**

# ಚಿತ್ರದುರ್ಗ ಜಿಲ್ಲೆಯ
# ಅಲೆಮಾರಿ ಬುಡಕಟ್ಟು ಸಮುದಾಯಗಳ ಪರಂಪರೆ

**ಡಾ. ಪಾಪಯ್ಯ ಬಿ.**
ಅತಿಥಿ ಉಪನ್ಯಾಸಕರು, ಕನ್ನಡ ಅಧ್ಯಯನ ವಿಭಾಗ
ಹೆಚ್.ಪಿ.ಪಿ.ಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ

ಮಾನವನ ಸಾಂಸ್ಕೃತಿಕ ಬದುಕಿನ ರೂಪ ಅಭಿವ್ಯಕ್ತಿಗೊಳ್ಳುವ ದೈನಂದಿನ ಬದುಕಿನಲ್ಲಿ ಹಳ್ಳಿ, ನಗರ, ಪಟ್ಟಣಗಳೆಂಬ ಪ್ರತ್ಯೇಕತೆ ಕಾಣದಿದ್ದರೂ ನಗರ ಪ್ರದೇಶಗಳಲ್ಲಿನ ಸಾಂಸ್ಕೃತಿಕ ಬದುಕಿನ ಕ್ರಮ ಸ್ವಲ್ಪ ಭಿನ್ನವಾಗಿ ಕಾಣುತ್ತದೆಯೆಂಬುದು ನಿಜ. ಹಾಗೆಂದು ಜಾನಪದ ಕೇವಲ ಹಳ್ಳಿಗಳಿಗೆ ಮಾತ್ರ ಸೀಮಿತ ಎಂಬ ಪರಿಕಲ್ಪನೆ ಕೂಡ ಸತ್ಯವಲ್ಲ. ಅದೊಂದು ಭಾವನಾತ್ಮಕ ದೃಷ್ಟಿಯ ತಪ್ಪು ಗ್ರಹಿಕೆ. ಅನೇಕ ಪರಂಪರಾಗತ ನಂಬಿಕೆ, ಆಚರಣೆಗಳು ಹಳ್ಳಿ ನಗರಗಳೆಂಬ ಭೇದವಿಲ್ಲದೆ ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿರುವುದನ್ನು ಕಾಣಬಹುದು.

ಬುಡಕಟ್ಟು ಸಂಸ್ಕೃತಿ ಎಂಬುದು ನೆಲಮೂಲ ಸಂಸ್ಕೃತಿಯಾಗಿರುತ್ತದೆ. ಅದು ಹೆಚ್ಚು ಆಧುನಿಕಗೊಂಡಿರುವ ಇತರ ಸಮುದಾಯಗಳ ಸಂಸ್ಕೃತಿಗಿಂತ ಮಣ್ಣಿಗೆ ಹೆಚ್ಚು ಹತ್ತಿರವಾಗಿರುತ್ತದೆ. ಬುಡಕಟ್ಟುಗಳ ಸಾಂಸ್ಕೃತಿಕ ಬದುಕು ರೂಪುಗೊಳ್ಳುವುದು ಅಥವಾ ಸೃಷ್ಟಿಗೊಳ್ಳುವುದು ನೆಲ, ಜಲ, ಭಾಷೆ, ಕುಲ, ಧರ್ಮ, ದೈವ, ನಂಬಿಕೆ ಇತ್ಯಾದಿಗಳ ಬಗೆಗಿನ ಸಮಷ್ಠಿಪ್ರಜ್ಞೆಯಲ್ಲಿ. ಈ ಸಮಷ್ಠಿ ಪ್ರಜ್ಞೆಯು ಮೌಖಿಕ ಕಥನಗಳ ಮೂಲಕ ತಲೆಮಾರಿನಿಂದ ತಲೆಮಾರಿಗೆ ದಾಟಿ ಬಂದಿರುತ್ತದೆ.

## ಚಿತ್ರದುರ್ಗ ಜಿಲ್ಲೆ ಬುಡಕಟ್ಟು ಅಲೆಮಾರಿ ಸಮುದಾಯಗಳು

ಯಾವುದೇ ಪ್ರದೇಶದ ಸಾಂಸ್ಕೃತಿಕ ಚರಿತ್ರೆಯನ್ನು ಅರಿಯಬೇಕಾದರೆ ಆಯಾ ಪ್ರದೇಶದ ಜನಪದರ ಮೌಖಿಕ ಸಾಹಿತ್ಯ ಪರಂಪರೆಯನ್ನು ಅವಲಂಬಿಸಬೇಕಾಗುತ್ತದೆ. ಇದು ಗುಪ್ತಗಾಮಿಯಾಗಿ ಅವರ ಸಮಷ್ಠಿ ಬದುಕಿನಲ್ಲಿ ಹರಿದು ಬರುತ್ತದೆ. ಒಂದು ಸಾಂಸ್ಕೃತಿಕ ಸೃಷ್ಟಿಯ ಮತ್ತು ಅದರ ದೃಷ್ಟಿಯ ಹಿಂದೆ ಅಲ್ಲಿನ ನೆಲ, ಜಲ, ಮಳೆ, ಬೆಳೆ, ಜಾತಿ, ಜನಾಂಗ, ಭಾಷೆ, ನಂಬಿಕೆ–ನಿಷೇಧ ಇತ್ಯಾದಿಗಳು ಬಹುಮುಖ್ಯವಾಗಿ ಪ್ರಭಾವಿಸಿರುತ್ತವೆ. ಇವುಗಳಲ್ಲಿ ಜಾತಿ, ಜನಾಂಗ ಮತ್ತು ಭಾಷೆ ಬದುಕಿನ ನೆಲೆಯಲ್ಲಿ ಬಹುಮುಖ್ಯವಾದವುಗಳು. ಚಿತ್ರದುರ್ಗ ಜಿಲ್ಲೆ ಬುಡಕಟ್ಟು ಸಮುದಾಯಗಳ ತವರು. ಪಶುಪಾಲನೆಯ ಹಿನ್ನೆಲೆಯಿಂದ ಬದುಕುವ ಇಲ್ಲಿನ ಸಮುದಾಯಗಳಲ್ಲಿ ಕೆಲವು ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳು ಜೀವನ ನಡೆಸುವುದನ್ನು ಕಾಣುತ್ತೇವೆ. ಇಲ್ಲಿನ ಸಾಂಸ್ಕೃತಿಕ ಸಂಬಂಧದ ಸಮುದಾಯಗಳ ಮೂಲ ನೆಲೆ ಬಹುತೇಕವಾಗಿ ಆಂಧ್ರ ಮೂಲದಿಂದ ಬಂದಿರುವುದಾಗಿ ಮ್ಯಾಸಬೇಡ, ಮಾದಿಗ, ಬುಡ್ಗಜಂಗಮ, ದೊಂಬಿದಾಸ, ಕೊರಮ, ಕೊರಚ, ಬಲಿಜ, ವಡ್ಡ ಇತರೆ ಸಮುದಾಯಗಳು ತಿಳಿಸುತ್ತವೆ. ಉತ್ತರ ಭಾರತದಿಂದ ನಾವು ಇಲ್ಲಿಗೆ ವಲಸೆ ಬಂದವರೆಂದು ಕೆಲ ಸಮುದಾಯಗಳು,

ನಾವು ಮೂಲದಿಂದಲೇ ಇಲ್ಲೇ ನೆಲೆಸಿದವರೆಂದು ಮತ್ತೆ ಕೆಲವು ಸಮುದಾಯಗಳು ಹೇಳಿಕೊಳ್ಳುತ್ತವೆ. ಆದರೆ ಇವರಲ್ಲಿರುವ ಕೆಲವು ಸಾಂಸ್ಕೃತಿಕ ಸಂಬಂಧಗಳು ಇವರೆಲ್ಲಾ ಮೂಲದಲ್ಲಿ ಒಂದೇ ಇರಬಹುದೇ ಎಂಬಂತೆ ಭಾಸವಾಗುತ್ತದೆ. ಕಲೆಯೇ ಇವರ ಜೀವನ ನಿರ್ವಹಣೆಯ ಭಾಗವಾಗಿರುವುದರಿಂದ ಬೇರೆ ಬೇರೆ ಕಡೆಯಿಂದಲೂ ಚಿತ್ರದುರ್ಗ ಜಿಲ್ಲೆಗೆ ಬಂದು ಕಲೆ ಪ್ರದರ್ಶಿಸಿ ಜೀವಿಸುತ್ತಿದ್ದಾರೆ. ಅಲ್ಲದೆ ಇತರೆ ಜನ ಸಮುದಾಯಗಳ ಜೊತೆ ಸಾಂಸ್ಕೃತಿಕ ಕೊಡುಕೊಳ್ಳುವಿಕೆ ಕೂಡ ಇದೆ.

ಪ್ರಸ್ತುತ ಕೆಲವು ಬುಡಕಟ್ಟು ಅಲೆಮಾರಿ ಸಮುದಾಯಗಳನ್ನು ಸಂಕ್ಷಿಪ್ತವಾಗಿ ಹೀಗೆ ಪರಿಚಯಿಸಬಹುದು.

**ಗೊಂದಲಿಗರು**

ಸಾಮಾಜಿಕ, ಪ್ರಾದೇಶಿಕ, ಧಾರ್ಮಿಕ ಕಾರಣಗಳಿಗಾಗಿ ಎಂಬಂತೆ ಗೊಂದಲಿಗ ಸಮುದಾಯದೊಳಗೆ ಗೊಂದಲಿಗರ ಕಾವ್ಯಪರಂಪರೆಯು ಅಡಗಿದೆ. ಇದರಂತೆ ಅವರ ಹಿನ್ನೆಲೆ ಹೀಗಿದೆ. ಕರ್ನಾಟಕ, ಮಹಾರಾಷ್ಟ್ರದಾದ್ಯಂತ ಮತ್ತು ಆಂಧ್ರಪ್ರದೇಶದ ಕೆಲವು ಭಾಗಗಳಲ್ಲಿ ಕಂಡು ಬರುವ ಗೊಂದಲಿಗರು ತಮ್ಮ ಹೊಟ್ಟೆಪಾಡಿಗಾಗಿ ಹಲವಾರು ವೃತ್ತಿಗಳನ್ನು ಕೈಗೊಂಡರೂ ಪ್ರವೃತ್ತಿಯಾಗಿ ಜನಪದ ಹಾಡುಗಾರಿಕೆಯಲ್ಲಿ (ಗೊಂದಲ) ತೊಡಗಿರುತ್ತಾರೆ. ಈ ಕಲೆಗಾರಿಕೆಯ ಹಿನ್ನೆಲೆಯಲ್ಲಿಯೇ ಸಮುದಾಯದ ಗುರುತಿಸುವಿಕೆ ಇದೆ.

ಗೊಂದಲಿಗ ಪದ ನಿಷ್ಪತ್ತಿ: ಗೊಂದಲಿಗ ಪದದ ಕುರಿತು ನಿಂಗಣ್ಣ ಸಣ್ಣಕ್ಕಿ, ಜ್ಯೋತಿ ಹೊಸೂರು ತುಂಬಾ ವಿವರವಾಗಿ ಚರ್ಚಿಸಿರುವುದನ್ನು ಕಾಣಬಹುದು.

"ಗೊಂದಲ' ಶಬ್ದವು ಮೂಲತಃ ಕರ್ನಾಟಕದ್ದು, ಅದು ಮರಾಠಿ ಶಬ್ದವಲ್ಲ' ಎನ್ನುವುದೇ ಇವರ ಸಿದ್ಧಾಂತ. 'ಗೊಂದಲ' ಪದಕ್ಕೆ 'ಗಲಿಬಿಲಿ', 'ಗೋಜಲು', 'ಗದ್ದಲ' ಮುಂತಾದ ಅರ್ಥಗಳು ಇವೆ. ಗೊಂದಲ ಪದವು ಸಮೂಹ, ಸಮೂಹ ಕುಣಿತ ಎನ್ನುವ ಅರ್ಥದಲ್ಲಿ 8–10ನೇ ಶತಮಾನಗಳ ಕಾವ್ಯಗಳಲ್ಲಿ ಪ್ರಯೋಗ ಗೊಂಡಿರುವುದರ ಕುರಿತು ಜ್ಯೋತಿ ಹೊಸೂರುವರು ತಿಳಿಸುತ್ತಾರೆ. ಗೊಂದಲ ಎನ್ನುವುದು ದೈವೀ ಆರಾಧನೆಯ ಕ್ರಮಗಳಲ್ಲಿ ಒಂದಾಗಿದ್ದು, ಇಂದು ಅಂಥ ದೈವೀ ಆರಾಧನೆ ಕೈಗೊಳ್ಳುವ ನಿರ್ದಿಷ್ಟ ಸಮುದಾಯಕ್ಕೆ ಆ ಹೆಸರು ಉಳಿದುಕೊಂಡು ಬಂದಿದೆ. ಗೊಂದಲ ಧಾರ್ಮಿಕ ವಿಧಿ ಆಚರಣೆಗಳನ್ನು ಅನುಸರಿಸುವ ಸಮುದಾಯಕ್ಕೆ ಗೊಂದಲಿಗರು ಎಂದು ಕರೆಯಲಾಗುತ್ತದೆ. ಮೇಲಿನ ವಿವರಗಳಿಗೆ ಪೂರಕವಾದ ಚಾರಿತ್ರಿಕ ವಿವರಗಳು ಹೀಗಿದೆ.

ಕನ್ನಡದ ಪಂಪ, ರುದ್ರಭಟ್ಟ, ವಿರೂಪಾಕ್ಷ ಪಂಡಿತ, ಲಕ್ಷ್ಮೀಶ ಮುಂತಾದ ಕವಿಗಳು ಗೊಂದಲ ಶಬ್ದವನ್ನು ಸಮೂಹ ಎನ್ನುವ ಅರ್ಥದಲ್ಲಿ ಉಪಯೋಗಿಸಿದ್ದಾರೆ. ಹನ್ನೊಂದನೇ ಶತಮಾನದ ಅಭಿನವ ಪಂಪನು, ಈ ಶಬ್ದವನ್ನು ಒಂದು ಬಗೆಯ ಗೋಷ್ಠಿ ಎಂಬರ್ಥದಲ್ಲಿ ಉಪಯೋಗಿಸಿದ್ದಾನೆ.

**"ದೇಸೀ ವಿಲಾಸಮಂ ಪಡೆಯೆ ಗೊಂದಳವೆಕ್ಕಣ ವಾಗಳಾನೃಪಾ**
**ವಾಸರೊಳಾಡಿದೆತ್ತೆಸೆಯೆ, ಪಾಣೆತಲಂ ಪಡೆವಂತೆ ಕುಂಕುಮ"**[1]

ಎಂದು ತನ್ನ ಕಾಲದ ಗೊಂದಳದ ದೇಶೀ ವಿಲಾಸವನ್ನು ವರ್ಣಿಸಿದ್ದಾನೆ. ಮೈಸೂರು ಟ್ರೈಬ್ಸ್ ಅಂಡ್ ಕಾಸ್ಟ್ ಕೃತಿಯಲ್ಲಿ ರೇಣುಕೆ ಎಲ್ಲಮ್ಮನ ಗಂಡ ಜಮದಗ್ನಿ

ಗೊಂದಲಿಗರ ಮೂಲ ಪುರುಷ ಎಂದು ತಿಳಿದುಬರುತ್ತದೆ.

ಒಟ್ಟಿನಲ್ಲಿ ಗೊಂದಲಿಗರು ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನೊಳಗೊಂಡ 'ಮಾತೃಮೂಲ ಸಂಸ್ಕೃತಿಗೆ' ಒಳಗಾದವರು. ಇಂದು ಈ ಸಮುದಾಯವು ಇತರ ಸಮುದಾಯಗಳಂತೆ ಪುರುಷ ಪ್ರಧಾನ ವ್ಯವಸ್ಥೆಯನ್ನು ತನ್ನ ನಿತ್ಯ ಜೀವನಕ್ಕೆ ಅಳವಡಿಸಿಕೊಂಡರೂ ಮಾತೃಮೂಲದ ನೆನಪಿಗಾಗಿ ಎಂಬಂತೆ ಇಂದಿಗೂ ಇವರು ಅಂಬಾಭವಾನಿ, ತುಳಜಾಭವಾನಿ ಮುಂತಾದ ಮಾತೃದೈವಗಳ ಆರಾಧಕರಾಗಿದ್ದಾರೆ.

**ಬುಡ್ಗಜಂಗಮ**

ಬುಡ್ಗಜಂಗಮ ಅಥವಾ ಹಗಲುವೇಷಗಾರರು ಎಂದು ಬೇರೆ ಬೇರೆ ಹೆಸರುಗಳನ್ನು ಪ್ರಾದೇಶಿಕವಾಗಿ ಕರೆಸಿಕೊಳ್ಳುವ ಅಲೆಮಾರಿ ಸಮುದಾಯದ ಇವರು ಆಂಧ್ರ–ಕರ್ನಾಟಕಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರನ್ನು ದೊಂಬಿದಾಸರು ಎಂದು ಕೆಲವರು ತಪ್ಪಾಗಿ ಗ್ರಹಿಸಿದ್ದಾರೆ. ದೊಂಬಿದಾಸರಿಗೂ ಮತ್ತು ಬುಡ್ಗಜಂಗಮ ಸಮುದಾಯಕ್ಕೂ ತುಂಬಾ ವ್ಯತ್ಯಾಸಗಳುಂಟು. ಕರ್ನಾಟಕದಾದ್ಯಂತ ನೆಲೆಸಿರುವ ಈ ಸಮುದಾಯದವರನ್ನು ಕರ್ನಾಟಕದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಅತ್ಯಲ್ಪವೆಂದೇ ಹೇಳಬಹುದು. ಕರ್ನಾಟಕದಾದ್ಯಂತ ಸುಮಾರು ಒಂದು ಲಕ್ಷದಷ್ಟು ಜನಸಂಖ್ಯೆಯುಳ್ಳ ಈ ಸಮುದಾಯವು ಆಂಧ್ರ ಕರ್ನಾಟಕ ಮಧ್ಯದ ಅವಿನಾಭಾವ ಸಂಬಂಧದಂತೆ ಕಾಣುತ್ತಾರೆ. ಕರ್ನಾಟಕದ ಆಂಧ್ರ ಗಡಿ ಭಾಗವಾಗಿರುವ ಚಿತ್ರದುರ್ಗ ಜಿಲ್ಲೆಯ ತಾಲೂಕುಗಳಾದ ಹೊಸದುರ್ಗ, ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು ಮತ್ತು ಚಿತ್ರದುರ್ಗ ಕಡೆಗಳಲ್ಲಿ ಇವರು ನೆಲೆಸಿದ್ದಾರೆ. ಈ ಸಮುದಾಯದ ವೈಶಿಷ್ಟ್ಯವೆಂದರೆ ಇವರು ಕಲಾವಂತರು, ಕಲೆಯನ್ನೆ ಜೀವನಾಧಾರಕ್ಕೆ ಬಳಸಿಕೊಂಡು ಭಿಕ್ಷಾಟನೆ ಮಾಡುವ ಈ ಸಮುದಾಯದ ಪುರುಷರು ಪೌರಾಣಿಕ, ಸಾಮಾಜಿಕ, ಚಾರಿತ್ರಿಕ ವೇಷಗಳನ್ನು ಹಾಕಿ ಮನೆ ಮನೆಗೂ ಹೋಗಿ ಅಭಿನಯಿಸಿ ಭಿಕ್ಷೆ ಬೇಡುತ್ತಾರೆ. ಹಾಗೆ ಸ್ತ್ರೀ ಪುರುಷರು ತಂಬೂರಿ, ಗಗ್ಗರಿ, ಡುಮ್ಮಿಗಳನ್ನು ಹಿಡಿದು ಬುರ್ರಕಥೆಗಳನ್ನು ಮನೆ ಮನೆಯ ಮುಂದೆ ಹಾಡುತ್ತಾ ಭಿಕ್ಷಾಟನೆ ಮಾಡುತ್ತಾರೆ. ಹಗಲು ವೇಷಗಾರಿಕೆಯಲ್ಲಿ ಮಹಿಳೆಯರು ಸಾಮಾನ್ಯವಾಗಿ ಪಾಲ್ಗೊಳ್ಳುವುದಿಲ್ಲ. ಹಾಗೇ ಕೆಲ ಪುರುಷರು ವ್ಯವಸಾಯವನ್ನು ಮಾಡುತ್ತಾರೆ. ಬೇಟೆಯನ್ನಾಡಿ ಮಾಂಸಾಹಾರವನ್ನು ಸಂಪಾದಿಸುತ್ತಾರೆ.

ಕನ್ನಡ ತೆಲುಗು ಎರಡೂ ಭಾಷೆಗಳಲ್ಲೂ ಮೌಖಿಕವಾಗಿ ಹಾಡಿ ಕಥೆಯನ್ನು ಮುಂದುವರೆಸಿಕೊಂಡು ಹೋಗಬಲ್ಲವರಾದ ಇವರು ಚಿತ್ರದುರ್ಗದ ಭಾಗದಲ್ಲಿ ದ್ವಿಭಾಷಾ ಬಾಂಧವ್ಯದ ಸಂಕೇತವಾಗಿಯೂ ಕಂಡುಬರುತ್ತಾರೆ. ಈ ಕಲಾವಿದರು ಕನ್ನಡದಲ್ಲಿ ಇಪ್ಪತ್ತಕ್ಕೂ ಹೆಚ್ಚು ಕಾವ್ಯಗಳನ್ನು ಹಾಡಿ ನಟಿಸಬಲ್ಲರು. ಬುರ್ರ ಕಥೆ ಎನ್ನುವುದು ಕಾವ್ಯ ಮತ್ತು ನಾಟಕಗಳ ಸಮ್ಮಿಶ್ರದಂತೆ ಕಂಡುಬರುತ್ತದೆ. ಹಾಡು, ಮಧ್ಯ ಮಧ್ಯ ಸಂಭಾಷಣೆ, ಹಾಡು ಹೀಗೆ ನಿರಂತರವಾಗಿ ಸಾಗುವ ಈ ಕಾವ್ಯಗಳಿಗೆ ಬುಡ್ಗ ಎನ್ನುವ ತಂಬೂರಿಯನ್ನು ಗಗ್ಗರಿಯನ್ನು ಮತ್ತು ಬುರ್ರ ಎನ್ನುವ ಚರ್ಮವಾದ್ಯ ವನ್ನು ಉಪಯೋಗಿಸುತ್ತಾರೆ. ಇವು ಈ ಸಮುದಾಯಗಳ ಚಾರಿತ್ರಿಕ ಅಸ್ಮಿತೆಗಳಾಗಿ ಕಂಡುಬರುತ್ತವೆ.

ಬುಡ್ಗಜಂಗಮ ಎನ್ನುವುದು ಎರಡು ಪದಗಳ ಸಮ್ಮಿಶ್ರಣ. ಬುಡ್ಗ ಎನ್ನುವ

ವಾದ್ಯವನ್ನು ನುಡಿಸುವುದರಿಂದ ಇವರಿಗೆ ಬುಡ್ಗಜಂಗಮ ಎನ್ನುವ ಹೆಸರು ಬಂದಿರಬೇಕು. ಜಂಗಾಲ ಎನ್ನುವ ಜಾತಿಗೆ ಇವರು ಸೇರಿದವರು. ತೆಲುಗಿನ ಜಂಗಾಲವೇ ಕನ್ನಡದಲ್ಲಿ ಜಂಗಮವಾಗಿ ಬದಲಾವಣೆಗೊಂಡಿದೆ ಎಂದು ಹಿ.ಚಿ. ಬೋರಲಿಂಗಯ್ಯನವರು ಅಭಿಪ್ರಾಯಪಡುತ್ತಾರೆ. ಇಲ್ಲಿ ಜಂಗಮವಾಳ್ಳು, ಜಂಗಾಲು ಆಗಿರಬಹುದೇ ಹೊರತು ಜಂಗಾಲು>ಜಂಗಮಲು ಆಗಿರಲಿಕ್ಕಿಲ್ಲ. ಹಗಲು ವೇಷಗಾರಿಕೆಯನ್ನು ಈ ಸಮುದಾಯದ ಪುರುಷರು ವೃತ್ತಿ ಜೀವನವನ್ನಾಗಿ ಮಾಡಿಕೊಂಡಿರುವುದರಿಂದ ಇವರನ್ನು ಹಗಲುವೇಷಗಾರರೆಂದೂ ಸಹ ಕರೆಯುತ್ತಾರೆ ಎಂದು ತಿಳಿಯಬಹುದು.

ಸಾಮಾನ್ಯವಾಗಿ ಬುಡ್ಗ ಜಂಗಮರು ಸ್ವಜಾತಿ ಬೆಡಗಿನವರೊಂದಿಗೆ ರಕ್ತ ಸಂಬಂಧವನ್ನು ಬೆಳೆಸುವುದಿಲ್ಲ. ವಿಜಾತಿ ಬೆಡಗಿನವರೊಂದಿಗೆ ಮಾತ್ರ ವೈವಾಹಿಕ ಸಂಬಂಧವನ್ನು ಬೆಳೆಸುತ್ತಾರೆ. ಇನ್ನುಳಿದಂತೆ ಎಲ್ಲಾ ಶುಭ ಅಶುಭ ಕಾರ್ಯಗಳಲ್ಲೂ ಒಂದೆಡೆ ಸೇರುತ್ತಾರೆ. ಇವರನ್ನು ಸಮಾಜದಲ್ಲಿ ಕೀಳಾಗಿ ಕಂಡರೂ ಸಹ ಅಸ್ಪೃಶ್ಯರೆಂದು ಪರಿಗಣಿಸುವುದಿಲ್ಲದಿರುವುದು ಈ ಸಮುದಾಯದ ಸಾಮಾಜಿಕ ಸ್ಥಾನಮಾನವನ್ನು ತಿಳಿಸುತ್ತದೆ.

**ಅರ್ಜುನಜೋಗಿ**

ಅರ್ಜುನಜೋಗಿ ಎಂಬುದು ಅವರು ಬಳಸುವ ಕಿನ್ನರಿ ವಾದ್ಯದಿಂದ ಪರಂಪರಾಗತವಾಗಿ ಬಂದಿರುವ ಹೆಸರು. ನಾಥ ಪಂಥಾವಲಂಬಿಗಳಾದ ಅರ್ಜುನಜೋಗಿಗಳನ್ನು ಹಂಡಿಜೋಗಿ, ನರಸಣ್ಣಜೋಗಿ ಎಂದೂ ಸಹ ಕರೆಯಲಾಗುವುದು. ಇವರನ್ನು ಭೈರಾಗಿ ಜೋಗಿಗಳೆಂದೂ ಕರೆಯುತ್ತಾರೆ. ಇವರು ನಾಥಪಂಥೀಯ ಭೈರವನ ಆರಾಧಕರು. ಹಂಡಿಬಡಗನಾಥ ಮಠ, ನಾಸಿಕದಲ್ಲಿರುವ ಕಾಪಾಲಿ ಮಠ, ಕುಂತಿಮಠ, ಕದರಿಮಠ, ಇತ್ಯಾದಿ ನಾಥ ಸಂಪ್ರದಾಯದ ಮಠಗಳನ್ನು ಆರಾಧನಾ ಕೇಂದ್ರವಾಗಿಸಿಕೊಂಡಿರುವರು. ಆದರೆ ನಾಥ ಪಂಥದ ಕುರಿತಾದ ಯಾವ ಕಾವ್ಯಗಳೂ ಇವರಲ್ಲಿ ಪ್ರಚಲಿತವಿಲ್ಲ. ಆದರೆ ಮಹಾಭಾರತದ ಕಥೆಯನ್ನು ಅನೇಕ ರಾತ್ರಿಗಳವರೆಗೂ ಹಾಡಬಲ್ಲರು.

ಕರ್ನಾಟಕದ ಅಲೆಮಾರಿಗಳಲ್ಲಿಯೇ ವಿಶಿಷ್ಟ ಜನಪದ ಗಾಯಕರೆಂದು ಅರ್ಜುನಜೋಗಿಗಳನ್ನು ಗುರುತಿಸಲಾಗುತ್ತದೆ. ಕರ್ನಾಟಕದ ಮಲೆನಾಡು, ಬಯಲುಸೀಮೆ, ಕರಾವಳಿ ಪ್ರದೇಶ ಹೀಗೆ ಎಲ್ಲಾ ಕಡೆಯೂ ಇವರು ಕಂಡುಬರುತ್ತಾರೆ. ಇವರನ್ನು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಭಿನ್ನ ಭಿನ್ನ ಹೆಸರುಗಳಿಂದ ಕರೆಯಲಾಗುತ್ತದೆ. ಕೆಲವು ಕಡೆ ಅರ್ಜುನಜೋಗಿಗಳೆಂದು, ಹಂಡಿಜೋಗಿಗಳೆಂದು ಇನ್ನೂ ಕೆಲವು ಕಡೆ ಡಬ್ಬಜೋಗಿ, ನರಸಣ್ಣ ಜೋಗಿ, ಬಳೆಗಾರ ಜೋಗಿ, ರಾವಳಜೋಗಿ, ಶಿವಜೋಗಿ, ಜೋಗಿ ಪುರುಷ ಮುಂತಾದ ಹೆಸರುಗಳಿಂದ ಗುರುತಿಸಿಕೊಳ್ಳುತ್ತಾರೆಯಾದರೂ ಮೂಲತಃ ಅವರೆಲ್ಲಾ ಒಂದೇ ಆಗಿದ್ದಾರೆ. ಚಿತ್ರದುರ್ಗ ಭಾಗದಲ್ಲಿ ಅರ್ಜುನಜೋಗಿಗಳೆಂದು ಕರೆಯುತ್ತಾರೆ. "1.5.1960 ರಲ್ಲಿ ಹಳೆಮೈಸೂರು ಜಿಲ್ಲೆಗಳಲ್ಲಿ ಕಿನ್ನರಿ ಜೋಗಿಗಳಿಗೆ ಹಂಡಿಜೋಗಿ ಹೆಸರಿನಲ್ಲಿ ಪರಿಶಿಷ್ಟ ಜಾತಿಯ ಮೀಸಲಾತಿಗೆ ಕಲ್ಪಿಸಲಾಯಿತು. ತರುವಾಯ 1.5.1976ರಿಂದ ಪ್ರಾದೇಶಿಕ ಮಿತಿಯನ್ನು ಸಡಿಲಿಸಿ ಕರ್ನಾಟಕ್ಕೆ ವಿಸ್ತರಿಸಲಾಯಿತು."[2] ಇಂದು ಈ ಸಮುದಾಯ ಪರಿಶಿಷ್ಟ ಜಾತಿ

ಪಟ್ಟಿಯಲ್ಲಿ ಮೀಸಲಾತಿ ಪಡೆಯುತ್ತಿದೆ.

ಕಿನ್ನರಿ ಹಾಗೂ ಜೋಗಿ ಎಂಬ ಎರಡು ಪದಗಳಿಂದ ಕಿನ್ನರಿಜೋಗಿ ಪದ ಬಳಕೆಗೆ ಬಂದಿದೆ. ಭಿಕ್ಷಾಟನೆಗಾಗಿ ಕೈಯಲ್ಲಿ ಹಿಡಿದುಕೊಳ್ಳುವ ಸೋರೆಬುರುಡೆ ಹಾಗೂ ಬಿದಿರನ್ನು ಬಳಸಿ ಮಾಡಿದ ತಂತಿವಾದ್ಯವೇ ಕಿನ್ನರಿ. ಜೋಗಿ ಎಂಬ ಪದವು ಯೋಗಿ ಪದದಿಂದ ಬಂದಿದೆ. ಪ್ರಾರಂಭದಲ್ಲಿ ಜೋಗಿಗಳು ಒಂದು ಪ್ರತ್ಯೇಕ ಜಾತಿಯಾಗಿರಲಿಲ್ಲ. ನಾಥ ಸಿದ್ದ ಪರಂಪರೆಗೆ ಸೇರಿದುದಾಗಿತ್ತು. ತರುವಾಯ ಅದು ಜಾತಿ ಸ್ವರೂಪವನ್ನು ಪಡೆದುಕೊಂಡಿತು. ಕಿನ್ನರಿ ಜೋಗಿಗಳಿಗೆ ನಾಥ ಪರಂಪರೆಯಿಂದಾಗಿಯೇ ಹಂಡಿಜೋಗಿ ಎಂಬುದಾಗಿಯೂ ಹೆಸರು ಬಂದಿದೆಯೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಜೋಗಿ ಎಂಬುದು ಯೋಗ ಶಬ್ಧದ ಕನ್ನಡ ತದ್ಭವವಾದರೂ ಎರಡಕ್ಕೂ ಒಂದೇ ಅರ್ಥವಿಲ್ಲ. “ಜೋಗಿಗೆ ಜೋಗಿ ತಬ್ಬಿಕೊಂಡರೆ ಮೈಯಲ್ಲಾ ಬೂದಿ, ಜೋಗಿ ಜೋಗಿ ತಟ್ಯಾಡಿದರೆ ಬುರುಡೆ ಬುರುಡೆ ತಟ್ಯಾಡೀತು.”[3] –ಕಿಟೆಲ್ ಕೋಶದಲ್ಲಿ ಈ ಗಾದೆಗಳನ್ನು ಜೋಗಿ ಶಬ್ಧದ ವಿವರಣೆಯಲ್ಲಿ ಕೊಡಲಾಗಿದೆ.

ಅರ್ಜುನ ಜೋಗಿಗಳು ಎರಡು ಮೂರು ತಲೆಮಾರುಗಳಿಂದ ಕರ್ನಾಟಕದಲ್ಲಿ ವಾಸವಾಗಿರುವುದಾಗಿಯೂ, ಕರ್ನಾಟಕದಲ್ಲಿ ಬೆಳಗಾವಿ ಜಿಲ್ಲೆ ರಾಮನಗರದಲ್ಲಿರುವ ಹಂಡಿ ಬಡಿಗನಾಥ ಮಠ ತಮ್ಮ ಮೂಲ ಮಠವೆಂದು ಹೇಳುತ್ತಾರೆ. ಆನಂತರ ಚಿತ್ರದುರ್ಗದ ಮೊಳಕಾಲ್ಮುರು ಹತ್ತಿರದ ನುಂಕೆಮಲೆ ಮಠ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕದ್ರಿಮಠಗಳು ಸ್ಥಾಪನೆಯಾಗಿವೆಯೆಂದೂ ಕರ್ನಾಟಕದಲ್ಲಿ ಇನ್ನೂ ಅನೇಕ ಜೋಗಿಮಠಗಳಿರುವುದು ತಿಳಿದುಬರುತ್ತದೆ. ಅರ್ಜುನಜೋಗಿಗಳ ಮನೆಮಾತು ಮರಾಠಿ ಆಗಿರುವುದರಿಂದ ಮಹಾರಾಷ್ಟ್ರ ಮೂಲದವರಾಗಿದ್ದು ಬೆಳಗಾವಿಯ ಮೂಲಕ ಕರ್ನಾಟಕಕ್ಕೆ ವಲಸೆ ಬಂದಿರುವ ಸಾಧ್ಯತೆಗಳು ಹೆಚ್ಚಿವೆ.

**ದೊಂಬಿದಾಸರ**

ಹಿಂದುಳಿದ ಜಾತಿ ವರ್ಗಕ್ಕೆ ಸೇರಿರುವ ದೊಂಬಿದಾಸರ ಸಮುದಾಯವು ಅಲೆಮಾರಿ ಸಮುದಾಯಗಳಲ್ಲೊಂದು. ದಾಸರು, ದಾಸರಿ ಎಂಬ ಹೆಸರುಗಳಿಂದ ದಕ್ಷಿಣ ಭಾರತದಲ್ಲೆಡೆ ಚದುರಿಹೋಗಿದೆ.

ಥರ್ಸ್ಟನ್ ಅವರ ಪ್ರಬಂಧದಲ್ಲಿ ‘ತೆಲುಗು ಬಣಜಿಗ, ಹೊಲೆಯ, ತಿಗಳ ಮತ್ತು ಒಕ್ಕಲಿಗ ಸಮುದಾಯದವರು ವೈಷ್ಣವ ದೀಕ್ಷೆ ಸ್ವೀಕರಿಸಿ ದಾಸರಿಗಳಾಗಿದ್ದಾರೆ’ ಎಂದು ಹೇಳಲಾಗಿದೆ. ಮತ್ತೊಂದು ಕಡೆ ದಾಸರಿಗಳಲ್ಲಿ ಆರು ಉಪಪಂಗಡಗಳಾದ ‘ಬಲಿಜ, ಜಾನಪ್ಪ, ಪಲ್ಲಿ, ವಲ್ಲುವ, ಗಂಗೆದ್ದುಲ ಮತ್ತು ಗೊಲ್ಲ ದಾಸರಿ’ ಇವೆ ಎಂದು ಹೇಳಲಾಗಿದೆ. ದೇವರ ಸೇವಕರಾದ ಈ ದಾಸರಿಗಳ ಕುರಿತು ವೈಷ್ಣವ ಧಾರ್ಮಿಕ ಭಿಕ್ಷುಕರು ವಿಷ್ಣುವಿನ ಸಂಕೇತಗಳನ್ನು ಭುಜದ ಮೇಲೆ ಧರಿಸುವ ಇವರು ವೈಷ್ಣವ ಸಹೋದರತ್ವದಿಂದ ಭಿಕ್ಷುಕರಾಗಿರುವರು ಎಂದು ತಿಳಿಯಬಹುದು. ‘ದೊಂಬಿ’ ಎಂಬುದಕ್ಕೆ ಕನ್ನಡದಲ್ಲಿ ಗಲಾಟೆ, ಗದ್ದಲ ಎಂಬ ಅರ್ಥವಿದೆ. ತಮ್ಮ ಶಂಖ, ಜಾಗಟೆ ವಾದ್ಯಗಳಿಂದ ಗಲಾಟೆ–ಗದ್ದಲವೆಬ್ಬಿಸುವವರನ್ನೇ ದೊಂಬಿದಾಸರೆಂದು ಕರೆದಿರುವ ಸಾಧ್ಯತೆ ಇದೆ. ದೊಂಬಿದಾಸರು ವಿಶೇಷ ವೇಷಭೂಷಣದಲ್ಲಿ ಹಣೆಯ ಮೇಲೆ ವಿಷ್ಣುನಾಮವನ್ನು ಧರಿಸಿರುತ್ತಾರೆ ಮತ್ತು ಕೈಯಲ್ಲಿ ದೀಪದ ಗರುಡಗಂಬ, ಜಾಗಟೆ ಹಿಡಿದು ತಲೆಗೆ ಒಂದು

ಶೆಲ್ಲೆ ಕಟ್ಟಿಕೊಂಡು ಭಿಕ್ಷಾಟನೆ ಮಾಡುವವರಾಗಿದ್ದಾರೆ. ವೆಂಕಟೇಶ್ವರನ ಭಕ್ತರು ತಾವೆಂದು ಹೇಳಿಕೊಳ್ಳುವರು. ಬಹುತೇಕ ಇವರನ್ನು ಮೇಲ್ಜಾತಿಗಳೆಂದು ಕರೆದುಕೊಳ್ಳುವವರು ಕೀಳಾಗಿ ಕಾಣುತ್ತಾರೆ.

ದೊಂಬಿದಾಸರಿಗಳು ತೆಲುಗು ಮತ್ತು ಕನ್ನಡವನ್ನು ಮಾತನಾಡುತ್ತಾರೆ. ಇವರಲ್ಲಿ ಎರಡು ಬೆಡಗುಗಳು ಮಾತ್ರ ಇವೆ. ಸಣ್ಣ ಅಕ್ಕಿ ಮತ್ತು ಘಂಟೆಲವರು. ಇವರ ಪ್ರಮುಖ ದೇವರು ಹನುಮಂತ. ಜೊತೆಗೆ ವಿಷ್ಣು–ವೆಂಕಟೇಶನನ್ನೂ ಪೂಜಿಸುವರು. ಹೆಣ್ಣುದೇವರುಗಳಾದ ಹುಲಿಗೆಮ್ಮ, ಮಾರಮ್ಮ, ಯಲ್ಲಮ್ಮ ಇತ್ಯಾದಿ ದೈವಗಳನ್ನೂ ಆರಾಧಿಸುತ್ತಿರುವುದನ್ನು ಕಾಣಬಹುದು.

*******

ಬುಡಕಟ್ಟು ತಳಸಮುದಾಯಗಳ ಕಣಜವಾಗಿರುವ ಚಿತ್ರದುರ್ಗ ಜಿಲ್ಲೆಯು ತನ್ನದೇ ಆದ ಭೌಗೋಳಿಕ, ಪೌರಾಣಿಕ ಮತ್ತು ಚಾರಿತ್ರಿಕವಾದ ಹಿನ್ನೆಲೆಯನ್ನು ಹೊಂದಿದ್ದು ಇಲ್ಲಿನ ಪ್ರಾದೇಶಿಕ ವೈಶಿಷ್ಟ್ಯಕ್ಕೆ ಗೊಂದಲಿಗ, ಬುಡ್ಗಜಂಗಮ, ಅರ್ಜುನ ಜೋಗಿ ಮತ್ತು ದೊಂಬಿದಾಸ ಮೊದಲಾದ ಅಲೆಮಾರಿ ಸಮುದಾಯಗಳು ತಮ್ಮ ಕಲೆಯ ಮೂಲಕ ಕೊಡುಗೆಯನ್ನು ನೀಡಿವೆ.

**ಕೊನೆ ಟಿಪ್ಪಣಿ**

1. ಶಂಕರನಾರಾಯಣ ರಾವ್ ಎ.ವಿ., ಇದು ಕರ್ನಾಟಕ, 2010, ಪು.238
2. ರಹಮತ್ ತರೀಕೆರೆ, ಕರ್ನಾಟಕ ನಾಥಪಂಥ, 2009, ಪು.126
3. ಕುಪ್ಪೆ ನಾಗರಾಜ, ದೊಂಬಿದಾಸರು, 2008, ಪು.4

**ಪರಾಮರ್ಶನ ಗ್ರಂಥಗಳು**

ಅಂಬಳಿಕೆ ಹಿರಿಯಣ್ಣ (ಸಂ), ಪೌರಾಣಿಕ ಕಥನ ಗೀತೆಗಳು, ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ ಪದ್ಯ ಸಾಹಿತ್ಯ ಭಾಗ–2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, 2006.

ಅಂಬಳಿಕೆ ಹಿರಿಯಣ್ಣ. ಕಾಡುಗೊಲ್ಲರ ಜನಪದ ಗಿತೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು, 1978.

ಅಪ್ಪಾಜಿ ಎಸ್. ಸಿಂಧೆ, ಕೆ. ಚಾವಡೆ ಲೋಕೇಶ್, ಗೋಸಂಗಿ, ಅಲೆಮಾರಿಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2008.

ಈಶ್ವರಪ್ಪ. ಎಂ.ಜಿ. ಮ್ಯಾಸಬೇಡರು ಪಿ.ಬಿ.ಹೆಚ್. ಪ್ರಕಾಶನ. ಬೆಂಗಳೂರು, 1982.

ಎಲ್ಲಪ್ಪ ಕೆ.ಕೆ. ಪುರ, ದೊಕ್ಕಲು ಮಕ್ಕಳು ಒಂದು ಅಧ್ಯಯನ, ಶ್ರೀದುರ್ಗಾ ಪ್ರಕಾಶನ ಕೆ.ಕೆ.ಪುರ, ಚಿತ್ರದುರ್ಗ. 1997.

ಕುಪ್ಪೆ ನಾಗರಾಜ, ದೊಂಬಿದಾಸ, ಅಲೆಮಾರಿಗಳ ಅಧ್ಯಯನಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2008.

ಮುದೇನೂರು ಲಿಂಗಪ್ಪ, ಬುರ್ರಕಥ ಈರಮ್ಮ ಅಲೆಮಾರಿ ಆತ್ಮಕಥನ, ವಿದ್ಯನಿಧಿ ಪ್ರಕಾಶನ, ಗದಗ, 2005.

ಯಲ್ಲಪ್ಪ ಬಿ. ಹಿಮ್ಮಡಿ, ಚೆನ್ನದಾಸರು, ಅಲೆಮಾರಿಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2008.

❖❖❖

# ಹರಿಹರ–ರಾಘವಾಂಕರು ಸ್ಮರಿಸಿರುವ ಪೂರ್ವಕವಿಗಳು

**ಡಾ. ಪಂಡಿತ ಕೆ. ರಾಠೋಡ**
ಸಹಾಯಕ ಪ್ರಾಧ್ಯಾಪಕರು
ಡಾ.ಆರ್.ಸಿ ಹಿರೇಮಠ ಕನ್ನಡ ಅಧ್ಯಯನ ಪೀಠ, ಕ.ವಿ.ವಿ ಧಾರವಾಡ–03

ಹರಿಹರ–ರಾಘವಾಂಕರ ವಿಚಾರದಲ್ಲಿ ಸುಮಾರು 50 ವರ್ಷಗಳಿಂದ ವಿದ್ವಾಂಸರಲ್ಲಿ ವಾದವಿವಾದ ನಡೆದಿದೆ. ಕ್ರಿ.ಶ.ಸುಮಾರು ಹದಿಮೂರನೆಯ ಶರಮಾನದ ಪ್ರಾರಂಭದಲ್ಲಿ ಈ ಉಭಯ ಕವಿಗಳೂ ಬಾಳಿರಬೇಕೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಇದೇ ಕಾಲದಲ್ಲಿ ಹೊಯ್ಸಳ ರಾಜಧಾನಿಯಾದ ಹಳೇಬೀಡಿನಲ್ಲಿ ವಿಖ್ಯಾತ ವೀರಶೈವ ಕವಿಗಳಾದ ಕೆರೆಯ ಪದ್ಮರಸ, ಕುಮಾರ ಪದ್ಮರಸರು ಇದ್ದಿರಬಹುದೆಂದು ಹಾಗೂ ಅವರ ಕೃತಿಗಳಾದ ದೀಕ್ಷಾಬೋಧೆ ಮತ್ತು ಸಾನಂದಚರಿತೆ(ಸಂಸ್ಕೃತ–ಕನ್ನಡ) ರಚನೆಯಾಗಿರಬಹುದೆಂದು ನಾವು ತರ್ಕಿಸಬಹುದು.

ಕೆರೆಯ ಪದ್ಮರಸನು ತ್ರಿಭುವನತಾತನೊಂದಿಗೆ ನಡೆಸಿದ ವಾಗ್ವಾದದಲ್ಲಿ ಕವೀಂದ್ರ ರಾಘವಾಂಕನು ಪದ್ಮರಸನ ಪರವಾಗಿ ವಾದ ಮಾಡಿದನೆಂದು ತಿಳಿದು ಬರುತ್ತದೆ (ಕ.ಕ.ಚ.ಭಾಗ–1 ಪುಟ 246). ರಾಘವಾಂಕನ ಸಮಾಧಿ ಬೇಲೂರಿನಲ್ಲಿಯೇ ಆಗಿದೆ ಎಂದು ರಾಘವಾಂಕ ಕಾವ್ಯ ಮತ್ತು ಚೆನ್ನಬಸವ ಪುರಾಣಗಳಲ್ಲಿದೆ. ಕೆರೆಯ ಪದ್ಮರಸನ ದೀಕ್ಷಾ ಬೋಧೆಯು ರಗಳೆ ಛಂದದಲ್ಲಿಯೂ, ಕುಮಾರ ಪದ್ಮರಸನ ಸಾನಂದ ಚರಿತೆಯು ಷಟ್ಪದಿ ಛಂದಸ್ಸಿನಲ್ಲಿಯೂ ರಚಿತವಾಗಿರುವುದನ್ನು ಗಮನಿಸಬಹುದು. ಹರಿಹರ–ರಾಘವಾಂಕರು ಸ್ಮರಿಸಿರುವ ಪೂರ್ವಕವಿಗಳ ವಿಚಾರವನ್ನು ಪರಿಶೀಲಿಸೋಣ. ಈ ಉಭಯರೂ ವೀರಶೈವ ಮತೀಯರು ಹಾಗೂ ಬ್ರಹ್ಮಚರ್ಯದಿಂದ ಕೂಡಿದ ಪರಿಶುದ್ಧ ಜೀವನವುಳ್ಳವರು. ಹರೀಶ್ವರನು ತನ್ನ 'ಗಿರಿಜಾಕಲ್ಯಾಣ' ಕಾವ್ಯದಲ್ಲಿ (ಆಶ್ವಾಸ 1–8)

**ಘನ ಕವಿತ್ವದೊಳು ಸಂದ ಮಯೂರನ ರೇಖೆ,**
**ಕಾಳಿದಾಸನ ರಸವೃತ್ತಿ,**
**ಬಾಣನ ಮೃದೂಕ್ತಿ,**
**ಹಲಾಯುಧನ ಅಶು,**
**ಕೇಶಿರಾಜನ ಬಗೆ,**
**ಉದ್ಭಟಯ್ಯನ ಗಂಭೀರತೆ,**
**ಮಲ್ಲಣನ ಏಳ್ಗೆ,**
**ಭೋಜರಾಜನ ಜಸಂ**
**ಎನ್ನ ಕಾವ್ಯದೊಳ್ ಸಂತತಂ ನಲವಿಂ ನೆಲೆಸಿರ್ಕೆ"**

ಎಂದು ಪ್ರಾರ್ಥಿಸಿದ್ದಾನೆ. ಈ ಪೂರ್ವ ಕವಿಗಳಲ್ಲಿ ಷಡಕ್ಷರಕಂದವನ್ನು ಬರೆದ ಕೊಂಡಗುಳಿ ಕೇಶಿರಾಜನು ಮಾತ್ರ ಕನ್ನಡ ಕವಿ. ಉಳಿದವರು ಸಂಸ್ಕೃತದ ಪ್ರಾಚೀನ ಶೈವ ಕವಿಗಳು.

ಹರಿಹರನ ವಿನೂತನ ವೀರಪಂಥವನ್ನು ಮುಂದುವರಿಸಿದ ರಾಘವಾಂಕನು ಹರಿಶ್ಚಂದ್ರಕಾವ್ಯದಲ್ಲಿ (1–14) "ಮನ ವಚನ ಕಾಯದೊಳಗೆ ಒಮ್ಮೆಯುಂ ಪಾಲಲೋಚನನಂ ಅಲ್ಲದೆ ಪೊಗಳದ ಉದ್ಭಟಯ್ಯನ, ಮಯೂರನ, ಕಾಳಿದಾಸನ, ಕೇಶಿರಾಜನ, ಮಲುಹಣನ, ಬಾಣನ, ವಿನುತ ಭೋಜನ, ಭಲ್ಲಟನ, ಭಾರವಿಯ ಪದವ ನೆನೆದು ಬಲಗೊಂಡು ತೊಡಗಿದೆಂ ಈ ಮಹಾಕೃತಿಯಂ, ಚತುರ ಕವಿರಾಯ ಹಂಪೆಯ ಹರೀಶ್ವರನ ವರಸುತಂ, ಉಭಯಕವಿ ಕಮಲರವಿ ರಾಘವಾಂಕಂ" ಎಂದು ಹೇಳಿಕೊಂಡಿದ್ದಾನೆ. ಈ ಮೇಲೆ ಕಂಡ ಪೂರ್ವಕವಿಗಳಲ್ಲಿ ಹರಿಹರನು ಸ್ಮರಿಸಿದ ಎಂಟು ಮಂದಿ ಕವಿಗಳ ಜತೆಯಲ್ಲಿ, ಭಲ್ಲಟ, ಮತ್ತು ಭಾರವಿ ಎಂಬ ಇಬ್ಬರು ಸಂಸ್ಕೃತ ಕವಿಗಳ ಹೆಸರನ್ನು ರಾಘವಾಂಕನು ಹೆಚ್ಚಿಗೆ ಸೇರಿಸಿದ್ದಾನೆ. ಅಂದರೆ ರಾಘವಾಂಕನು ಸ್ಮರಿಸಿದ ಪ್ರಾಚೀನರು ಹತ್ತು ಮಂದಿ ಮಾತ್ರ.

ಮಹಾಕವಿ ಷಡಕ್ಷರದೇವನ ವೃಷಭೇಂದ್ರ ವಿಜಯದ ಕಡೆಯಲ್ಲಿ ಮಂಚಣ್ಣ, ಮಲ್ಲಿಕಾರ್ಜುನ, ಶ್ರೀಕರ ಎಂಬ ಪಂಡಿತತ್ರಯರ ಹೆಸರುಗಳ ಜತೆಯಲ್ಲಿ, ಮಲ್ಹಣ್ಣ, ಉದ್ಭಟದೇವ, ಹಲಾಯುಧ, ಕೇಶಿರಾಜ ಮೊದಲಾದ ಈ ಹೆಸರುಗಳನ್ನು ಸ್ಮರಿಸಿದ್ದಾನೆ ಎಂಬುದು ಗಮನಾರ್ಹ. ಈಗ ಆ ಕವಿಗಳ ಸಂಗ್ರಹವಾದ ಪರಿಚಯವನ್ನು ಇಲ್ಲಿ ನಾವು ಕಾಣಬಹುದು.

1. ಕೊಂಡಗುಳಿ ಕೇಶಿರಾಜ: ಇವನು ಷಡಕ್ಷರಕಂದವನ್ನು ಬರೆದಿದ್ದಾನೆ. ವಚನಗಳನ್ನೂ ಬರೆದಿದ್ದಾನೆ. ಇವನು ವೀರಶೈವ ಕವಿ. ಕಾಲ ಕ್ರಿ.ಶ.1160. ಇವನ ವಿಷಯವಾಗಿ ಭೈರವೇಶ್ವರ ಕಾವ್ಯ ಕಥಾಮಣಿಸೂತ್ರ ರತ್ನಾಕರದಲ್ಲಿ "ಕಲ್ಯಾಣದ ಪೆರ್ಮಾಡಿರಾಜನು ಈತನನ್ನು ಕರೆತರಿಸಿ ಪ್ರಧಾನಿ ಪಟ್ಟವನ್ನು ಕೊಟ್ಟು ಕೇಶಿರಾಜ ದಣ್ಣಾಯಕನೆಂದು ಹೆಸರಿಟ್ಟನೆಂದು ಹೇಳಲಾಗಿದೆ. ಇವನು ಪ್ರತಿದಿನವೂ ಶಿವನನ್ನು ಎಂಟು ಶ್ಲೋಕಗಳಿಂದ ಸ್ತೋತ್ರ ಮಾಡುತ್ತಿದ್ದಂತೆ ತಿಳಿದುಬರುತ್ತದೆ"(ಕ.ಕ.ಚ.ಭಾಗ–1. ಪುಟ 185). ಶಿಕಾರಿಪುರದ ನಂ. 119, 120ನೇ ಶಾಸನಗಳಿಂದ ಇವನು ಭಾರದ್ವಾಜ ಗೋತ್ರದವನು. ಹೊಳಲಮರಸ–ದುರ್ಗಾದೇವಿಯರ ಮಗನು. ಬಿಜ್ಜಳರಾಯನ ಕೈಕೆಳಗೆ(1156–67) ಬನವಸೆಯ ಪನ್ನಿರ್ಛಾಸಿರವನ್ನು ಆಳುತ್ತಾ ಬಲಿಪುರದಲ್ಲಿದ್ದನು. ಬಿಜ್ಜಳನು ಕಾಲವಾದ ಮೇಲೆ ಅವನ ಮಗ ರಾಯಮುರಾರಿ ಸೋಯಿದೇವನ ಕಾಲದಲ್ಲಿಯೂ ಇದ್ದನು. ಇವನು ಬಹಳ ಪರಾಕ್ರಮಿ. ಇವನ ಗ್ರಂಥ 'ಷಡಕ್ಷರಮಂತ್ರ' ಅಥವಾ 'ಷಡಕ್ಷರಕಂದ'. ಇದರಲ್ಲಿ 110 ಕಂದಗಳಿವೆ. "ಓಂ ನಮಃ ಶಿವಾಯೆಂಬ ಪದಂ" ಎಂದು ಕಂದಗಳು ಮುಗಿಯುತ್ತವೆ. ಇವನ ಕಂದಗಳು ಸುಂದರವಾಗಿಯೂ ಅಪೂರ್ವ ಶಬ್ದಗಳಿಂದಲೂ ಕೂಡಿವೆ. ಇವನ ಗ್ರಂಥದ ಪ್ರಭಾವ ಹರಿಹರನ ಗಿರಿಜಾಕಲ್ಯಾಣದ ಮೇಲೆ ಆಗಿದೆಯೆಂದು ಈ ಉಭಯ ಗ್ರಂಥಗಳ ಅಧ್ಯಯನದಿಂದ ಅರಿಯಬಹುದು. ತನ್ನ ಕಾವ್ಯದಲ್ಲಿ 'ಕೇಶಿರಾಜನ ಬಗೆ ನೆಲಸಿರ್ಕೆ' ಎಂದು ಕವಿ ಹೇಳಿದ್ದಾನೆ.

2. ಮಯೂರ ಕವಿ : ಈತನು ಸುಪ್ರಸಿದ್ಧ ಬಾಣಭಟ್ಟನ ಸಮಕಾಲೀನನು. ಹರ್ಷಚರಿತದಲ್ಲಿ ಮಯೂರನ ಹೆಸರು ಬಂದಿದೆ (ಜಾಂಗಲಿಕೋ ಮಯೂರಃ). ಇವನು ಶ್ರೀಹರ್ಷನ ಆಸ್ಥಾನದಲ್ಲಿದ್ದ. 7ನೇ ಶತಮಾನಕ್ಕೆ ಸೇರಿದವನು. ಇವನು ಸೂರ್ಯಶತಕವನ್ನು ಬರೆದಿದ್ದಾನೆ. ಅದಕ್ಕೆ ಜಯಮಂಗಳನು ವ್ಯಾಖ್ಯಾನ ಬರೆದಿದ್ದಾನೆ.

ಸಂಸ್ಕೃತ ಸಾಹಿತ್ಯದಲ್ಲಿ 'ಮಯೂರ' ಎಂಬ ಹೆಸರಿನವರು ಬಹಳ ಮಂದಿ ಇದ್ದಾರೆ. ಒಬ್ಬನು 'ಚಂದ್ರಿಕಾ' ಗ್ರಂಥಕಾರ; ಇನ್ನೊಬ್ಬನು ವಾಖ್ಯಾನಕಾರ ಮಯೂರಭಟ್ಟ. ಆದರೆ ಆದಿಕವಿ ಮಯೂರನು 'ಸೂರ್ಯಶತಕ,' 'ಮಯೂರಾಷ್ಟಕ'ಗಳನ್ನು ಬರೆದು ಪ್ರಖ್ಯಾತನಾಗಿದ್ದಾನೆ. ಸೂರ್ಯಶತಕದಿಂದ ಆನಂದವರ್ಧನ, ಕ್ಷೇಮೇಂದ್ರ, ಮಮ್ಮಟ, ವರ್ಧಮಾನ, ಗಂಗಾಧರ, ಉಜ್ವಲದತ್ತ, ಶರಣದೇವ ಮೊದಲಾದವರು ಪದ್ಯಗಳನ್ನು ಉಲ್ಲೇಖಿಸಿದ್ದಾರೆ. ಆದ್ದರಿಂದಲೇ ಈ ಮಹಾಕವಿಯನ್ನು ಕುರಿತು ಹರಿಹರನು 'ಮಯೂರನ ರೇಖೆ' ಎಂದು ಹೇಳಿರುತ್ತಾನೆ. ಭಾರತದಲ್ಲಿ ಸೂರ್ಯಾರಾಧನೆ ಹೆಚ್ಚಿದ್ದ ಕಾಲದಲ್ಲಿ ಈ ಕವಿ ಬದುಕಿದ್ದನು. ಬಾಣನ ತಂಗಿ ಮಯೂರನ ಹೆಂಡತಿ.

4. ಹಲಾಯುಧ ಕವಿ: ಇವನು ಅಭಿಧಾನರತ್ನಮಾಲೆಯನ್ನು ಬರೆದಿದ್ದಾನೆ. 'ಕವಿರಹಸ್ಯ' ಎಂಬ ಮತ್ತೊಂದು ಗ್ರಂಥವನ್ನೂ ಬರೆದಂತೆ ತಿಳಿದು ಬರುತ್ತದೆ. 'ಮೃತಸಂಜೀವಿನಿ' ವ್ಯಾಖ್ಯಾನವನ್ನು ಕೂಡ ಬರೆದಂತೆ ತಿಳಿಯುತ್ತದೆ. ಇವನ ಕಾಲ 10ನೆಯ ಶತಮಾನವೆಂದು ಹೇಳಲಾಗಿದೆ. ಕವಿ ರಹಸ್ಯದಲ್ಲಿ 174 ಶ್ಲೋಕಗಳಿವೆ. ಇವನು ದಕ್ಷಿಣದೇಶದ ಬ್ರಾಹ್ಮಣನೆಂದು ತಿಳಿದು ಬರುತ್ತದೆ (ಸಂಸ್ಕೃತ ಕವಿ ಚರಿತ್ರೆ, ಭಾಗ–2 ಪುಟ 90). ಇವನು ಉತ್ತರದೇಶದ ನವಗ್ರಾಮವೆಂಬ ಊರಿನಲ್ಲಿದ್ದನು. ತನ್ನ ಶಿವಭಕ್ತಿಯ ಮಹಿಮೆಯಿಂದ ಎಲ್ಲರೊಡನೆ ತಾನು ಕೈಲಾಸಕ್ಕೆ ಹೋದಕಥೆ ವೀರಶೈವರಲ್ಲಿ ಪ್ರಸಿದ್ಧವಾಗಿದೆ.

4. ಉದ್ಭಟಯ್ಯ: ಹರಿಹರ–ರಾಘವಾಂಕರು ಸ್ಮರಿಸಿರುವ ಉದ್ಭಟಯ್ಯನು ಸಂಸ್ಕೃತ ಕವಿಯಾದ ಉದ್ಭಟದೇವನು. ಇವನಿಗೆ ಉದ್ಭಟಾಚಾರ್ಯ ಎಂಬ ಹೆಸರೂ ಇದೆ. ಇವನು ಬ್ರಾಹ್ಮಣ; ಕಾಶ್ಮೀರದವನು. ಇವನ ಗ್ರಂಥ ಕಾವ್ಯಾಲಂಕಾರ ಸಂಗ್ರಹ. ಇವನು 'ಕುಮಾರ ಸಂಭವ' ಎಂಬ ಕಾವ್ಯವನ್ನು ಬರೆದಂತೆ ಪ್ರತೀತಿಯಿದೆ. ಆದರೆ ಈ ಗ್ರಂಥ ಕಣ್ಮರೆಯಾಗಿದೆ. ಹರಿಹರನು ಆ ಕುಮಾರ ಸಂಭವವನ್ನು ಓದಿರಬಹುದೇ? ಈ ಉದ್ಭಟನು ನಮ್ಮ ರಾಷ್ಟ್ರದ ಪ್ರಖ್ಯಾತ ಅಲಂಕಾರಿಕರಲ್ಲಿ ಒಬ್ಬನಾಗಿದ್ದಾನೆ. ಇವನು ಸಾವಿರ ಗ್ರಂಥಗಳುಳ್ಳ 'ಹರಲೀಲೆ' ಎಂಬ ಕಾವ್ಯವನ್ನು ಬರೆದಿದ್ದನೆಂದು ತಿಳಿದು ಬರುತ್ತದೆ. ವೀರಶೈವ ಸಾಹಿತ್ಯದಲ್ಲಿ ಸುಪ್ರಸಿದ್ಧವೆನಿಸಿರುವ ಉದ್ಭಟ ಕಾವ್ಯ, ಉದ್ಭಟದೇವ ಚರಿತೆಗಳಲ್ಲಿ ಅಭಿವರ್ಣಿತನಾಗಿರುವ ಉದ್ಭಟದೇವನೆಂಬ ಶರಣನಿಗೆ ಈ ಉದ್ಭಟಯ್ಯನು ಭಿನ್ನನೆಂದು ತೋರುತ್ತದೆ.

5. ಕವಿ ಮಲ್ಹಣ: ಇವನು ಸಂಸ್ಕೃತದಲ್ಲಿ ಶಿವಸ್ತೋತ್ರವನ್ನು ಬರೆದಿರುವನು. ಹರೀಶ್ವರನು ಈತನನ್ನು ಕುರಿತು 'ಮಲುಹಣ ರಗಳೆ' ಬರೆದಿದ್ದಾನೆ. ಇವನು ಕಾಶ್ಮೀರದ ಭಾರತೀಪೀಠ ಪಟ್ಟಣದ ಸುವರ್ಣಭಟ್ಟನ ಮಗನು. ಮೊದಲು ಕಾಮುಕನಾಗಿದ್ದನು. ಕಡೆಗೆ ಆ ವೇಶ್ಯೆ ಮಲುಹಣಿಯ ಉಪದೇಶದಿಂದ ತನ್ನ ಮನಸ್ಸನ್ನು ಪರಶಿವನೆಡೆಗೆ ತಿರುಗಿಸಿ ಶಿವಸ್ತೋತ್ರಗಳನ್ನು ರಚಿಸಿದನು. ಸಂಸ್ಕೃತದಲ್ಲಿ ಇವನ ಸ್ತೋತ್ರವು ಪ್ರಸಿದ್ಧವಾಗಿದೆ. 'ಕಾಂತಾ ಕಚ ಪ್ರಚಯ ಪುಷ್ಪ ಸುಗಂಧಿ ಗಂಧ' ಎಂದು ಇವನ ಸ್ತೋತ್ರ ಪ್ರಾರಂಭವಾಗುವುದು. ಈ ಸ್ತೋತ್ರದಲ್ಲಿ 39 ವೃತ್ತಗಳಿವೆ. ಈ ವಿಶ್ವಾರಾಧ್ಯನು ಕೆರೆಯ ಪದ್ಮರಸನ ಮೊಮ್ಮಗನು ಹಾಗೂ ಕುಮಾರ ಪದ್ಮರಸನ ಮಗನು ಎಂದು ಹೊಸಮಠದ ಬಸವಲಿಂಗ ಸ್ವಾಮಿಗಳು ಹೇಳಿದ್ದಾರೆ(ಶಿವಪಂಚಸ್ತವ ಪೀಠಿಕೆ, 1908 ಮೈಸೂರು ಮುದ್ರಣ).

6. ಕವಿಕಾಳಿದಾಸ : ಇವನು ಸಂಸ್ಕೃತದಲ್ಲಿ ಸುಪ್ರಸಿದ್ಧನಾದ ಕವಿ. ಐಹೊಳೆಯ ರವಿಕೀರ್ತಿಯ ಶಾಸನದಲ್ಲಿ (ರವಿಕೀರ್ತಿ: ಕವಿತಾಶ್ರಿತ ಕಾಳಿದಾಸ ಭಾರವಿ ಕೀರ್ತಿಃ) ಭಾರವಿಯ ಹೆಸರಿನ ಜತೆಯಲ್ಲಿ ಈತನ ಹೆಸರೂ ಬಂದಿದೆ. ಇವನ ಕಾಲ ಸು.4ನೇ ಶತಮಾನ. ಕಾವ್ಯಗಳು: 'ರಘುವಂಶ,' 'ಕುಮಾರಸಂಭವ,' 'ಮೇಘದೂತ,' ಋತುಸಂಹಾರ, ನಾಟಕಗಳು: 'ಅಭಿಜ್ಞಾನ ಶಾಕುಂತಲ', 'ವಿಕ್ರಮೋರ್ವಶೀಯ,' 'ಮಾಳವಿಕಾಗ್ನಿ ಮಿತ್ರ.'

ವೀರಶೈವ ಗ್ರಂಥಗಳಲ್ಲಿ 'ಕಾಳಿದಾಸ' ಎಂಬ ಶರಣನ ಹೆಸರಿದೆ. ಪ್ರೌಢದೇವರಾಯನ ಕಾವ್ಯದಲ್ಲಿ ಶರಣ ಕಾಳಿದಾಸನ ಕಥೆ ಬಂದಿದೆ. ಬಸವೇಶ್ವರನ ವಚನಗಳಲ್ಲಿ 'ಕಾಳಿದಾಸಂಗೆ ಕಣ್ಣನಿತ್ತೆ, ಕಾಳಿದಾಸನವ ನಾನು' ಎಂಬ ಮಾತುಗಳು ಬರುತ್ತವೆ. ಇವು ಶರಣರು ಕಾಳಿದಾಸನನ್ನು ಕುರಿತು ಆಡಿದ ಮಾತುಗಳು. ಕಾಳಿದಾಸನ ರಸವೃತ್ತಿಯೂ, ಶಿವಭಕ್ತಿಯೂ ಅದ್ವಿತೀಯವಾಗಿ ಇವೆಯೆಂಬುದು ಹರಿಹರನ ಅಭಿಪ್ರಾಯ. ಕಾಳಿದಾಸನ 'ಕುಮಾರಸಂಭವ'ವು ಹರಿಹರನ ಗಿರಿಜಾಕಲ್ಯಾಣಕ್ಕೆ ಸ್ಫೂರ್ತಿಯನ್ನು ಕೊಟ್ಟಿದೆಯೆನ್ನಬಹುದು.

7. ಕವಿ ಬಾಣಭಟ್ಟ: ಸಂಸ್ಕೃತದಲ್ಲಿ ಕಾದಂಬರಿ ಮತ್ತು ಹರ್ಷಚರಿತ್ರಗಳನ್ನು ಬರೆದವನು ಈ ವಿಖ್ಯಾತನಾದ ಬಾಣಭಟ್ಟ. ಇವನ ಕಾಲ ಕ್ರಿ.ಶ. 7ನೆಯ ಶತಮಾನ. ಈತನು ಶ್ರೀಹರ್ಷನ ಆಸ್ಥಾನ ಕವಿಯಾಗಿದ್ದನು. ಶ ಇವನು ಬ್ರಾಹ್ಮಣ. "ಚಂಡೀ ಶತಕ" ಬರೆದಂತೆ ತಿಳಿದುಬರುತ್ತದೆ. "ಪಾರ್ವತೀ ಪರಿಣಯ'ವನ್ನು ಇವನೇ ರಚಿಸಿರಬೇಕೆಂಬುದು ಕೆಲವರ ವಾದ. ಬಾಣಭಟ್ಟನ 'ಕಾದಂಬರಿ' ವಿಶ್ವಸಾಹಿತ್ಯದಲ್ಲಿ ಪರಿಗಣಿಸಲು ಅರ್ಹವಾದ ಮಹಾಕಾವ್ಯ. ಅದರಿಂದ 'ಬಾಣೋಚ್ಚಿಷ್ಟಂ ಜಗತ್ಸರ್ವಂ' ಎಂಬ ಮಾತು ಬಂದಿದೆ. ಭಾರತದ ಪ್ರಸಿದ್ಧ ಕವಿಗಳೆಲ್ಲರೂ ಬಾಣಭಟ್ಟನಿಗೆ ಋಣಿಗಳಾಗಿದ್ದಾರೆ. 'ಬಾಣನ ಮೃದೂಕ್ತಿ' ಹರೀಶ್ವರನ ಮನಸ್ಸಿಗೆ ಬಹಳವಾಗಿ ಹಿಡಿಸಿದೆಯೆಂದು ತೋರುತ್ತದೆ.

8. ಕವಿ ಭೋಜರಾಜ: "ಭೋಜರಾಜನ ಜಸಂ ಸಂತತಂ ತನ್ನ ಕಾವ್ಯದೊಳ್ ನೆಲೆಸಿರ್ಕೆ" ಎನ್ನುವವನು ಕವಿ ಹರಿಹರನು. ಸಂಸ್ಕೃತದಲ್ಲಿ ಚಂಪೂ ರಾಮಾಯಣವನ್ನು ಬರೆದವನು ಈ ಭೋಜನಾಗಿರಬೇಕು. ಇವನು ಧಾರಾನಗರದಲ್ಲಿ ಆಳುತ್ತಿದ್ದಂತೆ ಇತಿಹಾಸದಿಂದ ತಿಳಿದುಬರುತ್ತದೆ. ಈತನು ಸಿಂಧುಲ ರಾಜನ ಮಗನು. ಪರಮಾರ ವಂಶದವನು. ಇವನು 'ಸರಸ್ವತೀ ಕಂಠಾಭರಣ'ವನ್ನೂ ಬರೆದಿದ್ದಾನೆ. ಇವನು ಕ್ರಿ.ಶ. 1018–1060ರವರೆಗೆ ರಾಜ್ಯಭಾರ ಮಾಡಿದನು. (Vinent smith's early History of India P.395). ಈತನು ಖಗೋಳ, ಜ್ಯೋತಿಷ್ಯ, ವೈದ್ಯ, ಶಿಲ್ಪ, ವ್ಯಾಕರಣ, ವೇದಾಂತ ಮೊದಲಾದಗಳನ್ನು ಕುರಿತು ಬರೆದಂತೆ ತಿಳಿಯುತ್ತದೆ. ಚಂಪೂ ರಾಮಾಯಣವು ಈತನದಲ್ಲವೆಂಬ ವಾದವೂ ಇದೆ(ಸಂ. ಕ.ಚ.ಭಾಗ–2 ಪುಟ 129).

ಷಡಕ್ಷರಕವಿಯ ರಾಜಶೇಖರ ವಿಳಾಸದಲ್ಲಿ 'ಸತತರಾಧಿತ ಶಂಕರೀರಮಣ ಪಾದಾಂಭೋಜನಂ ಭೋಜನಂ'(ರಾಜಶೇಖರ ವಿಳಾಶ 1–18) ಎಂದು ಭೋಜನೊಬ್ಬನನ್ನು ಸ್ಮರಿಸಲಾಗಿದೆ. ಹೀಗೆ ಹರಿಹರ, ರಾಘವಾಂಕ, ಷಡಕ್ಷರ ಕವಿಗಳಿಂದ ಸ್ಮರಿಸಲ್ಪಟ್ಟಿರುವ ಭೋಜನು ಸಂಸ್ಕೃತದ ಕವಿಯೋ ಅಥವಾ ಬೇರೆಯೋ ಎಂಬುದು ಆಲೋಚನಾರ್ಹವಾಗಿದೆ. ಸಂಸ್ಕೃತ ಭಾಷೆಯಲ್ಲಿ ವೀರಶೈವ ತತ್ತ್ವಪ್ರಕಾಶ

ಮತ್ತು ಶತಸೂತ್ರ ರತ್ನ ಎಂಬ ಗ್ರಂಥಗಳನ್ನು ಬರೆದ "ಭೋಜ ನೃಪತಿ" ಒಬ್ಬ ಇದ್ದಾನೆ. ಇವನ ಕಾಲ ಗೊತ್ತಿಲ್ಲ. ಈತನ ಶತಸೂತ್ರ ರತ್ನಕ್ಕೆ ಪರ್ವತೇಶ್ವರಕೃತ ಟೀಕೆಯಿದೆ. ಆರ್. ಕರಿಬಸವಶಾಸ್ತ್ರಿಗಳು ಕ್ರಿ.ಶ.1911ರಲ್ಲಿ ಮೈಸೂರಿನಲ್ಲಿ ಈ ಗ್ರಂಥವನ್ನು ಪ್ರಕಟಿಸಿದ್ದಾರೆ. ತತ್ತ್ವ ಪ್ರಕಾಶಿಕೆಯ ಕರ್ತೃವೇ ಶತಸೂತ್ರ ರತ್ನದ ಕರ್ತೃ ಎಂದು ಸಂಪಾದಕರು ಊಹಿಸಿದ್ದಾರೆ. ಈ ಗ್ರಂಥಗಳ ಕರ್ತೃವು ಪ್ರಾಚೀನ ಹಸ್ತಪ್ರತಿಗಳಲ್ಲಿ 'ಭೋಜದೇವ ನೃಪತಿ' ಎಂದು ನಿರೂಪಿತವಾಗಿದೆ. ಈ ಗ್ರಂಥಗಳು ವೀರಶೈವ ಮತಧರ್ಮವನ್ನರಿಯಲು ಅನುಕೂಲವಾಗಿವೆ. ತತ್ತ್ವ ಪ್ರಕಾಶಿಕೆಗೆ ಅಘೋರ ಶಿವಾಚಾರ್ಯರು ವ್ಯಾಖ್ಯಾನ ಬರೆದಿದ್ದಾರೆ. ಆದುದರಿಂದ ಹರಿಹರ, ರಾಘವಾಂಕ, ಷಡಕ್ಷರದೇವ ಮೊದಲಾದ ಕವಿಗಳು ಸ್ಮರಿಸುವ ಭೋಜನು ವೀರಶೈವ ತತ್ತ್ವಪ್ರಕಾಶ ಮತ್ತು ಶತಸೂತ್ರ ರತ್ನಗಳನ್ನು ಬರೆದ ಕವಿಯಾಗಿದ್ದರೂ ಇರಬಹುದು. ರಾಘವಾಂಕನು ತನ್ನ ಹರಿಶ್ಚಂದ್ರಕಾವ್ಯದಲ್ಲಿ ಸ್ಮರಿಸಿದವರ ಜತೆಗೆ ಭಲ್ಲಟ ಮತ್ತು ಭಾರವಿ ಎಂಬ ಇಬ್ಬರು ಕವಿಗಳನ್ನು ಹೆಚ್ಚಾಗಿ ಸೇರಿಸಿರುವನು.

9. ಭಾರವಿ ಕವಿ: ಸಂಸ್ಕೃತದಲ್ಲಿ 'ಕಿರಾತಾರ್ಜುನೀಯ' ಎಂಬ ಸುಪ್ರಸಿದ್ಧ ಕಾವ್ಯ ಬರೆದಿದ್ದಾನೆ. 'ಉಪಮಾ ಕಾಳಿದಾಸಸ್ಯ ಭಾರವೇ ರರ್ಥಗೌರವಂ' ಎಂದು ವಿದ್ವಾಂಸರು ಪ್ರಶಂಸಿಸಿದ್ದಾರೆ. ಪ್ರೊ. ಮ್ಯಾಕನೋಡಲ್ 'ಈ ಕವಿ ಆರನೇ ಶತಮಾನದವ'ನೆಂದು ಹೇಳುತ್ತಾರೆ. ಐಹೊಳೆಯ ಶಾಸನದಲ್ಲಿ ಭಾರವಿಯ ಹೆಸರು ಬಂದಿದೆ.

10. ಭಲ್ಲಟಕವಿ: ಒಂದು ಶತಕ ಗ್ರಂಥವನ್ನು ಬರೆದಿದ್ದಾನೆ. ಮಮ್ಮಟನ ಕಾವ್ಯ ಪ್ರಕಾಶ, ವಲ್ಲಭದೇವನ 'ಸುಭಾಷಿತ ತಾರಾವಳಿ' ಮತ್ತು ಕ್ಷೇಮೇಂದ್ರನ ಗ್ರಂಥಗಳಲ್ಲಿ ಇವನ ಶತಕದ ಉಲ್ಲೇಖವಿದೆ. ಇವನನ್ನು ವೀರಶೈವ ಕವಿಗಳು ಬಹಳವಾಗಿ ಹೊಗಳಿದ್ದಾರೆ. ಕ್ರಿ.ಶ. 9ನೇ ಶತಮಾನದವನೆಂದು ಹೇಳಿದೆ. (ಕರ್ಣಾಟಕ ಕವಿಚರಿತೆ ಭಾಗ-1, ಪುಟ 224)

ಬಸವೇಶ್ವರರ ಧರ್ಮಕ್ರಾಂತಿಯ ಫಲವನ್ನು ಹರಿಹರನ ರಗಳೆ ಹಾಗೂ ರಾಘವಾಂಕನ ಸಿದ್ದರಾಮ ಮತ್ತು ಸೋಮನಾಥ ಚಾರಿತ್ರಗಳಲ್ಲಿ ನೋಡಬಹುದು. ಕನ್ನಡದಲ್ಲಿ ಹರಿಹರ-ರಾಘವಾಂಕರಿಗೆ ಸಮಕಾಲದಲ್ಲಿ ಕೆರೆಯ ಪದ್ಮರಸ ಮತ್ತು ಕುಮಾರ ಪದ್ಮರಸ ಕವಿಗಳಿದ್ದರು. ಆದರೆ ಪೂರ್ವಕವಿ ಎನಿಸಿಕೊಂಡವರು ಕೊಂಡಗುಳಿ ಕೇಶಿರಾಜರೊಬ್ಬರೇ ಎಂಬುದಿಲ್ಲಿ ಗಮನಾರ್ಹ. 13ನೆಯ ಶತಕದ ವೀರಶೈವ ಮಹಾಕವಿಗಳಾದ ಹರೀಶ್ವರ, ರಾಘವಾಂಕ, ಕೆರೆಯ ಪದ್ಮರಸ, ಕುಮಾರ ಪದ್ಮರಸ ಹಾಗೂ ನಿಜಗುಣ ಶಿವಯೋಗಿಗಳು ತಮ್ಮ ಕಾವ್ಯಗಳ ಪ್ರಾರಂಭದಲ್ಲಿ ಬಸವಾದಿಗಳ ಹೆಸರುಗಳನ್ನು ಸ್ಮರಿಸಿಲ್ಲವೆಂಬುದು ಇಲ್ಲಿ ಗಮನಾರ್ಹ. ಹರೀಶ್ವರನು ಬಸವೇಶ್ವರ ಮತ್ತು ಅಕ್ಕಮಹಾದೇವಿ ಕುರಿತು ರಗಳೆಗಳನ್ನು ಬರೆದಿದ್ದಾನೆ. ರಾಘವಾಂಕನು ಸಿದ್ದರಾಮ ಪುರಾಣ ಬರೆದಿದ್ದಾನೆ. ಆದುದರಿಂದ ಇವರಿಗೆ ಬಸವಾದಿಗಳ ಪರಿಚಯ ಚೆನ್ನಾಗಿತ್ತೆನ್ನಬಹುದು.

ಭೀಮ ಕವಿಯು ಕನ್ನಡದಲ್ಲಿ ಬಸವಪುರಾಣ ಬರೆದ ಅನಂತರವೇ(ಕ್ರಿ.ಶ. 1369) ಗ್ರಂಥಗಳ ಪ್ರಾರಂಭದಲ್ಲಿ ಬಸವಾದಿಗಳನ್ನು ಸ್ಮರಿಸುವ ಪದ್ಧತಿ ಬಂತೆಂದು ಕಾಣುತ್ತದೆ. ಕ್ರಿ.ಶ.1385ರಲ್ಲಿದ್ದ ಪದ್ಮಣಾಂಕನು ತನ್ನ ಪದ್ಮರಾಜ ಪುರಾಣದ ಗ್ರಂಥಾದಿಯಲ್ಲಿ ಬಾಣ, ಉದ್ಭಟ, ರಾಘವಾಂಕ, ಭೋಜ, ಹರೀಶ್ವರ, ಭೀಮಕವಿ, ಮಯೂರ, ಮಲುಹಣ,

ಭಾರವಿಗಳನ್ನು ಸ್ಮರಿಸಿದ್ದಾನೆ. ಅಲ್ಲದೆ, ಇಲ್ಲಿ ಬಸವೇಶ್ವರ–ಗಂಗಾಂಬಿಕೆಯರ ಸ್ಮರಣೆಯು ಬಂದಿರುವುದು ಗಮನಾರ್ಹವಾಗಿದೆ. ಕ್ರಿ.ಶ. 1125ರ ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ ಮಲ್ಹಣ ಮತ್ತು ಉದ್ಭಟರ ಹೆಸರುಗಳು ಬಂದಿವೆ. ಪದ್ಮಣಾಂಕನು ಕಾವ್ಯಾದಿಯಲ್ಲಿ ಸ್ಮರಿಸಿರುವ ನೀಲಕಂಠ, ನಾಗನಾಥಾಚಾರ್ಯ(ವೀರಮಾಹೇಶ್ವರಾಚಾರ ಸಂಗ್ರಹ), ಪಾಲ್ಕುರಿಕೆ ಸೋಮನಾಥ(ಬಸವರಾಜೀಯ), ಲಕ್ಷ್ಮೀಧರಾರಾಧ್ಯ(ಸಾರೋದ್ಧಾರ), ಮಲ್ಲಿಕಾರ್ಜುನಾರಾಧ್ಯ(ಶಿವಜ್ಞಾನ ಪ್ರದೀಪಿಕೆ), ಮಂಚಣ್ಣ, ಮಲ್ಲಿಕಾರ್ಜುನ, ಶ್ರೀಕರ (ಪಂಡಿತತ್ರಯರು) ಈ ಕವಿಗಳ ವಿಚಾರ ಕೂಡ ವೀರಶೈವ ಸಾಹಿತ್ಯ ಚರಿತ್ರೆ ಅರಿಯುವವರಿಗೆ ಅಗತ್ಯವಾಗಿದೆ. ಹರಿಹರ–ರಾಘವಾಂಕರ ವಿಚಾರವಾಗಿ ಹಲವು ಮಂದಿ ಲೇಖನಗಳನ್ನು ಬರೆದಿದ್ದಾರೆ ಹಾಗೂ ಅವರ ಕಾವ್ಯಗಳನ್ನು ವಿಮರ್ಶಿಸಿದ್ದಾರೆ. ಆದರೆ ಅವರು ಸ್ಮರಿಸಿದ ಪೂರ್ವಕವಿಗಳ ಬಗೆಗೆ ಇದುವರೆಗೆ ಯಾರೂ ಗಮನಿಸಿದಂತೆ ಕಾಣುವುದಿಲ್ಲ.

**ಪರಾಮರ್ಶನ ಗ್ರಂಥಗಳು :**


1. ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ 'ಕಥಾಮಣೀ ಸೂತ್ರರತ್ನಾಕರ', ಸಂ–ಕೆ. ರವೀಂದ್ರನಾಥ, ಹಂಪಿ ವಿಶ್ವವಿದ್ಯಾಲಯ, 2022
2. ಅಜ್ಞಾತ ಕವಿ ವಿರಚಿತ ಬಸವಚಾರಿತ್ರ್ಯ– ಡಾ. ಪಂಡಿತ ಕೆ. ರಾಠೋಡ, ಬಿ.ಎಸ್ ಗಂಗನಳ್ಳಿ, ಮೈಸೂರು ವಿಶ್ವವಿದ್ಯಾಲಯ, 2016
3. ವಚನಶಾಸ್ತ್ರ ಸಾರ, ಸಂಪುಟ–1, 2 ಮತ್ತು 3, ಸಂ–ಫ.ಗು ಹಳಕಟ್ಟಿ, ಶಿವಾನುಭವ ಪ್ರಕಾಶನ, 1928
4. ಕರ್ಣಾಟಕ ಕವಿಚರಿತೆ, ಸಂಪುಟಗಳು, ಲೇ–ಆರ್. ನರಸಿಂಹಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, 2015
5. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಲೇ–ಡಾ. ಶಿವಾನಂದ ವಿರಕ್ತಮಠ, ಕರ್ನಾಟಕ ವಿಶ್ವವಿದ್ಯಾಲಯ, 1978
6. ಬಸವಪಥ ಪತ್ರಿಕೆ, ಬಸವ ಸಮಿತಿ, ಬೆಂಗಳೂರು
7. ಶರಣ ಸಾಹಿತ್ಯ ಪತ್ರಿಕೆ, ಸಂ– ಬಿ ಶಿವಮೂರ್ತಿ ಶಾಸ್ತ್ರಿ
8. ಸದ್ಧರ್ಮ ದೀಪಿಕೆ ಪತ್ರಿಕೆ, ಸಂಪಾದಕರು– ಮ. ಮಲ್ಲಪ್ಪ ಮಾಸ್ತರ್
9. ಹರಿಹರನ ರಗಳೆಗಳು, ಸಂ ಡಾ. ಎಂ.ಎಂ ಕಲಬುರ್ಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 2011


❖❖❖

# ಕುವೆಂಪು ಮೊಳಗಿಸಿದ ಪಾಂಚಜನ್ಯ

**ಡಾ ಶೋಭಾ ನಾಯಕ**
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ರೋಮೆಂಟಿಸಂ ಪ್ರಭಾವಕ್ಕೆ ಒಳಗಾಗಿ 'ಬಿಗಿನರ್ಸ್ ಮ್ಯೂಸ್'(Beginners Muse) ಎಂಬ ಕವನ ಸಂಕಲನವನ್ನು 1922ರಲ್ಲಿ ರಚಿಸಿದ 'ಚಂದ್ರ ಕಿಶೋರವಾಣಿ' ಎಂಬ ಕಾವ್ಯನಾಮದ ಮೂಲಕ ಇಂಗ್ಲೀಷ್ ಸಾಹಿತ್ಯದಲ್ಲಿ ಮೊದಲ ಹೆಜ್ಜೆಇಟ್ಟ ಕುವೆಂಪು ಅವರು ಐರಿಶ್ ಕವಿ ಜೇಮ್ಸ್ ಕಸಿನ್‌ರವರು ಕೊಟ್ಟ ಸಲಹೆಯಿಂದಾಗಿ ಕನ್ನಡದಲ್ಲಿ ಕೃತಿಗಳನ್ನು ರಚಿಸುವಂತಾದರು. ಕುವೆಂಪುರವರು ಕಾವ್ಯ, ಕವನ, ಕಥೆ, ಕಾದಂಬರಿ, ವಿಮರ್ಶೆ, ಅನುವಾದ, ನಾಟಕ ಹೀಗೆ ಎಲ್ಲಾ ಬಗೆಯ ಸಾಹಿತ್ಯ ಪ್ರಕಾರಗಳಲ್ಲಿಯೂ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ.

ನವೋದಯ ಸಾಹಿತ್ಯಕ್ಕೆ ಇಂಗ್ಲೀಷಿನ Romantism ಸಾಕಷ್ಟು ಪೂರಕ ಶಕ್ತಿಯಾದದ್ದರಿಂದ, ಮೊದಮೊದಲು ನವೋದಯ ಸಾಹಿತ್ಯವನ್ನು 'ರಮ್ಯವಾದ ಸಾಹಿತ್ಯ' ಎನ್ನಲಾಯಿತು. ರೂಪಾಂಶಕ್ಕೆ ಇದು ಅನ್ವಯವಾದರೂ ಸತ್ವದ ದೃಷ್ಟಿಯಿಂದ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರುವುದರಿಂದ ಇದನ್ನು ನವೋದಯ ಸಾಹಿತ್ಯ ಎನ್ನಬೇಕೆಂದು ಕುವೆಂಪುರವರು ಸೂಚಿಸಿದರು. ಅನಂತರದಲ್ಲಿ ಇದು 'ನವೋದಯ ಸಾಹಿತ್ಯ' ಎನ್ನುವ ಹೆಸರಿನಿಂದ ಪ್ರಚಾರಗೊಂಡಿತು. ಭಾವಪ್ರಧಾನ, ನಾದ ಮಾಧುರ್ಯ, ಭಕ್ತಿಗೌರವ, ಬಾಳಿನ ಅರ್ಥಪೂರ್ಣತೆ, ಆದರ್ಶ ಬೋಧನೆ, ಆಧ್ಯಾತ್ಮಿಕತೆ, ನಿಸರ್ಗಪ್ರೇಮ, ಹೃದಯವಂತಿಕೆ ಮತ್ತು ಭಾವಪಕ್ಷಪಾತ ಮುಂತಾದ ಗುಣಗಳನ್ನು ನವೋದಯ ಸಾಹಿತ್ಯದ ಪ್ರಮುಖ ಲಕ್ಷಣಗಳನ್ನಾಗಿಸಿಕೊಂಡರೂ ಸ್ವಾತಂತ್ರ್ಯ, ಅಭಿಮಾನ ಮತ್ತು ನಾಡು-ನುಡಿಗಳ ಪ್ರೇಮವನ್ನು ಮುಖ್ಯ ಧೋರಣೆಗಳನ್ನಾಗಿಸಿಕೊಂಡು ಅನೇಕ ನವೋದಯದ ಕವಿಗಳು ಕವಿತೆಗಳನ್ನು ಬರೆದರು. ಅದರಲ್ಲೂ ಬಹಳ ಮುಖ್ಯವಾಗಿ ಗಮನಿಸುವುದಾದರೆ, 1993ರಲ್ಲಿ ಪ್ರಕಟವಾದ 'ಪಾಂಚಜನ್ಯ' ಕವನ ಸಂಕಲನ ಸ್ವಾತಂತ್ರ್ಯ ಚಳವಳಿಯ ಕಿಡಿಯನ್ನು ಹೊತ್ತಿಸುವ ಹಲವಾರು ಕವನಗಳನ್ನು ಒಳಗೊಂಡಿದೆ.

'ಪಾಂಚಜನ್ಯ' ಶಿರ್ಷಿಕೆಯನ್ನು ಗಮನಿಸಿದರೆ ವಿಶೇಷವಾದ ಅರ್ಥವನ್ನು ಹೊಂದಿರುವುದನ್ನು ಗಮನಿಸಬಹುದು. ವಾಲ್ಮೀಕಿರಾಮಾಯಣದ ಪ್ರಕಾರ ಪುರುಷೋತ್ತಮನು ವಿಶ್ವಕರ್ಮನಿಂದ ನಿರ್ಮಿತ ಚಕ್ರವಾನ್ ಪರ್ವತದ ಮೇಲೆ ಪಾಂಚಜನನೆಂಬ ದಾನವನನ್ನು ಕೊಂದು ಅವನಿಂದ ಪಾಂಚಜನ್ಯವೆಂಬ ಶಂಖವನ್ನು ತೆಗೆದುಕೊಂಡನು. ಹರಿವಂಶದ ಪ್ರಕಾರ, ಕೃಷ್ಣನು ಪಾಂಚಜನ್ಯವೆಂಬ ಶಂಖವನ್ನು ಹೊಂದಿದ್ದು, ಈ ಶಂಖವನ್ನು ಕುರುಕ್ಷೇತ್ರದ 'ಯುದ್ಧದ ಸಂದರ್ಭದಲ್ಲಿ ಬಳಸಿದ್ದನ್ನು ಉಲ್ಲೇಖಿಸಲಾಗಿದೆ.ಇನ್ನೂಇತರ ಶಾಸ್ತ್ರಗಳ ಪ್ರಕಾರ, ಶಂಖದ ಒಂದು ಪ್ರತಿ ವೈಕುಂಠಧಾಮದಿಂದ ಭೂಮಿಯ ಮೇಲೆ ಕೃಷ್ಣನಿಗೆ ವರ್ಗಾವಣೆಯಾಗಿದೆ ಎಂದು ನಂಬಲಾಗಿದೆ. ಈ ಎಲ್ಲ ಹಿನ್ನೆಲೆಯಲ್ಲಿ ಕುವೆಂಪುರವರು ತಮ್ಮ ಕವನ ಸಂಕಲನಕ್ಕೆ 'ಪಾಂಚಜನ್ಯ' ಎಂದು ಹೆಸರಿಟ್ಟಿರುವುದು ವಿಶೇಷವಾಗಿದೆ. ರಾಷ್ಟ್ರಾಭಿಮಾನಿಗಳಾದ

ನವೋದಯ ಕವಿಗಳು ಬ್ರಿಟಿಷರ ಗುಲಾಮಗಿರಿಯಿಂದ ಭಾರತವನ್ನು ಮುಕ್ತಗೊಳಿಸುವ ಆಶಯವನ್ನು ಹೊಂದಿದ್ದರು. ಅಂತೆಯೇ ಈ ಕವನ ಸಂಕಲನದ ಶೀರ್ಷಿಕೆ ಬ್ರಿಟಿಷರ ವಿರುದ್ಧ ಸಾರಿದ ಯುದ್ಧದ ಸಂಕೇತದಂತಿದೆ. ಕುವೆಂಪು ಅವರು ತಮ್ಮ ಕಾಲದ ರಾಷ್ಟ್ರಭಿಮಾನ, ನಾಡು-ನುಡಿ ಪ್ರೇಮವನ್ನು ಈ ಕವಿತೆಗಳ ಮೂಲಕ ಅಭಿವ್ಯಕ್ತಿಸಿದ್ದಾರೆ.

ಕುವೆಂಪುರವರ 'ಪಾಂಚಜನ್ಯ' ಕವನ ಸಂಕಲನವು ಬಹಳಷ್ಟು ಕ್ರಾಂತಿಗೀತೆಗಳನ್ನು ಒಳಗೊಂಡಿದೆ. ಕುವೆಂಪುರವರು ಕೂಡಾ ತಮ್ಮಕಾಲದ ಸಾಕ್ಷಿಪ್ರಜ್ಞೆಯಾಗಿ ನಿಂತಿರುವುದನ್ನು ಅವರ 'ಪಾಂಚಜನ್ಯ' ಕವನ ಸಂಕಲನ ಎತ್ತಿತೋರಿಸುತ್ತದೆ. ಇಡೀ ಭಾರತದೇಶ ಸ್ವಾತಂತ್ರ್ಯಕ್ಕೋಸ್ಕರ ಮಿಡಿಯುತ್ತಿದ್ದ ಕಾಲ ಅದು. ಕವಿಯ ಭಾವವೂ ಇದಕ್ಕೆ ಹೊರತಾಗಿಲ್ಲ. ಶೀರ್ಷಿಕೆಯದೇ ಹೆಸರಿನ ಕವಿತೆ 'ಪಾಂಚಜನ್ಯ'ದಲ್ಲಂತೂ ಯುವಶಕ್ತಿಗೆ ಕರೆ ಕೊಟ್ಟಿರುವುದನ್ನು ಕಂಡುಕೊಳ್ಳಬಹುದು.

**ನಡೆ ಮುಂದೆ, ನಡೆ ಮುಂದೆ**
**ನುಗ್ಗಿ ನಡೆ ಮುಂದೆ!**
**ಜಗ್ಗದೆಯೆ, ಕುಗ್ಗದೆಯೆ,**
**ಹಿಗ್ಗಿ ನಡೆ ಮುಂದೆ**

ಭಾರತದ ಶ್ರೇಷ್ಠ ಆಧ್ಯಾತ್ಮಿಕ ನಾಯಕರಲ್ಲಿ ಒಬ್ಬರಾದ ಸ್ವಾಮಿ ವಿವೇಕಾನಂದರ 'ಏಳಿ ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ..' ಎನ್ನುವ ಮಾತು ಇಲ್ಲಿ ನೆನಪಾಗುತ್ತದೆ. ಭಾರತದ ತತ್ವಶಾಸ್ತ್ರದ ವೈಭವವನ್ನು ಜಗದಗಲಕ್ಕೂ ಸಾರಿದ ಕೀರ್ತಿ ಹೊಂದಿದ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ಮಾತುಗಳಲ್ಲಿರುವ ಸ್ಫೂರ್ತಿಯ ಸೆಳೆತ, ಕವಿ ಕುವೆಂಪುರವರ 'ನಡೆ ಮುಂದೆ...' ಸಾಲುಗಳಲ್ಲಿ ಕೂಡ ಇದೆ. ಕುವೆಂಪುರವರ 'ಪಾಂಚಜನ್ಯ' ಕವನ ಸಂಕಲನವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅದರ ಹಿಂದೆ ಸ್ವಾಮಿ ವಿವೇಕಾನಂದರ ಚಿಂತನೆಯ ಪ್ರಭಾವವನ್ನು ಕಾಣಬಹುದು.

'ಪಾಂಚಜನ್ಯ' ಕವನ ಸಂಕಲನದ ಹಿನ್ನೆಲೆಯಲ್ಲಿ ಇನ್ನೊಂದು ಪ್ರಮುಖ ಅಂಶವನ್ನು ಉಲ್ಲೇಖಿಸಬಹುದು. ಸ್ವತಃ ಕವಿಗಿಂತ ಎರಡು ತಿಂಗಳಷ್ಟೇ ಹಿರಿಯರಾಗಿದ್ದ ಕ್ರಾಂತಿಕಾರಿ ಜತೀಂದ್ರನಾಥ ದಾಸ ಕೇವಲ ತಮ್ಮ 25ನೇ ವಯಸ್ಸಿನಲ್ಲಿ ಹುತಾತ್ಮರಾಗಿದ್ದು ಭಾರತೀಯ ಜನಮಾನಸದ ಮೇಲೆ ಪರಿಣಾಮ ಬೀರಿದ್ದು ಇತಿಹಾಸದಲ್ಲಿ ಮರೆಯಲಾಗದ ಘಟನೆ. ಕವಿ ಕುವೆಂಪುರವರ ಮೇಲೆ ಕೂಡ ಇದು ಗಾಢವಾದ ಪರಿಣಾಮ ಬೀರಿರುವುದರಲ್ಲಿ ಯಾವುದೇ ಸಂದೇಹವಿಲ್ಲ. 1929ರಲ್ಲಿ ಕ್ರಾಂತಿಕಾರಿ ಮನೋಧರ್ಮದ ನೆಪವನ್ನೊಡ್ಡಿ ಬಂಧಿಸಿ, Supplementary Lahore Conspiracy Caseನಲ್ಲಿ ಅಪಾದಿತನೆಂದು ಜತೀಂದ್ರನಾಥರನ್ನು ಜೈಲಿಗೆ ಕಳುಹಿಸಲಾಯಿತು. ಜೈಲಿನಲ್ಲಿ ಇಂಗ್ಲೀಷ್ ಕೈದಿಗಳ ಹಾಗೂ ಭಾರತೀಯ ಕೈದಿಗಳ ನಡುವಿನ ತಾರತಮ್ಯವನ್ನು ವಿರೋಧಿಸಿ ಜತೀಂದ್ರನಾಥದಾಸರವರು ಉಪವಾಸ ಸತ್ಯಾಗೃಹಕ್ಕೆ ಕುಳಿತುಬಿಟ್ಟರು. 13.9.1929ರಂದು ಉಪವಾಸ ಸತ್ಯಾಗ್ರಹದ 63ನೆಯ ದಿನ ಜತೀಂದ್ರನಾಥದಾಸರ ಪ್ರಾಣಪಕ್ಷಿ ಹಾರಿಹೋಯಿತು. ಅವರ ಪಾರ್ಥಿವ ಶರೀರವನ್ನು ಲಾಹೋರಿನಿಂದ ಕಲ್ಕತ್ತಾ ರೈಲಿನಲ್ಲಿ ತರುವಾಗ ದಾರಿಯುದ್ದಕ್ಕೂ ಪ್ರತಿ ನಿಲ್ದಾಣದಲ್ಲೂ ಸಾವಿರಾರು ಜನರು ಅಂತಿಮ ನಮನ ಸಲ್ಲಿಸಿದ್ದು; ಕಲ್ಕತ್ತಾದಲ್ಲಿ ಸುಮಾರು ಆರು ಲಕ್ಷ ಜನರ ಮೆರವಣಿಗೆ ದೇಶಕ್ಕಾಗಿ ಹುತಾತ್ಮರಾದ ಜತೀಂದ್ರನಾಥ ದಾಸರಿಗಾಗಿ ಕಂಬನಿ ಮಿಡಿದುದರಿಂದ ದೇಶದಾದ್ಯಂತ ಸ್ವಾತಂತ್ರ್ಯದ ಕಿಚ್ಚು ಹೆಚ್ಚಾಯಿತು.

ಅದರಲ್ಲೂ ಯುವಕರನ್ನು ಬಡಿದೆಬ್ಬಿಸಿತು. ದಕ್ಷಿಣ ಭಾರತದ ಮೂಲೆ ಮೂಲೆಯಲ್ಲೂ ಪ್ರತಿಭಟನೆಗಳಾಗಲಾರಂಭಿಸಿದವು. ಅದೇ ಸಮಯಕ್ಕೆ 'ಪಾಂಚಜನ್ಯ'ದ ಸಾಲುಗಳು ಹೀಗೆ ಬಂದಿವೆ.

**ಕೆಚ್ಚದೆಯಗುಡಿಯಲ್ಲಿ**
**ಸೆರೆಯ ಹರಿ, ಅರಿಯನಿರಿ**
**ಹುಟ್ಟಳಿಸು ಹುಡಿಯಲ್ಲಿ!**
**ನಾನಳಿವೆ, ನೀನಳಿವೆ,**
**ನಮ್ಮೆಲುಬುಗಳ ಮೇಲೆ**
**ಮೂಡುವುದು, ಮೂಡುವುದು**
**ನವಭಾರತದ ಲೀಲೆ!**

'ಪಾಂಚಜನ್ಯ' ಕವನ ಸಂಕಲನದಲ್ಲಿನ 'ಸತ್ಯಾಗ್ರಹಿ' ಕವಿತೆಯಲ್ಲಿನ ಸಾಲುಗಳು

**ಸ್ವಾತಂತ್ರ್ಯ ಸಂಗ್ರಾಮದಲಿ ತನ್ನಜೀವನವನು**
**ಲೆಕ್ಕಿಸದೆ ಹೊರಡುವನು ವೀರ ಸತ್ಯಾಗ್ರಹಿ**
**---- - - - - - - - - - -**
**- - - - - - - - - - - - -**
**ಮರೆಯದೆಯೆ ಹಡೆದ ಮಾತೆಯ ಸೇವೆಯನು ಮಾಡಿ**
**ಮೌನದಿಂ ಮಡಿವನುಧನ್ಯ ಸತ್ಯಾಗ್ರಹಿ!**

ಕುವೆಂಪುರವರು 29-04-1930ರಲ್ಲಿ ಬರೆದಿದ್ದು, ಈ ಕವಿತೆಯು ಒಬ್ಬ ಸತ್ಯಾಗ್ರಹಿ ಹೇಗೆ ತನ್ನ ಖಾಸಗಿ ಬದುಕನ್ನು ಬದಿಗಿರಿಸಿ, ವೈಯಕ್ತಿಕ ಹಿತಾಸಕ್ತಿಗಳನ್ನು ಕಡೆಗಣಿಸಿ ದೇಶದ ಹಿತವೇ ತನ್ನ ಕರ್ತವ್ಯ ಎಂದು ಬಗೆಯುತ್ತಾನೆ ಎಂಬುದನ್ನು ತಿಳಿಸುತ್ತದೆ.

**ತಲೆಯ ಹೊರೆಯು ಇಳಿಯಲಿಲ್ಲ;**
**ಎದೆಯ ಬೇನೆ ಅಳಿಯಲಿಲ್ಲ;**
**ಅಡಿಯ ಬೇಡಿಒಡೆಯಲಿಲ್ಲ;**
**ದುಡಿವದಾಸ್ಯ ಬಿಡಲೆಇಲ್ಲ! (ಭರತಮಾತೆ)**

**ನೂರುದೇವರನೆಲ್ಲ ನೂಕಾಚೆ ದೂರ**
**ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ!**
**- - -- - - - - - - - - -- -**
**ಭಾರತಿ ನಮಗಿಂದು ಜೀವನದ ದೇವತೆಯು,**
**ವಿಶ್ವರೂಪಿಣಿಯವಳು, ವಿಶ್ವಮುಖಿಯೈ ! (ಇಂದಿನ ದೇವರು)**

ಈ ಎಲ ಕವಿತೆಗಳು ಹೆಚ್ಚು ಕಡಿಮೆ 1931ರ ಆಸುಪಾಸಿನಲ್ಲಿ ಬರೆದವುಗಳು. ಇಂತಹ ಕವಿತೆಗಳು ಕೇವಲ ಕವಿತೆಗಳಾಗದೆ, ಜೈಲಿನೊಳಗೂ ಕ್ರಾಂತಿಕಾರಿ ಗೀತೆಗಳಾಗಿ ಮೊಳಗಲಾರಂಭಿಸಿದವು. ಆ ಕಾಲಕ್ಕೆ ಈ ಕವಿತೆಯನ್ನು ಪ್ರಕಟಿಸಿದ ಪತ್ರಿಕೆಯ ಸಂಪಾದಕರಿಗೆ ಕಂಪನಿ ಸರಕಾರ ನೋಟಿಸ್ ಸಹ ನೀಡಿತ್ತು. ಆಗ ಮೈಸೂರು ಸರಕಾರದ ಅಧಿಕೃತ ಭಾಷಾಂತರ ಇಲಾಖೆಗೆ ಕಳುಹಿಸಿದಾಗ ಅಲ್ಲಿದ್ದವರು ಅಪ್ಪಟ ದೇಶಭಕ್ತರಾದ ಸಿ.ಕೆ.ವೆಂಕಟರಾಮಯ್ಯನವರು. ದೇಶಭಕ್ತಿಯ ವಿಚಾರಗಳಿವೆಯೇ

ಹೊರತು ದೇಶದ್ರೋಹದ್ದಲ್ಲ ಎಂದು ವರದಿ ನೀಡಿದ್ದರು. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಕುವೆಂಪುರವರ 'ಪಾಂಚಜನ್ಯ' ಹಲವು ದೇಶಭಕ್ತರಿಗೆ ಪ್ರೇರಣೆ ನೀಡಿದ್ದು ಸುಳ್ಳಲ್ಲ. ಬದುಕು ಬದಲಾದಂತೆ ಮತ್ತು ಕಾಲ ಬದಲಾದಂತೆ ಮೌಲ್ಯಗಳು ಕೂಡ ಬದಲಾಗುತ್ತವೆ. ಸ್ವಾತಂತ್ರ್ಯಪೂರ್ವಕ್ಕೂ ಮುನ್ನ ಯುವಶಕ್ತಿಗೆ ಪ್ರೇರಕವಾಗುವಂತಹ ಕ್ರಾಂತಿಕಾರಿ ಗೀತೆಗಳನ್ನು 'ಪಾಂಚಜನ್ಯ' ಒಳಗೊಂಡಿದ್ದನ್ನು ಹಾಗೂ ನವೋದಯದ ಧ್ಯೇಯೋದ್ದೇಶಗಳನ್ನು ಪ್ರಸ್ತುತ ಕವನ ಸಂಕಲನ ಈಡೇರಿಸಿರುವುದನ್ನು ಕಂಡುಕೊಳ್ಳಬಹುದಾಗಿದೆ.

❖❖❖

**ಅಂತಃಪುರದ ಹೆಂಗಳ ಗುಂಪು**
**ಕೊರಳನು ತಗ್ಗಿಸಿ ಕುಳಿತಿತ್ತು**
**ದೂರದಿ ನಿಂತಿಹ ಕೆಲವರ ಕತ್ತು**
**ನಿಲುಕುತ ಚಾಚುತ ಸೋತಿತ್ತು**

# ಕುಕನೂರು ತಾಲೂಕು : ಒಂದು ಸಾಂಸ್ಕೃತಿಕ ಅಧ್ಯಯನ

**ಯಮನೂರಪ್ಪ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು, ಸುಳ್ಯ

ಪ್ರತಿಯೊಂದು ಪ್ರದೇಶವು ತನ್ನದೇ ಆದ ಸಂಸ್ಕೃತಿಯನ್ನು ಹೊಂದಿರುತ್ತದೆ. ಒಂದು ಪ್ರದೇಶದ ವಿಶಿಷ್ಟವಾದ ಸಾಂಸ್ಕೃತಿಕ ಚರಿತ್ರೆಯನ್ನು ಅರಿಯುವಲ್ಲಿ ಸ್ಥಳೀಯ ಅಂಶಗಳು ಒಂದು ನಿರ್ದಿಷ್ಟ ಚೌಕಟ್ಟನ್ನು ಸೃಷ್ಟಿಸಿಕೊಡುತ್ತದೆ. ತಾಲೂಕಿನ ಗ್ರಾಮಗಳ ಹೆಸರುಗಳ ನಿಷ್ಪತ್ತಿ, ಆರ್ಥಿಕ, ಸಾಮಾಜಿಕ, ಧಾರ್ಮಿಕ ವ್ಯವಸ್ಥೆ, ಆಚರಣೆಗಳು, ದೇವಾಲಯ, ಮೂರ್ತಿಶಿಲ್ಪ, ಶಾಸನಗಳು, ಉಡುಗೆ, ತೊಡುಗೆ, ಆಹಾರಪದ್ಧತಿ ಇವೆಲ್ಲ ಒಂದು ನಿರ್ದಿಷ್ಟ ಪ್ರದೇಶದ ಸಂಸ್ಕೃತಿಯನ್ನು ನಿರ್ವಚಿಸುತ್ತವೆ. ಹಾಗೆಯೇ ಆ ಪ್ರದೇಶದಲ್ಲಿ ಮೈಗೂಡಿಕೊಂಡಿರುವ ಜಾನಪದ ಕಲೆಗಳು ಮಾನವನ ಸಾಂಸ್ಕೃತಿಕ ಬದುಕಿನಲ್ಲಿ ಪ್ರಾಮುಖ್ಯ ಪಡೆಯುತ್ತವೆ.

ಕಲ್ಯಾಣ ಕರ್ನಾಟಕದಲ್ಲಿ ಸಾಂಸ್ಕೃತಿಕವಾಗಿ ತನ್ನದೇ ಹೆಸರು ಪಡೆದಿರುವ ಕೊಪ್ಪಳ ಜಿಲ್ಲೆಯ ಕುಕನೂರ ತಾಲೂಕು ಸಾಂಸ್ಕೃತಿಕ ಜೀವಂತಿಕೆಯನ್ನು ತನ್ನ ಒಡಲಲ್ಲಿ ತುಂಬಿಕೊಂಡಿದೆ. ಇಲ್ಲಿ ಕಂಡು ಬರುವ ಕಲೆಗಳು, ಆಚರಣೆಗಳು, ನಂಬಿಕೆಗಳು, ಹಬ್ಬಗಳು, ದೇವಾಲಯಗಳು, ಉಡುಗೆ, ತೊಡುಗೆ, ಆಹಾರ ಪದ್ಧತಿ ಇಲ್ಲಿಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ.

**ಕುಕನೂರಿನ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನಲೆ :**

ಕಲ್ಯಾಣ ಕರ್ನಾಟಕದಲ್ಲಿ ಸಾಂಸ್ಕೃತಿಕವಾಗಿ ಹೆಸರುವಾಸಿಯಾಗಿರುವ ಕೊಪ್ಪಳ ಜಿಲ್ಲೆಯ ಏಳು ತಾಲೂಕುಗಳಲ್ಲಿ ಕುಕನೂರು ಒಂದು ಅತ್ಯಂತ ಪ್ರಸಿದ್ಧವಾದ ಮತ್ತು ಅಪಾರವಾದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ ತಾಲೂಕಾಗಿದೆ. ಹಿಂದಿನಿಂದಲೂ ಶೈಕ್ಷಣಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ವಾಸ್ತುಶಿಲ್ಪದ ದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಪಡೆದ ನೆಲೆಯಾಗಿ, ಮಹಾದಗ್ರಹಾರವಾಗಿ ಮಹತ್ವದ ಪಾತ್ರವನ್ನು ವಹಿಸಿತ್ತೆಂದು ಹೇಳಬಹುದು.

ಕುಕನೂರ ತಾಲೂಕಿನ ಶಾಸನಗಳಲ್ಲಿ ಅಲ್ಲಲ್ಲಿ ಹಿಂದಿನ ಕಾಲದ ಭೌಗೋಳಿಕ ಪರಿಸ್ಥಿತಿಯ ವರ್ಣನೆ ಬರುತ್ತದೆ. ಉತ್ತರ ಕರ್ನಾಟಕಕ್ಕೆ ಸಾಮಾನ್ಯವಾಗಿ ಕುಂತಲ ದೇಶವೆಂಬ ಹೆಸರಿತ್ತು. ಕುಂತಲದ ಒಂದು ಭಾಗ ಬೆಳ್ವಲ ನಾಡು. ಈ ನಾಡಿನಲ್ಲಿ 300 ಗ್ರಾಮಗಳಿದ್ದವು. ಅದರಲ್ಲಿ ಕುಕನೂರು ಒಂದು ಚಿಕ್ಕ ಪ್ರದೇಶ ಮತ್ತು ಮುಖ್ಯವಾದ ಗ್ರಾಮವಾಗಿತ್ತು. ಕುಕನೂರು ಮಹಾಗ್ರಹಾರವೆಂದು ಪ್ರಖ್ಯಾತವಾಗಿತ್ತು. ಅಲ್ಲಲ್ಲಿ ದೇವಾಲಯಗಳು ಮತ್ತು ಮಂಟಪಗಳು ಶೋಭಿಸುತ್ತಿದ್ದವು. ಬಳ್ಳಾರಿ ಜಿಲ್ಲೆಯ ಬಾಗಳಿ ಗ್ರಾಮದ ಕಿ.ಶ.956ರ ಶಾಸನದಲ್ಲಿ ಮತ್ತು ಕೊಪ್ಪಳ ಬಳಿಯ ಉಪ್ಪಿನ ಬೆಟಗೇರಿಯ ಸಾ.ಶ.964ರ ಶಾಸನದಲ್ಲಿ ಚಾಲುಕ್ಯ ಕುಲದ ಮಹಾ ಸಾಮಂತ ರಾಟ್ಟಯ್ಯನು

ಕುಕನೂರು ಪ್ರದೇಶವನ್ನು ಆಳುತ್ತಿದ್ದನು ಎಂದು ಹೇಳಿದೆ.

ವಿದ್ವತ್ ಅಧ್ಯಯನದ ಕೇಂದ್ರವಾಗಿರುವ ಕುಕನೂರು ಚಂದ್ರಹಾಸನ ಆಳ್ವಿಕೆಯ ಕುಂತಲ ದೇಶವೇ ಈಗಿನ ಕುಕನೂರ ಎನ್ನಲಾಗುತ್ತದೆ. ಚಂದ್ರಹಾಸಪುರ, ಕುಂತಲಪುರವೆಂದು ದಂತಕಥೆಗಳಲ್ಲಿ ಕರೆಯಿಸಿಕೊಂಡ ಈ ಅಗ್ರಹಾರಕ್ಕೆ ಶ್ರೀಮನ್ಮಗ್ರಹಾರ ಕುಕ್ಕನೂರ, ಕುಕ್ಕನೂರು ಮೂವತ್ತು, ತ್ರಿಂಶದ್ಗ್ರಾಧಿಪತಿ ಮುಂತಾದ ಬೇರೆ ಬೇರೆ ಹೆಸರುಗಳು ಇದ್ದವೆಂದು ಇಲ್ಲಿರುವ ಶಿಲಾಶಾಸನಗಳಿಂದ ತಿಳಿದು ಬರುತ್ತದೆ. ಸದ್ಯ ಕುಕನೂರ ತಾಲೂಕು 58 ಗ್ರಾಮಗಳನ್ನೊಳಗೊಂಡ ಪ್ರದೇಶವಾಗಿದೆ.

ಕುಕನೂರು ತಾಲೂಕು ಭೌಗೋಳಿಕವಾಗಿ ಗಣಿಯಲ್ಲಿ ಸಂಪದ್ಭರಿತವಾಗಿದೆ. ಕುಕನೂರನಲ್ಲಿಯೇ ಗ್ರ್ಯಾನೆಟ್ ಕಲ್ಲುಗಳ ಹೇರಳವಾಗಿ ದೊರೆಯುತ್ತವೆ. ಇದು ಕುಕನೂರನ್ನು ಆರ್ಥಿಕವಾಗಿ ಸಬಲವಾಗಿಸಿದೆ. ಈ ಕಲ್ಲಿನ ಕುರಿತು ಕುಕನೂರಿನಲ್ಲಿ ಜಾನಪದದ ಕಥೆಯೊಂದಿದೆ. ಅದು ಕುಕನೂರನಲ್ಲಿರುವ ಶಿಲೆಯ ಮೇಲಿರುವ ಕಲ್ಲಿನ ಕೋಳಿಯೊಂದು ಪಳಪಳನೇ ಹೊಳೆಯುತ್ತಿರಲಾಗಿ ಅದುವೇ ಕುಕನೂರಿನ ತುಂಬೆಲ್ಲ ಗ್ರ್ಯಾನೆಟ್ ಹೊಳೆಯುವ ಕಲ್ಲಾಗಿ ಮಾರ್ಪಡಾಯಿತೆಂದು ಹೇಳಲಾಗುತ್ತದೆ. ಹಿರೇಹಳ್ಳ ಯೋಜನೆಯಲ್ಲಿ ಅದರ ಹಿನ್ನೀರು ಶಿರೂರು ಮತ್ತು ಅರಕೇರಿ ಗ್ರಾಮಗಳ ವ್ಯಾಪ್ತಿಯಲ್ಲಿ ಬರುತ್ತದೆ. ಇದು ಕುಕನೂರು ಮತ್ತು ಕೊಪ್ಪಳ ತಾಲೂಕಿಗೆ ನೀರಾವರಿಯಿಂದ ಸಮೃದ್ಧವಾಗಿವೆ.

ಕುಕನೂರ ನಗರದ ಮಧ್ಯಭಾಗದಲ್ಲಿ ಮಹಾಮಾಯೆ ದೇವಾಲಯವಿದೆ. ಇದು ಮಹತ್ತರ ಐತಿಹಾಸಿಕ ಮೌಲ್ಯ ಹೊಂದಿದ್ದು, ಮಹಾಭಾರತದಲ್ಲಿಯೂ ಸಹ ಉಲ್ಲೇಖಗೊಂಡಿದೆ. ಮಹಾಮಾಯೆಯು ಭಕ್ತರಿಗೆ ಅಭಯ ಪ್ರಧಾನ ಮಾಡುವ ದೇವಿಯಾಗಿದ್ದಾಳೆ. ಈಕೆಯ ಪೂರ್ವ ನಾಮ ಜೇಷ್ಠಾದೇವಿ ಎಂದು ಸಾ.ಶ. 8ನೆಯ ಶತಮಾನದ ಗಂಗರಸರ ಕಾಲದಿಂದ ಈ ಮಹಾಮಾಯೆಯ ಆರಾಧನೆ ನಡೆದುಕೊಂಡು ಬಂದಿದೆ. ಸ್ಕಂದ ಪುರಾಣದ ಪಂಪಾಮಹಾತ್ಮ್ಯದ 70ನೆಯ ಅಧ್ಯಾಯನದಲ್ಲಿ ಶ್ರೀ ಮಹಾಮಾಯೆ ದೇವಾಲಯದ ಪುಷ್ಕರಿಣೀ ಮಹಿಮೆಯನ್ನು ವರ್ಣಿಸಲಾಗಿದೆ. ಕುಕನೂರನಲ್ಲಿ ಹಿಂದೂ ದೇವಾಲಯಗಳ ಒಂದು ಸಮುಚ್ಚಯ 9ನೆಯ ಶತಮಾನದಲ್ಲಿ ನಿರ್ಮಾಣಗೊಂಡಿದೆ. ರಾಷ್ಟ್ರಕೂಟ ದೊರೆ ಒಂದನೇಯ ಅಮೋಘವರ್ಷನ ಆಳ್ವಿಕೆಯಲ್ಲಿ ಮತ್ತು ಅವನ ಪುತ್ರ ಎರಡನೆಯ ಕೃಷ್ಣನ ಆಳ್ವಿಕೆಯಲ್ಲಿ ನಿರ್ಮಾಣವಾಗಿ ಕುಕನೂರಿನಲ್ಲಿ ನೆಲೆಗೊಂಡು ಕಳೆಗಟ್ಟಿದೆ. ಇದು ದಕ್ಷಿಣ ಭಾರತ ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡ ಈ ಸಮುಚ್ಚಯದಲ್ಲಿ 9 ಲಿಂಗಗಳಿಂದ ಕೂಡಿ ನವಲಿಂಗೇಶ್ವರ ದೇವಸ್ಥಾನವೆಂದು ಹೆಸರು ಪಡೆದಿದೆ. ಕುಕನೂರನಲ್ಲಿ ಇದುವರೆಗೆ 17 ಶಿಲಾಶಾಸನಗಳು ದೊರೆತಿವೆ. ಇವು ಸಾ.ಶ. 7ನೆಯ ಶತಮಾನದಿಂದ 16ನೆಯ ಶತಮಾನದ ಕಾಲಘಟ್ಟದವರೆಗಿನ ಶಾಸನಗಳಾಗಿವೆ.

ಕುಕನೂರ ತಾಲೂಕಿನ ಇಟಗಿ ಎಂಬ ಚಿಕ್ಕ ಗ್ರಾಮವು 900 ವರ್ಷಗಳಷ್ಟು ಹಳೆಯದಾದ ದೇವಾಲಯವನ್ನು ಹೊಂದಿದೆ. ಇದು ಸಾ.ಶ. 1112ರಲ್ಲಿ ಕಲ್ಯಾಣದ ಚಾಲುಕ್ಯರ 6ನೆಯ ವಿಕ್ರಮಾದಿತ್ಯನ ದಂಡನಾಯಕ ಮಹಾದೇವ ದಂಡ ನಾಯಕನು ಕಟ್ಟಿಸಿದನೆಂದು ಇತಿಹಾಸದಿಂದ ತಿಳಿದು ಬರುತ್ತದೆ. ದೇವಾಲಯವು ತನ್ನ ಸೂಕ್ಷ್ಮ ಕೆತ್ತನೆ ಮನಮೋಹಕ ಕಲಾ ಕುಸುರಿಯಿಂದ ಉತ್ತರ ಕರ್ನಾಟಕದ ಪ್ರಸಿದ್ಧ ತಾಣಗಳಲ್ಲಿ

ಒಂದಾಗಿ 'ದೇವಾಲಯಗಳ ಚಕ್ರವರ್ತಿ' ಎಂದು ಹೆಸರು ಪಡೆದಿದೆ. ಬಳಿಗೇರಿ ಗ್ರಾಮದ ಶ್ರೀ ಬಳ್ಳೇಶ್ವರ ದೇವಸ್ಥಾನವು ಪೌರಾಣಿಕ ಮತ್ತು ಐತಿಹಾಸಿಕವಾಗಿದ್ದು ವಿಶಿಷ್ಟತೆಯಿಂದ ಕೂಡಿದೆ. ಇಲ್ಲಿನ ಬಳ್ಳೇಶ್ವರ ದೇವಾಲಯದ 12ನೆಯ ಶತಮಾನಕ್ಕೂ ಹಿಂದಿನ ಇತಿಹಾಸ ಹೊಂದಿದೆ ಎನ್ನಲಾಗಿದೆ. ಕಲ್ಯಾಣ ಚಾಲುಕ್ಯರ ಅರಸನಾದ ಎರಡನೆಯ ಸೋಮೇಶ್ವರನು ಈ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದ್ದಾನೆಂದು ಶಾಸನಗಳಿಂದ ತಿಳಿದು ಬರುತ್ತದೆ.

**ಸಾಹಿತ್ಯ**

ಕುಕನೂರ ತಾಲೂಕು ಸಾಹಿತ್ಯ ಕ್ಷೇತ್ರದ ಹಿರಿಮೆ ಗರಿಮೆಗಳಲ್ಲಿ ಗುರುತಿಸಿಕೊಂಡ ಹಲವಾರು ಭಾಷಾ ಪಂಡಿತರಿದ್ದಾರೆ. ತಿರುಳ್ಗನ್ನಡ ನಾಡಿನ ಭಾಗವಾದ ಕುಕನೂರ ತಾಲೂಕಿನಲ್ಲಿ ಹಲವಾರು ಬೆಂಬಲಿ ಭಾಷೆಗಳಿಂದ ವೈವಿಧ್ಯ ಸಾಹಿತ್ಯ ಕನ್ನಡದಲ್ಲಿ ಬಂದು ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿವೆ. ಸಾ.ಶ. 1700ರ ಆದಿಭಾಗದಲ್ಲಿ ಕಲ್ಲೂರಿನ ಧೂಪದ ರಾಚೇಶನು 'ಮಲ್ಲಿಬೊಮ್ಮ' ಕಾವ್ಯದಲ್ಲಿ ಶಿವಶರಣ ಬಗ್ಗೆ ಮತ್ತು ಗುರುಲಿಂಗ ಜಂಗಮ ಕುರಿತು ಬರೆದಿದ್ದಾರೆ.

ಹೊಸಗನ್ನಡ ಸಾಹಿತ್ಯವನ್ನು ಪರಿಗಣಿಸಿದರೆ, ಈ ಪ್ರದೇಶದಿಂದ ಬಂದ ಡಾ. ಸಿದ್ದಯ್ಯ ಪುರಾಣಿಕರು ಕಾವ್ಯಾನಂದವೆಂಬ ಕಾವ್ಯನಾಮದಿಂದ ಪ್ರಸಿದ್ಧರು. ಕನ್ನಡದ ಪ್ರಸಿದ್ಧ ಕವಿಗಳಲ್ಲಿ ಒಬ್ಬರಾಗಿ ಕನ್ನಡ ಸಾಹಿತ್ಯಕ್ಕೆ ಅದ್ಭುತ ಕೊಡುಗೆ ನೀಡಿದ್ದಾರೆ. ಮಕ್ಕಳ ಸಾಹಿತ್ಯ, ಕಾವ್ಯ, ಕಥೆ, ಕಾದಂಬರಿ, ವಿಮರ್ಶೆ, ಅನುವಾದ ಕ್ಷೇತ್ರಗಳಿಗೆ ವಿಶಿಷ್ಟ ಸಾಹಿತ್ಯ ನೀಡಿ ಹೆಸರು ಮಾಡಿದ್ದಾರೆ. ಮಕ್ಕಳ ತುಪ್ಪ ರೊಟ್ಟಿ ಗೇಗೇ, ಮೊದಲು ಮಾನವನಾಗು ಇಂತಹ ಅದ್ಭುತಗಳೊಂದಿಗೆ ಆಧುನಿಕ ವಚನ ಕೃತಿ ವಚನೋದ್ಯಾಯನ ರಚಿಸಿದ್ದಾರೆ.

ಅನ್ನದಾನಯ್ಯ ಪುರಾಣಿಕರು ವೃತ್ತಿಯಿಂದ ವಕೀಲರಾಗಿ, ಪ್ರವೃತ್ತಿಯಿಂದ ಸಾಹಿತಿಗಳಾಗಿ ಸಹೋದರ ಕಾವ್ಯಾನಂದರಂತೆ ಸಾಹಿತ್ಯ ಕ್ಷೇತ್ರಕ್ಕೆ ಆಧುನಿಕ ವಚನಗಳನ್ನು ಕೊಡುಗೆ ನೀಡಿದ್ದಾರೆ. ಚೆನಪನಹಳ್ಳಿ ದೇಸಾಯಿಯವರು ಕಥೆ ಗೊಂಚಲು, ನಾಲ್ಕು ಸಣ್ಣ ಕಥೆಗಳ ಪ್ರಸಿದ್ಧ ಕೃತಿಯನ್ನು ರಚಿಸಿ, ಇವರನ್ನೂ ಕೆಲವರು ಸಣ್ಣ ಕಥೆಗಳ ಜನಕ ಎಂದಿದ್ದಾರೆ. ಸಿದ್ನೆಕೊಪ್ಪದ ಸುದರ್ಶನ ದೇಸಾಯಿಯವರು ಪತ್ತೇದಾರಿ ಕಾದಂಬರಿಕಾರರಾಗಿ ಪ್ರಸಿದ್ಧಿ ಪಡೆದಿದ್ದಾರೆ. ಚಿಕೇನಕೊಪ್ಪದ ಡಾ. ದೇವೇಂದ್ರ ಕುಮಾರ ಹಕಾರಿ ಕವಿಗಳಾಗಿ, ಕಾದಂಬರಿಕಾರರಾಗಿ, ಕಥೆಗಾರರಾಗಿ, ಜಾನಪದ ತಜ್ಞರಾಗಿ, ಅನುವಾದಕರಾಗಿ ಪ್ರಸಿದ್ಧಿ ಪಡೆದಿದ್ದಾರೆ. ಆಡೂರಿನವರಾದ ಡಾ. ಬಿ.ವಿ. ಶಿರೂರು ಪ್ರಾಧ್ಯಾಪಕರಾಗಿ, ಸಂಶೋಧಕರಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ. ಮೂಲತಃ ಕುಕನೂರಿನವರಾದ ಡಾ. ಬಸವರಾಜ ಸಬರದ ಬಂಡಾಯ ಸಾಹಿತಿಗಳ ಸಾಲಿನ ಮುಂಚೂಣಿಯಲ್ಲಿದ್ದು ಹೆಸರು ಮಾಡಿದವರು. ಬನ್ನಿಕೊಪ್ಪದವರಾದ ಡಾ. ಕೆ.ಬಿ., ಬ್ಯಾಳಿ ಸಾಯಿ ಪ್ರಕಾಶನದಿಂದ 20 ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಕೊಡುಗೆಯನ್ನು ನೀಡಿದ್ದಾರೆ. ಹಾಗೆಯೇ ಭರಮಪ್ಪ ಚಿಲಗೋಡ, ಜಗದೀಶ ಬ್ಯಾಲಹುಣಿಸಿ, ಎ.ಪಿ. ಮುದೋಳ, ಸಿ.ಎಂ. ಚನ್ನಬಸಪ್ಪ, ಆಯ್.ಪಿ.ರಾಜ್ಯರ, ಎಂ. ಜೀವನ, ಡಾ.ಡಿ.ಎಂ.ಹಿರೇಮಠ, ಡಾ.ವಿ.ಬಿ.ರಡ್ಡೇರ, ಟಿ.ಕೆ.ಗಂಗಾಧರ, ಬನ್ನಿಕೊಪ್ಪದ ಪಂ.ಅಮರನಾಥಶಾಸ್ತ್ರಿಗಳು, ದ್ಯಾಂಪೂರ ಕಲಿನಾಥಶಾಸ್ತ್ರಿಗಳು, ಡಾ.ನಿಜಲಿಂಗಯ್ಯ

ಹಿರೇಮಠ, ರವಿತೇಜ ಅಬ್ಬಿಗೇರಿ, ಕು.ಶಶಾಂಕ ಮಾದರ, ಎಸ್.ಎಂ.ಕಂಬಾಳಿಮಠ, ರಮೇಶ ಸುರ್ವೆ, ಕೊಟ್ರೆಪ್ಪ ತೋಟದ ಮುಂತಾದವರು ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡುವುದರ ಮೂಲಕ ಕುಕನೂರ ತಾಲೂಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

**ಕಲೆ ಮತ್ತು ಕಲಾವಿದರು**

ತಳಕಲ್ಲ ಗ್ರಾಮವು ಸುತ್ತಲಿನ ನಾಡಿಗೆ ಕಲಾಕೇಂದ್ರವಾಗಿದೆ. ಇಲ್ಲಿ ಶ್ರೀರಂಜನ ನಾಟ್ಯ ಸಂಘ ಎಂಬ ನಾಟಕ ಕಂಪನಿಯಿಂದ ಹಲವಾರು ಪ್ರತಿಭೆಗಳು ತಮ್ಮ ಕಲಾ ಪ್ರತಿಭೆಯನ್ನು ಪ್ರದರ್ಶಿಸಿವೆ. ಇತ್ತೀಚಿಗೆ ಅನೇಕ ಯುವಕರು ಕಲಾ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದಾರೆ. ದೊಡಾಟವು ಇಲ್ಲಿ ಒಂದು ಕಾಲ ಬಹು ಆಕರ್ಷಣಿಯ ಕಲಾಕ್ಷೇತ್ರವಾಗಿತ್ತು. ತಳಕಲ್ಲಿನ ಖಾನಗೌಡ್ರ ತಬಲವಾದನ ಕಲೆ ಪ್ರಸಿದ್ಧವಾಗಿತ್ತು. ಅವರು ಶಿಷ್ಯ ಕೆ.ರಾಮನಾಥರವರು ಚಲನಚಿತ್ರದಲ್ಲಿ ಸಂಗೀತಗಾರರಾಗಿದ್ದಾರೆ. ಭಗವಂತಪ್ಪ ಉಪ್ಪಾರ ಶಿಲ್ಪಕಲೆಯಲ್ಲಿ ಪ್ರಾವಿಣ್ಯತೆ ಪಡೆದವರಾಗಿ ಅನೇಕ ದೇವಸ್ಥಾನಗಳನ್ನು ನಿರ್ಮಾಣ ಮಾಡಿದ್ದಾರೆ.

ಮಂಗಳೂರು ಗ್ರಾಮ ಕಲೆ, ಸಂಸ್ಕೃತಿ, ಸಂಗೀತ, ಶೈಕ್ಷಣಿಕ ರಂಗದಲ್ಲಿ ಹೆಸರು ಪಡೆದ ಗ್ರಾಮವಾಗಿದ್ದು ಇಲ್ಲಿನ ಹಿರಿಯ ಕಲಾವಿದರಾದ ದಿ.ಮಂಗಳೂರು ಈರಣ್ಣ (ಪಾತ್ರದ ಈರಪ್ಪ) ಚಿತ್ರರಂಗ, ನಾಟಕ, ರಂಗದಲ್ಲಿ ಹೆಸರು ಗಳಿಸಿದ ಕಲಾವಿದರು. ದಿ. ಲಿಂಗರಾಜ ಲಿಂಗನಗೌಡ ವಿವೇಕಿ ಹೆಸರಾಂತ ನಾಟಕಗಳ ಕೃತಿ ರಚನೆಕಾರರು, ರಂಗಭೂಮಿಗೆ ಬಹುಮುಖ್ಯ ಸೇವೆ ನೀಡಿದವರು. ಮೋಚಿ ಸಮಾಜದವರು ಮನೆಗಳಿಗೆ ಹಾಕುವ ಮಡಿಗೆ ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಮತ್ತು ಕಟ್ಟಿಗೆಯ ಕುಸುರಿನ ಕೆತ್ತನೆಯಲ್ಲಿಯೂ ಹೆಸರು ಮಾಡಿದ್ದಾರೆ. ಇವರ ಮಡಿಗೆಗಳು ಉತ್ತರ ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಹೆಸರು ಮಾಡಿವೆ. ಅದೇ ರೀತಿ ಮೋಚಿ ಸಮಾಜದ ಹೆಣ್ಣುಮಕ್ಕಳು ಕೌದಿ ಹೊಲಿಯುವ ಕಸುಬಿನಲ್ಲಿ ಹೆಸರು ಮಾಡಿದ್ದಾರೆ.

ಕುದುರೆಮೋತಿ ಗ್ರಾಮದಲ್ಲಿ ಹೊಟ್ಟೆಪಾಡಿಗಾಗಿ ರಾಜ್ಯಾದ್ಯಂತ ಸಂಚರಿಸುವ ಕಾಡು ಸಿದ್ಧರು, ಸುಡುಗಾಡು ಸಿದ್ಧರು, ಹಾವುಗಾರರು, ವೇಷಗಾರರು ಹೀಗೆ ಅಲೆಮಾರಿ ಜನಾಂಗದವರು ರಾಮಾಯಣ, ಮಹಾಭಾರತ ಕಥೆಗಳನ್ನು ಹೇಳುತ್ತಾ ತಮ್ಮ ಬದುಕನ್ನು ಸಾಗಿಸುತ್ತಿದ್ದಾರೆ. ಮೋಹರಂ ಹಬ್ಬದ ನಿಮಿತ್ಯ ಎಲ್ಲಾ ಭಾಗಗಳಿಂದ ಎಲ್ಲರೂ ಬಂದು ಸೇರಿ ಹಬ್ಬ ಆಚರಣೆ ಮಾಡುತ್ತಾರೆ. ಈ ಗ್ರಾಮದಲ್ಲಿ ಚಿತ್ರ ಕಲಾವಿದರು ಗೊಂಬೆ ತಯಾರಿಕೆ, ತೊಟ್ಟಿಲು ತಯಾರಿಕೆ, ಕಾಳಿಕಾ ದೇವಿ, ದುರ್ಗಾದೇವಿ ಮೂರ್ತಿ ಕೆತ್ತನೆಯಲ್ಲಿ ಪ್ರಸಿದ್ಧಿ ಪಡೆದಿದ್ದಾರೆ.

ಮಂಡಲಗಿರಿ ಗ್ರಾಮದಲ್ಲಿ ಕಲೆಗಾಗಿ ಬದುಕಿದ ಕಲಾವಿದರು ಬಹಳಷ್ಟು ಜನರಿದ್ದಾರೆ. ದಿ. ದೇವೇಂದ್ರಪ್ಪ ಮೀಸೆ ಎಂಬುವವರು 25 ವರ್ಷ ರಂಗಭೂಮಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ಹೀಗೆ ತಾಲೂಕಿನಲ್ಲಿ ಹಲವಾರು ಗ್ರಾಮಗಳಲ್ಲಿ ಹಲವು ಕಲೆಗಳಿಂದಾಗಿ ಕೊಪ್ಪಳ ಜಿಲ್ಲೆಯಲ್ಲಿಯೇ ಅತ್ಯಂತ ಕಲಾ ಶ್ರೀಮಂತಿಕೆಯ ಪಡೆದುಕೊಂಡ ತಾಲೂಕಾಗಿದೆ. ಕುಕನೂರಿನ ರಹಿಮಾನಮ್ಮ ಕಲ್ಮನಿಯವರು ಒಬ್ಬ ಅದ್ಭುತ ಕಲಾಚೇತನ, ವೃತ್ತಿರಂಗಭೂಮಿ, ಚಲನಚಿತ್ರ ನಟನೆಯಲ್ಲಿಯೂ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಯರೆಹಂಚಿನಾಳಿನ ಜೀವನಸಾಬ ಬಿನ್ನಾಳ ತನ್ನ ಜನಪದ ಕಲೆಯಿಂದ ಮನೆಮಾತಾಗಿರುವ ಇರುವ ದೂರದರ್ಶನ ಕಲಾವಿದರು.

ಭಜನೆ, ಜಾನಪದ, ತತ್ವಪದಕಾರರು, ಸೋಬಾನೆ ಕಲಾವಿದರು ಪುಟ್ಟರಾಜ ಕವಿ ಗವಾಯಿಗಳ ಪರಂಪರೆಯ ಸೊಗಡು ಈ ಭಾಗದ ಸ್ಫೂರ್ತಿಯಾಗಿದೆ.

**ಆಧಾರ ಗ್ರಂಥಗಳು :**


1. ತಿಪ್ಪೇರುದ್ರಸ್ವಾಮಿ ಹೆಚ್. "ಕರ್ನಾಟಕ ಸಂಸ್ಕೃತಿ ಸಮೀಕ್ಷೆ", ಡಿ.ವಿ.ಕೆ ಪ್ರಕಾಶನ, ಮೈಸೂರು, 2007
2. ಚಿದಾನಂದ ಮೂರ್ತಿ ಎಂ., "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ", ಸಪ್ನ ಬುಕ್ ಹೌಸ್, ಬೆಂಗಳೂರು, 1966
3. ರಹಮತ್ ತರೀಕೇರೆ "ಸಾಂಸ್ಕೃತಿಕ ಅಧ್ಯಯನ" ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2004
4. ದೇವುಡು "ಕರ್ನಾಟಕ ಸಂಸ್ಕೃತಿ" ದೇವುಡು ಪ್ರತಿಷ್ಠಾನ, ಬೆಂಗಳೂರು, 1935
5. ಡಾ. ಸಿದ್ದಲಿಂಗಪ್ಪ ಕೊಟ್ನೆಕಲ್ "ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ", ಮೇಘನಾ ಪ್ರಕಾಶನ ಕೊಪ್ಪಳ, 2010
6. ಶ್ರೀನಿವಾಸ ಗುಡಿ "ಶಿವಶಕ್ತಿ ಸ್ವರೂಪಿಣಿ ದಕ್ಷಿಣಾಭಿಮುಖಿ ಶ್ರೀ ಮಹಾಮಾಯೆ", ಶ್ರೀ ದತ್ತಾತ್ರೇಯ ಗುಂಡಾಭಟ್ ಪೂಜಾರ, ಕುಕನೂರು, 2017.
7. ಪಿ.ಬಿ. ದೇಸಾಯಿ "ಕುಕನೂರ ಶ್ರೀ ಮಹಾಮಾಯೆ", ಶ್ರೀ ರಂ. ದೇಸಾಯಿ ಕುಕನೂರು, 1958
8. ಅಲ್ಲಾವುದ್ದೀನ ಯಮ್ಮಿ "ಕುಕನೂರು ತಾಲೂಕ ಹೋರಾಟದ ಹೆಜ್ಜೆಗುರುತುಗಳು", ಪ್ರತಿಭಾ ಪ್ರಕಾಶನ ಕುಕನೂರ, 2018.
9. ಬಿ.ಸಿ., ಪಾಟೀಲ "ಮಹಾದೇವ ದೇವಾಲಯ", ಹರಿಹರ ಪ್ರಕಾಶನ ಕೊಪ್ಪಳ, 2001.
10. ಮಹೇಶ ಬಾಬು ಸುರ್ವೆ "ದೇವಾಲಯಗಳ ಚಕ್ರವರ್ತಿಗೆ 900 ವರ್ಷಗಳ ವೈಭವ", ರುಕ್ಮಿಣಿ ಪ್ರಕಾಶನ, ಬೆಂಗಳೂರು, 2011


❖❖❖

# ಉತ್ತರ ಕರ್ನಾಟಕದ ಮದುವೆ ಸಂಪ್ರದಾಯದ ಹಾಡುಗಳ ಇಣುಕು ನೋಟ

**ಡಾ. ಎಸ್. ಬಿ. ರಾಠೋಡ**

ಸಹ ಪ್ರಾಧ್ಯಾಪಕರು, ಪ್ರಾಚಾರ್ಯರು ಮತ್ತು ಮುಖ್ಯಸ್ಥರು ಕನ್ನಡ ವಿಭಾಗ

ಹಾಗೂ ಸಂಶೋಧನಾ ಮಾರ್ಗದರ್ಶಕರು (ಹಂಪಿ.ವಿ.ವಿ)

ಎಸ್. ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ–586205

ಮದುವೆಯ ವಿಚಾರದಲ್ಲಿ ಪ್ರತಿಯೊಂದು ಸಮುದಾಯವೂ ತನ್ನದೇ ಆದ ಆದ ರೀತಿ, ರಿವಾಜು ಹೊಂದಿರುತ್ತದೆ. ಮದುವೆಯ ಸಂದರ್ಭದಲ್ಲಿ ಹೆಂಗಸರು ಹಾಡುವ ಹಾಡುಗಳಿಗೆ ವಿಶೇಷ ಮಹತ್ತ್ವವಿದೆ. ಮದುವೆಯ ಸಂಪ್ರದಾಯವು ನಿಶ್ಚಿತಾರ್ಥದೊಂದಿಗೆಯೇ ಆರಂಭವಾಗುತ್ತದೆ.

**ನಿಶ್ಚಿತಾರ್ಥ ಕಾರ್ಯಕ್ರಮದಲ್ಲಿ ಹಾಡುವ ಹಾಡುಗಳು**

ವರನ ಕಡೆಯವರು ಕನ್ಯ ನೋಡಲಿಕ್ಕೆ ಅಂದರೆ ಹೆಣ್ಣು ಬೇಡಲಿಕ್ಕೆ– ಕೂಸು ಬೇಡಲಿಕ್ಕೆ ಹೋಗುವರು. "ಕೂಸು ಬೇಡಲಿ ಹೋದ್ರ ಕೂಸೇನು ಮಾಡತಿರಲೆ। ಕೂಸ್ಹಾಲುಬಾನಾ ಉಣತಿರಲೇ, ಕೂಸಿನ ತಾಯಿ ಕುಸುಮಾಯದ ನಗೆಯ ನಗುತಿರಲೆ" ಹೀಗಿರುವದು ಶುಭ ಚಿಹ್ನ, ಅಲ್ಲದೆ ಗೋಡೆಯ ಮಗ್ಗಲಿನ ಜೋಡು ಮಾವಿನ ಮರದ ತೀರ ತುದಿಯಲ್ಲಿ ಕುಳಿತು ಪಕ್ಷಿಗಳು ಗಲಬಲಿಸತ್ತಿದ್ದರೆ, ಕನ್ಯಾರ್ಥಿಗಳ ಕೆಲಸರ್ಧ ಕೈಗೂಡಿದಂತೆಯೇ, ಪಡಸಾಲೆಯಲ್ಲಿ ಕುಳಿತ ದೊಡ್ಡಪ್ಪನು ಒಳಗಿರುವ ಮಡದಿಯನ್ನು ಕರೆದು ಅವರಿಗೆ ಮಗಳನ್ನು ಕೊಡೋಣವೇ?" ಎಂದು ಕೇಳುತ್ತಾನೆ. ಅದಕ್ಕೆ ಗೃಹಿಣಿಯು ಹೇಳುವ ಸಲಹೆ ಈ ತ್ರಿಪದಿಯಲ್ಲಿ ವರ್ಣಿಸಲಾಗಿದೆ.

**ವರ ಸುದ್ದನಿದ್ದರ ಕುಲ ಚೊಕ್ಕನಿದ್ದರ**
**ಫಣಿ ನಾಲಗಿ ಸುದ್ದ ಮುಖ ಸುದ್ದ। ನಿದ್ದರ।**
**ಕುಡ ಹೋಗಿರಿ ನಮ್ಮ ಮಗಳನ್ನ।**

ಈ ಮೇಲಿನ ತ್ರಿಪದಿಯಲ್ಲಿ ವರನ ಪೂರ್ಣ ಶಾರೀರಿಕ ಪರೀಕ್ಷೆದೊಂದಿಗೆ ಮತ್ತು ಕುಲಗೊತ್ರದದ ಪರೀಕ್ಷೆಯೊಂದಿಗೆ ಕೊಡು ಎಂದು ಹೇಳುವ ಸತಿ–ಪತಿಗಳ ಒಪ್ಪಿತ ಸೂಚನೆ. ಅದರಂತೆ ದೊಡ್ಡಪ್ಪ ಕನ್ನೆ ಕೊಡುವದಕ್ಕೆ ಒಪ್ಪಿಕೊಳ್ಳುವರು.

**ಒಳಕಲ್ಲು ಪೂಜೆ ಮತ್ತು ಐದೆಯರ ಹಾಡುಗಳು**

ವರನ ನಿಶ್ಚಯದ ಕೆಲಸ ಮುಗಿಯುತ್ತಲೇ ಲಗ್ನ ಮುಹರ್ತ ತಗೆಯಿಸಿ ಹಿಟ್ಟು ಅಕ್ಕಿಯ ಸಾಹಿತ್ಯವನ್ನು ಸಿದ್ಧಗೊಳಿಸುವದಕ್ಕೆ ಆರಂಭಿಸುತ್ತಾರೆ. ಮೊದಲಿಗೆ ಒರಳು ಕಲ್ಲು ಮೊದಲಾದವುಗಳನ್ನು ಮುತ್ತೈದೆಯರು ಪೂಜಿಸುತ್ತಾರೆ. ಆ ಕೆಲಸಕ್ಕೆ ಬಂಧು–ಬಳಗದವರು ನೆರೆ–ಹೊರೆಯವರು ಸಹ ಕರೆಯುತ್ತಾರೆ. "ಕಲ್ಲ ಪೂಜಿ ಮಾಡಲಕ ನನ್ಯಾರು ಕರಸ್ಯಾರ ಸಾಲ ಮಾಳಗಿ ಮನೆಯವಳ" ಸಾಲ ಮಾಳಗಿ ಮನೆ

ಅನ್ನುವದಷ್ಟೇ ಗೊತ್ತು. ಪಿಲ್ಲೆ ಇಟ್ಟ ಕಾಲಿನ ಮಗಳನ್ನು ಕರೆಯಲು ಪಲ್ಲಕ್ಕಿ ಹೋಗಿದೆ. ನಂಟರನ್ನು ಕರೆಯಲು ಮಂಟಪ ಕಳಿಸಿದ್ದಾರೆ. ಮಂಟಿಗೆ ಧರಿಸಿದ ಮಗಳ ಕಡೆಗೆ ಒಂಟಿ ಸಿಂಗಾರಾಗಿಹೋಗಿದೆ. ಕಾಲದಲ್ಲಿ ಅಳಿಯ-ದೇವರೆನಿಸಿದರೆ ಆಶ್ಚರ್ಯವಲ್ಲ. ಒರಳು ಕಲ್ಲುಗಳೂ ಪೂಜೆ ಗೊಳ್ಳುತ್ತವೆ! ಒನಕೆಯ ಸಿಂಗಾರವೇ ಬೇರೆ. ಅಣ್ಣ ತಮ್ಮಂದಿರು ಹಾಲ ಬೋನವನುಂಡು ಹೊನ್ನಿನುಳಿಬಾಚಿಯನ್ನು ಹೆಗಲಿಗೇರಿಸಿ ಗುಡ್ಡಕ್ಕೆ ಹೋಗಿ ಹೊನ್ನಿ ಯಮರ ಕಡಿದು ಮಾಡಿದ ಒನಕೆ! ಅಪ್ಪನೂ ಮಗನೂ ತುಪ್ಪ ಬೋನವನುಂಡು ಉಕ್ಕಿನುಳಿ ಬಾಚಿ ಹಿಡಕೊಂಡು ಗುಡ್ಡಕ್ಕೆ ಹೋಗಿ ಹಿಪ್ಪೆಯ ಮರ ಕಡಿದು ಮಾಡಿದ ಒನಕೆ!! ಮೊರಕೆ ಮುತ್ತಿನ ಕಟ್ಟು! ಒನಕೆಗೆ ಹುರಿ ಗೆಜ್ಜೆ! ಹೊನ್ನ ಮಾಣಿಕದ ಮರಜರಡಿ!! ತಕ್ಕೊಂಡು ಕನ್ಯೆಯರು ಶಿವಶರಣು ಎಂದು ಹಾಡುವರು. ಅಂಗೈ ಚಂದಕೆ ಮುಂಗೈ ತಿರುವುತ್ತ ಅಂಬರಕೆ ಒನಕೆಯ ನೆಸೆಯುವ ಮಕ್ಕಳು! ಆ ಕೈಯ ಚಂದಕೆ ಈ ಕೈಯ ತಿರುಹುತ ಆಕಾಶಕೆ ಒನಕೆಯನೆಸೆಯುವ ಮನೆಯ ಸೊಸೆಯರು!! ಎತ್ತಲಾರದಷ್ಟು ಬೆಳ್ಳಿ ಬಂಗಾರ ತೊಡಿಗೆಗಳನ್ನು ಧರಿಸಿ ಸುತ್ತಿ ಬಂದ ಸೆರಗನ್ನು ಮುಡಿಗೆ ಕಟ್ಟಿಕೊಂಡು ಆನಂದಭರಿತವಾದ ಹಾಡು ಹೇಳುವ ಆ ಅಕ್ಕ-ತಂಗಿಯರ ಉಲ್ಲಾಸ, ಸೊಗಸು ತುಂಬಿದ ಸಭೆಗೊಂದು ಝೇಂಕಾರವಿದ್ದಂತೆ ಗೋಚರಿಸುವುದು.

**ಬೀಗರನ್ನು ಎದುರುಗೊಳ್ಳುವ ಸುಸಂದರ್ಭ**

ವರನ ಮನೆಯ ಮುಂದೆ ಮದುವೆಯಾಗುವದಿದ್ದರೆ ಹೆಣ್ಣಿನವರು, ಕನ್ಯೆಯ ಮನೆಯ ಮುಂದೆ ಮದುವೆಯಾಗುವದಿದ್ದರೆ ಗಂಡಿನವರು ತಂತಮ್ಮ ಬಳಗದವರೊಂದಿಗೆ ದೀಪ, ವಾದ್ಯ ಮೊದಲಾದ ಅಲಂಕಾರದೊಂದಿಗೆ, ಐಶ್ವರ್ಯದೊಂದಿಗೆ ತಮ್ಮೂರಿಂದ ಬೀಗರೂರಿಗೆ ಹೊರಡುವದೇ ನಿಬ್ಬಣ. ಹಾಗೆ ಒಂದು ಚಂದ. "ಕಳಸಾ ತಕ್ಕೊಳ್ಳೆ ಕಳೆಯುಳ್ಳ ಮುತ್ತೆದೆ" "ಗಿಂಡೀ ತಕ್ಕೊಳ್ಳೇ ಅಂದುಳ್ಳ ಮುತ್ತೈದೆ" ಎಂಬ ಕೂಗಾಟಗಳು ಕೇಳಿ ಬರುವವು. ನಿಬ್ಬಣ ಹೊರಟಾಗ ಶುಭ ಚಿಹ್ನೆಗಳು ಕಾಣಿಸಿಕೊಳ್ಳಬೇಕು ಅತೀ ಉತ್ತಮ.

**ಬಾಗಿಲ ಬಿಟ್ ಹೊರ್ಡುವಾಗ ಬಾಳೆ ಪಲ್ಲವಿಸ್ಯಾವೆ।**
**ಬಾಗಿಲಾನ ಗೌಳಿ ನುಡಿದಾವೆ ॥**
**ಹಟ್ಟಿ ಬಿಟ್ಟು ಹೊರ್ಡುವಾಗ ಹಣ್ಣು ಪಲ್ಲವಿಸ್ಯಾವೆ ।**
**ಹಟ್ಯಾಗ್ನ ಗೌಳಿ ನುಡಿದಾವೆ ॥**
**ಅಂಗಳ ಬಿಟ್ಟು ಹೊರ್ಡುವಾಗ ನಿಂಬೆ ಪಲ್ಲವಿಸ್ಯಾವೆ ।**
**ಅಂಗಳದ ಗೌಳಿ ನುಡಿದಾವೆ ॥**

"ಹತ್ತೆಮ್ಮೆ ಜೋಕೆ, ಮನೆ ಜೋಕೆ, ಮಿತ್ರೇನ ಗೆದ್ದು ನಾಳೆ ಬರತೀನಿ" ಎಂದು ಹೊರಡುವ ಮದುವಣಿಗನಿಗೆ ಹೀಗೆ ಹೇಳಲಾಗುತ್ತದೆ.

**ಮಿತ್ರೇನ ಗೆದಿಯೋಕೆ ನನ್ನಿಚ್ಚೆ ನಿನ್ನಿಚ್ಚೆ**
**ಮನೆದೇವರ ಕರುಣೆ ನಿನ್ನ ಮ್ಯಾಲೆ । ಇದ್ದರೆ ॥**
**ಮಿತ್ರೇನ ಗೆದ್ದು ನಾಳೆ ಬರಹೋಗು ॥**

ಆ ಬಳಿಕ "ಅತ್ತ ಶರಣೆನ್ನಿ, ಇತ್ತ ಶರಣೆನ್ನಿ । ಸುತ್ತಲ ದೇವರಿಗೆ ಶರಣೆನ್ನಿ ಎಂದು ಕೈ ಮುಗಿದು, ಸಮನೆಗಳಿಗೆ ಬೀಗ ಹಾಕಿ, ಕೆಂಬರುಗಣ್ಣಿನ ಕಟ್ಟಾಳುಗಳನ್ನು ಕಾವಲಿರಿಸಿ-

"ಅಕ್ಕಾ ಅಕ್ಕಯ್ಯ ಹೊರಡಿ! ತಂಗೀ ತಂಗೆಮ್ಮ ಹೊರಡಿ!! ತಾಯಿ, ತಾಯವ್ವ ಹೊರಡಿ!!!" ಎಂದು ಒಬ್ಬರನ್ನೊಬ್ಬರು ಮುಂದೆ ಮಾಡಿಕೊಂಡು ಹೊರಡುವರು. ಹೂ ಬರುವ ಮೊದಲೇ ಕಂಪು ಬರುವಂತೆ ಬೀಗರು ಬಂದರೆಂದು ಮೊದಲೇ ಗೊತ್ತಾಗುತ್ತದೆ. "ಎಲ್ಲಿ ಬಿಟ್ಟಿರಿ, ಬುತ್ತೆಲ್ಲಿ ಉಂಡಿರಿ! ಸುಕ್ಕರ ನಿಮಗೆಲ್ಲಿ ಉದಿಸಿದ" ಎಂದು ಒಬ್ಬರು ಕೇಳಿದರೆ, "ಬೀಡಲ್ಲಿ ಬಿಟ್ಟಿರಿ, ಬಾನವೆಲ್ಲಿ ಉಂಡಿರಿ! ಸೂರ್ಯ ನಿಮಗೆಲ್ಲಿ ಉದಿಸಿದ" ಎಂದು ಇನ್ನೊಬ್ಬರು ಕೇಳುವರು. "ಅಗೋ ಎತ್ತಿನ ಮುಂದೆ ಕಳಸ ಹಿಡಿದಿರುವವಳೇ ಮದುವಣಿಗನ ಹಿರಿಯಕ್ಕ! ಹೋರಿಯ ಮುಂದೆ ಕಳಸ ಹಿಡಿದಿರುವವಳೇ ಮದುವಣಿಗನ ಕಿರುತಂಗಿ!! ಇತ್ತ ನಂದಿಯ ಮುಂದೆ ಬಳಕುತ್ತ ಬರುವವಳೇ ಸುಂದರ ಮದುಮಗನ ಹಡೆದವ್ವ!!:" ಎಂಬ ಉದ್ಗಾರಗಳು ಕೇಳಿಬರುವವು. ಅದರೊಂದಿಗೆ,

**ಈ ಊರ ಮುಂದೊಂದು ಆಲದ ಮರವಿಲ್ಲ**
**ಆನಿ ಕಟ್ಟಾಕೆ ನೆರಳಿಲ್ಲ । ಊರಾಗ ।**
**ರಾಯರು ಮುಖ ತೊಳಿಯೋ ಕೊಳವಿಲ್ಲ ॥**
**ಈ ಊರ ಮುಂದೊಂದು ಅತ್ತಿಯ ಮರವಿಲ್ಲ**
**ಎತ್ತು ಕಟ್ಟಾಕೆ ನೆರಳಿಲ್ಲ । ಊರಾಗ ।**
**ಮಿತ್ರೇರು ಮುಖ ತೊಳಿಯೋ ಕೊಳವಿಲ್ಲ ॥**

ಎನ್ನುವ ಅನನುಕೂಲತೆಯ ಗೀಳುನುಡಿಗಳು ಕೇಳಿಬರುವವು.

**ಮದುಮಕ್ಕಳ ಅರಿಸಿಣ ಹಚ್ಚುವ ಕಾರ್ಯಕ್ರಮ**

ಅರಿಸಿಣ ಹಚ್ಚುವದು ಲಗ್ನ ಕಾಲದ ಪ್ರಥಮ ಹಂತ. ಮುತ್ತೈದೆಯರು ನೆರೆದು ಹಾಡು ಹೇಳುತ್ತ ವೀಳ್ಯದೆಲೆಯಿಂದ ಎಣ್ಣೆಯನ್ನು ಹಚ್ಚಿ, ಮೈಗೆ ಅರಿಸಿಣವನ್ನು ಬಳಿದು ಸ್ನಾನ ಮಾಡಿಸುವರು. ಈ ವಿಧಾನವು ವಧುವರರಿಗೆ ಬೇರೆ ಬೇರೆ ಸ್ಥಳಗಳಲ್ಲಿ ನೆರವೇರಿಸುವರು. ನೇರವಾಗಿ ಶಿವ-ಪಾರ್ವತಿಯರಿಗೇ ಎಣ್ಣೆ ಹೂಸುವರೇನೋ ಎನ್ನುವಂತೆ ಆಸ್ಥೆವಹಿಸುವರು. ಎಣ್ಣೆ ಹಚ್ಚುವಷ್ಟರಲ್ಲಿಯೇ ಅಂಗಳಕೆ ಬಿಸಿಲು ಬರುವದು. ಸುಮಾರು ತೋಟಗಳಿಂದ ತಂದ ಎಲೆಗಳು ಸಾಲದೆ ಹೋಗುವವು.

**ನೀರಿಲ್ಲದಂಗಳಾಗ ನೀನ್ಯಾಕನಾಗ್ಯಾವ**
**ಊರಿಗಿ ದೊಡ್ಡವರ ಮಗ ಮಿಂದ ।**
**ಕೆಸರಿಲ್ಲದಂಗಳಾಗ ಕೆಸಲ್ಯಾಕನಾಗ್ಯಾವ**
**ಊರಿಗೆ ದೊಡ್ಡವರ ಮಗ ಮಿಂದ ॥**

ಇದೆಲ್ಲ ವರನ ಸಡಗರವಾದ ಬಳಿಕ "ಹಂಚಗಣಿ, ಬೆಂಚಗೂಣಿ ಮುತ್ತಿನ ನಾಗುರಣಿ ಕುಸುಮಲ್ಲಿಯಾದ ಭೂದೇವಿಗೆ, ಮುತ್ತಿನ ಬಟ್ಟಿಟ್ಟ ಮುತ್ತೈದೆಯರೆಲ್ಲ" ಎಣ್ಣೆ ಹಚ್ಚುವದಕ್ಕೆ ಸಜ್ಜಾಗುವರು.

**ನೂಲು ಸುತ್ತುವದು (ಸುರಿಗೆ ಎರೆಯುವದು)**

ಮದುಮಕ್ಕಳನ್ನು ಸ್ನಾನ ಮಾಡಿಸುವ ಇನ್ನೊಂದು ಪ್ರಸಂಗವು ಅಕ್ಷತೆಯ ಆಗ ನಾಲ್ಕು ಮೂಲೆಗೆ ನಾಲ್ಕು ತಂಬಿಗೆ ಇರಿಸಿ ಅವುಗಳ ಸುತ್ತುಮುತ್ತು ಮೇರೆಯಂತೆ ನೂಲು ಸುತ್ತಿ ನಟ್ಟನಡುವೆ ಮಣಿಯಿಟ್ಟು ಮದು ಮಕ್ಕಳನ್ನು ಎರೆಯುತ್ತಾರೆ. ಅದೇ ಕಾಲಕ್ಕೆ

ಮದುವಣಿಗರ ತಾಯಿಯರೂ ಸ್ನಾನಕ್ಕೆ ನಿಲ್ಲುವದುಂಟು. ಅದಾವುದೋ ನಾಡಿನ ಬಡಿಗನು ಮಾಡಿ ಮಾಣಿಕ ಕಾಲಕ್ಕೆ ಬರುವದು. ಜಡಿಸಿದ ಮಣಿಯಿರಿಸಿ, ಅಲ್ಲೆಂಬ ಪರಿವೆಯಲ್ಲಿ ಗಿಲ್ಲೆಂಬ ಮಗಿ ಹಾಕಿ ನೀರು ಬೆರೆಸಿ, ಜಿಲ್ಲೆಯ ಕಾಲು ಕೆಸರಾಗುವಂತೆ ಮುತ್ತೈದೆಯರು ತಾಯಿ–ಮಕ್ಕಳನ್ನು ಮೀಯಿಸುವರು. ಸಲ್ವರು ವಧು–ವರರಿಗೆ ಅಕ್ಷತೆ ಹಾಕಿದ ಬಳಿಕ ಕೆಲಹೊತ್ತಿನ ಮೇಲೆ ಅವರಿಂದ ನಗೆಯಾಟ ಆಡಿಸುವರು. ಅದೇ ಅಡಿಕೆಯಾಟ. ಆಗ ಹಾಡುವ ಹಾಡಿನಲ್ಲಿ ವಧುವು ವರನ ಪಾದ ತೊಳೆಯುವಳೆಂದೂ, ಆಗ ಪಾದದಲ್ಲಿ ಪದುಮ ಕಾಣುವಳೆಂದೂ ಅದು ಆನೆ ಏರುವಂಥ ಬಲ ಬರುವ ಕುರುಹೆಂದೂ ಭಾವಿಸುವಳು.

**ಬೀಗರ ಅಪಹಾಸ ಹಾಡುಗಳು**

ಮದುವೆಯ ಮುಖ್ಯ ವಿಧಾನಗಳೆಲ್ಲ ಮುಗಿದ ಮೇಲೆ ಮದುಮಕ್ಕಳ ಮೆರವಣಿಗೆ ಹೊರಡುವದು. ಕಾಲಕ್ಕೆ ಬೀದಿಯಲ್ಲಿ ಎರಡೂ ಕಡೆಯ ಬೀಗರ ಪಕ್ಷದಿಂದ ಎರಡು ತಂಡಗಳಾಗಿ ಹೆಣ್ಣು ಮಕ್ಕಳು ಒಬ್ಬರನ್ನೊಬ್ಬರು ಅಪಹಾಸ ಮಾಡುವ ಹಾಡು ಹೇಳುತ್ತಾರೆ. ಅದು ಒಮ್ಮೊಮ್ಮೆ ಕದನದವರೆಗೂ ಹೋಗುತ್ತದೆ. ಆದರೆ ಈ ತರದ ನಗೆಚಾಟಿಕೆಗೆ ಬೇಕೆಂತಲೇ ಅವಕಾಶವಿಟ್ಟಂತೆ ತೋರುತ್ತದೆ.

**"ಸರಕ್ ಸರಿತಲ್ಲ ಬೀಗರ ಸ್ವರೂಪ ತಿಳಿತಲ್ಲ ॥ ಪ ॥**
**ಆನಿ ಬರತಾವಂತ ಆರು ಬಣವಿ ಕೊಂಡ**
**ಆನೆಲ್ಲಿ ನಿಮ್ಮ ದಳವೆಲ್ಲಿ?" ಇತ್ಯಾದಿ.**

**ಕೂಸು ಒಪ್ಪಿಸುವ ಕಾರ್ಯಕ್ರಮ**

ಮದುವೆಯ ವಿಧಾನಗಳಲ್ಲಿ ಕೊನೆಯದೇ ಕೂಸು ಒಪ್ಪಿಸುವದು. ವರನ ತಾಯಿ ತಂದೆಗಳಿಗೆ ಸರ್ವರ ಸಾಕ್ಷಿಯಾಗಿ ವಧುವಿನ ತಾಯ್ತಂದೆಗಳು ಮಗಳನ್ನು ಒಪ್ಪಿಸಿಕೊಡುವರು. ಆಗ ಹೇಳುವ ಹಾಡು ಕೇಳಿ ಕಣ್ಣೀರು ಸುರಿಸದವರು ಯಾರೂ ಇರಲಿಕ್ಕಿಲ್ಲ. ಕೂಸು ಒಪ್ಪಿಸುವ ಈ ವಿಧಾನಕ್ಕೆ 'ನಾಗೋಲಿ ಚೌಗೋಲಿ' ಎಂಬ ಇನ್ನೊಂದು ಹೆಸರೂ ಇದೆ.

**ಒಂಬತ್ತು ತಿಂಗಳು ನಿನ್ನ ತುಂಬಿಕೊಂಡು ತಿರಗೇನ ॥**
**ಹಂಬಲಿಸಿ ನಿನ್ನ ಹಡೆದೇನ ॥**
**ಹಂಬಲಿಸಿ ನಿನ್ನ ಹಡೆದೇನ ಚಿತ್ರದಗೊಂಬಿ**
**ನಿನಗೊಪ್ಪಿಸಿ ಕೊಡಲ್ಲಾಂಗ ॥**
**ತೊಟ್ಟಿಲ ತೂಗಂದ್ರ ಸಿಟ್ಟಲೆ ಕೂಡೋಳ ।**
**ಬಟ್ಟಲ ಬೆಳಗಾಕ ಅರಿಯಳ ॥**
**ಬಟ್ಟಲ ಬೆಳಗಾಕ ಅರಿಯಾದ ಮಗಳನ್ನು**
**ಕೊಟ್ಟೇನು ಮಾವನ ಕೈಯಾಗ ॥**

ಕಪ್ಪುರದ ಗುಡ್ಡಕ್ಕೆ ತಪ್ಪದಲೆ ಬೆಂಕಿ ಕೊಟ್ಟಂತೆ, ಅವರಪ್ಪನ ಹೊಟ್ಟಿ ತಳಮಳಿಸುತ್ತದೆ. ಕೊನೆಗೆ– "ನಮ್ಮ ಮಗಳಲ್ಲವ್ವ, ನಿಮ್ಮ ಮಗಳೇಕೆಂದು, ಛಂದಾಗಿ ಮಗಳನ್ನು ಸಲಕ್ವ । ಛಂದಾಗಿ ಮಗಳನ್ನ ಸಲಹವ್ವ ಅನ್ನುತ್ತ ಅವ್ವನ ಕೈಯಾಗ ಕೊಡಿರೆವ್ವ" ಎಂದು ಕೂಸು ಒಪ್ಪಿಸಿ ಕೊಡುವರು. ಇದಾದ ಮೇಲೆ ಬೀಗರು ತಮೂರ ಹಾದಿ ಹಿಡಿಯುತ್ತಾರೆ. ಅಲ್ಲಿ

ನಿಂತು ನೀರು ಕುಡಿಯುವದಿಲ್ಲ. ನಾಗಾಲೋಟವೇ "ನಾಗೋಲಿ ಚೌಗೋಲಿ ಆದ ಬಳಿಕ ನಾಯಿ ಸಹ ನೀರು ಕುಡಿಯುವದಿಲ್ಲ" ಎಂಬ ಗಾದೆಯಿದೆ.

ಉಪಸಂಹಾರ: ಹೀಗೆ ಮದುವೆಯ ಹಾಡುಗಳು ವಧೂವರರು ತಮ್ಮ ದಾಂಪತ್ಯ ಜೀವನಕ್ಕೆ ಪ್ರವೇಶಿಸುವ ಸಂದರ್ಭವನ್ನು ಮಧುರಗೊಳಿಸಲು ಬಳಕೆಯಾಗುತ್ತವೆ. ಆದರೆ ಇಂದಿನ ಓಟದ ಜೀವನದಲ್ಲಿ ಸಂಪ್ರದಾಯಗಳು ಹೇಳಕೇಳದೆ ಹೊರಟುಹೋಗುತ್ತಿವೆ. ಇಂತಹ ಸಂಪ್ರದಾಯಗಳು ಮತ್ತು ಹಾಡುಗಳು ಕೇವಲ ಅಧ್ಯಯನಾಸಕ್ತಿಯ ಸಂಗತಿಗಳಾಗಿಯಷ್ಟೇ ಉಳಿದುಬಿಡುತ್ತವೆ.

**ಪರಾಮರ್ಶನ ಸಾಹಿತ್ಯ**


1) ರಾಜಪ್ಪ ದಳವಾಯಿ (ಸಂ), ಕನ್ನಡ ಸಾಹಿತ್ಯ ಕೋಶ, ದಳವಾಯಿ ಪ್ರಕಾಶನ, ಬೆಂಗಳೂರು, 2008
2) ಸಿಂಪಿ ಲಿಂಗಣ್ಣ, ಜನಾಂಗದ ಜೀವಾಳ, ಹಲಸಂಗಿ ಗೆಳೆಯರ ಪ್ರತಿಷ್ಠಾನ, ವಿಜಯಪುರ. 2016
3) ಸಿಂಪಿ ಲಿಂಗಣ್ಣ., ಸ್ವರ್ಗದೋಲೆಗಳು, ಹಲಸಂಗಿ ಗೆಳೆಯರ ಪ್ರತಿಷ್ಠಾನ, ವಿಜಯಪುರ. 2016
4) ಎಂ. ಜಿ. ಬಿರಾದಾರ, ಸಾಗರ ಸಿಂಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1990
5) ಜೆ.ವಿ. ಮುಳಗುಂದ, ಸಿಂಪಿಯ ಮುತ್ತು, ಮಾತೋಶ್ರೀ ಪ್ರಕಾಶನ, ಮುದ್ದೇಬಿಹಾಳ, 1993


❖❖❖

**ಅಪ್ಪನ ಹೆಗಲನು ಏರಿಹ ಕಂದಗೆ**
**ಬರಿ ಮೈ ಅರಸನು ಕಾಣುತಿರೆ**
**ದಟ್ಟಿಯು ಇಲ್ಲದ ಚಲ್ಲಣವಿಲ್ಲದ**
**ಪಾಪದ ಬಡವನು! ಎನ್ನುತಿರೆ**

# ನಮ್ಮ ಶಿಕ್ಷಣ : ಒಂದು ಟಿಪ್ಪಣಿ

**ಗಿರೀಶ ಭಟ್ ಅಜಕ್ಕಳ**
ಪ್ರೊಫೆಸರ್, ಸ.ಪ್ರ.ದ. ಕಾಲೇಜು, ಸಿದ್ಧಕಟ್ಟೆ, ದ.ಕ.

ಇತ್ತೀಚೆಗೆ ಒಂದು ಸಮೀಕ್ಷೆಯಲ್ಲಿ ಹತ್ತನೇ ತರಗತಿಯ 23 ಸಾವಿರ ಮಕ್ಕಳ ಪೈಕಿ 7 ಸಾವಿರ ಮಕ್ಕಳಿಗೆ ಕನ್ನಡ ಓದು ಬರಹ ಬರುವುದಿಲ್ಲ ಎಂದು ಕಂಡುಕೊಳ್ಳಲಾಗಿದೆ ಎನ್ನುವ ಮಾಹಿತಿ ಪತ್ರಿಕೆಗಳಲ್ಲಿ ಸುದ್ದಿಯಾಯಿತು. ಅದೇ ರೀತಿ, ಪ್ರಾಥಮಿಕ ಹಂತದಲ್ಲಿ ಕನ್ನಡ ಮತ್ತು ಗಣಿತದಲ್ಲಿ ಕೂಡಿಸಿ ಕಳೆಯುವುದನ್ನೂ ಸರಿಯಾಗಿ ಕಲಿಸಿಲ್ಲ ಎಂಬ ಅಭಿಪ್ರಾಯ ಕೂಡ ಆ ಸುದ್ದಿಯಲ್ಲಿ ವ್ಯಕ್ತವಾಗಿತ್ತು. ಇದು ಮುದ್ರಣ ಮಾಧ್ಯಮದಲ್ಲಿ ಸುದ್ದಿಯಾಗಿ ಸಾಮಾಜಿಕ ಮಾಧ್ಯಮಗಳಲ್ಲಿಯೂ ಹರಡಲು ಮುಖ್ಯ ಕಾರಣವೇನೆಂದರೆ, ಹತ್ತನೆಯಲ್ಲಿ ಉತ್ತಮ ಫಲಿತಾಂಶ ಬರಬೇಕೆಂಬ ಒತ್ತಡದ ಬಗ್ಗೆ ಪ್ರೌಢಶಾಲಾ ಶಿಕ್ಷಕರ ಸಂಘವು ಆಕ್ಷೇಪ ವ್ಯಕ್ತಪಡಿಸಿದುದು.

ನಮ್ಮ ಶಿಕ್ಷಣದ ವಿವಿಧ ಹಂತಗಳ ಬೋಧಕರು ತಮಗಿಂತ ಮೊದಲಿನ ಹಂತದ ಬೋಧನೆಯ ಬಗ್ಗೆ ಟೀಕೆ ಮಾಡುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಇದರಲ್ಲಿ ಎಷ್ಟು ಹುರುಳಿದೆ ಅಥವಾ ಇಲ್ಲ ಎಂಬುದು ಬೇರೆಯೇ ಚರ್ಚೆ. ಆದರೆ ಪ್ರೌಢಶಾಲೆಯವರು ಪ್ರಾಥಮಿಕ ಹಂತದ ಬಗ್ಗೆ, ಪದವಿಪೂರ್ವ ಹಂತದ ಬೋಧಕರು ಪ್ರೌಡಶಾಲೆಯ ಹಂತದ ಬಗ್ಗೆ, ಪದವಿಹಂತದ ಬೋಧಕರು ಪದವಿಪೂರ್ವ ಹಂತದ ಬಗ್ಗೆ ಮತ್ತು ಸ್ನಾತಕೋತ್ತರ ಹಂತದ ಬೋಧಕರು ಪದವಿಹಂತದ ಬೋಧನೆಯ ಬಗ್ಗೆ ಇಂತಹ ಟೀಕೆ ಮಾಡುತ್ತಲೇ ಇರುತ್ತಾರೆ.

ಇಲ್ಲಿ ಒಂದು ಪ್ರಸಂಗ ನೆನಪಾಗುತ್ತದೆ.

ಆರೇಳು ವರ್ಷಗಳ ಹಿಂದೆ ಒಮ್ಮೆ, ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರೊಬ್ಬರು ಯಾವುದೋ ಮಾತಿನ ಮಧ್ಯೆ ನನ್ನಲ್ಲಿ ಆಕ್ಷೇಪದ ದನಿಯಲ್ಲಿ ಹೀಗೆ ಹೇಳಿದರು. “ನಿಮ್ಮ ಕಾಲೇಜುಗಳಿಂದ ಕನ್ನಡ ಎಂ.ಎ. ಮಾಡಲು ವಿಶ್ವವಿದ್ಯಾನಿಲಯದಲ್ಲಿ ನಮ್ಮ ವಿಭಾಗಕ್ಕೆ ಬಂದು ಸೇರುವವರಿಗೆ ಒಂದು ಕನ್ನಡ ವಾಕ್ಯವನ್ನು ಕೂಡ ಸರಿಯಾಗಿ ರಚಿಸಲು ಬರುವುದಿಲ್ಲ...” ನನಗೆ ಅವರಲ್ಲಿ ತುಂಬ ಸಲಿಗೆಯಿರುವುದರಿಂದ ನಾನು ಹೇಳಿದೆ. “ಸರ್, ನಮ್ಮ ಆಸುಪಾಸಿನ ಕಾಲೇಜುಗಳಲ್ಲಿ ಕನ್ನಡ ಬೋಧಿಸುವ ಉಪನ್ಯಾಸಕರೆಲ್ಲ ನಿಮ್ಮ ವಿಭಾಗದಲ್ಲಿಯೇ ಕನ್ನಡ ಎಂ.ಎ. ಮಾಡಿ ಬಂದ ನಿಮ್ಮ ಶಿಷ್ಯರೇ!” ನಗಬೇಕೋ ಅಳಬೇಕೋ ತಿಳಿಯದೆ ಇಬ್ಬರೂ ನಕ್ಕೆವು!!

ವಾಸ್ತವವಾಗಿ ಶಿಕ್ಷಣಮಾಧ್ಯಮದ ಬಗ್ಗೆ, ಖಾಸಗಿ ಮತ್ತು ಸರಕಾರಿ ಶಾಲೆಗಳ ಬಗ್ಗೆ ಹೆಚ್ಚುಕಡಿಮೆ ಹೇಳಿದ್ದನ್ನೇ ಹೇಳುವ ಜನಪ್ರಿಯ ಧಾಟಿಯ ಚರ್ಚೆಗಳ ಭರಾಟೆಯಲ್ಲಿ ನಿಜವಾದ ಸಮಸ್ಯೆ ಏನು ಎಂಬುದನ್ನು ಮಾತನಾಡುವ ಧೈರ್ಯ ಯಾರೂ ಮಾಡುವುದಿಲ್ಲ. ಉದಾಹರಣೆಗೆ ಗಮನಿಸಿ: “ಒಂದೇ ಒಂದು ಮಗು ಇದ್ದರೂ ಕನ್ನಡ ಶಾಲೆಯನ್ನು ಮುಚ್ಚದೆ ನಡೆಸಬೇಕು” ಎಂಬ ಒಂದು ಹೇಳಿಕೆಯನ್ನು ಎಲ್ಲ ವಿದ್ವಾಂಸರೂ ಲೇಖಕರೂ ಹೇಳುತ್ತಾರೆ. ಇದು ಅನುಷ್ಠಾನಯೋಗ್ಯವೇ ಎನ್ನುವ ಪ್ರಶ್ನೆಯನ್ನು ಅವರು

ಕೇಳಿಕೊಳ್ಳುವುದಿಲ್ಲ. ಒಂದೇ ಮಗುವಿಗೆ ಅದು ಹಿಂಸೆಯಲ್ಲವೇ? ಆಟಪಾಠಗಳಲ್ಲಿ ಜೊತೆಯಾಗಬೇಕಾದ ಯಾವ ಗೆಳೆಯ ಗೆಳತಿಯರೂ ಇಲ್ಲದೆ ಏಕಾಂಗಿಯಾಗಿ ತರಗತಿಯಲ್ಲಿ ಕೂರುವುದು ಅಪೇಕ್ಷಣೀಯವೇ? ಇದು ಆಲಂಕಾರಿಕ ಮಾತು ಎಂದು ಸಾಹಿತಿಗಳು ಸಮರ್ಥಿಸಿಕೊಳ್ಳಬಹುದು! ಆದರೆ ನೀತಿನಿರೂಪಣೆಗೆ ಸಂಬಂಧಿಸಿದ ವಿಚಾರವನ್ನು ಹೇಳುವಾಗ ಅಲಂಕಾರ ಬೇಕಾದುದೋ ಅನುಷ್ಠಾನಯೋಗ್ಯ ಸಲಹೆ ನೀಡಬೇಕಾದುದೋ? ಅನುಷ್ಠಾನಯೋಗ್ಯ ಸಲಹೆ ನೀಡಲು ಸಾಧ್ಯವಾಗದಿದ್ದಾಗ ಹೀಗೆ ರೂಪಕ ಇತ್ಯಾದಿ ಅಲಂಕಾರಗಳ ಮೂಲಕ ಕೇಳುಗರನ್ನು ಮರುಳು ಮಾಡುವುದು ಅಷ್ಟೇ.

ಮಕ್ಕಳು ಸರಿಯಾಗಿ ಓದಿ ಬರೆಯಲು, ಸರಳವಾದ ಕೂಡಿಸಿ ಕಳೆವ ಲೆಕ್ಕ ಮಾಡಲು ಕಷ್ಟವಾಗುವುದರ ಹಿಂದಿನ ನಿಜವಾದ ಒಂದು ಸಮಸ್ಯೆ ಶಿಕ್ಷಣತಜ್ಞರ ಕಾರಣದಿಂದ ಇದೆ. ಅದೇನೆಂದರೆ, ಅವರು ಭಾಷೆ ಮತ್ತು ಗಣಿತಕ್ಕೆ ಪ್ರಾಧಾನ್ಯ ನೀಡದೆ ಇರುವುದು. ಭಾಷೆಯನ್ನು ಕೇವಲ ಸಂವಹನ ಮಾಧ್ಯಮ ಎಂದು ಪರಿಗಣಿಸಿರುವುದು ಹಾಗೂ ಗಣಿತವನ್ನು ಪರಿಕಲ್ಪನಾತ್ಮಕವಾಗಿ ಕಲಿಸಲು ಕಲಿಸದೆ ಇರುವುದು. ಹೌದು, ಪುನಃ ಹೇಳಬೇಕು; ಕಲಿಸಲು ಕಲಿಸದೆ ಇರುವುದು. ಗಣಿತದ ಪದಗಳು ಸಂಸ್ಕೃತ ಮೂಲ ಎಂಬುದು ತೋರಿಕೆಯ ಸಮಸ್ಯೆ; ಅದೇ ನಿಜವಾದ ಸಮಸ್ಯೆಯಲ್ಲ ಎಂದರೆ ಅನೇಕರಿಗೆ ಆಶ್ಚರ್ಯ ಆದೀತು!

ಇನ್ನೊಂದು ಇದಕ್ಕಿಂತಲೂ ಮುಖ್ಯವಾದ ಕಾರಣ ಇದೆ. ಅದೇನೆಂದರೆ, ಹತ್ತನೇ ತರಗತಿಯ ಹಲವು ಮಕ್ಕಳಿಗೆ ಓದುಬರಹ ಗೊತ್ತಿಲ್ಲದಿರುವ ವಾಸ್ತವ ಅಥವಾ ಫಲಿತಾಂಶ ಉತ್ತಮಪಡಿಸಬೇಕು ಎಂಬ ಒತ್ತಡ ಅಥವಾ ಪ್ರಾಥಮಿಕ ಹಂತದಲ್ಲಿ ಸರಿಯಾಗಿ ಕಲಿಸದೆ ಇರುವುದು ಇವೆಲ್ಲ ಈ ವರ್ಷವಷ್ಟೇ ಕಾಣಿಸಿಕೊಂಡ ವಿದ್ಯಮಾನವೇ? ಈವರೆಗೆ ಇರಲಿಲ್ಲವೇ? ಈ ವರ್ಷ ಹೊಸತಾಗಿ ಏನು? ಹೊಸತಾದುದು ಸಿ.ಸಿ. ಕೆಮರಾವೇ? ಇಂತಹ ಪ್ರಶ್ನೆಗಳನ್ನು ಕೇಳಿಕೊಂಡರೆ ಉತ್ತರ ಹೊಳೆದೀತು. ‘ಶಿಕ್ಷಕರಿಗೆ ಕಲಿಸಲು ಬಿಡಿ, ಬೇರೆ ಕೆಲಸ ಕೊಡಬೇಡಿ’ ಇತ್ಯಾದಿ ಚರ್ವಿತಚರ್ವಣ ಮಾತುಗಳನ್ನು ಶಿಕ್ಷಣತಜ್ಞರು ಹೇಳುತ್ತಾರಷ್ಟೇ ಹೊರತು ಇಂತಹ ಪ್ರಶ್ನೆಗಳನ್ನು ಕೇಳಿಕೊಳ್ಳುವುದುಂಟೇ?

❖❖❖

# ಲೋಕಮಾನ್ಯ ತಿಲಕರು ನಡೆಸಿದ ಜ್ಞಾನಮೀಮಾಂಸೆ

**ಡಾ. ರಾಮದಾಸ ಪ್ರಭು,** ಸಹ ಪ್ರಾಧ್ಯಾಪಕರು
ಡಾ. ಜಿ ಶಂಕರ್ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮತ್ತು
ಸ್ನಾತಕೋತರ ಅಧ್ಯಯನ ಕೇಂದ್ರ, ಅಜ್ಜರಕಾಡು, ಉಡುಪಿ

ಮಹಾತ್ಮ ಗಾಂಧಿ ಭಾರತದ ರಾಜಕಾರಣದಲ್ಲಿ ಕಾಣಿಸಿಕೊಳ್ಳುವ ಪೂರ್ವದಲ್ಲಿ ನಮ್ಮ ಸ್ವಾತಂತ್ರ್ಯ ಚಳುವಳಿಯ ನೇತೃತ್ವ ವಹಿಸಿಕೊಂಡು, ಬ್ರಿಟಿಷರಿಂದ 'ಭಾರತದಲ್ಲಿ, ಅಶಾಂತಿಯ ಜನಕ' ಎಂದು ಕರೆಸಿಕೊಂಡ, ಬ್ರಿಟಷರ ನಿದ್ದೆಗೆಡಿಸಿದ ವ್ಯಕ್ತಿ ಲೋಕಮಾನ್ಯ ಬಾಲಗಂಗಾಧರ ತಿಲಕ್. ಇವರು ಪೂನಾದ ಡೆಕ್ಕನ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ತಮ್ಮ ಮಿತ್ರರಾದ ಗೋಪಾಲ ಗಣೇಶ ಅಗರ್ಕರ್, ವಿಷ್ಣು ಶಾಸ್ತ್ರಿ ಚಿಪ್ಲೂಣಕರ್ ಮುಂತಾದವರೊಂದಿಗೆ ಸೇರಿ ಭವಿಷ್ಯದಲ್ಲಿ ರಾಷ್ಟ್ರೀಯ ಶಾಲೆಗಳನ್ನು ತೆರೆದು ರಾಷ್ಟ್ರೀಯತೆಯನ್ನು ಭಾರತೀಯರಲ್ಲಿ ಬಡಿದೆಬ್ಬಿಸಬೇಕೆಂದು ನಿಶ್ಚಯಿಸಿದ್ದರು. ಅದರಂತೆ ಮುಂದೆ ಪೂನಾದಲ್ಲಿ 'ನ್ಯೂ ಇಂಗ್ಲಿಷ್ ಸ್ಕೂಲ್' 'ಡೆಕ್ಕನ್ ಎಜುಕೇಶನ್ ಸೊಸೈಟಿ' ಮತ್ತು 'ಫರ್ಗುಸನ್' ಕಾಲೇಜನ್ನು ಪ್ರಾರಂಭಿಸಿದರು. ಸಂಬಳ ಪಡೆಯದೆ ಈ ಸಂಸ್ಥೆಗಳಲ್ಲಿ ದುಡಿದರು. ಬರೇ ಶಿಕ್ಷಣದಿಂದ ಜನಜಾಗೃತಿ ಮೂಡಿಸುವುದು ಕಷ್ಟವೆಂದು ತಿಳಿದಾಗ ತಿಲಕರು 'ಕೇಸರಿ' ಮತ್ತು 'ಮರಾಠ' ಪತ್ರಿಕೆಗಳನ್ನು, 'ಶಿವಾಜಿ ಉತ್ಸವ' ಮತ್ತು 'ಗಣಪತಿ ಉತ್ಸವ'ಗಳನ್ನು ಪ್ರಾರಂಭಿಸಿದರು. ಮುಂದೆ ನೇರವಾಗಿ ಸ್ವದೇಶಿ ಆಂದೋಲನ ಮತ್ತು ಹೋಮ್ ರೂಲ್ ಚಳುವಳಿಯ ನೇತೃತ್ವ ವಹಿಸಿದರು. ತಮ್ಮ ಜೀವನ ಮತ್ತು ಸಂಪತ್ತನ್ನು ಬ್ರಿಟಿಷರೊಡನೆ ಗುದ್ದಾಟದಲ್ಲಿ ದೇಶಕ್ಕಾಗಿ ತ್ಯಾಗ ಮಾಡಿದರು. ಈ ಸಂಗತಿಗಳೆಲ್ಲಾ ಜನರಿಗೆ ತಿಳಿದಿರುವ ವಿಷಯಗಳೇ, ಆದರೆ ತಿಲಕರು ಪ್ರಖ್ಯಾತ ಗಣಿತಜ್ಞರು, ತತ್ವಶಾಸ್ತ್ರಜ್ಞರು, ಸಂಶೋಧಕರು ಹಾಗೂ ಆಗಿನ ಪೌರಾಸ್ತ್ರ ಪಂಡಿತರಲ್ಲಿ(Orientalist) ಒಬ್ಬರಾಗಿದ್ದರು. ತಿಲಕರ ಸಮಕಾಲೀನ ಪೌರಾತ್ಯ ಪಂಡಿತರಾದ ಮ್ಯಾಕ್ಸ್ ಮುಲ್ಲರ್ ಎ.ಬಿ. ಕೀಜ್, ಪ್ರೊ. ವಾರೆನ್, ಜಾಬಿ, ಬ್ಲೂಮ್ಫೀಲ್ಡ್ ಮುಂತಾದ ಗಣ್ಯರೊಡನೆ ಇವರು ಒಂದು ಸಂವಾದವಿರಿಸಿ ಕೊಂಡದ್ದರು. ಲೋಕಮಾನ್ಯರು ತಮ್ಮ ಮೊಕದ್ದಮೆ, ಸ್ವಾತಂತ್ರ ಹೋರಾಟ ಹಾಗೂ ಸೆರೆಮನೆ ವಾಸಗಳ ನಡುವೆಯೂ ಮಹತ್ವಪೂರ್ಣ ಕೃತಿಗಳನ್ನು ರಚಿಸಿದ್ದಾರೆ. ಅವರ ಕೆಲವು ಕೃತಿಗಳ ಪರಿಚಯ ಇಲ್ಲಿದೆ.

ತಿಲಕರ ಪ್ರಥಮ ಕೃತಿ 'ಓರಿಯಾನ್' 1893ರಲ್ಲಿ ಪ್ರಕಟವಾಯಿತು. ಇದು ವೇದಗಳ ಕಾಲವನ್ನು ಚರ್ಚಿಸುವ ಕೃತಿ, ವೇದಗಳ ಕಾಲವನ್ನು ನಿಶ್ಚಯಿಸುವುದು ಇಂದಿಗೂ ವಿದ್ವಾಂಸರಿಗೊಂದು ಸವಾಲು. ತಿಲಕರಿಗೂ ಇದು ಒಂದು ಸವಾಲಾಗಿ ತೋರಿತು. ಖ್ಯಾತ ಜರ್ಮನ್ ವಿದ್ವಾಂಸ ಮ್ಯಾಕ್ಸ್ ಮುಲ್ಲರ್ ಭಾಷಾ ಶಾಸ್ತ್ರೀಯ ವಿಧಾನದಿಂದ ಸಂಸ್ಕೃತ ಭಾಷೆಯಲ್ಲಿ ಕಾಲದಿಂದ ಕಾಲಕ್ಕಾದ ಬದಲಾವಣೆಗಳನ್ನು ಗಮನಿಸಿ ವೈದಿಕ ಸಾಹಿತ್ಯವನ್ನು ಛಂಧಕಾಲ, ಮಂತ್ರಕಾಲ, ಬ್ರಾಹ್ಮಣಕಾಲ ಮತ್ತು ಸೂತ್ರಕಾಲವೆಂದು ವಿಭಾಗಿಸಿದ್ದಾನೆ. ಇವನ ಪ್ರಕಾರ ಋಗ್ವೇದ ರಚನೆಯಾದ ಕಾಲ

ಕ್ರಿ.ಪೂ.1200. ಮ್ಯಾಕ್ಸ್ ಮುಲ್ಲರ್ ಬಗ್ಗೆ ತಿಲಕರಿಗೆ ತುಂಬಾ ಗೌರವವಿದ್ದರೂ, ಅವನ ವಾದವನ್ನು ಒಪ್ಪಲಿಲ್ಲ. ವೇದಗಳ ಕಾಲವನ್ನು ತಿಳಿಯಲು ಖಗೋಳಶಾಸ್ತ್ರೀಯ ಪದ್ಧತಿ ಸೂಕ್ತವೇ ಹೊರತು, ಭಾಷಾ ಶಾಸ್ತ್ರೀಯ ಪದ್ಧತಿಯಲ್ಲ ಎಂಬುದು ತಿಲಕರ ಅಭಿಪ್ರಾಯ, ಅಕರ ಪ್ರಕಾರ ವೈದಿಕ ಸಾಹಿತ್ಯದಲ್ಲಿ ಉಲ್ಲೇಖಿಸಲ್ಪಟ್ಟ, ಖಗೋಳದ ಘಟನೆಗಳು ನಿಜವಾಗಿಯೂ ಘಟಿಸಲ್ಪಟ್ಟವೇ ಆಗಿವೆ. ಇವುಗಳ ಸಹಾಯದಿಂದ ವೇದಗಳ ಕಾಲವನ್ನು ತಿಳಿಯಬಹುದೆಂಬುದು ತಿಲಕರ ವಾದ. ತಿಲಕರು ವೇದಗಳ ಕಾಲವನ್ನು ತಿಳಿಯಲು 'ವೇದಾಂಗ ಜ್ಯೋತಿಷ್ಯ'ದ ಮೊರೆಹೋದರು. ಋಗ್ವೇದದಲ್ಲಿ ವಸಂತ ಸಂಪತ್ (ಉತ್ತರಾಯಣ) ಮೃಗಶಿರಾ ನಕ್ಷತ್ರದಲ್ಲಿ ಸಂಭವಿಸಿತೆಂದು ಉಲ್ಲೇಖಿಸಿದ ಆಧಾರವನ್ನು ಬಳಸಿ ಆ ಘಟನೆ ಕ್ರಿ.ಪೂ.4000ದಲ್ಲಿ ನಡೆದಿರಬಹುದೆಂದು ತಿಲಕರು ತರ್ಕಿಸಿದ್ದಾರೆ. ಋಗ್ವೇದದ ಸೂಕ್ತಗಳೆಲ್ಲ ಕಿ.ಪೂ.4000ದಲ್ಲಿ ರಚಿತವಾಗಿರಬೇಕೆಂದು ತಿಲಕರು ಭಾವಿಸುತ್ತಾರೆ. ಅಂತಾರಾಷ್ಟ್ರೀಯ ಪಂಡಿತರ ಓರಿಯೆಂಟಲ್ ಸಮ್ಮೇಳನದಲ್ಲಿ ತಿಲಕರ 'ಓರಿಯಾನ್' ಬಹಳ ಚರ್ಚೆಗೆ ಗ್ರಾಸವಾಗಿತ್ತು.

ವೈದಿಕ ನಾಗರಿಕತೆಗೆ ಕಾರಣ ಕರ್ತರಾದ 'ಆರ್ಯ'ರು ಮಧ್ಯ ಏಷ್ಯಾದಿಂದ ಭಾರತಕ್ಕೆ ವಲಸೆ ಬಂದರೆಂದು ಮ್ಯಾಕ್ಸ್ ಮುಲ್ಲರ್ ವಾದಿಸಿದ್ದ. ಇದು ತಿಲಕರಿಗೆ ಸಮಂಜಸವೆನಿಸಲಿಲ್ಲ. ತಿಲಕರು 1893ರಿಂದ 1903ರ ಮಧ್ಯ ಭೂಗೋಳ, ಭೂಗರ್ಭಶಾಸ್ತ್ರ ಮತ್ತು ಪ್ರಾಚ್ಯವಸ್ತು ವಿಜ್ಞಾನದ ಅಧ್ಯಯನದಲ್ಲಿ ತೊಡಗಿದರು. ಕ್ರಿ.ಪೂ. 10000–8000ದ ಸುಮಾರಿಗೆ ಉತ್ತರ ಧ್ರುವದಲ್ಲಿ ಪ್ರಾರಂಭವಾದ ಹಿಮಯುಗ ಅಲ್ಲಿನ ನಿವಾಸಿಗಳನ್ನು ಬೇರೆಡೆ ವಲಸೆ ಹೋಗುವಂತೆ ಮಾಡಿರಬೇಕೆಂದು ತಿಲಕರು ಅಭಿಪ್ರಾಯಪಡುತ್ತಾರೆ. ಕ್ರಿ.ಪೂ.8000–5000ದಲ್ಲಿ 'ಆರ್ಯ'ರು ಉತ್ತರ ಧ್ರುವ ಪ್ರದೇಶದಿಂದ ಯುರೋಪ್ ಮತ್ತು ಏಷ್ಯಾಕ್ಕೆ ವಲಸೆ ಬಂದಿರಬಹುದೆಂಬುದು, ತಿಲಕರು ತರ್ಕಿಸುತ್ತಾರೆ. ತಿಲಕರ ಈ ವಾದ ಬಹಳಷ್ಟು ಚರ್ಚೆಗೆ ಒಳಗಾಗಿತ್ತು. ಆದರೆ ಹಲವಾರು ವಿದ್ವಾಂಸರು ಇದನ್ನೊಪ್ಪಲಿಲ್ಲ ಅದು ಬೇರೆ ಮಾತು. ಈಚಿನ ಅನೇಕ ಸಂಶೋಧನೆಗಳು ಆರ್ಯ ವಲಸೆ ಎಂಬ ಸಿದ್ಧಾಂತವನ್ನು ನಿರಾಕರಿಸುತ್ತವೆ.

ತಿಲಕರು ತೌಲನಿಕ ಭಾಷಾ ಶಾಸ್ತ್ರವನ್ನು ಆಧರಿಸಿ ಖಾಲ್ಡಿಯನ್ ಸಾಹಿತ್ಯ ಮತ್ತು ಭಾರತೀಯ ವೇದಗಳ ಬಗ್ಗೆ ವಿಚಾರಪೂರ್ಣ ಲೇಖನವನ್ನು ಬರೆದಿದ್ದರೂ ಬ್ಯಾಬಿಲೋನಿಯಾದ ದೇವತೆ ಮಾರ್ಧುಕ್ ಉರಗ ದೇವತೆಯಾದ ತಿಯಾಮಕ್ನನ್ನು ಕೊಲ್ಲುವ ಕಥೆ ನಮ್ಮ ವೇದಗಳಲ್ಲಿ ಬರುವ ಇಂದ್ರ, ವೃತ್ರನನ್ನು ಕೊಂದ ಕಥೆಗೆ ಹೋಲುತ್ತದೆಂದು ತಿಲಕರು ಭಾವಿಸುತ್ತಾರೆ, ಅಲ್ಲದೇ ವೈದಿಕ ಸಾಹಿತ್ಯದಲ್ಲಿ ಬರುವ 'ಅಲಿಗಿ', 'ವಿಲಿಗಿ, 'ಕಿಮಿದಿನ್', 'ಊರು' ಮುಂತಾದ ಶಬ್ದಗಳು ಖಾಲ್ಡಿಯನ್ ಮೂಲದವುಗಳೆಂದು ತಿಲಕರು ಅಭಿಪ್ರಾಯ ಪಟ್ಟಿದ್ದಾರೆ. ಇಂದ್ರ–ವೃತ್ರದ ಕಥೆ, ಸಪ್ತಾವಧಾರಿಯ ಕಥೆ, ಸೂರ್ಯಚಕ್ರ ಮತ್ತು ಶೀರ್ಘತಮಷ್ ಕಥೆ ಮುಂತಾದವುಗಳಿಗೆಲ್ಲ ತಿಲಕರು ಹೊಸ ಅರ್ಥ ಹುಡುಕಿ ಹೊಸತೊಂದು 'ವಾಯು ಜಲದ ವಿಶ್ವ ಸಂಚರಣೆ' (Cosmic circulation of Aerial Waters) ಎಂಬ ತತ್ವವನ್ನು ನಿರೂಪಿಸಿದ್ದಾರೆ. ತಿಲಕರು ಬರೆದ ಇನ್ನೊಂದು ಮಹತ್ವಪೂರ್ಣ ಲೇಖನ 'ಸಾಂಖ್ಯಕಾರಿಕಾದಲ್ಲಿ ತಪ್ಪಿ ಹೋಗಿರುವ ಒಂದು ಶ್ಲೋಕಹಿ 'ಸಾಂಖ್ಯಕಾರಿಕಾಗಳು ಸಂಖ್ಯೆಯಲ್ಲಿ 70 ಎಂಬುದು ಬಲ್ಲವರ ಅಭಿಪ್ರಾಯ, ಆದರೆ ಗೌಡಪಾದನ ಭಾರತೀಯ ಸಂಸ್ಕರಣ ಪ್ರತಿಯಲ್ಲಿ ಮತ್ತು

ಪರಮಾರ್ಥ ಚೀನಿಯ ಸಂಸ್ಕರಣ ಪ್ರತಿಯಲ್ಲಿರುವುದು ಕೇವಲ 69 ಶ್ಲೋಕಗಳು. ತಪ್ಪಿ ಹೋಗಿರುವ ಒಂದು ಶ್ಲೋಕವೇನಿರಬಹುದೆಂದು ತಿಲಕರು ತಮ್ಮ ತೀಕ್ಷ್ಣ ಊಹೆಯಿಂದ ಪುನಃ ರಚಿಸಿದ್ದಾರೆ.

ತಿಲಕರ ಕೃತಿಗಳಲ್ಲೆಲ್ಲಾ ಅಮೂಲ್ಯವಾದದ್ದು ಅವರ ಗೀತೆಯ ಮೇಲಿನ ವ್ಯಾಖ್ಯಾನ 'ಗೀತಾ ರಹಸ್ಯ' ತಿಲಕರು ಮಂಡಾಲೆ ಸೆರೆಮನೆಯಲ್ಲಿದ್ದಾಗ 1910 ದಿಂದ 1911ರ ನಡುವೆ 'ಗೀತಾ ರಹಸ್ಯ'ವನ್ನು ಬರೆದು ಮುಗಿಸಿದರು. 1915ರಲ್ಲಿ ತಿಲಕದ 'ಗೀತಾ ರಹಸ್ಯ' ಪ್ರಕಟವಾಯಿತು. ಆ ಕೂಡಲೆ 6000 ಪ್ರತಿಗಳು ಖರ್ಚಾಗಿದ್ದವಂತೆ, ತಿಲಕರು ಗೀತಾರಹಸ್ಯವನ್ನು ಸ್ವದೇಶಿ ಕಾಗದದ ಮೇಲೆಯೇ ಅಚ್ಚು ಹಾಕಿಸಬೇಕೆಂದು ಮುಂಬಯಿಯ ಪದವಿ ಕಾಗದದ ಕಾರ್ಖಾನೆ ಮತ್ತು ಪುಣೆಯ ರಿಯ್ಮೆ ಕಾಗದ ಕಾರ್ಖಾನೆ ತಯಾರಿಸಿಕೊಟ್ಟ ಕಾಗದದ ಮೇಲೆಯೇ ಅಚ್ಚು ಹಾಕಿಸಿದರು. ಆಧುನಿಕ ಭಾರತದಲ್ಲಿ ಗೀತೆಯ ಮೇಲೆ ಬರೆಯಲ್ಪಟ್ಟ ವ್ಯಾಖ್ಯಾನಗಳಲ್ಲಿ ತಿಲಕರ 'ಗೀತಾ ರಹಸ್ಯ' ಸುಪ್ರಸಿದ್ಧವಾದುದು.

ಗೀತೆಯು ಮೇಲೆ ಬರೆದ ಭಾಷ್ಯಗಳೆಲ್ಲಾ 'ಸಂನ್ಯಾಸ'ಕ್ಕೆ ಹೆಚ್ಚಿನ ಒತ್ತುಕೊಟ್ಟಿವೆ. ಅವು ಭಾರತೀಯರನ್ನು ನಿಷ್ಕ್ರಿಯರನ್ನಾಗಿಸಿರಬಹುದೆಂದು ತಿಲಕರ ಅಭಿಪ್ರಾಯ, ಭಾರತೀಯರನ್ನು ಬ್ರಿಟಿಷರ ವಿರುದ್ಧ ಹೋರಾಟಕ್ಕೆ, ಬಲಿದಾನಕ್ಕೆ ಮಾನಸಿಕವಾಗಿ ಸಿದ್ದ ಮಾಡುವುದು ತಿಲಕರ ಮುಖ್ಯ ಉದ್ದೇಶ, ಅವರ ಗೀತಾರಹಸ್ಯದಲ್ಲಿ ಇದು ಸ್ಪಷ್ಟವಾಗಿ ಕಂಡು ಬರುತ್ತದೆ, ತಿಲಕರ ಪ್ರಕಾರ ಗೀತೆಯು ಬರಿಯ ಒಣತತ್ವದ ಪುಸ್ತಕವಲ್ಲ. ಅದು ಎಲ್ಲಾ ಜೀವಿಗಳಿಗೂ ದೈನಂದಿನ ಜೀವನಕ್ಕೊಂದು ದಾರಿ ದೀವಟಿಗೆ, ಕರ್ಮಯೋಗದ ವ್ಯಾಖ್ಯಾನ, ಹಾಗೆಯೇ ನೀತಿಶಾಸ್ತ್ರದ ಮೇಲಿನ ವ್ಯಾಖ್ಯೆ ಎಂಬುದು ತಿಲಕರ ವಾದ. ಮನುಷ್ಯನು ಇಕ್ಕಟ್ಟಿನ ಸನ್ನಿವೇಶಗಳಲ್ಲಿ ಸಿಕ್ಕಿಕಂಡಾಗ ಅವನು ಮಾಡಬೇಕಾದ ಕರ್ತವ್ಯವನ್ನು ಬೋಧಿಸುವ ವಿಜ್ಞಾನವೇ ಗೀತೆ, ತಿಲಕರು ಈ ಪುಸ್ತಕದಲ್ಲಿ ಮೊದಲಿನಿಂದ ಕೊನೆಯ ತನಕ ಗೀತಾ ದರ್ಶನವನ್ನು ಪಾಶ್ಚಾತ್ಯದರ್ಶನಗಳೊಂದಿಗೆ, ನೀತಿಶಾಸ್ತ್ರ, ಮತ್ತು ಧರ್ಮಶಾಸ್ತ್ರಗಳಿಗೆ ಸಂಬಂಧಿಸಿ, ಹೋಲಿಸಿ ನಮ್ಮ ದರ್ಶನ ಪಾಶ್ಚಾತ್ಯ ದರ್ಶನಗಳಿಗಿಂತ ಯಾವ ವಿಧದಲ್ಲೂ ಕಡಿಮೆಯಿಲ್ಲವೆಂದು ತೋರಿಸಿದ್ದಾರೆ. ಪರಿಶುದ್ಧ ಧಾರ್ಮಿಕ ಮತ್ತು ಆಧ್ಯಾತ್ಮಿಕ ಜೀವನ ನಡೆಸಲು ಲೌಕಿಕ ಜಗತ್ತಿನ ಸಂಬಂಧವನ್ನು ಕಳಚಿಕೊಳ್ಳಬೇಕೇ? ಇದಕ್ಕಾಗಿ 'ಸಂನ್ಯಾಸ ಸ್ವೀಕರಿಸಬೇಕೆ? ಆತ್ಮ ಸಾಕ್ಷಾತ್ಕಾರವಾದ ನಂತರ ಜ್ಞಾನಿಯಾದವನು ಈ ಲೋಕದಲ್ಲಿ 'ಕರ್ಮಸಂನ್ಯಾಸವನ್ನು ಸ್ವೀಕರಿಸಬೇಕೆ? ಇವೆ ಮುಂತಾದ ಪ್ರಶ್ನೆಗಳು ತಿಲಕರನ್ನು ಕಾಡಿದ್ದವು. ತಿಲಕರ ಅಭಿಪ್ರಾಯದಂತೆ ಸಂನ್ಯಾಸ ಮತ್ತು ಕರ್ಮಯೋಗ ಎರಡೂ ಬಹಳ ಪುರಾತನ ಪರಂಪರೆಗಳಾದರೂ, ಗೀತೆ ಕರ್ಮಯೋಗವನ್ನೇ ಭೋದಿಸುತ್ತದೆ. ಗೀತೆ ಕರ್ಮ ಸಂನ್ಯಾಸದಲ್ಲಿ ಕರ್ಮಯೋಗವನ್ನೇ ಪ್ರಧಾನವಾಗಿ ಬೋಧಿಸುತ್ತದೆ. ಕರ್ತವ್ಯ ವಿಮುಖನಾದ ಪಾರ್ಥನಿಗೆ ಕರ್ತವ್ಯ ನಿರ್ವಹಿಸುವಂತೆ ಪ್ರೋತ್ಸಾಹಿಸಿದ್ದೆ ಗೀತೆಯಲ್ಲವೆ? ಗೀತೆಯನ್ನು ಭೋದಿಸಿದ ಶ್ರೀಕೃಷ್ಣ ಕೂಡ ಸಂನ್ಯಾಸಿಯಾಗಲಿಲ್ಲ. ಜಗತ್ತಿನ ವಿಕಾಸಕ್ಕಾಗಿ ನಿಷ್ಕಾಮ ಕರ್ಮವನ್ನ ನಿರ್ವಹಿಸಲಿಲ್ಲವೆ? ಎಂದು ತಿಲಕರು ಪ್ರಶ್ನಿಸುತ್ತಾರೆ. ತಿಲಕರ ಪ್ರಕಾರ ಸಂನ್ಯಾಸ ಒಬ್ಬ ವ್ಯಕ್ತಿಯ ಮೋಕ್ಷಕ್ಕೆ ಮಾತ್ರ ಸಹಕಾರಿಯಾಗಿದೆ. ಆದರೆ ಕರ್ಮಯೋಗ ಸಮಾಜದ ಉದ್ಧಾರಕ್ಕಾಗಿ ಪ್ರಯತ್ನಿಸುತ್ತದೆ. ಕರ್ಮಯೋಗವನ್ನು ಅತಿಯಾಗಿ ನೆಚ್ಚಿಕೊಂಡ ತಿಲಕರು ಸಂನ್ಯಾಸವನ್ನು

ಅಲ್ಲಲ್ಲಿ ಟೀಕಿಸುವ ಸಂದರ್ಭಗಳು ಇವೆ.

ತಿಲಕರಿಗೆ ತಾವು ತಮ್ಮ ಜೀವನದಲ್ಲಿ ಪಾಲಿಸಿಕೊಂಡು ಬಂದ ಕರ್ಮಯೋಗ ಗೀತೆಯಲ್ಲಿ ಕಾಣಿಸಿತೊ ಅಥವಾ ಬಾಲ್ಯದಿಂದಲೂ ಗೀತೆಯ ಪ್ರಭಾವಕ್ಕೊಳಗಾದ ಅವರು ಗೀತೆಯಿಂದ ಕರ್ಮಯೋಗಿಗಳಾದರೂ ತಿಳಿಯದು. ಆತ್ಮ ಸಾಕ್ಷಾತ್ಕಾರ ಪಡೆದ ಜ್ಞಾನಿ ಕೂಡ ಈ ಜಗತ್ತಿನ ಒಳಿತಿಗಾಗಿ ತನ್ನ ಲೌಕಿಕ ಕರ್ತವ್ಯಗಳನ್ನು ನಿರ್ವಹಿಸಬೇಕೆನ್ನುತ್ತಾರೆ ತಿಲಕರು, ಜ್ಞಾನ ಭಕ್ತಿ ಮತ್ತು ಕರ್ಮಗಳ ಮಧ್ಯೆ ಬಂದು ಸಾಮರಸ್ಯವನ್ನು ಗೀತೆ ಪ್ರತಿಪಾದಿಸುತ್ತದೆ. ತಿಲಕರು ಸಾಧು ಸಂತರ ಬದಲಾಗಿ ಜನಕ, ಶ್ರೀರಾಮ, ಭೀಷ್ಮ, ಶ್ರೀಕೃಷ್ಣ ಮುಂತಾದ ಕರ್ಮಯೋಗಿಗಳ ಆದರ್ಶವನ್ನು ಜನರ ಮುಂದಿಡುತ್ತಾರೆ. ತಿಲಕರ ಪ್ರಕಾರ ಕರ್ಮತ್ಯಾಗವಲ್ಲ, ಕರ್ಮಫಲ ತ್ಯಾಗವೇ ಗೀತೆಯ ಸಂದೇಶ, ತಿಲಕರ ಗೀತಾರಹಸ್ಯದ ಸಾರ ಜ್ಞಾನ ಭಕ್ತಿ ಸಮನ್ವಿತ ಕರ್ಮಯೋಗ ತಿಲಕರ ಗೀತಾರಹಸ್ಯ ಭಾರತೀಯ ಸ್ವಾತಂತ್ರ್ಯ ಸಂಗ್ರಾಮಿಗಳ ಮೇಲೆ ಬಹಳ ಪ್ರಭಾವ ಬೀರಿದೆ. ತಿಲಕರದು ನೇರವಾದ, ಆದರೆ ಸಾಹಿತ್ಯಿಕ ಅಲಂಕಾರಗಳಿಲ್ಲದ ಶೈಲಿ. ಅವರ ಬರಹಗಳು ನೇರ ಮತ್ತು ಬಿಟ್ಟ ಬಾಣಗಳಂತೆ ಗುರಿ ಮುಟ್ಟುತ್ತಿದ್ದವು.

**ಪರಾಮರ್ಶನ ಸಾಹಿತ್ಯ**


1. G.P., and A. K. Pradhan Bhagawat. Lokmanya Tilak – A Biography. Jaico Publishing House, 1959.
2. Jog, Narayan Gopal. Lokamanya Bal Gangadhar Tilak. 1965.
3. Keer, Dhananjay. Lokamanya Tilak, Father of the Indian Freedon Struggle. 1969.
4. Keḷakara, Narasīha Cintāmaṇa. Life and Times of Lokamanya Tilak. 1928.
5. Kumar, Ravindra. SELECTED DOCUMENTS OF LOKAMANYA BAL GANGADHAR TILAK. Anmol Publications , 1992.
6. Parvate, Trimbak Vishnu. Bal Gangadhar Tilak. Ahmedabad : Navajivan, 1958.
7. Pradhan, Bhagwat &. G. P. Lokmanya Tilak – A Biography. Jaico Publishing House, 2015.
8. Saroja. Tilak & Sankara on Bhagvad Gita. 1985.
9. Tilak, Bal Gangadhar. Srimad Bhagavadgita-Rahasya or Karma-Yoga-Sastra, Including an External Examination of the Gita. RB Tilak Lokamany Tilak Mandir, 1935.
10. Tilak, Balagagadar, The Ignored Historical Research The Orion,. Akasha Ganga prakashana, 2009.
11. Tilak, Balagagadar. Letters of Lokamanya Tilak, Kesari Prakashana, 1966
12. Ṭiḷaka, Bāla Gaṅgādhara. Vedic Chronology and Vedanga Jyotisha. 1925.
13. Varma, Vishwanath Prasad. The Life and Philosophy of Lokamanya Tilak. Agra : Lakshmi Narain Agarwal, 1978.


❖❖❖

# ‘ಎಷ್ಟು ಭೂಮಿ ಬೇಕು?’ : ಭೂಮಿಯ ಆಸೆ ಮತ್ತು ಸಾವು

**ಡಾ. ಶಾಂತಮ್ಮ ಟಿ.ಆರ್.**
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಹಂಕ, ಬೆಂಗಳೂರು

ಕನ್ನಡ ಸಾಹಿತ್ಯದ ಪ್ರಕಾರಗಳಲ್ಲಿ ಕಥಾಪ್ರಕಾರವು ಬಹಳ ಪ್ರಮುಖವಾದುದು. ಕತೆಗಳು ಜೀವನದ ಸ್ವಾರಸ್ಯವನ್ನು ಕುರಿತು ಹೇಳುತ್ತವೆ. ವಾಸ್ತವದಲ್ಲಿ ನಮ್ಮ ಸುತ್ತ ಮುತ್ತ ಡೆಯುತ್ತಿರುವ ನಿಜಾಂಶವೇ ಕಥೆಯಾಗಿ ರೂಪಗೊಳ್ಳುತ್ತವೆ. ಕವಿಯ ಕಲ್ಪನೆಗಿಂತ, ಅನುಭವವೇದ್ಯ ರೂಪದಲ್ಲಿ ಹೊರಹೊಮ್ಮುತ್ತವೆ. ಪಂಚತಂತ್ರ, ವಡ್ಡಾರಾಧನೆ, ಧರ್ಮಾಮೃತಗಳಿಂದ ಪ್ರಾರಂಭವಾಗಿ ಇತ್ತೀಚಿನ ಕಥೆಗಳವರೆಗೂ ತನ್ನದೇ ಆದ ವಿಶಿಷ್ಟವಾದ ಆಯಾಮಗಳಲ್ಲಿ, ನೀತಿ ಬೋಧನೆ, ತತ್ವಬೋಧನೆ, ಸಾಮಾಜಿಕ ಕಳಕಳಿಯ ಹಿನ್ನೆಲೆಯನ್ನು ಒಳಗೊಂಡಂತೆ ರಚನೆಗೊಂಡಿರುವುದನ್ನು ಕಾಣಬಹುದು. ಪಂಚತಂತ್ರ ಕತೆಗಳು ನೀತಿಯನ್ನು ಬೋಧಿಸಿದರೆ, ವಡ್ಡಾರಾಧನೆಯ ಕತೆಗಳು ಧರ್ಮ ಹಾಗೂ ತತ್ವಗಳನ್ನು ಹೇಳುತ್ತವೆ. ಹೀಗಾಗಿ ಒಂದೊಂದು ಕಾಲಘಟ್ಟದಲ್ಲೂ ವಿಭಿನ್ನವಾದ ವಸ್ತುವನ್ನು ಹೊಂದಿರುವ ಕತೆಗಳು ಕಂಡುಬರುತ್ತವೆ.

ಲಿಯೋ ಟಾಲ್ಸ್ಟಾಲ್ ಬರೆದಿರುವ ಕತೆಯನ್ನು “ಒಬ್ಬನಿಗೆ ಎಷ್ಟು ಭೂಮಿ ಬೇಕು” ಎಂಬ ಹೆಸರಿನಲ್ಲಿ ರಂಗನಾಥರಾವ್ ಕನ್ನಡಕ್ಕೆ ಅನುವಾದ ಮಾಡಿದ್ದು ಇದು ಬಹಳ ವಿಶೇಷವಾಗಿರುವ ಕತೆಯಾಗಿದೆ. ಬದುಕಿನ ಕಟುಸತ್ಯವಾದ ಸಾವನ್ನು ಹೇಳುವಂತಹುದಾಗಿದೆ.”ಬರುವಾಗ ಬೆತ್ತಲೆ, ಹೋಗುವಾಗ ಬೆತ್ತಲೆ, ಬಂದು ಹೋಗುವ ನಡುವೆ ಬರೀ ಕತ್ತಲೆ” ಎಂಬ ವೇದಾಂತ ಜನಪ್ರಿಯವಾಗಿದ್ದರೂ ಯಾವಾಗಲೂ ಗಳಿಸುವ ಭರದಲ್ಲಿ ತನಗೆ ಮುಪ್ಪು ಸಮೀಸುತ್ತಿದೆ, ಎಂಬುದನ್ನು ಮರೆತು ಜೀವನ ಸಾಗಿಸುತ್ತಾ ಹೋಗುತ್ತಾನೆ. ಹೆಚ್ಚು ಹಣ, ಆಸ್ತಿ, ಸಂಪತ್ತು, ಅಧಿಕಾರ, ವಸ್ತುಗಳನ್ನು ಸಂಪಾದಿಸುವ ಕಡೆಗೆ ಮನ ತುಡಿಯುತ್ತಾ, ಆತನು ಹುಚ್ಚುಕುದುರೆಯ ರೀತಿ ಎಲ್ಲಾ ಆಸೆಗಳ ಹಿಂದೆ ಓಡುತ್ತಾನೆ. “ಒಬ್ಬನಿಗೆ ಕೊನೆಯಲ್ಲಿ ಎಷ್ಟು ಭೂಮಿ ಬೇಕು” ಎಂಬ ಅರಿವು ಇಲ್ಲದಾಗುತ್ತದೆ.

ಸಾವು ಎಂದರೆ ಭಯ, ಆತಂಕ, ಕೊನೆ. ಆದರೆ, ಮನುಷ್ಯನ ಬದುಕಿನ ಉದ್ದಕ್ಕೂ ನಂಬಿಕೆಯ ಆಧಾರ ಮೇಲೆ ಬದುಕನ್ನು ಗಟ್ಟಿಗೊಳಿಸಿಕೊಳ್ಳುವ ಪ್ರಯತ್ನ ಸತತವಾಗಿ ಸಾಗುತ್ತಲೇ ಇರುತ್ತದೆ. ಭರವಸೆಯೇ ಜೀವನ ಎಂಬುದು ಎಲ್ಲರ ಮನದಾಳದ ಮಾತಾಗಿದೆ. ಇಂತಹ ಗಳಿಕೆಯ ಹಾದಿಯಲ್ಲಿ ಮುನ್ನುಗ್ಗುತ್ತಾ ಸಾವನ್ನು ತಂದುಕೊಳ್ಳುವ ಒಬ್ಬ ಬಡರೈತನ ಕತೆಯನ್ನು ಇಲ್ಲಿ ನೋಡಬಹುದು.

ಬದುಕಿಗೆ ಮುಖ್ಯವಾಗಿ ಬೇಕಾಗಿರುವುದು ಹಣ ಎಂಬಂತೆ ಅಕ್ಕ ತಂಗಿಯರ ಸಂಭಾಷಣೆಯೊಂದಿಗೆ ಕತೆ ಪ್ರಾರಂಭ ಆಗುತ್ತದೆ. ನಗರ ಹಾಗೂ ಹಳ್ಳಿಯ ಬದುಕಿನ ನಡುವೆ ಇರುವ ವ್ಯತ್ಯಾಸವನ್ನು ಮಾತುಕತೆಯಲ್ಲಿ ಅನಾವರಣವಾಗುತ್ತದೆ. ಶ್ರೀಮಂತ ಮತ್ತು ಬಡವರ ನಡುವೆ ಇರುವ ತಾರತಮ್ಯ ತಿಳಿಸುವುದು. ಭೂಒಡೆತನ ಎಂಬುದು

ಬಹು ಮುಖ್ಯವಾದುದು, ಮಾನವನಿಗೆ ಸಮಾಜದಲ್ಲಿ ಸ್ಥಾನಮಾನ ದೊರಕುವುದು ಆಸ್ತಿ ಜಾಸ್ತಿ ಇದ್ದಾಗ ಮಾತ್ರ ಎಂಬುದು ತಿಳಿಯುತ್ತದೆ. ಕಡಿಮೆ ಭೂಮಿಯಿರುವ ಪಾಹಃ ಹೆಚ್ಚು ಭೂಮಿ ಪಡೆಯುವ ದುರಾಸೆಯಲ್ಲಿ ಬೀಳುವ ಪರಿಯನ್ನು ಕಾಣಬಹುದು. ಸೈತಾನನ ಮಾತಿಗೆ ಬೆಲೆಕೊಡುತ್ತಾ ತನ್ನ ಅವನತಿಗೆ ಕಾರಣವಾಗುವ ಬಗೆಯನ್ನು ನೋಡಬಹುದು.

ಕತೆಯು ಮೂರು ಹಂತದಲ್ಲಿ ಸಾಗುತ್ತದೆ. ಮೊದಲಿಗೆ ಮುದುಕಿಯ ಜಮೀನನ್ನು ಖರೀದಿಸುವ ಮೂಲಕ ಪ್ರಾರಂಭಗೊಳ್ಳುತ್ತದೆ. ತನ್ನ ಕುಟುಂಬ ನಿರ್ವಹಣೆಗೆ ಬೇಕಾಗುವಷ್ಟು ಆಹಾರದ ಉತ್ಪಾದನೆ ಬರುತ್ತಿರುತ್ತದೆ. ಆದರೆ ಒಂದು ದಿನ ಒಬ್ಬದಾರಿ ಹೋಕರ ಮೂಲಕ ವೋಲ್ಗಾ ನದಿಯ ದಂಡೆಯಲ್ಲಿ ಅಧಿಕ ಫಲವತ್ತಾದ ಭೂಮಿಕಡಿಮೆ ಬೆಲೆಗೆ ಲಭ್ಯವಾಗುತ್ತದೆ ಎಂದು ತಿಳಿಯುತ್ತದೆ. ಆಗ ಗೇಣಿ ಜಮೀನಿನಲ್ಲಿ ದುಡಿಯುತ್ತಾ ಹೋದಂತೆ, ನಿರಾಸೆ ಹೊಂದಿ ಬೇರೆಕಡೆಗೆ ಹೋಗಿ ಜಮೀನ್ದಾರನಾಗುವುದು ಉತ್ತಮ ಅನಿಸುತ್ತದೆ. ರೈತನ ಆಸೆಯು ಪ್ರತಿ ಹಂತದಲ್ಲಿಯೂ ಅಧಿಕವಾಗುತ್ತಾ ಹೋಗುತ್ತದೆ. ಕುದುರೆ ವ್ಯಾಪಾರಿಯ ಬ್ಯಾಷ್ಕೀರದಲ್ಲಿ “ಒಂದು ಸಾವಿರ ರೂಬೆಲ್ಲಿಗೆ ಹದಿಮೂರು ಸಾವಿರ ಎಕರೆ ಭೂಮಿ ಸಿಗುತ್ತದೆ” ಎಂದು ಹೇಳಿ, ರೈತನ ಬಾಯಲ್ಲಿ ನೀರೂರುವಂತೆ ಮಾಡಿದನು. ಆಗುಂತಕನಿಂದ ಹೆಚ್ಚು ಮಾಹಿತಿ ಪಡೆದು, ಜಮೀನಿನ ಖರೀದಿಗೆ ಮುಂದಾಗುತ್ತಾನೆ.

ಬ್ಯಾಷ್ಕೀರಿಗೆ ಪಯಣ ಬೆಳೆಸಿದ ಪಾಹಃ ಸ್ವಲ್ಪ ಚಹಾ ಪುಡಿ ಹಾಗೂ ಮದ್ಯವನ್ನು ತೆಗೆದುಕೊಂಡು ಹೋಗಿ, ಅಲ್ಲಿನ ನಾಯಕನಿಗೆ ಕಾಣಿಕೆರೂಪದಲ್ಲಿ ನೀಡಿ ತನ್ನ ಮನದ ಇಂಗಿತ ವ್ಯಕ್ತಪಡಿಸುತ್ತಾನೆ. ಆಗ ನಾಯಕ ಪಾಹಃನ ಮನದಾಳದ ಆಸೆಯನ್ನು ತಿಳಿದು, ನಿನಗೆ ಬೇಕಾದಷ್ಟು ಪಡೆದುಕೊಳ್ಳಬಹುದು ಎಂದು ಹೇಳುತ್ತಾನೆ. ಆದರೆ ಒಂದು ಷರತ್ತಿದೆ ಎಂದು ನಾಯಕ ಅರುಹುತ್ತಾನೆ. ಅದೇನೆಂದರೆ ನೀನು ಕಾಲ್ನಡಿಗೆಯಲ್ಲಿ ಪಯಣ ಶುರು ಮಾಡಬೇಕು, ಸೂರ್ಯ ಉದಯದೊಂದಿಗೆ ಪ್ರಾರಂಭವಾಗಿ, ಅಸ್ತಮದೊಂದಿಗೆ ಪಯಣ ಮುಗಿಸಬೇಕು. ಅಷ್ಟರಲ್ಲಿ ನೀನು ಎಷ್ಟು ದೂರ ಕ್ರಮಿಸಿರುವೆ ಎಲ್ಲಾ ಭೂಮಿ ನಿನ್ನದು ಎಂದು ಹೇಳುತ್ತಾನೆ. ಫಲವತ್ತಾದ ಭೂಮಿ ಪಡೆಯುವ ತವಕದಲ್ಲಿದ್ದ ಪಾಹಃಗೆ ಮುಂದಿನ ಆಗು ಹೋಗಿನ ಅರಿವೇಇಲ್ಲದೆ, ಬೇಗ ಎಲ್ಲವೂ ತನ್ನದಾಗುತ್ತದೆ ಮತ್ತು ಶ್ರೀಮಂತನಾಗುವ ಬಯಕೆಯಲ್ಲಿ ನಾಯಕನ ಷರತ್ತಿಗೆ ಒಪ್ಪಿಗೆ ಸೂಚಿಸುತ್ತಾನೆ. ಪಯಣ ಪ್ರಾರಂಭವಾಗುವ ಹಿಂದಿನ ರಾತ್ರಿ ನಿದ್ದೆ ಬಾರದೆ, ನಾಳೆಯ ಭೂಒಡೆತನದ ಬಗ್ಗೆ ಯೋಚಿಸುತ್ತಾ, ನಿದ್ರೆಗೆಜಾರುವಲ್ಲಿ ಸೂರ್ಯನ ಆಗಮನವಾಗುತ್ತದೆ. ಎಲ್ಲಾ ಜನರು ಒಂದಡೆ ನಿಂತು, ನಾಯಕನ ನಿರ್ದೇಶನದಂತೆ ನಡಿಗೆಗೆ ಸಜ್ಜುಗೊಂಡ ಪಾಹಃ ಹೆಗಲಿಗೆ ಒಂದು ಗುದ್ದಿ, ಕಾಲಿಗೆ ಶೂ ಧರಿಸಿ, ಸ್ವಲ್ಪ ಊಟ ಮತ್ತು ನೀರಿನೊಂದಿಗೆ ನಡಿಗೆ ಪ್ರಾರಂಭಿಸುತ್ತಾನೆ. ಗುರುತಿಗಾಗಿ ಮಣ್ಣನ್ನು ಗುಡ್ಡೆ ಮಾಡುತ್ತಾ ಮುಂದೆ ಹೋದಂತೆ, ಮಂದಿ ದೂರವಾಗುತ್ತಾ ಹೋಗುತ್ತಾರೆ. ನಡಿಗೆ ಜೋರು ಮಾಡುತ್ತಾ, ಜಾಸ್ತಿ ಭೂಮಿ ಪಡೆಯುವ ಹಂಬಲದಲ್ಲಿ, ಸಾವಿನ ಬಗ್ಗೆ ತಿಳಿಯದೇ ಸಾಗುತ್ತಾನೆ. ಸಮಯ ಕಳೆಯುತ್ತಾ ಹೋದಂತೆ, ಕಾಲಿನಲ್ಲಿದ್ದ ಶಕ್ತಿ ಕುಂದಿ, ನಡಿಗೆಯ ವೇಗ ಕಡಿಮೆಯಾಗುತ್ತದೆ.

ಅಂತೂ ಕೊನೆಗೆ ಎಲ್ಲವೂ ನನ್ನ ವಶವಾಯಿತು ಆಸೆ ಈಡೇರಿತು ಎನ್ನುವಷ್ಟರಲ್ಲಿ ಆತ ಕುಸಿದು ಬಿದ್ದು ಸಾಯುತ್ತಾನೆ. ಅಷ್ಟರಲ್ಲಿ ಆಳು ಆತನಿಗೆ ನೀರು ಕುಡಿಸಲು

ಮುಂದಾದಾಗ, ನಾಯಕ ನೋಡಿ ವ್ಯಕ್ತಿ ಸತ್ತಿರುವುದನ್ನು ದೃಢಪಡಿಸಿದನು. ಆರು ಮೂರು ಅಡಿ ಗುಂಡಿ ತೆಗೆಯಲು ತಿಳಿಸಿ, ಕೊನೆಗೆ 'ಒಬ್ಬನಿಗೆ ಎಷ್ಟು ಭೂಮಿ ಬೇಕು?' ಎಂದು ಹೇಳುತ್ತಾನೆ. ಪಾಹಃನ ಸಾವಿಗೆ ದುಃಖ ವ್ಯಕ್ತಪಡಿಸುತ್ತಾ, ಮಾನವ ಎಲ್ಲವೂ ಬೇಕು ಎಂದು ಪಡೆದುಕೊಳ್ಳುವ ಆತುರದಲ್ಲಿ ತನಗೆ ವಯಸ್ಸು ಆಗುತ್ತಿದೆ, ಸಾವು ಸಮೀಪಿಸುತ್ತಾ ಇದೆ ಎಂಬುದನ್ನೇ ಮರೆಯುತ್ತಾನೆ.

ಈ ಕತೆಗೂ ಮೊಗಳ್ಳಿ ಗಣೇಶ ಬರೆದಿರುವ "ಭೂಮಿ" ಎಂಬ ಕತೆಗೂ ಸಾಮ್ಯತೆ ಇರುವುದನ್ನು ನೋಡಬಹುದು. ಒಬ್ಬ ದೊಂಬನು ತನ್ನ ಜೀವನೋಪಾಯಕ್ಕಾಗಿ ದೊಂಬರಾಟವನ್ನು ಆಡುತ್ತಾ, ಸಂಸಾರ ತೂಗಿಸುತ್ತಾ ಇರುವ ಸಂದರ್ಭದಲ್ಲಿ ತನ್ನ ಪೂರ್ವಿಕರಿಂದ ಬಳುವಳಿಯಾಗಿ ಬಂದ "ಹಾರುವ" ಕಲೆಯನ್ನು ಭೂಮಿ ಗಳಿಸಲು ಬಳಸಿಕೊಂಡಾಗ ಅದಕ್ಕೆ ಹೇಗೆ ಬಲಿಯಾಗುತ್ತಾನೆ ಎಂಬುದನ್ನು ಕತೆಯು ಹೇಳುತ್ತದೆ.

ಒಮ್ಮೆ ಊರ ಪಾಳೇಗಾರನ ಮುಂದೆ ಕಲೆಯ ತೋರಿಸುವ ನಿಟ್ಟಿನಲ್ಲಿ, ಪಾಳೇಗಾರನು ದೊಂಬನಿಗೆ ಷರತ್ತೊಂದನ್ನು ಒಡ್ಡುತ್ತಾನೆ, ಎಷ್ಟು ದೂರ ಹಾರುತ್ತೀಯೋ ಅಷ್ಟು ಭೂಮಿ ನಿನ್ನದಾಗುತ್ತದೆ ಎಂದು ಆಸೆಯನ್ನು ತೋರಿಸುತ್ತಾನೆ. ಅಧಿಕಾರದ ಹಾಗೂ ಹಣದ ದರ್ಪವನ್ನು ಅರಿಯದ ಮುಗ್ಧ ಜೀವಿಯಾದ ದೊಂಬ ತನ್ನ ಮುಂದಿನ ಜೀವನ ಸುಖವಾಗಿರುತ್ತದೆ ಎಂದು ಭಾವಿಸಿ, ಆ ಷರತ್ತಿಗೆ ಒಪ್ಪಿ, ಎತ್ತರಕ್ಕೆ ಹಾರುತ್ತಾ, ಪ್ರಾಣ ಬಿಡುವ ಪ್ರಸಂಗವನ್ನು ಕಾಣಬಹುದು.

ಒಟ್ಟಾರೆ ಎರಡೂ ಕತೆಗಳನ್ನು ನೋಡಿದಾಗ ಒಂದೇ ವಸ್ತುವನ್ನು ಹೊಂದಿರುವುದು ತಿಳಿದುಬರುತ್ತದೆ. ಎರಡು ದಿಕ್ಕುಗಳಲ್ಲಿ ಆಲೋಚಿಸುವಂತೆ ಈ ಕತೆಗಳು ನಮ್ಮನ್ನು ಪ್ರೇರೇಪಿಸುತ್ತವೆ. ಅತಿ ಹೆಚ್ಚು ಭೂಮಿಯ ಆಸೆ ಸರಿಯಲ್ಲ ಎನ್ನುವು ದಿಕ್ಕಿನಲ್ಲಿ ಆಲೋಚಿಸಿದಂತೆಯೇ ಬಡವರು ಭೂಮಿಯ ಆಸೆಯನ್ನೇ ಹೊಂದಿರಬಾರದೇ ಎನ್ನುವ ಪ್ರಶ್ನೆಯ ಬಗ್ಗೆಯೂ ಆಲೋಚಿಸಬೇಕಾಗುತ್ತದೆ.

❖❖❖

**ಸತ್ಯವಂತರಿಗೆ ಮಾತ್ರವೆ ಕಾಣುವ**
**ನಿತ್ಯ ನುಣುಪಿನಾ ಬಟ್ಟೆ**
**ಮಿಥ್ಯರಿಗಿದು ಕಾಣದೆ ಕಾಣದು**
**ಅವರಿಗೆ ಬರಿ ಲೊಳಲೊಟ್ಟೆ**

# ವಿಜಯಪುರ ಜಿಲ್ಲೆಯ ಶಾಸನೋಕ್ತ ಜಲಾಗಾರಗಳು

**ಡಾ. ಗಿರೀಶ್ ಹನುಮರೆಡ್ಡಿ**
ಇತಿಹಾಸ ವಿಭಾಗ
ಬಿ.ಎಲ್.ಡಿ.ಇ.ಎ. ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಕಾಲೇಜು, ವಿಜಯನಗರ

ನೀರು ಪಂಚಭೂತಗಳಲ್ಲಿ ಒಂದು. ಭೂಮಿಯ ಮೇಲಿನ ಪ್ರತಿ ಜೀವರಾಶಿಗಳಿಗೆ ನೀರು 'ಜೀವಜಲ' ಪ್ರಾಚೀನ ಕಾಲದಿಂದಲೂ ಮಾನವನು ನೀರಿನ ದಡದಲ್ಲಿ ನೆಲೆನಿಂತು, ಆಶ್ರಯ ಕಟ್ಟಿಕೊಂಡನು. ಕಾಲಾಂತರದಲ್ಲಿ ಕೃಷಿ ಚಟುವಟಿಕೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡನು. ಅದು ಕೇವಲ ಮಳೆಯಾದಾರಿತ ಕೃಷಿ ಚಟುವಟಿಕೆಯಾಗಿತ್ತು, ಕೃಷಿಗೆ ಸಕಲಕಾಲದಲ್ಲೂ ನೀರಿನ ಅವಶಕತೆ ಎನಿಸಿತೊಡಗಿದಾಗ ಮಳೆ ನೀರನ್ನು ಸಂಗ್ರಹಿಸಿಕೊಳ್ಳಲು ಮುಂದಾದ ಅವು ನದಿ, ಕೆರೆ, ಬಾವಿ, ಹಳ್ಳ, ಕಾಲುವೆ, ನೀರಗಂಜುಗಳ ಸಹಾಯದಿಂದ ನೀರನ್ನು ಒಂದೆಡೆ ಸಂಗ್ರಹಿಸಲು ಆರಂಭಿಸಿದನು. ಪ್ರಾಚೀನ ನಾಗರಿಕತೆ ನದಿಗಳ ತೀರದಲ್ಲೆ ಸಿಂಧೂ ಬಯಲಿನ ನಾಗರಿಕತೆ, ಮೇಸೊಪಟೋಮಿಯಾ ನಾಗರಿಕತೆ, ಪಳಿಯುಳಿಕೆ ಸಿಕ್ಕಿರುವುದು ಗಮರ್ನಾಹವಾದದ್ದು. ಹೀಗೆ ನಾಗರಿಕ ಸಮಾಜವನ್ನು ಕಟ್ಟಿಕೊಂಡಿದ್ದು ನೀರಿನ ಆಸುಪಾಸಿನಲ್ಲಿ ಎಂದು ಹೇಳಬಹುದು.

ಜುನಾಗಡದಲ್ಲಿ ದೊರೆತ ಕ್ರಿ.ಪೂ. 150ರ. ಮಹಾಕ್ಷತ್ರಪ ರುದ್ರದಾಮನ ಶಾಸನವು 'ಸುದರ್ಶನ' ಕೆರೆಯ ಬಗ್ಗೆ ಉಲ್ಲೇಖಿಸುತ್ತದೆ. ಮುಂದೆ ಗುಪ್ತರ ಕಾಲದಲ್ಲಿ ಸುದರ್ಶನ ಕೆರೆಯು ಶಿಥಿಲಾವಸ್ಥೆಗೆ ಬಂದಾಗ ಸ್ಕಂದಗುಪ್ತನ ಮಾಂಡಲೀಕನಾದ ಚಪಲಿಕನು ಕೇವಲ ಎರಡು ತಿಂಗಳಲ್ಲಿ ದುರಸ್ತಿಗೊಳಿಸಿರುವುದಾಗಿ ಜುನಾಗಡದ ಎರಡನೇಯ ಶಾಸನದಲ್ಲಿ ವಿವರಿಸಲಾಗಿದೆ.[1] ಈ ಕೆರೆಯು ಕ್ರಿ.ಪೂ 4 ರಿಂದ 5ನೆಯ ಶತಮಾನವರೆಗೆ ಬಳಕೆಯಲ್ಲಿತ್ತು. ಇದರಿಂದ ಆಕಾಲದ ಜನರ ಆರ್ಥಿಕ ಮತ್ತು ಸಾಂಸ್ಕೃತಿಕ, ಸಾಮಾಜಿಕವಾಗಿ ಕೆರೆ, ಬಾವಿಗಳು ಜನರ ಬದುಕಿನ ಮುಖ್ಯ ಭಾಗವಾಗಿದ್ದವು ಎಂದು ತಿಳಿದು ಬರುತ್ತದೆ.

ಇನ್ನು ಕರ್ನಾಟಕಕ್ಕೆ ಬಂದರೆ ಅನೇಕ ಪ್ರಮುಖ ಅರಸು ಮನೆತನಗಳು ಕೆರೆ–ಕಟ್ಟೆ, ಬಾವಿ, ನದಿಗಳಿಗೆ ಪ್ರಾಮುಖ್ಯವನ್ನು ನೀಡಿದ್ದು ಶಾಸನಗಳಲ್ಲಿ ಕಾಣಬಹುದಾಗಿದೆ. ಕರ್ನಾಟಕದ ಅತ್ಯಂತ ಪುರಾತನವಾದ ಚದ್ರವಳ್ಳಿಕೆರೆಯು ಮಯೂರವರ್ಮನು ನಿರ್ಮಿಸಿದನೆಂದು ಚಂದ್ರವಳ್ಳಿಯ ಶಾಸನದಿಂದ ತಿಳಿದು ಬರುತ್ತದೆ.[2] ಕಲ್ಯಾಣದ ಚಳುಕ್ಯರ ಕಾಲವು ಕೆರೆಗಳ "ಸುರ್ವಣಯುಗ" ಎಂದು ಹೇಳಲಾಗಿದೆ. ನಮ್ಮ ಪೂರ್ವಜರು ಕೆರೆ, ಬಾವಿ, ಕಾಲುವೆ ಪುಷ್ಕರಣೆ, ಹೀಗೆ ಮುಂತಾದ ಜಲಾಗಾರಗಳು ನಿರ್ಮಿಸುವುದು ಶ್ರೇಷ್ಠವಾದ ಕೆಲಸವೆಂದು ನಂಬಿದ್ದರು. ಜಲಾಗಾರಗಳ ನಿರ್ಮಾಣದ ಕಾರ್ಯವು ಕೇವಲ ರಾಜನಿಗೆ ಸೀಮಿತವಾಗಿರದೆ, ರಾಜ–ರಾಣಿ, ಮಂತ್ರಿ, ಸಾಮಂತರು ಅಧಿಕಾರಿಗಳು, ಶ್ರೀಮಂತ ವರ್ಗದವರು, ವ್ಯಾಪಾರ ಸಂಘ, ಜನಸಾಮಾನ್ಯರು, ಹೀಗೆ ಮುಂತಾದ ವರ್ಗದವರು ಕೆರೆ, ಬಾವಿಗಳ ನಿರ್ಮಾಣದ ಕೆಲಸ ಪುಣ್ಯದ ಕಾರ್ಯ ಎಂದು ನಂಬಿದ್ದರು. ಐತಿಹಾಸಿಕಾವಾಗಿ ವಿಜಯಪುರ ಜಿಲ್ಲೆಯು ಪ್ರಾಚೀನ

ಕಾಲದಿಂದಲೂ ಅನೇಕ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟಿತು. ಅವು ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ದೇವಗಿರಿಯ ಸೇವುಣರು, ಬಹಮನಿ ಸುಲ್ತಾನರು, ಆದಿಲ್‌ಶಾಹಿಗಳು ಮೊಘಲರು, ನಿಜಾಮರು, ಮರಾಠರು, ಬ್ರಿಟಿಷರು, ಹೀಗೆ ಮುಂತಾದ ದೇಶಗತಿ ಮನೆತನಗಳು ಆಳ್ವಿಕೆ ಮಾಡಿವೆ ಎಂದು ಅಲ್ಲಿ ದೊರೆತಿರುವ ಶಾಸನ ಮತ್ತು ಧಾಖಲೆಗಳಿಂದ ತಿಳಿದುಬರುತ್ತದೆ. ಇವರ ಆಡಳಿತಾವಧಿಯಲ್ಲಿ ಅನೇಕ ಜಲಾಗಾರಗಳು ಜನರ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಏಳಿಗೆಗಾಗಿ ನಿರ್ಮಾಣಗೊಂಡವು  ಎಂದು ಶಾಸನಗಳಿಂದ ತಿಳಿದುಬರುತ್ತದೆ.

ವಿಜಯಪುರ ಜಿಲ್ಲೆಯು ಭೌಗೋಳಿಕವಾಗಿ ಹೇಳುವುದಾರೆ ಬಯಲು ಸೀಮೆ. ಶಾಸನಗಳಲ್ಲಿ ವಿಜಯಾಪುರ, "ದಕ್ಷಿಣದ ವಾರಾನಾಸಿ" 'ಧಖ್ಖಣಿಯ ರಾಣಿ' ವಿದ್ಯಾಪುರ, ಮಹ್ಮದಪುರ, ಗುಮ್ಮಟ ನಗರ,  ಎಂದೆಲ್ಲಾ ಖ್ಯಾತಿಯನ್ನು ಪಡೆದಿದೆ. ಈ ಜಿಲ್ಲೆಯು ವಿಭಜನೆಯ ಮೊದಲು 'ದಕ್ಷಿಣದ ಪಂಜಾಬ್' ಎಂದು ಪ್ರಿಯವಾಸಿ. ಈ ಪುಣ್ಯ ನೆಲದಲ್ಲಿ ಕೃಷ್ಣಾ, ಭೀಮಾ, ಡೋಣಿ, ಮತ್ತು ಮಲಪ್ರಭಾ, ಘಟಪ್ರಭಾ ಎಂಬ ನದಿಗಳು ಹರಿದು ಪವಿತ್ರಗೊಳಿಸಿವೆ. ಉತ್ತರ ಭಾರತದ ಪಂಜಾಬ್‌ನ್ನು ಬಿಟ್ಟರೆ ನಮ್ಮ ದೇಶದ ಇನ್ನಾವುದೇ ರಾಜ್ಯದಲ್ಲೂ ಇಷ್ಟು ನದಿಗಳು ಕಂಡು ಬಂದಿಲ್ಲ.

ಕೃಷ್ಣಾ ನದಿ: ಕೃಷ್ಣಾ ನದಿಯು ಭಾರತದ ನಾಲ್ಕನೆಯ  ಅತೀ ದೊಡ್ಡ ನದಿ. ಕರ್ನಾಟಕದ ಹಿರಿಯ ಹೊಳೆ, ಪೆದ್ದಹೊಳೆ ಬಿರದನ್ನು ಹೊಂದಿದೆ. ಕೃಷ್ಣಾ ನದಿಯ ಉಗಮ ಸ್ಥಳ ಮಹಾರಾಷ್ಟ್ರದ ಮಹಾಬಲೇಶ್ವರ ಬೆಟ್ಟದ ಜೋರ್ 'ಗೋಮುಖ' ಎಂಬಲ್ಲಿ ಹುಟ್ಟಿ ಬೆಳಗಾವಿ ಮೂಲಕ ಕರ್ನಾಟಕವನ್ನು ಪ್ರವೇಶಿಸುತ್ತದೆ. ಈ ನದಿಯು ಒಟ್ಟು 1400 ಕಿ.ಮೀ.ವರೆಗೆ ಮೈಚಾಚಿ ಹರೆಯುತ್ತಾಳೆ. ಇದು ದಕ್ಷಿಣ ಭಾರತದ ಅತೀ ಉದ್ಧನೆಯ ನದಿ, ಇದು ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ, ಆಂದ್ರಪ್ರದೇಶ, ಈ ರಾಜ್ಯಗಳಲ್ಲಿ ಹರಿಯುತ್ತಾ ಜನರ ಜೀವನದ ಕೊಂಡಿಯಾಗಿ, ಪಲವತ್ತತೇಯ ಭೂಮಿಗೆ ಜೀವನದಿಯಾಗಿದ್ದಾಳೆ.[3] ಇನ್ನೂ ವಿಜಯಪುರ ಜಿಲ್ಲೆಯ ಶಾಸನಗಳಲ್ಲಿ ಕೃಷ್ಣಾ ನದಿಗೆ ಕ್ರಿ.ಶ.862ರ ಬಾಗೇವಾಡಿ ತಾಲೂಕಿನ, ಹೂವಿನಹಿಪ್ಪರಗಿಯ ಶಾಸನದಲ್ಲಿ ಕೃಷ್ಣಬೆಣ್ಣಾ.[4] ಕ್ರಿ.ಶ.1089ರ ಬಿಜಾಪುರ ತಾಲೂಕಿನ ದೇವರಗೆಣ್ಣೂರು ಶಾಸನದಲ್ಲಿ ಕೃಷ್ಣವೆಣ್ಣಾ, ಕೃಷ್ಣವೆಣ್ಣಾ[5] ಎಂದು ಕರೆಯಲಾಗಿದೆ. ಈ ನದಿಯ ಉಪ ನದಿ ವೇಣಾನದಿಯು ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಸಂಗಮಮಾಹೂಲಿ ಹತ್ತಿರ ಕೃಷ್ಣ ನದಿಯನ್ನ ಸೇರುತ್ತದೆ. ಕವಿ ರನ್ನನು ತನ್ನ ಸಾಹಿತ್ಯದಲ್ಲಿ ನದಿಗೆ ಪೆರ್ದೊರೆ ದೊಡ್ಡಹೊಳೆ, ಹಿರಿಯಹೊಳೆ, ಕೋಪದ ನದಿ ಎಂದು ವರ್ಣಿಸಿದ್ದಾನೆ.[6]

ಭೀಮಾನದಿ: ಭೀಮಾನದಿಯು ಕರ್ನಾಟಕದ ಪ್ರಾಚೀನ ನದಿಗಳಲ್ಲಿ ಒಂದಾಗಿದೆ. ವಿಜಯಪುರ ಜಿಲ್ಲೆಯ ಉತ್ತರದಲ್ಲಿ ಪೂರ್ವಾಭಿಮುಖವಾಗಿ ಹರಿಯುವ ನದಿಗಳೆ ವಿಶೇಷ. ಶಾಸನ ಮತ್ತು ಪ್ರಾಚೀನ ಗ್ರಂಥಗಳಲ್ಲಿ  ಭೀಮೆಯನ್ನು ಶಾಂತ ಸ್ವಭಾವದ ನದಿ ಎಂದು ವರ್ಣನೆ ಮಾಡಲಾಗಿದೆ.[7] ಭೀಮಾನದಿಯು ಮಹಾರಾಷ್ಟ್ರದ ಪುಣೆ ಹತ್ತಿರದ ಪಶ್ಚಿಮ ಘಟ್ಟದ 'ಭೀಮಾಶಂಕರ' ಎಂಬಲ್ಲಿ ಹುಟ್ಟಿ ಒಟ್ಟು ಮೂರು ರಾಜ್ಯದಲ್ಲಿ ಹರಿಯುತ್ತಾಳೆ. ಮಹಾರಾಷ್ಟ್ರ, ಕರ್ನಾಟಕ, ಆಂದ್ರಪ್ರದೇಶ, ರಾಜ್ಯಗಳಲ್ಲಿ ಹರಿಯುವ ಈ ಮಹಾನದಿ ವಿಜಯಪುರ ಜಿಲ್ಲೆಯಲ್ಲಿ 96ಕಿ.ಮೀ. ಹರಿದು ಕಲಬುರಗಿ ಜಿಲ್ಲೆಯನ್ನು

ಪ್ರವೇಶಿಸಿದೆ.[8] ಕ್ರಿ.ಶ.1172ರ ಶಾಸನದಲ್ಲಿ ಭೀಮಾನದಿಯ ಬಗ್ಗೆ ವಿವರ ಇಂತಿದೆ. 'ಮರ್ತ್ಯಲೋಕದಸಕಳಜನಂಗಳ್ ಸ್ನಾನ ಸೇವನೆಯಿಂದನೇಕ ಜನ್ಮಾಂತರದುರಿತ ನಿವಾರಣಂ', 'ಪೂರ್ವಭಿಮುಖವಾದ ಶ್ರೀವನ್ಮಹಾ ಭೀವರಥೀನದಿಯ ದಕ್ಷಿಣತೀರದೊಳತಿ'.[9]

ಈ ಶಾಸನದಲ್ಲಿ ಈ ನದಿಯ ಪವಿತ್ರ ಸ್ನಾನದಿಂದ ಜನ್ಮಾಂತರ ಪಾಪವು ನಿವಾರಣೆಯಾಗುತ್ತದೆ ಎಂದಿದೆ. ಇಂಡಿ ತಾಲೂಕಿನ ಇನ್ನೊಂದು ಶಾಸನದಲ್ಲಿ 'ಶ್ರೀ ಭೀಮರಥಿ ಪ್ರಸಿದ್ಧನದಿ ಶ್ರೀ ಗಂಗಾನದಿಗೆ ಸಮನೆನಿಸದ ಭೀಮರಥಿ' ಎಂದು ಭೀಮಾನದಿಯು ಗಂಗಾನದಿಯಷ್ಟೆ ಪವಿತ್ರವಾದ ನದಿಯೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.[10]

ಡೋಣಿ ನದಿ: ಈ ನದಿಯು ಮಹಾರಾಷ್ಟ್ರದ ಸಾಂಗಲ್ಲಿ ಎಂಬಲ್ಲಿ ಹುಟ್ಟಿ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ, ಸಿಂದಗಿ, ಮುದ್ದೇಬಿಹಾಳ ಮಾರ್ಗವಾಗಿ, ಒಟ್ಟು 140ಕಿ.ಮೀ ಹರಿಯುತ್ತದೆ. ಇನ್ನೂ ಶಾಸನಗಳಲ್ಲಿ ದೋಣಿನದಿಗೆ 'ದೋಣಿಯ ನೆಲ' ಹೀಗೆ 1049ರ ಬ ಬಾಗೇವಾಡಿ ತಾಲೂಕಿನ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[11]

ಹಳ್ಳಗಳು: ಹಳ್ಳಗಳು, ಕೆರೆ ಬಾವಿಗಳ ಜೀವನಾಡಿಯಾಗಿ ಪ್ರಮುಖ ಪಾತ್ರವಹಿಸುತ್ತವೆ. ಈ ಜಿಲ್ಲೆಯ ಶಾಸನಗಳಲ್ಲಿ ಒಟ್ಟು 16 ಹಳ್ಳಗಳ ಉಲ್ಲೇಖ ಕಂಡುಬಂದಿವೆ. ಅವುಗಳಲ್ಲಿ ಕ್ರಿ.ಶ.1057ರ ಇಂಡಿ ತಾಲೂಕಿನ ಶಾಸನದ ಲೆತಿಗೆಯಪಳ್ಳ ಹಳ್ಳ.. ಕ್ರಿ.ಶ.1057ರ ಕನ್ನೂರಿನ ಪಿರಿಯಹಳ್ಳ, ಕಂಟಿಯಹಳ್ಳ ಕ್ರಿ.ಶ.1120ರ ಹಿರೇಬೇವಿನೂರ ಹಳ್ಳ, ಕರುವವಳ್ಳ, ಕ್ರಿ.ಶ. 1124ರ ಯರಗಲ್ಲಹಳ್ಳ, 1146ರ ನಾಗರಬೆಟ್ಟ, ದೊಡ್ಡಕೋಡಿಹಳ್ಳ, ಕ್ರಿ.ಶ. 1184ರ ನಿಂಬಾಳದ ಕಲ್ಲಹಳ್ಳ, ನಿಂಬಹಳ್ಳ, ಮಣಲಿಹಳ್ಳ, ಕ್ರಿ.ಶ.1174ರ, ಕುಮಟಗಿ ಹಳ್ಳ, ಮುಡುವಿನ ಹಳ್ಳ, ಕ್ರಿ.ಶ.1222ರ ಬಸವನ ಬಾಗೇವಾಡಿ ತಾಲೂಕಿನಯಾಳವಾರ ಹಳ್ಳ, ಕೋಲ್ಹಾಲದ ಹಿರಿಯಳ್ಳ, ಕ್ರಿ.ಶ.1223ರ ವಿಜಾಪುರ ಹಳ್ಳ, ಕ್ರಿ.ಶ.1192ರ ಸಾಲೂಟಗಿಯ ಚಿಲುಕುದವುಳ್ಳ, ವಿಜಾಪುರ ತಾಲೂಕಿನ ನಾಲತವಾಡದ ಹಳ್ಳ ಹೀಗೆ ಶಾಸನಗಳಲ್ಲಿ ಹಳ್ಳಗಳು ಉಲ್ಲೇಖಗೊಂಡಿವೆ.[12]

ಇಂಡಿ ತಾಲೂಕಿನ ಮಿರಗಿಯ ಕ್ರಿ.ಶ. 17 ಶತಮಾನದ ಶಾಸನದಲ್ಲಿ ಅರ್ಜುನಗಿಯ ಆಗ್ನೇಯ ಹೊಲದ ಚಿಕ್ಕ ಅರ್ಜುನಗಿಯ ಹಳ್ಳ ವರೆಗೆ ಎಂದು ಹೊಲದ ಸೀಮೆಯನ್ನು ಪ್ರಸ್ತಾಪಿಸಿದೆ.[13] ಕ್ರಿ.ಶ.12 ಶತಮಾನದ ಇನ್ನೂಂದು ಶಾಸನವು ಇಂಡಿ ತಾಲೂಕಿನ ನಿಂಬಾಳದ ಕಲ್ಲಹಳ್ಳ ತೆಂಕಣ ಸೀಮೆ ಮತ್ತು ನಿಂಬಹಳ್ಳದ ನೀಮೆ ಪಡುವಣ ಸೀಮೆ ಎಂದು ಹಳ್ಳಗಳ ಮಧ್ಯದ ಭೂಮಿಯನ್ನು ತಳಿಸುತ್ತದೆ.[14] ಕ್ರಿ.ಶ. 1146ರ ಸಿಂದಗಿ ತಾಲೂಕಿನ ಯಾರಗಲ್ ಶಾಸನವು ಸಾತಿಸೆಟ್ಟಿಯ ಕೆರೆಯಿಂದ ತೆಂಕಲೂ ಹಳ್ಳದಿಂ ತೋಟದ ಮತ್ತು ದಾನ ನೀಡಿರುವ ಬಗ್ಗೆ ವಿವರಿಸುತ್ತದೆ.[15]

ಕೆರೆಗಳು: ಕೆರೆಗಳ ನಿರ್ಮಾಣ ಸಂಸ್ಕೃತಿ ಪ್ರಾಚೀನ ಕಾಲದಿಂದಲೂ ಬಂದಿದೆ. ನಮ್ಮ ಪೂರ್ವಜರು ಕೆರೆಗಳ ನಿರ್ಮಾಣ ಕಾರ್ಯವು ಶ್ರೇಷ್ಠ ಮತ್ತು ಪುಣ್ಯದ ಕೆಲಸವೆಂದು ಬಲವಾಗಿ ನಂಬಿದ್ದರು. ವಿಜಯಪುರ ಜಿಲ್ಲೆಯಲ್ಲಿ ಅನೇಕ ಅರಸು ಮನೆತನಗಳ ಕಾಲಾವಧಿಯಲ್ಲಿ ಕೆರೆ, ಬಾವಿ, ಕಾಲುವೆ ನಿರ್ಮಿಸಿರುವುದು ಶಾಸನಗಳಿಂದ ತಿಳಿದು ಬರುತ್ತದೆ. ವಿಜಯಪುರ ತಾಲೂಕಿನ ಕ್ರಿ.ಶ.957ರ ಕಾರ್ಜೋಳದ ಸಂಬಯ್ಯನ ಕೆರೆಗೆ ಹತ್ತು ಮತ್ತರು ಹೊಲವನ್ನು ಬಿಟ್ಟಂತೆ ಶಾಸನದಿಂದ ತಿಳಿದು ಬರುತ್ತದೆ.[16]

ಸಿಂದಗಿ ತಾಲೂಕಿನ ಕ್ರಿ.ಶ. 1146 ಯರಗಲ್ಲದ ಶಾಸನವು ಸಾತಿಶೆಟ್ಟಿ ಕೆರೆ ಭೂಧಾನ ಮತ್ತು ಸೀಮೆಯ ಕುರಿತು ವಿವರಿಸುತ್ತದೆ.[17] ಗುತ್ತುರಗಿಯ ಸೀಮೆಕೆರೆ, ಮುತ್ತಗಿಯ ಗಾವುಂಡಗೆರೆ ಕೆರೆ, ಚಿಕ್ಕಕೆರೆ, ವಿಜಯಪುರ ತಾಲೂಕಿನ ಕ್ರಿ.ಶ. 1115 ನಿಡೋಣಿಯ ಶಾಸನದಲ್ಲಿ ಭೂಮಿ ಬಿಟ್ಟಿರುವ ಬಗ್ಗೆ ತಿಳಿಸುತ್ತದೆ.[18] ಮುದ್ದೇಬಿಹಾಳ ತಾಲೂಕಿನ ನಾಲವತವಾಡ ಕೆರೆ, ಮುದ್ದೇಬಿಹಾಳದ ಕ್ರಿ.ಶ. 1281ರ ಶಾಸನವು ಬಾಚಿಯ ಕೆರೆಯ ಮುಂದಿನ ದಾರಿಯ ಕುರಿತು ವಿವರಿಸಿದೆ.[19] ಗೊರವಿಯಕೆರೆ, ತೆಂಬದ ಹಣಿತಗೆರೆ ಕೆರೆ, ಮುದ್ದೇಬಿಹಾಳ ತಾಲೂಕಿನ 1210ರ ಸರೂರು ಶಾಸನವು ಅರಳಿಗೆರೆ ಭೂ ದಾನದ ಕುರಿತು ತಿಳಿಸುತ್ತದೆ.[20] ಸಿಂದಗಿ ತಾಲೂಕಿನ 1100ರ ಮಲಘಾಣ ಶಾಸನವು ಕೆರೆ ವಿವರಿಸಿದೆ.[21] ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ 1133ರ ಅಥರ್ಗಾ ಶಾಸನವು ಊರ ಮುಂದಿನ ಕೆರೆ ಎಂದು ವಿವರಿಸಿದೆ ಮುಂದಿನ ಶಾಸನವು ತ್ರುಟಿತವಾಗಿರುವುದೆ.[22] ಸಿಂದಗಿ ತಾಲೂಕಿನ 1140ರ ಶಾಸನವು ದೇವರನಾವದಗಿ ಕೆರೆಗೆ ಹತ್ತು ಮತ್ತರು ಭೂಮಿಯನ್ನು ಬಿಟ್ಟಂತೆ ತಿಳಿಸುತ್ತದೆ.[23] ಸಿಂದಗಿ ತಾಲೂಕಿ 1107ರ ಕೊಂಡಗುಳಿಯ ಶಾಸನವು ವಾಜಿಕುಲಕ್ಕೆ ಸೇರಿದ ನಿಂಬಣಯ್ಯ ಎಂಬುವನು ಈ ಕೆರೆಯನ್ನು ಕಟ್ಟಿಸಿದಂತೆ ತಿಳಿಯುತ್ತದೆ.[24] ಬಸವನ ಬಾಗೇವಾಡಿಯ 1062ರ ಬ್ಯಾಕೋಡದ ಶಾಸನವು ಕೆರೆಗೆ ಊರಿಂದ ಉತ್ತರಕ್ಕೆ 55 ಮತ್ತರು ಹೊಲವನ್ನು ಬಿಟ್ಟಂತೆ ಈ ಭೂಮಿ ಸಾಳವಾಡಗಿ ಮತ್ತು ಪಿಪ್ಪರಗಿ ಸೀಮೆಯ ಕುರಿತು ಉಲ್ಲೇಖಿಸಿದೆ.[25] ವಿಜಯಪುರ ಜಿಲ್ಲೆಯ ಮಮದಾಪುರದ ಕ್ರಿ.ಶ. 1633ರ ಶಾಸನವು ಮಹಮ್ಮದ ಆದಿಲ್‌ಶಾಹಿಯ ಆದೇಶದ ಮೇರೆಗೆ ಅವನ ಪ್ರಧಾನಿಯಾದ ಖ್ವಾಜಾ ಖಾನನು "ಸುಲ್ತಾನ ಬೇಗಮ ತಾಲಾಬ" (ಕೆರೆ)ಯನ್ನು ನಿರ್ಮಿಸುತ್ತಾನೆ.[*1] ಇದು ಒಟ್ಟು 700 ಎಕರೆ ವ್ಯಾಪ್ತಿಯನ್ನು ಹೊಂದಿದೆ.

**ಬಾವಿಗಳು:**

> **"ತೋಡದ ಬಾವಿಯಿಲ್ಲ, ಮರೆಕಟ್ಟದ ಪೆರ್ಗ್ಗೆರೆಯಿಲ್ಲ**
> **ಲೀಲೆಯಂ ಮಾಡದ ದೇವತಾಭವನಮಿಲ್ಲೋಲವಿಂ**
> **ಬಿಡದಗ್ರಹಾರಮಿಲ್ಲಾಡಲದೇನೊ ಭೂಭುವನ ಭುಂಭೂಕಮಾದುದು**
> **ಕೀರ್ತಿಬಾಪು ನಾ ಪಾಡಿಯೆ ಸೈಪು ಮಾದರಸ ಸಾಯಣರೆಂಬ ಮಹಾಪ್ರಧಾನರಾ ॥".**

ಸಕಲ ಜೀವ ಸಂಕುಲಕ್ಕೂ ಮತ್ತು ವ್ಯವಸಾಯಕ್ಕೂ ನೀರಿನ ವ್ಯವಸ್ಥೆಯನ್ನು ಮಾಡುವುದು ಪುಣ್ಯದ ಕಾರ್ಯಗಳಲ್ಲಿ ಒಂದು ಎಂದು ಕ್ರಿ.ಶ.1411ರ ಹಂಪಿಯ ಕಡಲೆಕಾಳು ಗಣೇಶನ ದೇವಸ್ಥಾನದ ಎದುರಿನ ಅಗಸೆಬಾಗಿಲಲ್ಲಿರುವ ಪೌಢ ಪ್ರತಾನ ದೇವರಾಯನ ಕಾಲದ ಶಾಸನವು ಬಾವಿ ತೋಡಿಸುವ ಕುರಿತು ವಿವರಿಸಿದೆ.

ಬಾವಿಗಳಲ್ಲಿ ಎರಡು ಪ್ರಕಾರಗಳಾಗಿ ವಿಂಗಡಿಸಬಹುದು ಒಂದು ಮೆಟ್ಟಿಲುಗಳುಳ್ಳ ಬಾವಿ, ಇನ್ನೊಂದು ಸೇದುವ ಬಾವಿ. ಪ್ರಾಚೀನ ಶಾಸನಗಳಲ್ಲಿ ಬಾವಿಯ ಬಗ್ಗೆ ವರ್ಣನೆಗಳಿವೆ. ರಾಜರ ಖಾಸಗಿ ಬಾವಿಗಳು, ಸಾಮಂತರಸರ ಬಾವಿಗಳು, ಜನಸಾಮಾನ್ಯರು ನಿರ್ಮಿಸಿರುವ ಬಾವಿಗಳು, ಸಾರ್ವಜನಿಕ ಬಾವಿಗಳು, ಕೃಷಿ ಬಾವಿಗಳು, ಧಾರ್ಮಿಕ ಕಾರ್ಯಗಳ ಬಾವಿಗಳು, ಜಾನುವರಗಳ ಉಪಯೋಗಕ್ಕಾಗಿ ನಿರ್ಮಿಸಿದ ನಿರ್ಮಾತೃಗಳಿಂದ ಬಾವಿಗಳ ಮಹತ್ವವನ್ನು ತಿಳಿಯಬಹುದಾಗಿದೆ. ಇನ್ನೂ ಆದಿಲ್ ಶಾಹಿಗಳ ಕಾಲವನ್ನು "ಬಾವಿಗಳ ಸುವರ್ಣಯುಗ" ಎಂದರೆ ತಪ್ಪಾಗಲಾರದು.

ಬ್ರಿಟಿಷ ಅಧಿಕಾರಿಯಾದ 'ಜೇಮ್ಸ್ ಬರ್ಡನ' ವರದಿ ಪ್ರಕಾರ ವಿಜಯಪುರದಲ್ಲಿ ಒಟ್ಟು 430 ಬಾವಿಗಳು ಚಾಲ್ತಿಯಲ್ಲಿದ್ದವು. ಇನ್ನೊಬ್ಬ ಬ್ರಿಟಿಷ ಅಧಿಕಾರಿ ಕ್ರಿ.ಶ.1815ರಲ್ಲಿ ಕ್ಯಾಪ್ಟನ್ ಸೈಕ್ ಎಂಬುವನು ವಿಜಯಪುರ ನಗರದಲ್ಲಿ ಬಿಡಾರ ಹೂಡಿದ್ದಾಗ 700 ಬಾವಿಗಳನ್ನು ಧಾಖಲಿಸಿದ್ದಾನೆ. ಅವುಗಳಲ್ಲಿ ಮೇಟ್ಟಿಲುಗಳಿದ್ದ 400 ಬಾವಿಗಳು, 300 ಸೇದುವ ಬಾವಿಗಳನ್ನು ಗುರುತಿಸಿ ದಾಖಲಿಸಿದ್ದಾನೆ.[26] ವಿಜಯಪುರದ ನಗರದ ಗೋಳಗುಮ್ಮಟ ಹಿಂಬಾಗದ ಕ್ರಿ.ಶ.1580 ನೀಮ್ ಬಾವಡಿ ನಾಗರಿ ಮತ್ತು ಮರಾಠಿ ಲಿಪಿಯ ಶಾಸನವು ತಳಿಸುವಂತೆ ತೀರ್ಥರಾಜನಂತಿರುವ ಪ್ರಯಾಗವನ್ನು ಸ್ತುತಿಸುತ ಈ ಬಾವಿಯನ್ನು ತೋಡಿಸಿದಂತೆ ಹೇಳಿದೆ.[27] ಬಾವಿ ಯಾರು ನಿರ್ಮಿಸಿದರು ಬಗ್ಗೆ ವಿವರಣೆ ಇಲ್ಲ ಮುಂದಿನ ಸಾಲುಗಳು ತ್ರುಟಿತವಾಗಿದೆ. ವಿಜಯಪುರ ತಾಲೂಕಿನ ಜುಮ್ನಾಳ ಗ್ರಾಮದ ಕ್ರಿ.ಶ 1695ರ ಶಾಸನವು ಲಿಂಗೋಜಿ ತೀರ್ಥಶನ ಮೊಮ್ಮಗನಾದ ಲಿಂಗೇಶ ರಾಮಚಂದ್ರನ ಮಗನಾದ ಸುಭರಾಯ ಪಂಡಿತ ಎಂಬುವನು ಬಾವಿಯನ್ನು ತೊಡಿಸಿದನೆಂದು ತಿಳಿಸುತ್ತದೆ.[28] ವಿಜಯಪುರ ತಾಲೂಕಿನ ದೇವರಗೆಣ್ಣೂರು ಕ್ರಿ.ಶ. 11ನೆಯ ಶತಮಾನದ ಶಾಸನವು ವೈಜೇಶ್ವರ ದೇವರ ಪ್ರತಿಷ್ಠಾಪನೆ ಮಾಡಿದಂತೆ ಬಾವಿ ಸಹಿತ ಭೂದಾನದ ಕುರಿತು ತಳಿಸುತ್ತದೆ.[29] ಇಂಡಿ ತಾಲೂಕಿನ ನಿಂಬಾಳ ಕ್ರಿ.ಶ.1176ರ ಶಾಸನವು ಕಾಳಿರಾಗನ ಬಾವಿ ಎಂದು ಮುಂದೆ ದೇವರ ಪ್ರಸ್ತಾಪದ ಬಗ್ಗೆ ತಳಿಸುತ್ತದೆ.30 ಸಿಂದಗಿ ತಾಲೂಕಿನ ಮಲಘಾಣದ ಕ್ರಿ.ಶ.1101ರ ಶಾಸನವು ದಿವಾಕರ ಭಟ್ಟೋಪಾಧ್ಯಾಯಯರಿಗೆ ಬಾವಿಯನ್ನು ತೋಡಿಸಿ ಅದನ್ನು ವಾಮದೇವ ನಾಯಕನಿಗೆ ದಾನ ನೀಡಿದಂತೆ ತಳಿಸುತ್ತದೆ.[31] ಮುದ್ದೇಬಿಹಾಳ ತಾಲೂಕು ಗೋಟಖಂಡ್ಕಿ ಗ್ರಾಮದ ಕ್ರಿ.ಶ.1174ರ ಶಾಸನವು ಗೊಟ್ಟಖಂಡಿಕೆಯ ಪ್ರಭುವಾಗಿ ಮಹಾದೇವನಾಯಕನಿದ್ದ ಇವನ ಮಗ ನಾಗದೇವನಾಯಕನು ಗಂಗೇಶ್ವರದೇವರ ಬಾವಿಯ ಧರ್ಮೇತಕ್ಕೆ ಭೂಮಿಯನ್ನು ಹಾಗೂ ಒಂದು ಮನೆಯ ನಿವೇಶನವನ್ನು ದಾನವಾಗಿ ಕೊಟ್ಟ ವಿಷಯವನ್ನು ತಿಳಿಸುತ್ತದೆ.[32]

ಬಸವನ ಬಾಗೇವಾಡಿಯ ಕ್ರಿ.ಶ. 1595ರ ಶಾಸನವು ಮಲಿಕ ಬುಜುರ್ಗನ ಮಗ ಶೇಖ ಅಲಾವುದ್ದೀನ್ ಆಸ್ತಿಯಾಗಿದ್ದು ತೋಟ, ಮತ್ತು ಮೃತ್ಯುಪತ್ರದ ಮೂಲಕ ನೀಡಿರುವ ಬಗ್ಗೆ ತಿಳಿಸುತ್ತದೆ.[33] ವಿಜಯಪುರದ ಕ್ರಿ.ಶ.1552ರ ಶಾಸನವು ಸರಕಾರದ ಆಜ್ಞೆಯಂತೆ ಪಹಲವಾನ ಮೀರ್ ಅಲಿ ರಕ್ಷಣಾ ಗೋಡೆಗೆ ಶಂಕು ಸ್ಥಾಪಿಸಿ ತನ್ನ ಯೋಗೆತೆಯಂತೆ ಮಸೀದಿ ಮತ್ತು ಒಂದು ಬಾವಿಯನ್ನು ನಿರ್ಮಿಸಿದ ಎಂದು ಉಲ್ಲೇಖಿಸಿದೆ.[34] ನಗರದ ಗುಮ್ಮಟ ಬಾವಿಯ ಮೇಲಿರುವ ಶಾಸನ ಸಂ.258. ಕ್ರಿ.ಶ. 1563ರ ಶಾಸನವು ಮಲಿಕ–ಇ–ಜಹಾನ, ಫಾತೀಮಾ ಬೀಬಿ ಎಂಬ ಮಹಿಳೆಯು ಸಾರ್ವಜನಿಕ ಉಪಯೋಗಕ್ಕಾಗಿ ಮೆಟ್ಟಿಲು ಬಾವಿಯನ್ನು ನಿರ್ಮಿಸಿ ಧಾನಬಿಟ್ಟ ಉಲ್ಲೇಖವಿದೆ.[35] ಮಕ್ಕಾ ಗೇಟಿನ ಹಿಂಬಾಗ ಮುಹಮ್ಮದ ಶಾಹ ಪೇಟೆ ಕಛೇರಿ ಹತ್ತಿರದ ಬೀಬಿ ಬಂದಿ ಕೀ ಬಾವಡಿ ಸ್ಥಳ, ಕ್ರಿ.ಶ. 1581ರ ಒಟ್ಟು ಎರಡು ಶಾಸನಗಳು ಮನ್ಸೂರ ಖಾನ ಎಂಬ ಬಿರುದಿನ ಯಾಕೂತ್ ಆದಿಲ್‌ಶಾಹಿಯು ಸಿಹಿ ನೀರಿನ ಬಾವಿಯನ್ನು ಕಟ್ಟಿಸಿ ಅದನ್ನು ಪ್ರವಾಸಿಗರಿಗಾಗಿ ಮತ್ತು ಸ್ಥಳೀಯ ನಿವಾಸಿಗಳ ಉಪಯೋಗಕ್ಕಾಗಿ ನಿರ್ಮಿಸಿರುವ ಬಾವಿ ಎಂದು ತಿಳಿದುಬರುತ್ತದೆ.[36]

ನಗರದ ಶಹಪುರ ರಸ್ತೆಯ ಮಾಲ್ ಬಾವಡಿಯ ಮೇಲೆನದ್ದು ಕ್ರಿ.ಶ. 1583ರ

ಶಾಸನವು ಈ ಸಿಹಿ ನೀರಿನ ಬಾವಿಯನ್ನು ನಾಗಿ ಶೆಟ್ಟಿಯ ಮಗ ಮಲ್ಯನು ತನ್ನ ಸ್ವಂತ ಹಣದಿಂದ ಕಟ್ಟಿಸಿ ಈ ಬಾವಿ ಅವನ ವಂಶಸ್ಥರಿಗೆ ಸೇರಿದ್ದು ಬೇರೆ ಯಾರಿಗೂ ಇಲ್ಲ ಎಂದು ಇದನ್ನು ಉಲ್ಲಂಘಿಸಿದವರಿಗೆ ಶಾಪಾಶಯ ತೀಳಿಸುತ್ತದೆ.[37] ನಗರದ ಹೃದಯ ಭಾಗದಲ್ಲಿರುವ ಮೇಕ್ಕಾ ಗೇಟ ಹತ್ತಿರದ ಶಾಸನ ಸಂಖ್ಯೆ 305 ತಾಜ ಬಾವಡಿಗೆ ಸೇರಿದ್ದು ಕಾಲ 1645. ಅಧಿಕಾರದಲ್ಲಿದ್ದ ಅರಸ ಮಹ್ಮದ ಆದಿಲ್‌ಶಾಹಿ. ಇದುಜಿಲ್ಲೆಯ ಅತೀ ದೊಡ್ಡ ಬಾವಿ ಎಂದು ಖ್ಯಾತಿಯನ್ನು ಹೊಂದಿದೆ. ಶಾಹಿಗಳ ಪ್ರಸಿದ್ಧ ಅಭಿಯಂತಕನಾದ ಮಲೀಕ ಸಂದಲ್‌ನು ತನ್ನ ಸ್ವಂತ ಹಣದಲ್ಲಿ 'ತಾಜ ಬೈನ' ಎಂಬ ಮೆಟ್ಟಿಲುಗಳ ಬಾವಿಯನ್ನು ಸಾಧು ಸಂತರ ಸ್ನಾನ ಮತ್ತು ವಿಶ್ರಾಂತಿಗಾಗಿ ಬಾವಿಯ ಮೇಲೆ ಕೋಣೆಗಳನ್ನು ನಿರ್ಮಿಸಿಸಾರ್ವಜನಿಕರ ಉಪಯೋಗಕ್ಕಾಗಿ ದೇವರ ಹೆಸರಲ್ಲಿ ದತ್ತಿ ಬಿಟ್ಟನು.[38] ನಗರದ ತಹ ಮಹಲದ ಈ ಶಾಸನವು ಪರ್ಶಿಯನ್ ಭಾಷೆಯ ಕ್ರಿ.ಶ. 17 ಶತಮಾನಕ್ಕೆ ಸೇರಿದ್ದು. ಸಯ್ಯಿದ ಸೈಫುಲ್ಲಾಹ ಅಲ್–ಹುಸೇನಿ ಮಗ ಸಯ್ಯಿದ ಮರ್ದಾನ ಶಾಹಿ, 12 ಇಮಾಮರಿಗಾಗಿ ಮಸೀದಿ ಮತ್ತು ಹೂದೋಟ ನಿರ್ಮಿಸಿದ ತನ್ನ ಮೃತ್ಯುಪತ್ರದಲ್ಲಿ ತನ್ನ ಮಗ ಶಾಹ ಲಘ್ತುಲ್ಲಾಹನಿಗೆ ಬಿಟ್ಟು ಕರಾರುನೊಂದಿಗೆ ಮಸೀದಿಯ ಧರ್ಮದರ್ಶಿತ್ವವು ಆತನ ತಾಯಿ ಮರಣ ಹೊಂದುವವರೆಗೂ ಅವಳದಾಗಿರುತ್ತದೆ ಮಸೀದಿಯ ಒಳಗೆ ಒಂದು ಬಾವಿ ಹೊರಗೆ ಒಂದು ಬಾವಿ ಹೇಳುತ್ತಾ ಬಾವಿಯ ಹಕ್ಕಿನ ಕುರಿತು ತಿಳಿಸುತ್ತದೆ.[39] ನಗರದ ಹೃದಯ ಭಾಗದಲ್ಲಿರುವ ಆಸರ ಮಹಲ ಆವರ್ಣದಲ್ಲಿರುವ ಈ ಶಾಸನವು ಕ್ರಿ.ಶ. 1699ರ ಪರ್ಶಿಯನ್ ಭಾಷೆಯ ಶಾಸನದಲ್ಲಿ ಪವಿತ್ರ ಮುಹ್ಮದರ ಸ್ತುತಿ ಪದ್ಯಗಳು, ಪಳೆಯುಳಿಕೆಗಳ ಸಂಗ್ರಹಕ್ಕಾಗೆ ಈ ಕಟ್ಟಡ ಕಟ್ಟಿತು ಮಸೀದಿ ಮತ್ತು ತೋಟ ಎರಡು ಬಾವಿಯನ್ನೊಳಗೊಂಡಿದೆ ಎಂದು ತಿಳಿಸುತ್ತದೆ.[40] ನಗರದ ಜಾಮೀಯಾ ಮಸೀದಿಯ ಹತ್ತಿರದ ಕ್ರಿ.ಶ. 1708ರ ಶಾಸನದಲ್ಲಿ ಧಖ್ಖನಿನ ಆಧ್ಯಾತ್ಮಿಕ ಮಾರ್ಗದರ್ಶಿಗಳಾದ ಸಂತ ಸಯ್ಯಿದ ಹಸನರಿಂದ ದೇವರ ಹಾದಿಯಲ್ಲಿ ಅವನ ಸೇವಕರಿಗಾಗಿ ಗುರುಕುಲ ಸ್ಥಾಪಿಸಿ, ಮಸೀದಿ, ಹೂತೋಟ ನಿರ್ಮಿಸಿ ಇಮಾಮರ ಹಸನರ ನೆನಪಿಗಾಗಿ ಇನಾಚುತುಲ್ಲಾಹ ಬೇಗ ಸದರ ಎಂಬುವನು ಪುಷ್ಕರಣಿಯನ್ನೂ ಕಟ್ಟಿದರು. ನಿರ್ಮಿಸಿದ ಶಿಲ್ಪಿ ರಮಜಾನ ಕುಲಿ ಬೇಗ ಎಂದು ತಿಳಿಸುತ್ತದೆ.4[1] ವಿಜಯಪುರ ಜಿಲ್ಲೆಯ ಪೀರಾಪುರದ ಕ್ರಿ.ಶ.1591ರ ಪರ್ಶಿಯನ್ ಶಾಸನವು ದರ್ಗಾದ ಬಳಿಯ ಬಾವಿಯು ಅಹಮದ ಖಾನನ ಮಗ ಮಲಿಕ ಅಬ್ದುಲ್ ಕಾದರಿನ ತಾಯಿ ಬಾವಿಯನ್ನು ಕಟ್ಟಿಸಿದಳು ಎಂದು ನಮೂದಿಸಿದೆ.[42]

ಹೀಗೆ ವಿಜಯಪುರ ಜಿಲ್ಲೆಯ ಶಾಸನಗಳಲ್ಲಿ ಜಲಾಗಾರಗಳು ಕಟ್ಟಿ ಕೊಡುವ ಸಂದರ್ಭದಲ್ಲಿ ವಿಶಿಷ್ಟ ಕೆರೆ, ಬಾವಿಗಳು ಅವುಗಳ ಮಹತ್ವ ಉಪಯೋಗ, ಧಾರ್ಮಿಕ ನಂಬಿಕೆ ಅವುಗಳ ಸಂರಕ್ಷಣೆಯ ಕುರಿತು ವಿವಿಧ ಶಾಸನಗಳು ಬೆಳಕು ಚಲ್ಲಿವೆ.

**ಕೋಣೆ ಟಿಪ್ಪಣಿಗಳು**


1. Ankit Biswas.15.11.2020. Wells and Vavs -A Walk Back through the History of Conservation in Gujarat. Karwaan the Heritage Exploration Initiative .
2. ಲಕ್ಷ್ಮಣ್ ತೆಲಗಾವಿ. 2004. ಮೌರ್ಯ ಮತ್ತು ಶಾತವಾಹನಯುಗ. ಪ್ರಸಾರಾಂಗ ಕನ್ನಡ

ವಿಶ್ವವಿದ್ಯಾಲಯ, ಹಂಪಿ ಪು ಸಂ. 141.
3. http:// Waterresources.kar.nic.in,river-system.
4. ದೇವರಕೊಂಡಾ ರೆಡ್ಡಿ. 2011. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–10. ವಿಜಯಪುರ ಜಿಲ್ಲೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 492
5. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ, ಪು. 115
6. ಎಸ್.ಕೆ. ಕೊಪ್ಪಾ. ತರ್ದವಾಡಿನಾಡು : ಒಂದು ಅಧ್ಯಯನ. ಫ.ಶಿ. ಭಾಂಡಗೆ, ಗದಗ. ಪು.ಸಂ.205
7. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ, ಪು.141
8. Wikipidia information
9. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ, ಪು.142
10. ಎಸ್.ಕೆ. ಕೊಪ್ಪಾ. ಪೂರ್ವೋಕ್ತ ಪು.205
11. ಎಸ್.ಕೆ. ಕೊಪ್ಪಾ. ಪೂರ್ವೋಕ್ತ ಪು.205
12. ಎಸ್.ಕೆ. ಕೊಪ್ಪಾ. ಪೂರ್ವೋಕ್ತ ಪು.238
13. ದೇವರಕೊಂಡಾ ರೆಡ್ಡಿ. 2011.ಪೂರ್ವೋಕ್ತ ಪು.196
14. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.176
15. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.235
16. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.129
17. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.238
18. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.122
19. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.509
20. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.574
21. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.327
22. ದೇವರಕೊಂಡಾ ರೆಡ್ಡಿ. 2011.. ಪೂರ್ವೋಕ್ತ ಪು.145
23. ದೇವರಕೊಂಡಾ ರೆಡ್ಡಿ. 201. ಪೂರ್ವೋಕ್ತ ಪು.300
24. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.374
25. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.499
26. ಕೃಷ್ಣ ಕೊಲ್ಹಾರಕುಲಕರ್ಣಿ. ಬಿಜಾಪುರ ಆದಿಲ್‌ಶಾಹಿ. 2002
ಸಿಕ್ಯಾಬ ಆದಿಲ್ಶಾಹಿ ಅಧ್ಯಯನ ಸಂಸ್ಥೆ, ವಿಜಯಪುರ. ಪು.ಸಂ.289
27. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.83
28. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.93
29. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.115
30. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.176.
31. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.319.
32. ದೇವರಕೊಂಡಾ ರೆಡ್ಡಿ. 2011. ಪೂರ್ವೋಕ್ತ ಪು.559
33. ಕೃಷ್ಣ ಕೊಲ್ಹಾರಕುಲಕರ್ಣಿ. 2016. ಅರೇಬಿಕ್, ಪರ್ಶಿಯನ್, ಉರ್ದು, ಪರ್ಶಿಯನ್, ಉರ್ದು, ಶಾಸನ ಸಂಪುಟ. ಪು.134
34. ಕೃಷ್ಣ ಕೊಲ್ಹಾರಕುಲಕರ್ಣಿ. 2016. ಪೂರ್ವೋಕ್ತ ಪು.138
35. ಕೃಷ್ಣ ಕೊಲ್ಹಾರಕುಲಕರ್ಣಿ. 2016. ಪೂರ್ವೋಕ್ತ ಪು.149
36. ಕೃಷ್ಣ ಕೊಲ್ಹಾರಕುಲಕರ್ಣಿ. 2016. ಪೂರ್ವೋಕ್ತ ಪು.154

37. ಕೃಷ್ಣ ಕೊಲ್ಹಾರಕುಲಕರ್ಣಿ. 2016. ಪೂರ್ವೋಕ್ತ ಪು.155
38. ಕೃಷ್ಣ ಕೊಲ್ಹಾರಕುಲಕರ್ಣಿ. 2016. ಪೂರ್ವೋಕ್ತ ಪು.173
39. ಕೃಷ್ಣ ಕೊಲ್ಹಾರಕುಲಕರ್ಣಿ. 2016. ಪೂರ್ವೋಕ್ತ ಪು.192
40. ಕೃಷ್ಣ ಕೊಲ್ಹಾರಕುಲಕರ್ಣಿ. 2016. ಪೂರ್ವೋಕ್ತ ಪು.193
41. ಕೃಷ್ಣ ಕೊಲ್ಹಾರಕುಲಕರ್ಣಿ. 2016. ಪೂರ್ವೋಕ್ತ ಪು.196
42. ಕೃಷ್ಣ ಕೊಲ್ಹಾರಕುಲಕರ್ಣಿ. 2016. ಪೂರ್ವೋಕ್ತ ಪು.201
*1. ಕೃಷ್ಣ ಕೊಲ್ಹಾರಕುಲಕರ್ಣಿ. 2016. ಅರೇಬಿಕ್, ಪರ್ಶಿಯನ್, ಉರ್ದು, ಪರ್ಶಿಯನ್, ಉರ್ದು, ಶಾಸನ ಸಂಪುಟ. ಪು.200

❖❖❖

**ವಿವೇಕವಿಲ್ಲದ ಮನುಜರು ಹೀಗೆ ಮೋಸದ**
**ಬಲೆಯಲಿ ಸಿಲುಕುವರು**
**ಬಣ್ಣದ ಮಾತಿಗೆ ಮರುಳಾಗುತಲೇ**
**ನಿಜಸಾರವ ಕಳಕೊಳ್ಳುವರು**

# ದೇವರಬೆಳಕೆರೆ ಪರಿಸರದ ದೇವಾಲಯಗಳು

**ಲೋಕೇಶ ನಾಯ್ಕ ಕೆ.,** ಸಂಶೋಧನಾರ್ಥಿ
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿವಿ, ಧಾರವಾಡ
**ಪ್ರೊ. ಮಾರುತಿ ಎಲ್.ಪಿ,** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿವಿ, ಧಾರವಾಡ

ಪುರಾತನ ಕಾಲದಲ್ಲಿ ದೇವಸ್ಥಾನಗಳು ಊರಿನ ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕೇಂದ್ರಗಳಾಗಿದ್ದವು. ರಾಜರು ತಮ್ಮ ರಾಜ್ಯದ ವ್ಯಾಪ್ತಿಯಲ್ಲಿ ಲೋಕ–ಕಲ್ಯಾಣ ಮತ್ತು ನೆಮ್ಮದಿಗಾಗಿ ದೇವಸ್ಥಾನಗಳನ್ನು ಕಟ್ಟಿಸಿದರು. ಈ ದೇವಾಲಯಗಳು ಗ್ರಾಮದ ಜನರಲ್ಲಿ ಮಾನಸಿಕ ನೆಮ್ಮದಿಯನ್ನು ನೀಡುವುದರ ಜೊತೆಗೆ, ಧರ್ಮಶ್ರದ್ಧೆಯನ್ನು ಉಂಟುಮಾಡಿ, ಊರಿನ ಸಾಂಸ್ಕೃತಿಕ ಬೆಳವಣಿಗೆಗೆ ಕಾರಣವಾಯಿತು. ಸಾಮಾನ್ಯ ವ್ಯಕ್ತಿಯು ಒಮ್ಮೆಲೇ ಪುರಾತತ್ವವನ್ನು ಸಂಪೂರ್ಣ ತಿಳಿಯುವ ಹಂತಕ್ಕೆ ಏರಲಾರ. ಆದ್ದರಿಂದ ಮೊದಲು ಸಗುಣ ಬ್ರಹ್ಮನ (ದೇವಾಲಯಗಳಲ್ಲಿ ಮೂರ್ತಿ ರೂಪದಲ್ಲಿರುವ ದೇವರ) ಉಪಾಸನೆಯನ್ನು ಮಾಡಿ ಪರಿಶುದ್ಧನಾಗಬೇಕು. ಈ ಪವಿತ್ರ ಕಾರ್ಯ ದೇವಾಲಯಗಳಿಂದ ಸಾಧ್ಯವಾಗುತ್ತವೆ.[1] ಈ ಹಿನ್ನೆಲೆಯಲ್ಲಿ ಹಿಂದೆ ದೇವಾಲಯಗಳು ಜ್ಞಾನದ ಕೇಂದ್ರಗಳಷ್ಟೇ ಅಲ್ಲದೇ ದತ್ತಿ ಸ್ವೀಕಾರ, ಆಸ್ತಿಯ ಸೃಜನೆ, ಬ್ಯಾಂಕ್, ನ್ಯಾಯಾದಾನ ಹೀಗೆ ದೇವಾಲಯಗಳು ಅನೇಕ ರೀತಿಯಲ್ಲಿ ಜನಪರ ಕಲ್ಯಾಣ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು.[2]

ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನಲ್ಲಿ ಕಂಡುಬರುವ ದೇವರಬೆಳಕೆರೆಯು ಇತಿಹಾಸ ಪ್ರಸಿದ್ಧ ಪುರಾತನ ನೆಲೆಗಳಲ್ಲಿ ಒಂದಾಗಿದೆ. ದಾವಣಗೆರೆಯಿಂದ 10 ಕಿ.ಮೀ ದೂರಲ್ಲಿರುವ ದೇವರ ಬೆಳಕೆರೆಯು ಹೊಯ್ಸಳರು, ಕಲ್ಯಾಣದ ಚಾಲುಕ್ಯರು, ಹೀಗೆ ವಿವಿಧ ರಾಜಮನೆತನಗಳು ಆಳ್ವಿಕೆ ನಡೆಸಿ ಸಾಂಸ್ಕೃತಿಕ ಕೇಂದ್ರವನ್ನಾಗಿ ರೂಪಿಸಿದರು. ಪ್ರಸ್ತುತ ಈ ಗ್ರಾಮವು 800 ಮನೆಗಳ ಗ್ರಾಮವಾಗಿದ್ದು, ದೇವರ ಬೆಳಕೆರೆ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿದೆ. ವಿಶಾಲವಾದ ಆವರಣದ ನಡುವೆಯಿರುವ ಮೈಲಾರಲಿಂಗೇಶ್ವರ ದೇವರಿಂದ ದೇವರ ಬೆಳೆಕೆರೆ ಹೆಸರು ಬಂದಿದೆ ಎಂದು ಪ್ರತೀತಿ ಇದೆ. ದೇವರಬೆಳಕೆರೆ ಬೇಚಾರಕ್ ಗ್ರಾಮದಲ್ಲಿ ಪುರಾತನ ಕಾಲದ ಎರಡು ಕಲ್ಲೇಶ್ವರ ದೇವಾಲಯಗಳು ಕಂಡುಬರುತ್ತವೆ. ಕ್ರಿ.ಶ. 11–12ನೆಯ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿವೆ. ಈ ದೇವಾಲಯವು ಹಳೆಹಾಳದ ಜಮೀನಿನಲ್ಲಿರುವ ಭಗ್ನದೇವಾಲಯವಾಗಿದೆ. ಪೂರ್ವಾಭಿಮುಖವನ್ನು ಹೊಂದಿದ್ದು, ಸ್ಥಳೀಯರು ಸಂರಕ್ಷಿಸಿ ಪೂಜಿಸುತ್ತಿದ್ದಾರೆ.

ದೇವಾಲಯವು ನೀರಾವರಿ ಭೂಮಿಯ ದಿಬ್ಬದ ಮೇಲಿದ್ದು, ಗಿಡ–ಗಂಟಿಗಳಿಂದ ಮುಚ್ಚಿ ಹೋಗಿದೆ. ಈ ಪ್ರಾಚೀನ ದೇವಾಲಯ ದೀಪ, ಧೂಪ, ಪೂಜೆಗಳಿಲ್ಲದೆ ಅತ್ಯಂತ ಶಿಥಿಲಾವಸ್ಥೆಯಲ್ಲಿದೆ. ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಸುಖನಾಸಿಯನ್ನು ಹೊಂದಿದೆ. ದೇವಾಲಯದ ಮೆಟ್ಟಿಲುಗಳ ಬಳಿ ರಂಗವಲ್ಲಿಯಂತೆ

ಪುಷ್ಪವೊಂದು ಅರಳಿದೆ. ಅಂತರಾಳ ದ್ವಾರದ ಲಾಲಾಟದಲ್ಲಿ ಗಜಲಕ್ಷ್ಮೀಯ ಉಬ್ಬುಶಿಲ್ಪವಿದೆ. ಇಕ್ಕೆಲಗಳಲ್ಲಿ ಇಳಿಬಿದ್ದ ಮೊಗ್ಗಿನ ರಚನೆಗಳಿವೆ. ಬಾಗಿಲುವಾಡಗಳಲ್ಲಿ ಅರ್ಧಕಂಬಗಳ ರಚನೆಯುಂಟು. ಬಾಗಿಲುವಾಡಗಳಿಗೆ ಹೊಂದಿಕೊಂಡಂತೆ ಜಾಲಂಧ್ರಗಳ ಅಳವಡಿಕೆಯನ್ನು ಕಾಣುತ್ತೇವೆ. ಗಜಲಕ್ಷ್ಮೀ ದ್ವಾರವನ್ನು ದಾಟಿದರೆ ಭುವನೇಶ್ವರಿ, ಸುಭದ್ರ ಸ್ಥಿತಿಯಲ್ಲಿರುವ ನಾಲ್ಕು ಕಂಬಗಳ ನಂದಿ ಮಂಟಪವಿದೆ. ನವರಂಗದ ಕಂಬಗಳು ಚೌಕ ಮತ್ತು ಅಷ್ಟಮುಖ ರಚನೆಯನ್ನು ಹೊಂದಿವೆ. ದೇವಕೋಷ್ಠದಲ್ಲಿ ನಾಲ್ಕು ಅಡಿ ಎತ್ತರದ ಕೇಶವನ ವಿಗ್ರಹ, ವಿಗ್ರಹದ ಪೀಠದಲ್ಲೊಂದು ಚೇಳು, ಒಂದು ಕಡೆ ಶ್ರೀಕೃಷ್ಣ ಗೋಪಿಕೆಯರು ಇದರ ಪಕ್ಕದಲ್ಲೊಂದು ಗರುಡ ಪೀಠದ ಮೇಲೆ ಮುಕ್ಕಾದ ವಿಗ್ರಹವಿದೆ. ಇನ್ನೊಂದು ಮೂಲೆಯಲ್ಲಿ ಸಪ್ತಮಾತೃಕೆಯರು, ಇನ್ನೊಂದು ಮೂಲೆಯಲ್ಲಿ ವಿಘ್ನೇಶ್ವರ ಮತ್ತು ಗಣಪತಿ ವಿಗ್ರಹಗಳಿವೆ. ದ್ವಾರದ ಮೇಲೆ ಗಜಲಕ್ಷ್ಮೀ ಕಮಲದ ಮೊಗ್ಗು, ಎರಡು ಕಡೆ ಜಾಲಂದ್ರ ಕಾಣಬಹುದು. ಮಂಟಪದ ಮೇಲ್ಛಾವಣಿಯಲ್ಲಿ ಅರಳಿದ ಕಮಲದ ಹೂ, ಸುಖನಾಸಿಯಲ್ಲಿ ಏನೂ ಇಲ್ಲ. ದ್ವಾರದ ಮೇಲೆ ಗಜಲಕ್ಷ್ಮೀ, ಗರ್ಭಗುಡಿಯಲ್ಲಿ ವೃತ್ತಾಕಾರದಲ್ಲಿ ಪೀಠದ ಮೇಲೆ ಸುಮಾರು ಎರಡು ಅಡಿ ಎತ್ತರದ ಶಿವಲಿಂಗವಿದೆ. ಈ ಲಿಂಗ ಸ್ವಯಂಭೂ ರಚನೆಯದು. ಮುಂಭಾಗದಲ್ಲಿ ನಂದಿ ಶಿಲ್ಪವುಂಟು.

ಹೊರಭಾಗದಲ್ಲಿ ಶಾಸನೋಕ್ತ ವೀರಗಲ್ಲು ಶಿಲ್ಪವಿದೆ. ಇದು 13ನೆಯ ಶತಮಾನದ್ದು. ಚಿಕ್ಕ ಬೆಳುಕರಿಯ (ಬೆಳೆಕೆರೆ) ತುರುಹರಿಯಲು ಶಿವಲೋಕ ಪ್ರಾಪ್ತನಾದಲ್ಲಿ ಕುರುಬರ ಚಂದಗವುಡನಿಗೆ ಬೊಮ್ಮಗವುಡ, ಸೋಮಗವುಡ, ಮಾಳಿಗಗವುಡರು ಕೊಟ್ಟ ಭೂಮಿ ಎಂಬ ಉಲ್ಲೇಖವಿದೆ. ದೇವಾಲಯದ ಹಿಂಭಾಗದ ನೈರುತ್ಯ ಮೂಲೆಯಲ್ಲಿ ಶಾಸನವಿದೆ. ಈ ಶಾಸನವು ಕಲ್ಯಾಣದ ಚಾಲುಕ್ಯರ ಕಾಲದ್ದು. ಈ ಶಾಸನದಲ್ಲಿ ಹೀಗೆ ಉಲ್ಲೇಖವಿದೆ:

"ಕಲಿಯುಗದ ಧನ್ವಂತರಿ ವಿಜಯ ಪಂಡಿತರು ಶ್ರೀಕಲಿದೇವರಿಗೆ, ನೈವೇದ್ಯ, ನಂದಾದೀವಿಗೆ, ಅಂಗಭೋಗ, ರಂಗಭೋಗಕ್ಕೆ ಸೋವರಾಶಿ ಗುರುಗಳಿಗೆ ತಾವು ಕಟ್ಟಿಸಿದ ವಿಜಯಸಮುದ್ರದ ಮಧ್ಯದ ಮೊದಲೇರಿಯ ಕೆಳಗೆ ಗದ್ದೆ ಕಂಬ 20, ಚಂಬೆಯಗೆರೆಯ ಉತ್ತರ ಕೋಡಿಯಿಂದ ಪೂರ್ವ–ಪಶ್ಚಿಮವಾಗಿ ಹರಿಹರ ವೋಣಿಯ ಪಶ್ಚಿಮಕ್ಕೆ ಎರೆಗಂಗನ ಮತ್ತ 1, ಕಲಿದೇವರ ದೇವಾಲಯದ ಪ್ರಕಾರದಿಂದ ಪಶ್ಚಿಮಕ್ಕೆ, ಉತ್ತರಕ್ಕೆ 20 ಮನೆಯ ನಿವೇಶನವನ್ನು ನೀಡಿದ ಉಲ್ಲೇಖವಿದೆ. ವಿಜಯಪಂಡಿತರು ಹೆಸರಾಂತ ವೈದ್ಯರಾಗಿದ್ದು, ವಿಜಯಸಮುದ್ರ ಎಂಬ ಹೆಸರಿನಲ್ಲಿ ಕೆರೆ ಕಟ್ಟಿಸಿದ್ದರೆಂದು ಮೇಲಿನ ಶಾಸನದಿಂದ ಸ್ಪಷ್ಟವಾಗುತ್ತದೆ".[3]

ಈ ಕಲ್ಲೇಶ್ವರ ದೇವಾಲಯದ ಹತ್ತಿರದ ಎಲೆತೋಟದಲ್ಲಿ ಅತ್ಯಂತ ಪ್ರಾಚೀನವೆಂದು ಹೇಳಬಹುದಾದ ಗರ್ಭಗುಡಿ, ಮುಖಮಂಟಪವಿರುವ ಹಾಗೂ ದೊಡ್ಡ ಶಿವಲಿಂಗವಿರುವ ಕಲ್ಲೇಶ್ವರ ದೇವಾಲಯವಿದೆ. ಇದು ಜೀರ್ಣಾವಸ್ಥೆಯಲ್ಲಿದೆ. ಇದೇ ಊರಿನಲ್ಲಿ ಬೇವಿನ ಮರದ ಕೆಳಗೆ ನಂದಿ ಶಿಲ್ಪವುಂಟು. ಆಂಜನೇಯನ ಗುಡಿಯ ಗರ್ಭಗುಡಿಯಲ್ಲಿ ಸಪ್ತಮಾತೃಕೆಯರ ತುಂಡಾದ ಶಿಲ್ಪಫಲಕವಿದ್ದು, ಚಾಮುಂಡಿ ಮತ್ತು ಗಣಪತಿಯ ಉಬ್ಬುಶಿಲ್ಪಗಳಿವೆ. ಹೊರಭಾಗದಲ್ಲಿ ವಿಷ್ಣುವಿನ ಭಗ್ನ ಪ್ರತಿಮೆಯಿದೆ. ಈ ಎಲ್ಲಾ ಶಿಲ್ಪಾವೇಷಗಳು ಕ್ರಿ.ಶ.11–12ನೆಯ ಶತಮಾನದವು.

ದಂತಕಥೆಯ ಹೇಳುವಂತೆ, ನಾಗಾರ್ಜುನ ಎನ್ನುವವನು ಚಿತ್ರದುರ್ಗ ಜಿಲ್ಲೆಯಲ್ಲಿ

ಅನೇಕ ಕಡೆ ಸಿದ್ಧರಸ, ಶಿಲಾರಸಗಳನ್ನು ಹೂಳಿಟ್ಟದ್ದನಂತೆ. ದೇವರ ಬೆಳಕೆರೆಯ ಹೊಲಗಳಲ್ಲಿ ಪುರಾತನ ಹಗೇವುಗಳಲ್ಲಿ ಮಡಕೆ, ಕುಡಿಕೆಗಳು ದೊರೆತಿವೆ ಹಾಗೂ ಈ ಪ್ರದೇಶದಲ್ಲಿ ಬೌದ್ಧರು ನೆಲೆಸಿದ್ದರೆಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ. ಶ್ಯಾಗಲಿಹಳ್ಳ ಮತ್ತು ಸೂಳೆಕೆರೆಯ ನೀರು ಸಂಗಮವಾಗುವ ಸ್ಥಳದ ಬಳಿ ಈ ಊರು 80ರ ದಶಕದಲ್ಲಿ ಭದ್ರಾ ಯೋಜನೆಗೆ ಒಳಪಟ್ಟಿದ್ದು ಇಲ್ಲೊಂದು ಅಣೆಕಟ್ಟು ನಿರ್ಮಾಣಗೊಂಡಿದೆ. 6000 ಎಕರೆ ಪ್ರದೇಶಗಳಿಗೆ ನೀರೂಣಿಸುತ್ತದೆ. 13,313 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯುತ್ತದೆ.[4] ಈ ಅಣೆಕಟ್ಟು ಮತ್ತು ಮೈಲಾರಲಿಂಗೇಶ್ವರ ದೇವರು ಇಲ್ಲಿ ನೆಲೆಸಿರುವುದರಿಂದ, ಬಸ್ಸಿನ ಅನುಕೂಲವಿರುವುದರಿಂದ ವಿಶೇಷವಾಗಿ ಪ್ರವಾಸಿಗರು ಬರುತ್ತಾರೆ.

**ಕೊನೆ ಟಿಪ್ಪಣಿಗಳು**


1. ಶ್ರೀಧರ ಎನ್. ಭಟ್, ಉಜಿರೆ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನ – ಒಂದು ಅಧ್ಯಯನ, ಶೋಧ, ಜುಲೈ–2023
2. ಕೆ.ಎನ್. ಅಶ್ವತಪ್ಪ, ಸಮಗ್ರ ಕರ್ನಾಟಕದ ಇತಿಹಾಸ, ಲಕ್ಷ್ಮೀ ಮುದ್ರಣಾಲಯ ಬೆಂಗಳೂರು, 2011
3. ಡಾ.ಸಿ.ಮಹದೇವ, ಕರ್ನಾಟಕ ದೇವಾಲಯ ಕೋಶ ದಾವಣಗೆರೆ ಜಿಲ್ಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,2020, ಪು.ಸಂ.309
4. ಟಿ.ಗಿರಿಜ, ದಾವಣಗೆರೆ ಇದು ನಮ್ಮ ಜಿಲ್ಲೆ, ಗಿರಿಶೈಲ ಪ್ರಕಾಶನ ದಾವಣಗೆರೆ, 2019, ಪು.ಸಂ 368


**ಕ್ಷೇತ್ರ ಕಾರ್ಯದಲ್ಲಿ ಸಹಕಾರ:**


1. ರಾಘವೇಂದ್ರಾಚಾರಿ ಕೆ.ಎಂ, ಹವ್ಯಾಸಿ ಇತಿಹಾಸ ಸಂಶೋಧಕರು, ದಾವಣಗೆರೆ


❖❖❖

RNI Reg No. : KARKAN /2012/49251

**CHINTHANA BAYALU** **A Peer Reviewed Journal** **ISSN 2278-2192**
**Kannada Quarterly, Volume 13, Issue 3, January - March 2025**
Included in UGC - CARE List
Edited, Published, Printed & Owned by

**Reshma G. Bhat**
Door No. 15-109, Modankapu Post
Bantwal Taluk, Dakshina Kannada - 574 219
chinthanabayalu@gmail.com
**www.chinthanabayalu.in**

Printed at

**Aakrithi Prints**
Light House Hill Road, Mangaluru - 575 001

**Pages : 144**

ವಾರ್ಷಿಕ ಚಂದಾ : ರೂಪಾಯಿ ಇನ್ನೂರು

(ಅಂಚೆ ವೆಚ್ಚ ಸೇರಿ)

ಮೂರು ವರ್ಷಗಳಿಗೆ : ರೂಪಾಯಿ ಆರುನೂರು

ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ

ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ

ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ

ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

**ಕರ್ನಾಟಕ ಬ್ಯಾಂಕ್**

ಬಂಟ್ವಾಳ ಮೂಡ ಶಾಖೆಯಲ್ಲಿ

**ಚಿಂತನ ಬಯಲು** ಹೆಸರಿನಲ್ಲಿರುವ

**ಕರೆಂಟ್ ಅಕೌಂಟ್ ಸಂಖ್ಯೆ : 0712000100041401**

**IFSC : KARB0000071**

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ನಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com